ಜ್ಞಾನಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ,
ವಿಜಯನಗರ, ಬೆಂಗಳೂರು.

ಸೆಪ್ಟಂಬರ್ 2019

ಜ್ಞಾನಗಂಗೋತ್ರಿ

ಇ–ಮ್ಯಾಗಝಿನ್

Useful for KAS, KPSC, PSI and all State govt exams

Free copy not for sale

www.iasjnana.com **9916399276**

Jnanagangothri

An Institute for IAS, KAS, PSI, Banking, SSC, Railways and for all State govt and Central govt. recruitments.

Login to www.iasjnana.com for daily current affairs and free PDF download

To take test series (KPSC/KAS/PSI) visit www.iasjnana.com

SERVICES AVAILABLE AT JNANAGANGOTHRI		
Course	**Batches**	**Timings**
KAS Prelims	**3 Batches/day**	**7am, 10am** **5 45pm**
KAS Core batch prelims+mains	**6 Months**	**7am to 7 pm**
FDA/SDA Regular batch	**3 Batches/day**	**7am, 10am** **5 45pm**
FDA/SDA Core Batch	**1 Batch/Day**	**7am to 7 pm**
PSI Regular batch	**3 Batches/day**	**7am, 10am** **5 45pm**
PSI Core batch	**1 Batch/Day**	**7am to 7 pm**
Banking/SSC/Railways	**1 Batch**	**10am to 1 pm**
Test Series for KAS, FDA/SDA, PSI, BANKING, RRB ETC	**Available both online and offline**	
24 hr Reading Rooms	**24 hr**	**NA**
Mock intervies for all competitive Exams	**On appointment**	
Free KPSC current affairs available everyday visit www.iasjnana.com		

ಕ್ರ. ಸಂ.	ವಿಷಯ	ಪುಟ ಸಂಖ್ಯೆ
1	ರಾಜ್ಯ/STATE	05
2	ರಾಷ್ಟ್ರೀಯ/NATIONAL	10
3	ಅಂತರ–ರಾಷ್ಟ್ರೀಯ/INTERNATIONAL	31
4	ವಿಜ್ಞಾನ/SCIENCE	43
5	ಕ್ರೀಡೆ/SPORTS	67
6	ಆರ್ಥಿಕ/ECONOMY	71
7	ವಿಶೇಷ ದಿನಗಳು/SPECIAL DAYS	81
8	ನೇಮಕಾತಿಗಳು/APPOINTMENTS	86
9	ಪ್ರಶಸ್ತಿಗಳು/AWARDS	88
10	ಸಂತಾಪ/OBITUARY	90

GOOD NEWS - **ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (PSI) 2019** ರ ನೇಮಕಾತಿಯಲ್ಲಿ ಜ್ಞಾನಗಂಗೋತ್ರಿ ಸಂಸ್ಥೆಯಿಂದ ಅತೀ ಹೆಚ್ಚು ಸ್ಪರ್ಧಾರ್ಥಿಗಳು ತೇರ್ಗಡೆಗೊಂಡಿರುತ್ತಾರೆ. ಒಟ್ಟು ನೇಮಕಾತಿಯ **25 ಪ್ರತಿಶತ** ವಿದ್ಯಾರ್ಥಿಗಳು ಜ್ಞಾನಗಂಗೋತ್ರಿಯಿಂದ ತೇರ್ಗಡೆಗೊಂಡಿರುವುದು ನಮಗೆ ಹೆಮ್ಮೆ ತಂದಿದೆ.

ಈ ಸಾಧಕರ ಯಶಸ್ಸಿನ ಕಾರ್ಯತಂತ್ರವನ್ನು ಜ್ಞಾನಗಂಗೋತ್ರಿ **YouTube** ಚಾನೆಲ್‌ನಲ್ಲಿ ವೀಕ್ಷಿಸಿ.

Warning- We have no Branches

PSI CORE BATCH -2019
*7am to 7 pm batch,
*Only for the first 30 students;
*Intense Training for 5 months; guidance till exam;
*Classes and Individual mentoring;
*Paper-1 learning with unique strategy;
*Ample number of Tests;
* Close to 1000 Model Questions discussion of each GS subject;
*Previous years QP discussion;
*Preparation according to 'TARGET BASED STUDY PLAN';
*Coaching both in KANNADA/ENGLISH;
*Dedicated study hall for uninterrupted preparation;
CONTACT- JNANAGANGOTHRI ACADEMY
Vijayanagara, Bengaluru. 9916399276
More you sweat in practice, less you bleed in battle.
www.iasjnana.com

ರಾಜ್ಯ

1. ಕಲ್ಯಾಣ ಕರ್ನಾಟಕ :

- ಸೆಪ್ಟೆಂಬರ್ 17ರಂದು ಕಲಬುರಗಿಯಲ್ಲಿ ನಡೆದ ಸಮಾರಂಭದಲ್ಲಿ 'ಕಲ್ಯಾಣ ಕರ್ನಾಟಕ' ಎಂಬ ಹೆಸರನ್ನು ಅಧಿಕೃತವಾಗಿ ಘೋಷಿಸಿದ್ದಾರೆ.
- ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿಯೂ ವಿವಿಧ ಸಚಿವರುಗಳ ನೇತೃತ್ವದಲ್ಲಿ ಈ ದಿನಾಚರಣೆ ನಡೆದಿದೆ.

ಏನಿದು ದಿನಾಚರಣೆ?

- 1995ರಿಂದ ಹೈಕ ವಿಮೋಚನಾ ದಿನಾಚರಣೆ ಆಚರಣೆ ಮಾಡುತ್ತಾ ಬರಲಾಗುತ್ತಿದೆ. ಬಳಿಕ ಸರಕಾರ 2002–03ರಲ್ಲಿ ಅಧಿಕೃತ ಆದೇಶ ಹೊರಡಿಸಿ ಇದು ಸರಕಾರದ ಕಾರ್ಯಕ್ರಮವಾಗಿ ರೂಪುಗೊಂಡಿತು.
- ಅಲ್ಲಿಂದ 2018ರವರೆಗೆ ಹೈಕ ವಿಮೋಚನಾ ದಿನಾಚರಣೆ ಎಂದೇ ಆಚರಣೆ ಮಾಡಲಾಗುತ್ತಿದೆ. ಕರ್ನಾಟಕ ಸರ್ಕಾರದ ನೇತೃತ್ವದ ಇದೀಗ ಹೈಕ ಭಾಗಕ್ಕೆ 'ಕಲ್ಯಾಣ ಕರ್ನಾಟಕ' ಎಂದು ನಾಮಕರಣ ಮಾಡಿದ್ದರಿಂದ ಈ ಬಾರಿ ಹೈಕ ವಿಮೋಚನಾ ದಿನಾಚರಣೆ ಬದಲು ಕಲ್ಯಾಣ ಕರ್ನಾಟಕ ಉತ್ಸವವನ್ನಾಗಿ ಆಚರಣೆ ಮಾಡಲಾಗುತ್ತಿದೆ.

ಹೈಕ ಆಯ್ತು ಕಲ್ಯಾಣ ಕರ್ನಾಟಕ:

- 371 ಜೆ ಕಾಯ್ದೆಯಡಿ ಹೈದರಾಬಾದ್ ಕರ್ನಾಟಕದ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನವನ್ನು ಇತ್ತೀಚೆಗೆ ನೀಡಲಾಗಿತ್ತು.
- ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಇತ್ತೀಚೆಗೆ ಹೆಸರು ಬದಲಾವಣೆ ಮಾಡಲು ಸರಕಾರ ಅನುಮೋದನೆ ನೀಡಿತ್ತು. ಎಲ್ಲಾ ಸರಕಾರದ ದಾಖಲೆಗಳಲ್ಲಿ ಹೊಸ ಹೆಸರು ಇರಲಿದೆ.
- ಹೈಕ ಅಭಿವೃದ್ಧಿ ಬಗ್ಗೆ ತೀರ್ಮಾನ ಕೈಗೊಳ್ಳಲು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇದ್ದು, ಅದು ಇನ್ನುಮುಂದೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಆಗಲಿದೆ.

ಇತಿಹಾಸ:

- ಸ್ವಾತಂತ್ರದ ನಂತರವೂ ಹೈದ್ರಾಬಾದ್ ಕರ್ನಾಟಕ ಭಾಗ ಹೈದರಾಬಾದ್‌ನ ನಿಜಾಮಶಾಹಿ ಆಳ್ವಿಕೆಯಲ್ಲಿತ್ತು. ಬ್ರಿಟಿಷ್ ಇಂಡಿಯಾ ಮತ್ತು ಸಂಸ್ಥಾನಿಕ ಇಂಡಿಯಾ ಸ್ವತಂತ್ರವಾದ ಗಳಿಗೆಯಲ್ಲಿ ದೇಶದ ವಿವಿಧೆಡೆ ಇದ್ದ 560ಕ್ಕೂ ಹೆಚ್ಚು ಪ್ರಾಂತ್ಯಗಳ ರಾಜರು ಭಾರತದ ಒಕ್ಕೂಟದ ವ್ಯವಸ್ಥೆಗೆ ಸೇರಿದ್ದರು.
- ಆದರೆ ಕಾಶ್ಮೀರ, ಜುನಾಘಡ ಹಾಗೂ ಹೈದ್ರಾಬಾದ್ ಪ್ರಾಂತ್ಯಗಳ ರಾಜರು ಒಕ್ಕೂಟದಲ್ಲಿ ಸೇರಲು ನಿರಾಕರಿಸಿದರು.
- ಒಂದೆಡೆ ಹೋರಾಟಗಾರರು ತಮ್ಮ ಹೋರಾಟ ತೀವ್ರಗೊಳಿಸುತ್ತಿದ್ದಂತೆ ಮತ್ತೊಂದೆಡೆ ಭಾರತ ಸರಕಾರ ನಿಜಾಮ್ ಮೀರ್ ಉಸ್ಮಾನ್ ಅಲಿಖಾನನಿಗೆ ಎಚ್ಚರಿಕೆ ನೀಡಿತು.
- ಎಚ್ಚರಿಕೆ ಫಲಕಾರಿಯಾಗದ ಕಾರಣ ಸೇನಾ ಕಾರ್ಯಾಚರಣೆ ನಡೆಸಲಾಯಿತು. ಸೆ.17ರಂದು ಸಂಜೆ 4ಕ್ಕೆ ನಿಜಾಮ್ ಹೈದರಾಬಾದ್ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರ್ಪಡೆ ಮಾಡುವುದಾಗಿ ಒಪ್ಪಂದಕ್ಕೆ ಅಧಿಕೃತವಾಗಿ ಸಹಿ ಹಾಕಿದ.

ಈಗಿನ ಸ್ಥಿತಿ:

- ಹೈಕ ಭಾಗಕ್ಕೆ ಸ್ವಾತಂತ್ರ್ಯ ಲಭಿಸಿ 71 ವರ್ಷ ಗತಿಸಿದರೂ ಕರ್ನಾಟಕದ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಅಭಿವೃದ್ಧಿಯಲ್ಲಿ ತುಂಬಾ ಹಿಂದಿದೆ.
- ಈ ಭಾಗದ ಅನೇಕ ನೀರಾವರಿ ಯೋಜನೆಗಳಿಗೆ ಸಮಯೋಚಿತ ಹಣ ಮಂಜೂರಾಗದೆ ಬಹಳಷ್ಟು ಅಪೂರ್ಣವಾಗಿಯೇ ಉಳಿದಿವೆ.
- ಈ ಭಾಗದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳ ಜನತೆ ಕನಿಷ್ಠ ನಾಗರಿಕ ಸೌಲಭ್ಯಗಳಾದ ವಸತಿ, ಚರಂಡಿ ವ್ಯವಸ್ಥೆ, ಸಾರಿಗೆ, ಕೈಗಾರಿಕೆ ಹಾಗೂ ಗುಣಮಟ್ಟದ ಶಿಕ್ಷಣದಿಂದ ವಂಚಿತವಾಗಿರುವುದರಿಂದ 371ಜೆ ಕಾಯ್ದೆಯಡಿ ಕಲ್ಯಾಣ ಕರ್ನಾಟಕಕ್ಕೆ (ಹಳೆಯ ಹೈಕ) ವಿಶೇಷ ಸ್ಥಾನ ಮಾನ ಇಡಲಾಗಿದೆ.

ಕಲ್ಯಾಣ ಕರ್ನಾಟಕ ಪ್ರಗತಿ ಪರಾಮರ್ಶೆಗೆ ಸಮಿತಿ:

- ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನದಡಿ ಹೊರಡಿಸಲಾದ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆಗಾಗಿ ಸಚಿವ ಸಂಪುಟ ಉಪಸಮಿತಿ ರಚಿಸಿ ಸರಕಾರದ ಆದೇಶ ಹೊರಡಿಸಿದೆ.
- ರಾಜ್ಯ ಸರಕಾರ ಇತ್ತೀಚೆಗೆ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಕಲ್ಯಾಣ ಕರ್ನಾಟಕವೆಂದು ಮರು ನಾಮಕರಣ ಮಾಡಿದ್ದರೂ ಈ ಸಂಬಂಧ ಹೊರಡಿಸಿರುವ ಆದೇಶದಲ್ಲಿ ಮತ್ತೆ ಹೈಕ ಪ್ರದೇಶವೆಂದು ಉಲ್ಲೇಖಿಸಲಾಗಿದೆ.

2. ಎಸ್ಸೆಸ್ಸೆಲ್ಸಿ ಪಿಯುಸಿ ವಿಲೀನ ಪ್ರತ್ಯೇಕ ಪರೀಕ್ಷಾ ಮಂಡಳಿ:

- ರಾಜ್ಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಎಸ್ಸೆಸ್ಸೆಲ್ಸಿ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಪಿ.ಯು ಪರೀಕ್ಷೆಗಳನ್ನು ನಡೆಸುತ್ತಿದೆ.
- ಎರಡು ಇಲಾಖೆಗಳ ಕೆಲಸ ಒಂದೇ ಆಗಿರುವುದರಿಂದ ಎರಡನ್ನೂ ವಿಲೀನಗೊಳಿಸಿ ಸಾಮಾನ್ಯ ಪರೀಕ್ಷಾ ಮಂಡಳಿ ಸ್ಥಾಪಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಹೇಳಿದ್ದಾರೆ.

ಸಿಬ್ಬಂದಿ ವಿಲೀನ:

- ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಗಳಲ್ಲಿ ಸುಮಾರು 300ಕ್ಕೂ ಹೆಚ್ಚಿನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.
- ಈ ಎಲ್ಲ ಸಿಬ್ಬಂದಿ ಸಹ ವಿಲೀನ ಮಾಡಬೇಕಾಗುತ್ತದೆ. ಎಸ್ಸೆಸ್ಸೆಲ್ಸಿ 6ನೇ ಕ್ರಾಸ್ ಮತ್ತು ಪಿಯು ಇಲಾಖೆ 18ನೇ ಕ್ರಾಸ್ ಮಲ್ಲೇಶ್ವರನಲ್ಲಿದೆ.

3. ಮುಕ್ತ ವಿವಿ ಕುಲಪತಿಗಳ ಸಮ್ಮೇಳನ :

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ "ಅಖಿಲ ಭಾರತ ಮುಕ್ತ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮ್ಮೇಳನ"ವನ್ನು ಸೆ.6 ಮತ್ತು 7ರಂದು ಮೈಸೂರಿನಲ್ಲಿ ಆಯೋಜಿಸಿದೆ. ದೇಶದಲ್ಲಿನ 15 ಮುಕ್ತ ವಿವಿಗಳ ಕುಲಪತಿಗಳು, ಕುಲಸಚಿವರು ಹಾಗೂ ಪ್ರಾಧ್ಯಾಪಕರು ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ.
- 21ನೇ ಶತಮಾನದಲ್ಲಿ ಮುಕ್ತ ವಿಶ್ವ ವಿದ್ಯಾಲಯಗಳ ಪಾತ್ರ ಕುರಿತು ಈ ಸಂದರ್ಭ ಉನ್ನತ ಮಟ್ಟದ ಚರ್ಚೆ ನಡೆಯಲಿದೆ.

4. ಗೋ ಹತ್ಯೆ ನಿಷೇಧ ಶೀಘ್ರ:

- ರಾಜ್ಯದಲ್ಲಿ ಗೋ ಹತ್ಯೆ ನಿಷೇಧ ಜಾರಿಗೆ ಸಂಬಂಧಿಸಿ ತಿದ್ದುಪಡಿ ವಿಧೇಯಕ ಜಾರಿಗೊಳಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.
- 2010ರಲ್ಲಿ ಕರ್ನಾಟಕ ವಿಧಾನಸಭೆ ಮತ್ತು ವಿಧಾನಪರಿಷತ್‌ನಲ್ಲಿ ಅಂಗೀಕಾರವಾಗಿರುವ ಗೋ ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕವನ್ನು ಮತ್ತೆ ಮಂಡಿಸಿ ಕಾನೂನಾಗಿ ಜಾರಿಗೊಳಿಸುವಂತೆ ಒತ್ತಾಯಿಸಿದೆ.

ಎಲ್ಲೆಲ್ಲಿ ನಿಷೇಧವಿಲ್ಲ

- ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯದಲ್ಲಿ ಗೋ ಹತ್ಯೆ ನಿಷೇಧ ಕಾನೂನು ಜಾರಿಗೊಳಿಸಿಲ್ಲ. ಈಶಾನ್ಯ ಪ್ರದೇಶಗಳಾದ ಅರುಣಾಚಲ, ಮಿಜೋರಾಂ, ಮೇಘಾಲಯ, ನಾಗಲೆಂಡ್

4 ರಾಜ್ಯಗಳಲ್ಲಿ 10 ವರ್ಷ ಜೈಲು:

- 22ಕ್ಕೂ ಹೆಚ್ಚು ರಾಜ್ಯಗಳಲ್ಲಿ ಗೋ ಹತ್ಯೆ ನಿಷೇಧ ಕಾನೂನು ಜಾರಿಯಲ್ಲಿದೆ. ಕೆಲವು ರಾಜ್ಯಗಳಲ್ಲಿ ಕಾನೂನು ಉಲ್ಲಂಘನೆಗೆ ಅತ್ಯಲ್ಪ ಶಿಕ್ಷೆ ಇದ್ದರೆ ಇನ್ನು ಕೆಲವು ರಾಜ್ಯಗಳಲ್ಲಿ ಕಠಿಣ ಶಿಕ್ಷೆ ಜಾರಿಗೆ ತರಲಾಗಿದೆ.
- ಜಮ್ಮು ಮತ್ತು ಕಾಶ್ಮೀರ, ಹರಿಯಾಣ, ರಾಜಸ್ತಾನ, ಜಾರ್ಖಂಡ್ ಮಾಹಿತಿ ರಾಜ್ಯದಲ್ಲಿ ಗರಿಷ್ಠ ಜೈಲು ಶಿಕ್ಷೆ ಜಾರಿಯಲ್ಲಿದೆ.
- 10 ವರ್ಷ ಜೈಲು ಮತ್ತು 10,000 ದಿಂದ 50,000 ವರೆಗೆ ದಂಡ ವಿಧಿಸಲಾಗುತ್ತದೆ.
- ಗುಜರಾತ್, ಉತ್ತರ ಗೋ ಸಂರಕ್ಷಣಾ ಪ್ರದೇಶ, ಮಧ್ಯಪ್ರದೇಶ, ಛತ್ತೀಸ್‌ಗಢದಲ್ಲಿ 7 ವರ್ಷ ಜೈಲು ಮತ್ತು ದಂಡ, ಜವಾಬ್ದಾರಿ ಉಳಿದ ರಾಜ್ಯಗಳಲ್ಲಿ 6 ತಿಂಗಳಿಂದ 5 ವರ್ಷದವರೆಗೂ ಜೈಲು ಮತ್ತು ದಂಡ ಶಿಕ್ಷೆ ವಿಧಿಸಲಾಗುತ್ತಿದೆ.
- ಕರ್ನಾಟಕದಲ್ಲಿ 2010ರಲ್ಲಿ ಬಿಜೆಪಿ ಸರ್ಕಾರ 7 ವರ್ಷ ಜೈಲು ಮತ್ತು 1 ಲಕ್ಷ ರೂ. ದಂಡದ ಮಸೂದೆ ಮಂಡಿಸಿದ್ದರೂ ಈ ವರೆಗೂ ಜಾರಿಯಾಗಿಲ್ಲ.
- ರಾಜ್ಯಗಳ ಕಾನೂನಿನಲ್ಲಿ ಬದಲಾವಣೆಗಳಿದ್ದು, ಕೆಲವು ರಾಜ್ಯಗಳು ವಯಸ್ಸಾದ, ಆರ್ಥಿಕವಾಗಿ ಹೊರೆಯಾಗುವ ಗೋವುಗಳನ್ನು ಸಂಬಂಧಿಸಿದ ಇಲಾಖೆಯ ಅನುಮತಿ ಪಡೆದು ಹತ್ಯೆ ಮಾಡಲು ಅವಕಾಶ ನೀಡಿದೆ.
- ಇನ್ನು ಕೆಲವು ರಾಜ್ಯಗಳ ಗೋ ಹತ್ಯೆ ನಿಷೇಧ ಕಾನೂನಿಗೆ ಎತ್ತು, ಕೋಣಗಳು ಒಳಪಟ್ಟಿಲ್ಲ. ಕೆಲವು ರಾಜ್ಯಗಳಲ್ಲಿ ಕೋಣ, ಎತ್ತುಗಳನ್ನು ಅನುಮತಿ ಮೇರೆಗೆ ಹತ್ಯೆ ಮಾಡಲು ಅವಕಾಶವಿದೆ.

5. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಳೆ ನೀರು ಸಂಗ್ರಹ ಶೀಘ್ರ :

- ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಲ್ಲಿ ಶೀಘ್ರದಲ್ಲಿಯೇ ಮಳೆ ನೀರು ಸಂಗ್ರಹ ವ್ಯವಸ್ಥೆ ಜಾರಿಗೆ ಬರಲಿದೆ.
- ಅಂತರ್ಜಲ ಮರುಪೂರಣಗೊಳಿಸುವಂತಹ ಕಾರ್ಯವನ್ನು ಇದರೊಂದಿಗೆ ಕೈಗೆತ್ತಿಕೊಳ್ಳಲು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಮುಂದಾಗಿದೆ.

- 2013ರ ಮಾರ್ಗಸೂಚಿಯಲ್ಲಿಯೇ ಈ ಅಂಶವಿದ್ದು, ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸಚಿವಾಲಯ ಮುಂದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಂಕಿ–ಅಂಶಗಳು:

- 1,100. ಮಿ.ಮೀ. ದೇಶದಲ್ಲಿ ವರ್ಷಕ್ಕೆ ಸರಾಸರಿ ಬೀಳುವ ಮಳೆಯ ಪ್ರಮಾಣ
- 61.60 ಲಕ್ಷ ಲೀಟರ್ ಹೆದ್ದಾರಿಗಳಲ್ಲಿ ಪ್ರತಿ ಕಿ.ಮೀ.ಗೆ ವ್ಯರ್ಥವಾಗಿ ಹರಿದು ಹೋಗುವ ನೀರಿನ ಪ್ರಮಾಣ
- 7.334 ಕರ್ನಾಟಕದಲ್ಲಿ ರಾಷ್ಟ್ರೀಯ ಹೆದ್ದಾರಿ ಜಾಲ
- 1.31 ಲಕ್ಷ ಕಿ.ಮೀ. ದೇಶದಲ್ಲಿನ ರಾಷ್ಟ್ರೀಯ ಹೆದ್ದಾರಿ ಜಾಲ (2018ರ ನವೆಂಬರ್‌ವರೆಗೆ)
- 80% ಹೆದ್ದಾರಿಗಳಲ್ಲಿ ವ್ಯರ್ಥವಾಗಿ ಹರಿದು ಹೋಗುವ ಮಳೆ ನೀರಿನ ಪ್ರಮಾಣ
- 20% ರಾಷ್ಟ್ರೀಯ ಹೆದ್ದಾರಿಗಳಲ್ಲಿ ಆವಿಯಾಗುವ ಮಳೆ ನೀರಿನ ಪ್ರಮಾಣ

6. ಹನುಮನಗೌಡ ಬೆಳಗುರ್ಕಿ ಕೃಷಿ ಬೆಲೆ ಆಯೋಗದ ಹೊಸ ಅಧ್ಯಕ್ಷ:

- ಕೃಷಿ ಬೆಲೆ ಆಯೋಗದ ಅಧ್ಯಕ್ಷರಾಗಿದ್ದ ಡಾ. ಟಿ.ಎನ್.ಪ್ರಕಾಶ್ ಧಾರೆ ಅವರನ್ನು ವಜಾಗೊಳಿಸಿ ಆ ಸ್ಥಾನಕ್ಕೆ ಹನುಮನಗೌಡ ಬೆಳಗುರ್ಕಿ ಅವರನ್ನು ನೇಮಕ ಮಾಡಿ ಸರಕಾರ ಆದೇಶ ಹೊರಡಿಸಿದೆ. ಸರಕಾರದ ಈ ಕ್ರಮಕ್ಕೆ ರೈತ ಸಂಘ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

7. ದಸರಾಗೆ ಮೆಕ್ಸಿಕೊ ಸುಂದರಿ:

- ಈ ಬಾರಿ ಮೈಸೂರು ದಸರಾ ಮಹೋತ್ಸವಕ್ಕೆ ಭೇಟಿ ನೀಡಿದರೆ ವಿಶ್ವದ ಅತ್ಯಂತ ಅಪರೂಪದ ಮೀನು "ಅಕ್ವೋಲೋಟ್ಸ್" ಸೇರಿದಂತೆ ನಾನಾ ಜಾತಿಯ ಬಣ್ಣ ಬಣ್ಣದ ವಿದೇಶಿ ಸಮುದ್ರದ ಮೀನುಗಳನ್ನು ಕಣ್ತುಂಬಿಕೊಳ್ಳಬಹುದು.

65ಕ್ಕೂ ಹೆಚ್ಚು ಅಕ್ವೇರಿಯಂಗಳು:

- 50 ಸಿಹಿ ನೀರಿನ, 10 ಉಪ್ಪು ನೀರಿನ ಮೀನುಗಳ ಅಕ್ವೇರಿಯಂ, 5 ಪ್ಲಾಂಟೆಡ್ ಅಕ್ವೇರಿಯಂ ಸೇರಿದಂತೆ 65ಕ್ಕೂ ಹೆಚ್ಚು ಅಕ್ವೇರಿಯಂಗಳಲ್ಲಿ ಮೀನುಗಳನ್ನು ಪ್ರದರ್ಶಿಸಲಾಗುತ್ತದೆ

8. ಕರ್ನಾಟಕದಲ್ಲಿ ಭೂ ಸಮೀಕ್ಷೆಗೆ ಡ್ರೋನ್ ಪವರ್ ಬಳಕೆ:

- ಮುಂದಿನ ಎರಡು ವರ್ಷದೊಳಗೆ ದೇಶಾದ್ಯಂತ ಭೂ ಮಾಪನಕ್ಕೆ ಡಿಜಿಟಲ್ ಸ್ಪರ್ಶ ನೀಡಲು ಭಾರತೀಯ ಭೂಮಾಪನ ಸಂಸ್ಥೆ (ಸರ್ವೇ ಆಫ್ ಇಂಡಿಯಾ) ಮುಂದಾಗಿದ್ದು, ಇದಕ್ಕಾಗಿ 'ಡಿಜಿಟಲ್ ಮ್ಯಾಪ್ ಪ್ರಾಜೆಕ್ಟ್' ಎಂಬ ಯೋಜನೆಯನ್ನು ಆರಂಭಿಸಿದೆ.

- ಕರ್ನಾಟಕ, ಮಹಾರಾಷ್ಟ್ರ, ಹರಿಯಾಣದಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಈಗಾಗಲೇ ಅನುಷ್ಠಾನಗೊಳಿಸಲಾಗಿದೆ.

ಪ್ರಯೋಜನವೇನು?

- ಉಪಗ್ರಹ ಆಧರಿತ ಪಥನಿರ್ದೇಶಕ ವ್ಯವಸ್ಥೆಯಾದ 'ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ' (ಜಿಪಿಎಸ್) ಮೂಲಕ ಪ್ರಸ್ತುತ ನಕ್ಷೆಗಳನ್ನು ಪಡೆಯಲಾಗುತ್ತಿದೆ.
- ಆದರೆ, ಹೊಸ ಯೋಜನೆ ಮೂಲಕ ಸೃಷ್ಟಿಸಲಾಗುವ ಭಾರತದ ಡಿಜಿಟಲ್ ನಕ್ಷೆಗಳು ಮತ್ತಷ್ಟು ನಿಖರತೆಯನ್ನು ಹೊಂದಿರಲಿವೆ.
- ಕೇವಲ 10 ಸೆಂಟಿ ಮೀಟರ್ ಆಜುಬಾಜಿನ ನಿಖರತೆ ಲಭ್ಯವಾಗಲಿದೆ. ಇದರಿಂದ ಸೂಕ್ಷ್ಮ ಪ್ರದೇಶಗಳಲ್ಲಿ ಗಡಿಗಳ ನಿಖರ ಗುರುತಿಸುವಿಕೆ ಸಾಧ್ಯವಾಗಲಿದ್ದು, ದೇಶದ ಭದ್ರತೆಗೂ ನೆರವಾಗಲಿದೆ.

9. ಹುತಾತ್ಮರ ತೀರ್ಥಕ್ಷೇತ್ರ ಗೋರ್ಟಾ:

- ಹೈದರಾಬಾದ್–ಕರ್ನಾಟಕಕ್ಕೆ 'ಕಲ್ಯಾಣ ಕರ್ನಾಟಕ' ಎಂದು ಮರುನಾಮಕರಣ ಮಾಡಿದರು.
- ಹೈದರಾಬಾದ್–ಕರ್ನಾಟಕ ವಿಮೋಚನಾ ದಿನಾಚರಣೆ ಸಂದರ್ಭದಲ್ಲಿ ದಕ್ಷಿಣ ಭಾರತದ ಜಲಿಯನ್‌ವಾಲಾ ಬಾಗ್ ಎಂದೇ ಕರೆಯಲಾಗುವ ಗೋರ್ಟಾ ಹತ್ಯಾಕಾಂಡ ಕಣ್ಣ ಮುಂದೆ ಬರುತ್ತದೆ.
- 1947 ಆಗಸ್ಟ್ 15 ರಂದು ದೇಶಕ್ಕೆ ಸ್ವಾತಂತ್ರ ಬಂದರೂ ಹೈದ್ರಾಬಾದ್ ನಿಜಾಮನ ಕಪಿಮುಷ್ಟಿಯಲ್ಲಿದ್ದ ಈ ಭಾಗಕ್ಕೆ ಮಾತ್ರ ಆ ಭಾಗ್ಯ ಸಿಕ್ಕಿರಲಿಲ್ಲ.
- ನಿಜಾಮ ಭಾರತದ ಒಕ್ಕೂಟದಲ್ಲಿ ಸೇರಲೊಪ್ಪದೆ ಸ್ವತಂತ್ರವಾದ ಮತ್ತೊಂದು ರಾಷ್ಟ್ರದ ಕಲ್ಪನೆಯಲ್ಲಿದ್ದ.
- ಬಳಿಕ ವಿವಿಧ ಸಂಘಟನೆಗಳು ವಿಮೋಚನಾ ಚಳವಳಿಗೆ ರಣಕಹಳೆ ಊದಿದವು. ಹೋರಾಟದ ಕಿಚ್ಚು ಬೀದರ್‌ನ

ಗೋರ್ಟಾ ಗ್ರಾಮಕ್ಕೂ ವ್ಯಾಪಿಸಿತು. ಬಳಿಕ ಗೋರ್ಟಾದಲ್ಲಿ ನಡೆದ ಹತ್ಯಾಕಾಂಡಕ್ಕೆ ಅನೇಕ ಕಾರಣಗಳಿದ್ದವು.

- ಈ ಹತ್ಯಾಕಾಂಡ ವಾರ್ತೆ ಕೇಳಿ ನೆಹರು, ಸರ್ದಾರ ಪಟೇಲ್ ಸೇರಿ ಹಲವರು ಗೋರ್ಟಾಕ್ಕೆ ಭೇಟಿ ನೀಡಿದರು. 2006ರಲ್ಲಿ ಬೀದರ್‌ನಲ್ಲಿ ಪ್ರಮೋದ್ ಮುತಾಲಿಕ್ 'ಗೋರ್ಟಾ ಚಲೋ' ಎಂಬ ಘೋಷಣೆ ನೀಡಿ ಗೋರ್ಟಾದಲ್ಲಿ ಹುತಾತ್ಮರ ಸ್ಮಾರಕ ರಾಷ್ಟ್ರೀಯ ಸಂಕಲ್ಪ ದಿನಾಚರಣೆ ಸಮಾರಂಭ ಯಶಸ್ವಿಗೊಳಿಸಿದರು.
- ಬಳಿಕ ಹುತಾತ್ಮರ ಸ್ಮಾರಕ ನಿರ್ಮಾಣ ಕಾರ್ಯ ಭರದಿಂದ ನಡೆಯಿತಾದರೂ ಕಾಮಗಾರಿ ಅರ್ಧಕ್ಕೆ ನಿಂತಿರುವುದು ವಿಷಾದನೀಯ.

ಬೇಡಿಕೆಗಳು:

- ಹೈ–ಕ ವಿಮೋಚನೆ ಚಳವಳಿ ಬದಲಾಗಿ ಹೈ–ಕ ಸ್ವಾತಂತ್ರ ಹೋರಾಟವಾಗಿ ಬದಲಾಗಲಿ,
- ಗೋರ್ಟಾ ಹುತಾತ್ಮರ ಸ್ಮಾರಕವನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಬೇಕು.
- ಕೇಂದ್ರ ಸರ್ಕಾರ ಗೋರ್ಟಾ ಗ್ರಾಮವನ್ನು ದತ್ತು ಪಡೆಯಬೇಕು, ವಿಮೋಚನಾ ನೇತಾರ ಕ್ರಾಂತಿಯೋಗಿ ಸ್ವಾಮಿ ರಮಾನಂದ ತೀರ್ಥರ ಮೂರ್ತಿ ಸ್ಥಾಪಿಸಬೇಕು.
- ನಿಜಾಮರ ವಿರುದ್ಧ ಸ್ವಾತಂತ್ರ್ಯ ಚಳವಳಿ ನಡೆದಿರುವ ಗ್ರಾಮಗಳಲ್ಲಿ ಹುತಾತ್ಮರ ಸ್ಮಾರಕ ನಿರ್ಮಾಣ ಮಾಡಬೇಕು.

10. ದಕ್ಷಿಣ ಕನ್ನಡ ಜಿಲ್ಲೆಯ ಚೆಸ್ ಆಟಗಾರ್ತಿ ಇಶಾ ಶರ್ಮ, ಹಂಗರಿಯಲ್ಲಿ ನಡೆದ ಬಲಾಟನ್ ಐಎಂ ಟೂರ್ನಿಯಲ್ಲಿ ಅಂತಾರಾಷ್ಟ್ರೀಯ ಮಾಸ್ಟರ್ ಪಟ್ಟ ಅಲಂಕರಿಸಿದ್ದಾರೆ:

11. ಬಿದಿರು ಅರ್ಥಿಕ ಕಲ್ಪವೃಕ್ಷ:

- ಬಡವರ ಮರವೆಂದೇ ಪ್ರಖ್ಯಾತಿ ಪಡೆದಿರುವ ಬಿದಿರು, ಯಾವ ವಾಣಿಜ್ಯ ಬೆಳೆಗೂ ಕಡಿಮೆ ಇಲ್ಲ. ಬಿದಿರು ರೈತರಿಗೆ ಆದಾಯ ತರುವ ಜತೆಗೆ ನಶಿಸಿ ಹೋಗುತ್ತಿರುವ ಗುಡಿ ಕೈಗಾರಿಕೆ ಹಾಗೂ ಬುಡಕಟ್ಟು ಜನಾಂಗದ ಅರ್ಥಿಕ ಸ್ಥಿತಿ ಸುಧಾರಿಸಬಲ್ಲ ಕಲ್ಪವೃಕ್ಷವಾಗಿದೆ.
- ಇದೀಗ ರಾಜ್ಯದಲ್ಲಿ ಬಿದಿರು ಬೆಳೆಯಲು ಇಚ್ಛಿಸುವ ರೈತರಿಗೆ ಕೇಂದ್ರ ಸರ್ಕಾರದ ವತಿಯಿಂದ ಪ್ರತಿ ಹೆಕ್ಟೇರ್‌ಗೆ 50.ಸಾವಿರ ಉತ್ತೇಜನ ರೂ. ಸಹಾಯಧನ ನೀಡುವುದಾಗಿ ಘೋಷಿಸಿದ್ದಾರೆ.

ಪ್ಲಾಸ್ಟಿಕ್‌ಗೆ ಪರ್ಯಾಯ

- ಜಾಗತಿಕ ತಾಪಮಾನ ದಿನೇದಿನೆ ಇಮ್ಮಡಿಯಾಗುತ್ತಿದ್ದು, ಪುನರ್ಬಳಕೆಗೆ ಯೋಗ್ಯವಾಗಿರುವ ಹಾಗೂ ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಬಳಸಿಕೊಳ್ಳಬಹುದಾದ ಏಕೈಕ ಪರಿಸರ ಸ್ನೇಹಿ ಎಂದರೆ ಬಿದಿರು.
- ಬಿದಿರು ಬೆಳೆಸುವಿಕೆ, ಅಭಿವೃದ್ಧಿ ಬಗ್ಗೆ ಜನರಲ್ಲಿ ಹಿತಿ ಅರಿವು ಮೂಡಿಸಲು ವಿಶ್ವ ಬಿದಿರು ಸಂಸ್ಥೆ ಸೆ.18ರಂದು ವಿಶ್ವದೆಲ್ಲೆಡೆ 'ಬಿದಿರು ದಿನ' ಆಚರಿಸಿಕೊಂಡು ಬರುತ್ತಿದೆ.

12. ಕೇರಳ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಸ್.ಆರ್. ಬನ್ನೂರು ಮತ್ ಅವರನ್ನು 'ಕರ್ನಾಟಕ ಕಾನೂನು ಆಯೋಗ'ದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ರಾಜ್ಯ ಸರಕಾರ ಆದೇಶ ಹೊರಡಿಸಿದೆ:

13. ಮೈಸೂರು ದಸರಾಗೆ ಲಾರ್ಡ್ ಮೌಂಟ್ ಬ್ಯಾಟನ್ ಕಾರು:



- ಭಾರತದ ಮೊದಲ ಬ್ರಿಟಿಷ್ ಗವರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ ಬಳಸಿದಂತಹ ಕಾರು ಸೇರಿದಂತೆ 50 ವಿಂಟೇಜ್ (ಕಾರ್) ಮೆರವಣಿಗೆಗೆ ಪ್ರವಾಸೋದ್ಯಮವನ್ನು ಉತ್ತೇಜಿಸುವ ದೃಷ್ಟಿಯಿಂದ ನಾಡಹಬ್ಬ ದಸರಾ ಮಹೋತ್ಸವದಲ್ಲಿ ಮೂರನೇ ಬಾರಿಗೆ ವಿಂಟೇಜ್ ಕಾರುಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.
- ಬೆಂಗಳೂರಿನ ಫೆಡರೇಷನ್ ಆಫ್ ಹಿಸ್ಟಾರಿಕ್ ವೆಹಿಕಲ್ಸ್ ಆಫ್ ಇಂಡಿಯಾ ಸಹಯೋಗದಲ್ಲಿ ವಿಂಟೇಜ್ ಕಾರ್ ರ‍್ಯಾಲಿ ಏರ್ಪಡಿಸಲಾಗಿದೆ.
- ಮೋತಿಲಾಲ್ ನೆಹರು 1928ರಿಂದ 1985ರವರೆಗೆ ಉಪಯೋಗಿಸುತ್ತಿದ್ದ 'ಲಾಂಚ್‌ಸ್ಟಾರ್ ಎಸ್ಪಿ 8(ಎಂಡಿಒ–8)' ಕಾರು ಭಾಗಿಯಾಗಿದ್ದು ವಿಶೇಷವಾಗಿತ್ತು.
- ಹಾಗೆಯೇ, ಈ ಬಾರಿ ದೇಶದ ಮೊದಲ ಗವರ್ನರ್ ಜನರಲ್ ಲಾರ್ಡ್ ಮೌಂಟ್ ಬ್ಯಾಟನ್ ಅವರು ಬಳಸಿದಂತಹ 1937ರ ಸನ್ಬೀಮ್ ಟಾಲ್ಬೋಟ್ (ಎಂಎಸ್‌ಪಿ–4878) ಕಾರು ಆಗಮಿಸುತ್ತಿರುವುದು ವಿಶೇಷ.

14. **ವಸತಿ ಯೋಜನೆ ನಿಗಾಕ್ಕೆ 'ಅಂಗೀಕಾರ್':**

- ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿವಿಧ ವಸತಿ ಯೋಜನೆಗಳ ಅನುಷ್ಠಾನ ಹಾಗೂ ಇತರೆ ಏಳು ಸೌಲಭ್ಯಗಳ ಟ್ರ್ಯಾಕಿಂಗ್‌ಗಾಗಿ ರೂಪಿಸಲಾಗಿರುವ 'ಅಂಗೀಕಾರ್' ಆ್ಯಪ್ ಮಹಾತ್ಮಗಾಂಧಿ ಅವರ 150ನೇ ಜಯಂತಿಯಾದ ಅ.2ರಂದು ದೇಶಾದ್ಯಂತ ಬಿಡುಗಡೆಯಾಗುತ್ತಿದೆ.
- ರಾಜೀವ್‌ಗಾಂಧಿ ವಸತಿ ನಿಗಮ ಅಭಿವೃದ್ಧಿಪಡಿಸಿರುವ 'ಅಂಗೀಕಾರ್' ಆ್ಯಪ್ ಅ. 2ರಿಂದ ಪ್ಲೇ–ಸ್ಟೋರ್‌ನಲ್ಲಿ ಲಭ್ಯ.
- ರಾಜೀವ್ ಗಾಂಧಿ ವಸತಿ ನಿಗಮ, ಪ್ರಧಾನ ಮಂತ್ರಿ ಆವಾಸ್ ಯೋಜನೆ, ಅಂಬೇಡ್ಕರ್ ಆವಾಸ್, ಬಸವ ವಸತಿ ಯೋಜನೆ, ದೇವರಾಜ ಅರಸು ಯೋಜನೆಗಳ ಫಲಾನುಭವಿಗಳನ್ನು ಟ್ರ್ಯಾಕ್ ಮಾಡಲು ಅಧಿಕಾರಿಗಳು ಇದನ್ನು ಬಳಸಲಿದ್ದಾರೆ.
- ವಸತಿ ಯೋಜನೆ ಫಲಾನುಭವಿಗಳಿಗೆ ಸೇರಬೇಕಾದ ಉಜ್ವಲ್, ಆಯುಷ್ಮಾನ್ ಭಾರತ್, ಸೋಲಾರ್ ಪ್ಯಾನಲ್, ಎಲ್‌ಇಡಿ ಲೈಟ್, ಕಸ ವಿಂಗಡಣೆ, ಮಳೆ ನೀರು ಕೊಯ್ಲು ಮತ್ತು ಮನೆಯ ಮುಂದೆ ಗಿಡ ' ನಡುವ ಸೌಲಭ್ಯಗಳ ಅನುಷ್ಠಾನಗಳನ್ನು ಈ ಆ್ಯಪ್‌ಗೆ ಜೋಡಿಸಬೇಕು. ಹೀಗಾಗಿ, ಕೇಂದ್ರ ಸರಕಾರಕ್ಕೆ ವಸತಿ ಯೋಜನೆಗಳ ಗುಣಮಟ್ಟ ಕರಾರುವಾಕ್ ಮಾಹಿತಿಗಳು ದೊರೆಯಲಿದೆ.

ದಾಖಲು ವಿಧಾನ

- ವಸತಿ ಯೋಜನೆಗಳ ಫಲಾನುಭವಿಗಳ ಮನೆ ಬಾಗಿಲಿಗೆ ಅಧಿಕಾರಿಗಳು, ಎನ್‌ಜಿಒ ಹಾಗೂ ಸಂಘ ಸಂಸ್ಥೆಗಳ ಸದಸ್ಯರು ಬಂದು, ವಿವಿಧ ಸೌಲಭ್ಯಗಳ ವಿವರಗಳನ್ನು ಆ್ಯಪ್‌ಗೆ ಅಪ್‌ಲೋಡ್ ಮಾಡುತ್ತಾರೆ.
- ಮನೆಯವರು ಪಡೆದ ಮತ್ತು ಪಡೆಯದ ಸೌಲಭ್ಯಗಳ ಮಾಹಿತಿಯನ್ನು ಈ ಆ್ಯಪ್‌ನಲ್ಲಿ ದಾಖಲಿಸುವರು.
- ಮಾಹಿತಿ ಅಪ್‌ಲೋಡ್ ಮಾಡುವ ಎನ್‌ಜಿಒ ಸದಸ್ಯರಿಗೆ ಪ್ರತಿ ಕುಟುಂಬದ ಮಾಹಿತಿಗೆ 30 ರೂ. ಗೌರವಧನ ನೀಡಲಾಗುತ್ತದೆ.

ಆಪ್ ಬಳಕೆ ಬಗ್ಗೆ ತರಬೇತಿ

- ಕಳೆದವಾರ ಬೆಂಗಳೂರಿನಲ್ಲಿ ಅಧಿಕಾರಿಗಳಿಗೆ ಆ್ಯಪ್ ಬಳಸುವ ಸಂಬಂಧ ತರಬೇತಿ ನೀಡಲಾಗಿದೆ.
- ಇದನ್ನು ಜನರ ಬಳಕೆಗೆ ನೀಡಿಲ್ಲ. ಆದರೆ, ಫಲಾನುಭವಿಗಳು ಪಡೆದ ಸೌಲಭ್ಯಗಳ ಮಾಹಿತಿ ಪಡೆಯಬಹುದು ಎಂಬುದು ವಿಶೇಷ.
- ರಾಮನಗರ ಜಿಲ್ಲೆಯಲ್ಲಿ 14,470 ಹಾಗೂ ರಾಜ್ಯದಲ್ಲಿ 10 ಲಕ್ಷಕ್ಕೂ ಹೆಚ್ಚಿನ ಫಲಾನುಭವಿಗಳ ವಸತಿ ಮಾಹಿತಿ ಆ್ಯಪ್‌ನಲ್ಲಿ ದೊರೆಯಲಿದೆ.

15. ಉನ್ನತ ಶಿಕ್ಷಣ: ವಿದೇಶಿಯರಿಗೆ ಕರ್ನಾಟಕವೇ ಅಚ್ಚುಮೆಚ್ಚು:

- ಜಗತ್ತಿನ 164 ದೇಶಗಳ ವಿದ್ಯಾರ್ಥಿಗಳು ಭಾರತದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಬಿ.ಟೆಕ್ ಹಾಗೂ ಬಿಬಿಎ ವಿದೇಶಿ ವಿದ್ಯಾರ್ಥಿಗಳ ಆದ್ಯತೆಯ ಕೋರ್ಸ್‌ಗಳಾಗಿವೆ ಎಂದು ಕೇಂದ್ರಮಾನವ ಸಂಪನ್ಮೂಲ ಸಚಿವಾಲಯ ತಿಳಿಸಿದೆ.
- ಉನ್ನತ ಶಿಕ್ಷಣ ಪಡೆಯಲು ಬರುವ ವಿದೇಶಿಗರ ಪೈಕಿ ಹುಡುಗರೇ ಹೆಚ್ಚು (85%)
- ನೇಪಾಳ ಹಾಗೂ ಅಫ್ಘಾನಿಸ್ತಾನ ದೇಶಗಳ ವಿದ್ಯಾರ್ಥಿಗಳ ಮೊದಲ ಆಯ್ಕೆ ಭಾರತ
- ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷಾವರದಿಯಲ್ಲಿ (ಎಐಎಸ್‌ಎಚ್‌ಇ) ಉಲ್ಲೇಖ
- ಸಮೀಕ್ಷೆಯಲ್ಲಿ 962 ವಿಶ್ವವಿದ್ಯಾಲಯ, 38,179 ಕಾಲೇಜು, 9,190 ಶಿಕ್ಷಣ ಸಂಸ್ಥೆಗಳು ಭಾಗಿ



16. ಶರಾವತಿ ಕಣಿವೆ ಸೀಳುವ ಜಲ ವಿದ್ಯುತ್ ಯೋಜನೆ:

- ರಾಜ್ಯದ ಅತಿ ಶ್ರೀಮಂತ ಜೀವ ವೈವಿಧ್ಯ ತಾಣವಾದ ಶರಾವತಿ ಕಣಿವೆಯ ಭೂ ಗರ್ಭವನ್ನು ಸೀಳಿ ದೇಶದ ಅತಿದೊಡ್ಡ ಭೂಗತ ಪಂಪ್ ಸ್ಟೋರೇಜ್ ವಿದ್ಯುತ್ ಉತ್ಪಾದನಾ ಯೋಜನೆಯನ್ನು ಜಾರಿಗೊಳಿಸಲು ರಾಜ್ಯ ಸರಕಾರ ಸಿದ್ದತೆ ನಡೆಸಿದೆ.
- ಶರಾವತಿ ಕಣಿವೆಯ ಸಾವಿರಾರು ಹೆಕ್ಟೇರ್ ಅರಣ್ಯವನ್ನು ನೀರಿನಲ್ಲಿ ಮುಳುಗಿಸಿ ಲಿಂಗನಮಕ್ಕಿ, ಚಕ್ರಾ, ಸಾವೇಹಕ್ಲು, ತಲಕಳಲೆ, ಗೇರುಸೊಪ್ಪಾ ಅಣೆಕಟ್ಟುಗಳನ್ನು ನಿರ್ಮಿಸಿದ ರಾಜ್ಯ ಸರಕಾರವು ಮತ್ತೆ 800 ಎಕರೆ ಅರಣ್ಯವನ್ನು ವಿದ್ಯುತ್ ಯೋಜನೆಗೆ ಅಪೋಶನ ನೀಡಲು ಮುಂದಾಗಿದೆ.

ಬಳಸಿದ ನೀರು ಮತ್ತೆ ಡ್ಯಾಮ್‌ಗೆ

- ಏಷ್ಯಾದ ಮೊಟ್ಟ ಮೊದಲ ಭೂಗರ್ಭ ವಿದ್ಯುದಾಗಾರವನ್ನು ಉಡುಪಿ ಜಿಲ್ಲೆ ಉಪ್ಪಿನಂಗಡಿ ಬಳಿ ನಿರ್ಮಿಸಲಾಗಿದೆ.

ರಾಷ್ಟ್ರೀಯ

1. ನಿರ್ಮಾಣಕ್ಕೆ ಆನ್‌ಲೈನ್ ಅನುಮತಿ:

- ಮಧ್ಯಪ್ರದೇಶ, ಆಂಧ್ರಪ್ರದೇಶ, ಹರಿಯಾಣ, ಪಂಜಾಬ್, ಜಾರ್ಖಂಡ್ ಮತ್ತು ತೆಲಂಗಾಣ ಸೇರಿ ಆರು ರಾಜ್ಯಗಳಲ್ಲಿ ಐತಿಹಾಸಿಕ ಕಟ್ಟಡಗಳ ಸುತ್ತಮುತ್ತ ನಿರ್ಮಾಣಕ್ಕೆ ಅನುಮತಿ ಪಡೆಯಲು ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವಾಲಯ ಆನ್‌ಲೈನ್ ವ್ಯವಸ್ಥೆಗೆ ಚಾಲನೆ ನೀಡಿದೆ.
- ಈ ಆನ್‌ಲೈನ್ ಅರ್ಜಿಯನ್ನು ವಿನ್ಯಾಸ, ಅಭಿವೃದ್ಧಿ ಮತ್ತು ಕಾರ್ಯಗತಗೊಳಿಸುವ ಕೆಲಸವನ್ನು 'ನ್ಯಾಷನಲ್ ಮ್ಯಾನೆಜ್‌ಮೆಂಟ್ ಅಥಾರಿಟಿ' (ಎನ್‌ಎಂಎ) ಮಾಡಿದೆ.
- ಸೆಪ್ಟೆಂಬರ್ 2015 ರಲ್ಲಿ 'ಎನ್ ಒಎಪಿಎಸ್ ನಾನ್ ಸಿಂಗಲ್ ವಿಂಡೋ ಸಿಸ್ಟಮ್' ಅನ್ನು ಅನಾವರಣಗೊಳಿಸಲಾಯಿತು. ನಂತರ, 'ಎನ್‌ಒಎಪಿಎಸ್ ಸಿಂಗಲ್ ವಿಂಡೋ ಸಿಸ್ಟಮ್' ಅನ್ನು ಅಧಿಕೃತವಾಗಿ 2016 ಮೇ 1 ರಂದು ಪ್ರಾರಂಭಿಸಲಾಯಿತು.
- 2019ರ ಆಗಸ್ಟ್ ವರೆಗೂ ದೆಹಲಿಯ ಕೇವಲ ಐದು ನಗರ ಸ್ಥಳೀಯ ಸಂಸ್ಥೆಗಳಿಗೆ ಮತ್ತು ಮುಂಬೈನ ಒಂದು ನಾಗರಿಕ ಸಂಸ್ಥೆಗೆ ಈ ಸೌಲಭ್ಯ ಸೀಮಿತವಾಗಿತ್ತು. ಇದೀಗ ಆರು ರಾಜ್ಯಗಳಿಗೆ ವಿಸ್ತರಿಸಲಾಗಿದೆ.

ಎನ್‌ಎಂಎ ಕುರಿತು :

- ಏನ್ವಿರಾಯಮೆಂಟ್ ಆನ್‌ಲೈನ್ ಆ್ಯಂಡ್ ಆರ್ಕಿಯಾಲಾಜಿಕಲ್ ಸೈಟ್ಸ್ ಆ್ಯಂಡ್ ರಿಮೈನ್ಸ್ (AMASR) (ತಿದ್ದುಪಡಿ ಮತ್ತು ಕ್ರಮಬದ್ಧಗೊಳಿಸುವಿಕೆ) ಕಾಯ್ದೆ 2010ರ ಪ್ರಕಾರ ಕೇಂದ್ರ ಸಂಸ್ಕೃತಿ ಸಚಿವಾಲಯದಡಿ ನ್ಯಾಷನಲ್ ಆನ್‌ಲೈನ್ ಅಥಾರಿಟಿ (NMA) ಯನ್ನು ರಚಿಸಲಾಯಿತು.
- ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸುವ ಕಾರ್ಯದ ಜತೆಗೆ ನಿಷೇಧಿತ ಸ್ಥಳಗಳಲ್ಲಿ ನಿರ್ಮಾಣಕ್ಕೆ ಅನುಮತಿ ನೀಡುವ ಜವಾಬ್ದಾರಿಯನ್ನು ಪ್ರಾಧಿಕಾರಕ್ಕೆ ವಹಿಸಲಾಗಿದೆ.

517 ಕಡೆ ಜಾರಿ:

- ಮಧ್ಯಪ್ರದೇಶದ 378, ಆಂಧ್ರಪ್ರದೇಶದ 110, ಹರಿಯಾಣದ 15, ಪಂಜಾಬ್‌ನ 10, ಜಾರ್ಖಂಡ್‌ನ 3 ಮತ್ತು ತೆಲಂಗಾಣದ 1 ಒಟ್ಟು 517 ಸ್ಥಳೀಯ ಸಂಸ್ಥೆಗಳಲ್ಲಿ ಎನ್‌ಒಪಿಎಸ್ ಆನ್‌ಲೈನ್ ಪ್ರಕ್ರಿಯೆ ಜಾರಿಗೊಳಿಸಲಾಗಿದೆ.

ಪ್ರಯೋಜನ ಏನು?

- ಏರುತ್ತಿರುವ ಜನಸಂಖ್ಯೆ, ನಗರೀಕರಣ, ಅಭಿವೃದ್ಧಿಯಿಂದ ಭೂಮಿಗೆ ಮಿತಿ ಮೀರಿದ ಬೇಡಿಕೆ ಇದೆ. ಹಲವು ರಾಜ್ಯಗಳ ಪ್ರಮುಖ ನಗರದಲ್ಲಿ ಐತಿಹಾಸಿಕ ಸ್ಮಾರಕಗಳಿಗೆ ಎಕರೆಗಟ್ಟಲೆ ಜಾಗ ಮೀಸಲಿಟ್ಟಿರುವುದರಿಂದ ಬಳಕೆಗೆ ಸಾಧ್ಯವಾಗುತ್ತಿಲ್ಲ.
- ಬೇಡಿಕೆ ಹೆಚ್ಚುತ್ತಿರುವುದರಿಂದ ನಿಷೇಧಿತ ಮತ್ತು ನಿಯಂತ್ರಿತ ಜಾಗಗಳಲ್ಲಿ ನಿರ್ಮಾಣ ಕಾರ್ಯಕ್ಕೆ ಅನುಮತಿ ಕೊಡುವುದು ಅನಿವಾರ್ಯ.
- ಸ್ಮಾರಕ ಸಂರಕ್ಷಣೆಯಷ್ಟೇ ಬೆಳವಣಿಗೆಗೂ ಪ್ರಾಮುಖ್ಯತೆ ನೀಡುವುದು ಅಗತ್ಯವಾಗಿರುವುದರಿಂದ ಭೂಮಿಯನ್ನು ನಿರ್ಮಾಣ ಕಾರ್ಯಕ್ಕೆ ನೀಡಲಾಗುತ್ತಿದೆ.
- ಈ ಪ್ರಕ್ರಿಯೆಯನ್ನು ಸುಲಭಗೊಳಿಸಲು ಈಗ ಆನ್‌ಲೈನ್ ಪಕ್ರಿಯೆಗೆ ಚಾಲನೆ ನೀಡಿಲಾಗಿದೆ.

2. ಎನ್‌ಆರ್‌ಸಿಗಳು ಮುಂದೇನು ಮಾಡಬಹುದು?

- ವಿದೇಶಿಯರ ನ್ಯಾಯಮಂಡಳಿಯಲ್ಲಿ ವಲಸಿಗರು ಪ್ರಶ್ನಿಸಬಹುದು. ಸರಕಾರ ಅವರಿಗೆ ಉಚಿತವಾಗಿ ಕಾನೂನಿನ ನೆರವು ನೀಡಲಿದೆ. ಇದು ಅಂತಿಮ ವರದಿ ಪ್ರಕಟವಾದ 120 ದಿನಗಳೊಳಗೆ ಮೇಲ್ಮನವಿ ಸಲ್ಲಿಸಬೇಕು.
- ಮನವಿ ಸಲ್ಲಿಸಿದ ಆರು ತಿಂಗಳೊಳಗೆ ಕೇಸಿನ ತೀರ್ಪು ವಿಲೇವಾರಿಯಾಗಬೇಕು ಎಂದು ಹೇಳುತ್ತದೆ. ವಿದೇಶಿಯರ ನ್ಯಾಯಮಂಡಳಿಯಲ್ಲಿ ಕೂಡ ವಿದೇಶಿ ಪ್ರಜೆ, ಅಸ್ಸಾಂ ರಾಜ್ಯಕ್ಕೆ ಸೇರುವುದಿಲ್ಲ ಎಂದು ತೀರ್ಪು ಬಂದರೆ ಗುವಾಹಟಿ ಹೈಕೋರ್ಟ್‌ಗೆ ಮತ್ತೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ.

ಸೌಲಭ್ಯಗಳಿಲ್ಲ:

- ಅಸ್ಸಾಂ ನಾಗರಿಕ ದಾಖಲಾತಿ ಪಟ್ಟಿಯಿಂದ ಹೊರಬಿದ್ದವರು ಮತದಾನದ ಹಕ್ಕು ಕಳೆದುಕೊಳ್ಳುತ್ತಾರೆ, ಭೂ ಮಾಲೀಕತ್ವದ ಹಕ್ಕನ್ನು ಕೂಡ ಕಳೆದುಕೊಳ್ಳುತ್ತಾರೆ.
- ಸರಕಾರಿ ಉದ್ಯೋಗಗಳು ಸಿಗುವುದಿಲ್ಲ ಮತ್ತು ಸರಕಾರದಿಂದ ಬರುವ ಇತರ ಸೌಲಭ್ಯಗಳಿಂದ ವಂಚಿತರಾಗುತ್ತಾರೆ.

ಎನ್‌ಆರ್‌ಸಿ ಎಂದರೇನು?

- 'ನ್ಯಾಷನಲ್ ರಿಜಿಸ್ಟರ್ ಆಫ್ ಸಿಟಿಜನ್'ನ ಸಂಕ್ಷಿಪ್ತ ರೂಪವೇ ಎನ್‌ಆರ್‌ಸಿ ಅಂದರೆ ರಾಷ್ಟ್ರೀಯ ಪೌರತ್ವ ನೋಂದಣಿ. ಭಾರತೀಯ ನಾಗರಿಕರು ಮತ್ತು ಅಕ್ರಮ ವಿದೇಶಿಗರನ್ನು ಗುರುತಿಸುವ ಅಧಿಕೃತ ದಾಖಲೆ ಇದು.

- ಸತಂತ್ರ ಭಾರತದ ಮೊದಲ ಜನಗಣತಿಯ (1951) ಆಧಾರದ ಮೇಲೆ ಎನ್‌ಆರ್‌ಸಿಯನ್ನು ಪ್ರಥಮ ಬಾರಿಗೆ ರೂಪಿಸಲಾಯಿತು.
- ವ್ಯಕ್ತಿಯ ಪೌರತ್ವವನ್ನು ಪತ್ತೆ ಮಾಡುವುದು/ದಾಖಲು ಮಾಡುವುದು ಇದರ ಉದ್ದೇಶ.

3. ಐದು ರಾಜ್ಯಗಳಿಗೆ ಹೊಸ ರಾಜ್ಯಪಾಲರ ನೇಮಕ:

ರಾಜ್ಯ	ರಾಜ್ಯಪಾಲರು
ಕೇರಳ	ಆರೀಫ್ ಖಾನ್
ತೆಲಂಗಾಣ	ತಮಿಳಿಸೈ ಸೌಂದರರಾಜನ್
ಮಹಾರಾಷ್ಟ್ರ	ಭಗತ್ ಸಿಂಗ್ ಕೋಶ್ಯಾರಿ
ಹಿಮಾಚಲ ಪ್ರದೇಶ	ಬಂಡಾರು ದತ್ತಾತ್ರೇಯ
ರಾಜಸ್ಥಾನ	ಕಲ್ರಾಜ್ ಮಿಶ್ರಾ

4. ಸಾಗರದಾಳದ ಅನ್ವೇಷಣೆ:



- ಮುಳುಗುವ ವಾಹನದಲ್ಲಿ ಮಾನವರನ್ನು ಆಳ ಸಮುದ್ರಕ್ಕೆ ಕಳುಹಿಸುವ ಮಹತ್ವಾಕಾಂಕ್ಷಿ 'ಸಮುದ್ರಯಾನ ಯೋಜನೆ'ಗೆ ಭಾರತ ಸಿದ್ಧತೆ ನಡೆಸುತ್ತಿದೆ.
- ಸಾಗರದಾಳದ ಗಣಿಗಾರಿಕೆಗೆ ಭೂ ವಿಜ್ಞಾನ ಸಚಿವಾಲಯ ಮುಂದಾಗಿದೆ. 'ಮೈನಿಂಗ್ ನ್ಯಾಷನಲ್ ಇನ್ಸ್‌ಟ್ಯೂಟ್ ಆಫ್ ಓಷಿಯನ್ ಟೆಕ್ನಾಲಜಿ' (ಎನ್‌ಐಒಟಿ) 2021–22ರಲ್ಲಿ ಯಿಂದ ಚಾಲನೆ ನೀಡಲಿದೆ.

ಏನಿದರ ಪ್ರಯೋಜನ?

- 'ಇಂಟರ್ನ್ಯಾಷನಲ್ ಸೀ ಬೆಡ್ ಅಥಾರಿಟಿ' (ಐಸ್ಬಿಎ) ಸಮುದ್ರ ತಳದಿಂದ ಪಾಲಿಮೆಟಾಲಿಕ್ ಖನಿಜಗಳನ್ನು ಅನ್ವೇಷಿಸಲು ಭಾರತಕ್ಕೆ ಮಧ್ಯ ಹಿಂದೂ ಮಹಾಸಾಗರದ ಜಲಾನಯನ ಪ್ರದೇಶದಲ್ಲಿ 75,000 ಚದರ.ಕಿ.ಮೀ. ಪ್ರದೇಶ ಮೀಸಲಿಟ್ಟಿದೆ. ಈ ಪ್ರದೇಶದಲ್ಲಿ 380 ಮಿಲಿಯನ್ ಟನ್ ಪಾಲಿಮೆಟಾಲಿಕ್ ಖನಿಜ ಸಿಗಬಹುದು ಎಂದು ಅಂದಾಜಿಸಲಾಗಿದೆ.

ಐಎಸ್‌ಎಯಿಂದ ವಿಸ್ತೀರ್ಣ ನಿಗದಿ:

- 1982ರ 'ಯುನೈಟೆಡ್ ನೇಷನ್ಸ್ ಕನ್ವೆನ್ಷನ್ ಲಾ ಆಫ್ ಸೀ' ಅನ್ವಯ ಸ್ಥಾಪಿಸಲಾದ 'ಸ್ವಾಯತ್ತ ಅಂತರರಾಷ್ಟ್ರೀಯ ಸಂಘಟನೆ ಇಂಟರ್ನ್ಯಾಷನಲ್ ಸೀಬೆಡ್ ಅಥಾರಿಟಿ' (ಐಎಸ್‌ಎ) ಜಮೈಕಾ ಆಳ ಸಮುದ್ರದ ಗಣಿಗಾರಿಕೆಗೆ ಪ್ರದೇಶ ನಿಗದಿಪಡಿಸುತ್ತದೆ.
- 1987ರಲ್ಲಿ ಭಾರತ 'ಪಯೋನೀರ್ ಇನ್ವೆಸ್ಟರ್' ಸ್ಥಾನ ಪಡೆದ ಮೊದಲ ದೇಶವಾಗಿದ್ದು, ಖನಿಜ ಅನ್ವೇಷಣೆಗೆ ಮಧ್ಯ ಹಿಂದೂ ಮಹಾಸಾಗರ ಜಲಾನಯನ ಪ್ರದೇಶದಲ್ಲಿ (ಸಿಐಒಬಿ) ಸುಮಾರು 5 ಲಕ್ಷ ಚದರ ಕಿ.ಮೀ ವಿಸ್ತೀರ್ಣವನ್ನು ನೀಡಲಾಗಿತ್ತು.
- 2002ರಲ್ಲಿ ಭಾರತ ಐಎಸ್‌ಎ ಜತೆ ಒಪ್ಪಂದಕ್ಕೆ ಸಹಿ ಹಾಕಿತ್ತು ಮತ್ತು ಸಮುದ್ರತಳದ ಸಂಪೂರ್ಣ ಸಂಪನ್ಮೂಲ ವಿಶ್ಲೇಷಣೆಯ ನಂತರ ಶೇ.50 ಪ್ರದೇಶ ನೀಡಲಾಗಿ 75,000 ಸ್ಕ್ವೆಯರ್ ಕಿ.ಮೀ. ಸಮುದ್ರ ಪ್ರದೇಶ ದೊರಕಿತು.

ಅಕ್ಟೋಬರ್‌ನಲ್ಲಿ ಅನುಮೋದನೆ:

- 2022ರಲ್ಲಿ ಸಮುದ್ರದಾಳದ ಗಣಿಗಾರಿಕೆ ಪ್ರಾರಂಭವಾಗುವ ನಿರೀಕ್ಷೆ ಇದೆ. ತಾತ್ವಿಕವಾಗಿ ಅನುಮೋದನೆ ಪಡೆದಿದೆ ಆದರೆ ಕೇಂದ್ರ ಹಣಕಾಸು ಸಚಿವಾಲಯದಿಂದ ಅಂತಿಮ ಅನುಮೋದನೆಗಾಗಿ ಕಾಯುತ್ತಿದೆ.
- ಈ ವರ್ಷದ ಅಕ್ಟೋಬರ್ ವೇಳೆಗೆ ಅಂತಿಮ ಅನುಮೋದನೆ ನಿರೀಕ್ಷಿಸಲಾಗಿದೆ ಎಂದು ಎನ್‌ಐಒಟಿ ಡೈರೆಕ್ಟರ್ ಎಂ.ಎ.ಆತ್ಮಾನಂದ್ ತಿಳಿಸಿದ್ದಾರೆ.

5. ಶಿಕ್ಷಕರ ದಿನಾಚರಣೆ:



- ಸೆಪ್ಟೆಂಬರ್ 5 ಮಾಜಿ ರಾಷ್ಟ್ರಪತಿ, ಶಿಕ್ಷಣತಜ್ಞ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನ. ಈ ದಿನವನ್ನು "ಶಿಕ್ಷಕರ ದಿನಾಚರಣೆ"ಯಾಗಿ ಆಚರಿಸಲಾಗುತ್ತಿದೆ.

ದಿನಾಚರಣೆಯ ಹಿನ್ನೆಲೆ :

- ಭಾರತೀಯ ಶಿಕ್ಷಣ ಕ್ಷೇತ್ರಕ್ಕೊಂದು ಅರ್ಥವತ್ತಾದ ಚೌಕಟ್ಟನ್ನು ನೀಡುವ ಮೂಲಕ ಶಿಕ್ಷಣ ಕ್ಷೇತ್ರ, ತತ್ವಜ್ಞಾನ, ದೇಶದ ಅಭಿವೃದ್ಧಿಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದ, 1962–1964 ಅವಧಿಯಲ್ಲಿ ಭಾರತದ ರಾಷ್ಟ್ರಪತಿಗಳಾಗಿದ್ದ ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದರು.

- 1962ರಲ್ಲಿ ಇವರ ಶಿಷ್ಯರು ಮತ್ತು ಸ್ನೇಹಿತರು ಸೆಪ್ಟೆಂಬರ್ 5ರಂದು ತಮ್ಮ ಹುಟ್ಟಿದ ದಿನವನ್ನು ಆಚರಿಸಲು ಹೇಳಿದಾಗ ತಮ್ಮ ಶಿಕ್ಷಕ ಹುದ್ದೆಯನ್ನು ಅಪಾರವಾಗಿ ಗೌರವಿಸುತ್ತಿದ್ದ ರಾಧಾಕೃಷ್ಣನ್ ನೀವು ನನ್ನ ಹುಟ್ಟಿದ ದಿನವನ್ನು ಬೇರೆಯಾಗಿಯೇ ಆಚರಿಸುವುದಾದರೆ ಇಂದಿನಿಂದ ಸೆಪ್ಟೆಂಬರ್ 5ನ್ನು ಶಿಕ್ಷಕರ ದಿನವನ್ನಾಗಿ ಆಚರಿಸಲು ಹೇಳಿದರು.
- ಅಂದಿನಿಂದ ಇವರ ಜನ್ಮದಿನವಾದ ಸೆಪ್ಟೆಂಬರ್ 5ರಂದು ಪ್ರತಿವರ್ಷ ಶಿಕ್ಷಕರ ದಿನವಾಗಿ ಆಚರಿಸಲಾಗುತ್ತದೆ.

ಬಾಲ್ಯ, ವಿದ್ಯಾಭ್ಯಾಸ:

- ರಾಧಾಕೃಷ್ಣನ್ ಜನಿಸಿದ್ದು ದಕ್ಷಿಣ ಭಾರತದ ತಮಿಳುನಾಡಿನ ತಿರುತ್ತಣಿ ಎಂಬಲ್ಲಿ ಸೆಪ್ಟೆಂಬರ್ 5, 1888ರಲ್ಲಿ ಸರ್ವಪಳ್ಳಿ ಎನ್ನುವುದು ಮನೆತನದ ಹೆಸರಾದರೆ, ರಾಧಾಕೃಷ್ಣನ್ ಎನ್ನುವುದು ಅವರ ತಂದೆ–ತಾಯಿ ಇಟ್ಟ ಮುದ್ದಿನ ಹೆಸರು.
- ತಂದೆ ಸರ್ವಪಲ್ಲಿ ವೀರಸ್ವಾಮಿ, ತಾಯಿ ಸೀತಮ್ಮ ಜಮೀನ್ದಾರರ ಬಳಿ ದಿನಗೂಲಿ ನೌಕರರಾಗಿ ಸೇವೆಗೈಯುತ್ತಾ ಮಗನ ಶ್ರೇಯೋಭಿವೃದ್ಧಿಗೆ ಶ್ರಮಿಸಿದರು.
- ಸ್ಕಾಲರ್‌ಶಿಪ್ ಹಣದಲ್ಲಿಯೇ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಶಿಕ್ಷಣವನ್ನು ಮುಗಿಸಿದ ರಾಧಾಕೃಷ್ಣನ್ ಮದ್ರಾಸ್ (ಈಗಿನ ಚೆನ್ನೈ) ಕ್ರಿಶ್ಚಿಯನ್ ಕಾಲೇಜ್‌ನಲ್ಲಿ ತತ್ವಜ್ಞಾನ ವಿಷಯದ ಮೇಲೆ ಬಿ.ಎ ಮತ್ತು ಎಂ.ಎ. ಪದವಿ ಮಾಡಿದರು. ಸ್ನಾತಕೋತ್ತರ ಪದವಿಯಲ್ಲಿ ರಾಧಾಕೃಷ್ಣನ್ ಮಂಡಿಸಿದ ಪ್ರಬಂಧ 'ದಿ ಎಥಿಕ್ಸ್ ಆಫ್ ವೇದಾಂತ' ಅವರ ಬದುಕಿನ ದಿಕ್ಕನ್ನೇ ಬದಲಾಯಿಸಿತು.

ಮಹಾ ಶಿಕ್ಷಕನಾಗಿ:

- 1918ರಲ್ಲಿ ಮೈಸೂರು ವಿಶ್ವವಿದ್ಯಾಲಯದ ತತ್ವಜ್ಞಾನ ವಿಭಾಗದ ಉಪನ್ಯಾಸಕರಾಗಿ ಆಯ್ಕೆಯಾದರು. 'ದಿ ಫಿಲಾಸಫಿ ಆಫ್ ರವೀಂದ್ರನಾಥ್ ಠ್ಯಾಗೋರ್ 'ಎಂಬ ಮೊದಲ ಪುಸ್ತಕ ಬರೆದರು.
- ಇವರು ತೆಲುಗಿನಲ್ಲಿ ತಮ್ಮ ಸಹಿಯನ್ನು ರಾಧಾಕ್ರಿಶ್ಣಯ್ಯ ಎಂದು ಹಾಕುತಿದ್ದರು, ಮೈಸೂರಿನಲ್ಲಿ ಇವರ ಹೆಸರಿನ ರಸ್ತೆಯೊಂದಿದೆ.
- 1931 ರಲ್ಲಿ ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಆಯ್ಕೆಯಾದ ರಾಧಾಕೃಷ್ಣನ್, 1939 ರಲ್ಲಿ ಬನಾರಸ್ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ, 1948 ರಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ಆಯೋಗದ ಮುಖ್ಯಸ್ಥರಾಗಿ, 1949 ರಲ್ಲಿ ಸೋವಿಯತ್ ರಷ್ಯಾಕ್ಕೆ ಭಾರತದ ರಾಯಭಾರಿಯಾಗಿ ನೇಮಕಗೊಂಡರು.

ಉಪರಾಷ್ಟ್ರಪತಿಯಾಗಿ:

- 1952 ರಲ್ಲಿ ಭಾರತದ ಶಿಕ್ಷಕನೊಬ್ಬ ಮೊತ್ತಮೊದಲ ಉಪರಾಷ್ಟ್ರಪತಿಯಾಗಿ ನೇಮಕಗೊಂಡ ರಾಧಾಕೃಷ್ಣನ್, ರಾಜ್ಯಸಭೆಯಲ್ಲಿ ಸಂಸ್ಕೃತ ಶ್ಲೋಕಗಳ ಮೂಲಕ ಎಲ್ಲ ಗಮನ ಸೆಳೆಯುತ್ತಿದ್ದರು.
- ಉಪರಾಷ್ಟ್ರಪತಿ ಹುದ್ದೆಯಲ್ಲಿದಾಗಲೇ ಅವರಿಗೆ ಭಾರತ ಸರಕಾರ 1954 ರಲ್ಲಿ ಪ್ರತಿಷ್ಠಿತ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು.
- ಡಾ. ರಾಜೇಂದ್ರ ಪ್ರಸಾದ್ ನಂತರ, 1962 ರಲ್ಲಿ ಭಾರತದ ಎರಡನೇ ರಾಷ್ಟ್ರಪತಿಯಾಗಿ ನೇಮಕಗೊಂಡರು.

6. ಸೇನಾ ಹೆಲಿಕಾಪ್ಟರ್ ಯುದ್ಧ ಕೌಶಲ :



- ಭಾರತ 2015ರಲ್ಲಿ ಅಮೆರಿಕದ ಮತ್ತು ಬೋಯಿಂಗ್ ಕಂಪನಿ ಜತೆಗೆ 4168 ಕೋಟಿ ರೂ. ಮೌಲ್ಯದ 22 ಅಪಾಚೆ ಹೆಲಿಕಾಪ್ಟರ್ ಖರೀದಿ ಒಪ್ಪಂದ ಮಾಡಿಕೊಂಡಿತ್ತು.
- ಈಗ 8 ವಿಮಾನಗಳು ಭಾರತ ಸೇನೆಗೆ ಸೇರ್ಪಡೆಯಾಗಿದ್ದು, ಪಂಜಾಬ್‌ನ ಪಠಾಣ್‌ಕೋಟ್ ವಾಯುನೆಲೆಯಲ್ಲಿ ಸೇವೆ ಆರಂಭಿಸಿದೆ.
- ಇನ್ನುಳಿದ ಹೆಲಿಕಾಪ್ಟರ್‌ಗಳು 2020ರೊಳಗೆ ಹಂತ ಹಂತವಾಗಿ ಭಾರತಕ್ಕೆ ಬರಲಿವೆ. ಇದರಲ್ಲಿ 11ನ್ನು ಪಾಕ್ ಗಡಿ ಭಾಗದ ಪಠಾಣ್‌ಕೋಟ್ ಮತ್ತು 11 ಚೀನಾ ಗಡಿ ಭಾಗದ ಅಸ್ಸಾಂನ ಜೋರ್ಹಟ್ ನಲ್ಲಿ ನಿಯೋಜಿಸಲು ಉದ್ದೇಶಿಸಲಾಗಿದೆ.

ಟಾಟಾ–ಬೋಯಿಂಗ್ ಒಪ್ಪಂದ:

- ಅಪಾಚೆ ಯುದ್ಧ ವಿಮಾನಗಳನ್ನು ಅರೆ–ಹಾರಾಟ ಸ್ಥಿತಿಯಲ್ಲಿ ಸ್ವೀಕರಿಸಲಾಗಿದೆ. ಭಾರತದಲ್ಲಿ ರೋಟರ್ ಅಳವಡಿಸಿದ ನಂತರ ಹಾರಾಟ ನಡೆಸಲು ಶಕ್ತವಾಗಿದೆ.
- ಅಪಾಚೆಯ ಪ್ಯೂಸ್ ಲೆಜ್ ಅನ್ನು ಭಾರತದಲ್ಲಿ ತಯಾರಿಸಲು ಟಾಟಾ ಮತ್ತು ಬೋಯಿಂಗ್ ನಡುವೆ ಒಪ್ಪಂದ ನಡೆದಿದೆ.

ಅಪಾಚೆ ಹೊಂದಿರುವ ರಾಷ್ಟ್ರಗಳು:

- ಈಜಿಪ್ಟ್, ಗ್ರೀಸ್ ಭಾರತ, ಇಂಡೋನೇಷ್ಯಾ, ಇಸ್ರೇಲ್, ಜಪಾನ್ ಕೊರಿಯಾ, ಕುವೈಟ್, ನೆದರ್‌ಲೆಂಡ್, ಕತಾರ್, ಸೌದಿ ಅರೇಬಿಯಾ, ಸಿಂಗಾಪುರ್, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಯುನೈಟೆಡ್ ಕಿಂಗ್‌ಡಮ್ ಅಪಾಚೆಗಾಗಿ ಬೋಯಿಂಗ್‌ನ ಗ್ರಾಹಕರಾಗಿದ್ದಾರೆ. ಪಟ್ಟಿಯಲ್ಲಿ ಭಾರತ 16ನೇ ಸ್ಥಾನದಲ್ಲಿದೆ.

ಅಪಾಚೆ ತಾಕತ್ತು

- ಒಂದು ನಿಮಿಷದಲ್ಲಿ 128 ಶತ್ರು ತಂಡದ ಮೇಲೆ ದಾಳಿ
- ವಿಶ್ವದಲ್ಲೇ ಸುಧಾರಿತ ಮಲ್ಟಿ ಕಾಂಬೇಟ್ ಹೆಲಿಕಾಪ್ಟರ್.

- ಪ್ರತಿಗಂಟೆಗೆ 293 ಕಿಮೀ ಹಾರಾಟ
- ಹೈ ಕ್ವಾಲಿಟಿ ನೈಟ್ ವಿಷನ್ ಸಿಸ್ಟಂ
- ಕತ್ತಲಲ್ಲೂ ಕಾರ್ಯನಿರ್ವಹಿಸಿ ಆತ್ರುಪಡೆ ಧ್ವಂಸ ಸಾಮರ್ಥ್ಯ

ರಫೇಲ್ ಪೂರೈಕೆ ಶೀಘ್ರ:

- ಭಾರತಕ್ಕೆ ಫ್ರಾನ್ಸ್ ರಫೇಲ್ ಯುದ್ಧ ವಿಮಾನಗಳನ್ನು ಸೆ.19ರಂದು ಹಸ್ತಾಂತರಿಸಲಿದೆ.
- ಮೊದಲ ಹಂತದಲ್ಲಿ 4ಯುದ್ಧ ವಿಮಾನಗಳು ಭಾರತಕ್ಕೆ ಬರಲಿವೆ, 2022ರೊಳಗೆ ಎಲ್ಲ 36 ರಫೇಲ್ ಯುದ್ಧ ವಿಮಾನಗಳನ್ನು ಭಾರತಕ್ಕೆ ಹಸ್ತಾಂತರಿಸುವುದಾಗಿ ಫ್ರಾನ್ಸ್ ತಿಳಿಸಿದೆ.

ಬಳಕೆಯಲ್ಲಿರುವ ಯುದ್ಧ ವಿಮಾನಗಳು:

- ಮಿಗ್–21, ಮಿಗ್–29, ಸುಖೋಯ್ ಸು–30, ಹಾಲ್ ತೇಜಸ್, ಮಿರಾಜ್ 2000, ಡಸಾಲ್ ರಫೇಲ್, ಮಿಗ್–27, ಜಾಗ್ವಾರ್ ಪ್ರಸ್ತುತ ಭಾರತೀಯ ಸೇನೆ ಬಳಸುತ್ತಿರುವ ಕೆಲವು ಯುದ್ಧ ವಿಮಾನಗಳು.
- ತರಬೇತಿ, ಬೇಹುಗಾರಿಕೆ, ಸಂಪರ್ಕ ಇನ್ನಿತರ ಕಾರಣಗಳಿಗೆ ವಿವಿಧ ವಿಮಾನಗಳನ್ನು ಬಳಸುತ್ತಿದೆ.

7. ರಾಜ್ಯದಲ್ಲಿ ನೀರು ನಿರ್ವಹಣೆ ಪರಿಪಾಟ ಸುಧಾರಣೆ:

1. ನೀರಿನ ಮೂಲಗಳ ರಕ್ಷಣೆ

- ಭೂಮಿಯ ಮೇಲ್ಮೈನಲ್ಲಿನ ನೀರಿನ ಮೂಲಗಳಾದ ನದಿ–ಕೆರೆ, ಹೊಂಡಗಳಲ್ಲಿನ ನೀರನ್ನು ಕೃಷಿಗೆ ಬಳಸಿಕೊಳ್ಳುವುದರ ಪ್ರಮಾಣ ಮತ್ತು ಈ ಮೂಲಗಳಿಗೆ ನೀರಿನ ಮರುಪೂರಣದ ಆಧಾರದ ಮೇಲೆ ಅಂಕ ನೀಡಲಾಗುತ್ತದೆ

ಕರ್ನಾಟಕದ ಅಂಕಗಳು 2.6

- ಈ ಕ್ಷೇತ್ರದಲ್ಲಿ ಕರ್ನಾಟಕವು ತನ್ನ ಕ್ಷಮತೆಯನ್ನು ಹೆಚ್ಚಿಸಿಕೊಂಡಿದೆ. ಆದರೆ ಇನ್ನೂ ಸಾಕಷ್ಟು ಕೆಲಸ ನಡೆಯಬೇಕಿದೆ.

2. ಅಂತರ್ಜಲ ಮರುಪೂರಣ:

- ಅಂತರ್ಜಲ ಮರುಪೂರಣಕ್ಕೆ ರಾಜ್ಯಗಳು ಕೈಗೊಂಡಿರುವ ಕ್ರಮಗಳ ಆಧಾರದಲ್ಲಿ ಇಲ್ಲಿ ಅಂಕಗಳನ್ನು ನಿರ್ಧರಿಸಲಾಗುತ್ತದೆ. ಕೃಷಿ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಅಂತರ್ಜಲ ಬಳಕೆಗೆ ನಿಯಮಾವಳಿಗಳ ರಚನೆ ಮತ್ತು ಅನುಷ್ಠಾನ ಪ್ರಮುಖ ಅಂಶ.

ಕರ್ನಾಟಕದ ಅಂಕಗಳು 6.2

- ಕರ್ನಾಟಕದಲ್ಲಿ ಕೊಳವೆ ಬಾವಿಯ ನೀರಿನ ಬಳಕೆಗೆ ಪರಿಣಾಮಕಾರಿ ನಿಯಂತ್ರಣವಿಲ್ಲ. ಅಂತರ್ಜಲ ಮರುಪೂರಣದ ಪ್ರಮಾಣ ಅತ್ಯಲ್ಪ.

3. ನೀರಾವರಿ ಯೋಜನೆಗಳು:

- ಕೃಷಿಯಲ್ಲಿ ನೀರಾವರಿ ಅಳವಡಿಕೆಗೆ ಕೈಗೊಂಡ ಕ್ರಮಗಳು, ಲಭ್ಯ ಮೂಲಗಳಿಂದ ನೀರಾವರಿ ಒದಗಿಸಬಹುದಾದ ಜಮೀನಿನ ವಿಸ್ತೀರ್ಣ ಮತ್ತು ವಾಸ್ತವವಾಗಿ ನೀರಾವರಿಗೆ ಒಳಪಟ್ಟಿರುವ ಜಮೀನಿನ ವಿಸ್ತೀರ್ಣ ಹಾಗೂ ನೀರಾವರಿಯ ನಿರ್ವಹಣೆ ಆಧರಿಸಿ ಅಂಕ ನೀಡಲಾಗುತ್ತದೆ.

ಕರ್ನಾಟಕದ ಅಂಕಗಳು 9.2

- ಲಭ್ಯವಿರುವ ನೀರನ್ನು ಬಳಕೆ ಸುಧಾರಿಸಿದೆ. ಈಗ ಲಭ್ಯವಿರುವ ನೀರನಲ್ಲೇ ಮತ್ತಷ್ಟು ಕೃಷಿ ಭೂಮಿಗೆ ನೀರಾವರಿ ಒದಗಿಸಬಹುದು.

4. ಜಲಾನಯನ ಅಭಿವೃದ್ಧಿ

- ಕೆರೆ–ಕಟ್ಟೆ, ನದಿಗಳ ಜಲಾನಯನ ಪ್ರದೇಶಗಳಲ್ಲಿ ಮಳೆ ನೀರಿನ ಸಂಗ್ರಹದ ಉದ್ದೇಶದಿಂದ ಕೈಗೊಂಡಿರುವ ಕ್ರಮಗಳು.
- ಈ ಉದ್ದೇಶದಿಂದ ಹಾಕಿಕೊಳ್ಳಲಾಗಿದ್ದ ಗುರಿಯನ್ನು ಮುಟ್ಟಲಾಗಿದೆಯೇ ಎಂಬುದನ್ನು ಆಧರಿಸಿ ಅಂಕಗಳನ್ನು ನೀಡಲಾಗಿದೆ

ಕರ್ನಾಟಕದ ಅಂಕಗಳು 5.5

- ಮಳೆ ನೀರಿನ ಸಂಗ್ರಹಕ್ಕೆ ಕರ್ನಾಟಕವು ಇನ್ನೂ ಆದ್ಯತೆ ನೀಡಬೇಕಿದೆ

5. ನೀರಿನ ಸದ್ಬಳಕೆ :

- ನೀರಾವರಿ ಯೋಜನೆಗಳ ಅಂತಿಮ ಹಂತದ ಬಳಕೆದಾರರಾದ ರೈತರಲ್ಲಿ ನೀರಿನ ಸದ್ಬಳಕೆ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮತ್ತು ಹಳ್ಳಿ–ಹಳ್ಳಿಗಳಲ್ಲಿ ನೀರಿನ ಬಳಕೆದಾರರ ಸಂಘಗಳನ್ನು ರಚಿಸುವುದು.

ಕರ್ನಾಟಕದ ಅಂಕಗಳು

- ಕರ್ನಾಟಕದಲ್ಲಿ ನೀರು ಬಳಕೆದಾರರ ಸಂಘಗಳು ಇದ್ದು, ಅವಕ್ಕೆ ಪ್ರತಿವರ್ಷ ಅನುದಾನ ಒದಗಿಸಲಾಗುತ್ತಿದೆ.
- ಆದರೆ ಎಲ್ಲಾ ಫಲಾನುಭವಿಗಳನ್ನು ಕರ್ನಾಟಕದ ಒಗ್ಗೂಡಿಸಿ ಸಂಘ ರಚಿಸುವ ಕೆಲಸ ಅಂಕಗಳು ಇನ್ನೂ ಬಹಳಷ್ಟು ಕಡೆ ಆಗಬೇಕಿದೆ

ಕೃಷಿ: ಸುಸ್ಥಿರ ಬಳಕೆ

- ಮಳೆಯಾಶ್ರಿತ ಮತ್ತು ನೀರಾವರಿ ಆಧರಿತ ಕೃಷಿಯಲ್ಲಿ ನೀರನ್ನು ಹೇಗೆ ಬಳಸಲಾಗುತ್ತದೆ ಎಂಬುದರ ಆಧಾರದ ಮೇಲೆ ಇಲ್ಲಿ ಅಂಕ ನೀಡಲಾಗುತ್ತದೆ.
- ಕೃಷಿ ಹೊಂಡಗಳ ನಿರ್ಮಾಣ, ಕೊಳವೆ ಬಾವಿಯ ಮೂಲಕ ಅಂತರ್ಜಲದ ಅತೀವ ಬಳಕೆಯ ನಿಯಂತ್ರಣ ಇಲ್ಲಿ ಗಣನೀಯ ಅಂಶಗಳು.

ಕರ್ನಾಟಕದ ಅಂಕಗಳು 6

- ಕರ್ನಾಟಕದಲ್ಲಿ ಕೃಷಿ ಹೊಂಡಗಳ ನಿರ್ಮಾಣ ಮತ್ತು ಕೊಳವೆ ಬಾವಿಗಳ ಬಳಕೆಯ ಸ್ವರೂಪದಲ್ಲಿ ಸುಧಾರಣೆ ಆಗುತ್ತಿದೆ. ಕರ್ನಾಟಕದ ಬಾವಿಗಳ ಬಳಕೆಗೆ ಕಾನೂನಿನ ಅಂಕಗಳು ನಿಯಂತ್ರಣವಿಲ್ಲ.

6. ಕುಡಿಯುವ ನೀರು

- ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲರಿಗೂ ಕುಡಿಯುವ ನೀರಿನ ಲಭ್ಯತೆಯನ್ನು ಆಧರಿಸಿ ಅಂಕ ನೀಡಲಾಗುತ್ತದೆ.
- ಲಭ್ಯವಿರುವ ಕುಡಿಯುವ ನೀರಿನ ಶುದ್ಧತೆಯಲ್ಲಿ ಸುಧಾರಣೆ ಆಗಿದೆಯೇ ಎಂಬುದು ಇಲ್ಲಿ ಗಣನೀಯ ಅಂಶ.

ಕರ್ನಾಟಕದ ಅಂಕಗಳು 2.2

- ಹಳ್ಳಿಗಳಿಗೆ ಕುಡಿಯುವ ನೀರಿನ ಪೂರೈಕೆ ಆಗುತ್ತಿದೆ. ಇದನ್ನು ಎಲ್ಲಾ ಹಳ್ಳಿಗಳಿಗೆ ವಿಸ್ತರಿಸಲು ಆಗಿಲ್ಲ. ಆದರೆ ಶುದ್ಧ ಕುಡಿಯುವ ಕರ್ನಾಟಕದ ನೀರಿನ ಪೂರೈಕೆಯಲ್ಲಿ ರಾಜ್ಯವು ಅಂಕಗಳು ಹಿಂದೆ ಬಿದ್ದಿದೆ.

ನೀರಿನ ಮರುಬಳಕೆ:

- ನಗರ ಪ್ರದೇಶಗಳಲ್ಲಿ ಎಲ್ಲರಿಗೂ ದಿನಬಳಕೆ ಮತ್ತು ಕುಡಿಯುವ ನೀರಿನ ಪೂರೈಕೆ ಹಾಗೂ ಕೊಳಚೆ ನೀರಿನ ಸಂಸ್ಕರಣೆ ಮತ್ತು ಮರುಬಳಕೆ ಇಲ್ಲಿ ಗಣನೀಯ ಅಂಶ.

ಕರ್ನಾಟಕದ ಅಂಕಗಳು 7

- ರಾಜ್ಯದ ನಗರ ಪ್ರದೇಶಗಳ ಶೇ90 ಕ್ಕೂ ಹೆಚ್ಚು ಜನರಿಗೆ ಕುಡಿಯುವ ನೀರು ಪೂರೈಸಲಾಗುತ್ತಿದೆ.
- ಕೊಳಚೆ ನೀರಿನ ಸಂಸ್ಕರಣೆ ಮತ್ತು ಮರುಬಳಕೆ ಕರ್ನಾಟಕದ ಪ್ರಮಾಣ ಶೇ 50ಕ್ಕಿಂತಲೂ ಅಂಕಗಳು ಕಡಿಮೆ ಇದೆ

ನೀತಿ ಮತ್ತು ನಿರ್ವಹಣೆ:

- ನೀರಿನ ಮೂಲಗಳ ರಕ್ಷಣೆ, ಬಳಕೆ ಮತ್ತು ಅಭಿವೃದ್ಧಿಯ ಉದ್ದೇಶದಿಂದ ರಾಜ್ಯ ಸರ್ಕಾರವು ಜಾರಿಗೆ ತಂದಿರುವ ನೀತಿಗಳು ಮತ್ತು ಅವುಗಳ ಅನುಷ್ಠಾನ ಇಲ್ಲಿ ಗಣನೀಯ ಅಂಶ

ಕರ್ನಾಟಕದ ಅಂಕಗಳು 11.8

- ನೀರಿನ ಬಳಕೆಯನ್ನು ನಿಯಂತ್ರಿಸಲು, ನೀರಿನ ಮೂಲಗಳ ರಕ್ಷಣೆ ಉದ್ದೇಶದಿಂದ ಕರ್ನಾಟಕವೂ ಹಲವು ನಿಯಮಾವಳಿಗಳನ್ನು ಅನುಷ್ಠಾನಕ್ಕೆ ತಂದಿದೆ.
- ಆದರೆ ನೀರಾವರಿ, ಕುಡಿಯುವ ನೀರು, ನೀರಿನ ಮೂಲಗಳ ರಕ್ಷಣೆಗೆ ಸಂಬಂಧಿಸಿದ ದತ್ತಾಂಶಗಳ ಸಂಗ್ರಹದಲ್ಲಿ ಇನ್ನೂ ಸಾಕಷ್ಟು ಕೆಲಸವಾಗಬೇಕಿದೆ.

ಮೊದಲ ರ್ಯಾಂಕ್ ಕಾಯ್ದುಕೊಂಡ ಗುಜರಾತ್

- ನೀರು ನಿರ್ವಹಣೆ ಸೂಚ್ಯಂಕದಲ್ಲಿ ಎಲ್ಲಾ ರಾಜ್ಯಗಳಿಗೂ ನೀತಿ ಆಯೋಗವು ರ್ಯಾಂಕ್ ನೀಡಿದೆ. ಗುಜರಾತ್ ಸತತ ಎರಡನೇ ಬಾರಿ ಮೊದಲ ರ್ಯಾಂಕ್ ಕಾಯ್ದುಕೊಂಡಿದೆ.

ನೀರಿನ ನಿರ್ವಹಣೆಯಲ್ಲಿ ಕೆಲವು ರಾಜ್ಯಗಳು ಗಮನಾರ್ಹ ಪ್ರಗತಿ ಸಾಧಿಸಿವೆ. ಆದರೆ ಕೆಲವು ರಾಜ್ಯಗಳಲ್ಲಿ ನೀರಿನ ಸದ್ಬಳಕೆ ಮತ್ತು ನೀರಿನ ಮೂಲಗಳ ಸಂರಕ್ಷಣೆಯನ್ನು ಕಡೆಗಣಿಸಲಾಗಿದೆ

7. ಏನಿದು ಹವಾಲಾ?

- ಹವಾಲಾ ಮೂಲತಃ ಅರೆಬಿಕ್ ಪದವಾಗಿದ್ದು, ವಿಶ್ವಾಸ ಎಂಬ ಅರ್ಥವನ್ನು ಹೊಂದಿದೆ. ಹಣ ವರ್ಗಾವಣೆಯ ಪರ್ಯಾಯ ವಿಧಾನಗಳಲ್ಲೊಂದು. ಸಾಂಪ್ರದಾಯಿಕ ಬ್ಯಾಂಕಿಂಗ್‌ಗೆ ಹೊರತಾಗಿ ನಡೆಯುವ ಹವಾಲಾ ಪದ್ಧತಿಗೆ ಭಾರತದಲ್ಲಿ ನಿಷೇಧ ಇದೆ.
- ದಕ್ಷಿಣ ಏಷ್ಯಾ ಇದರ ಮೂಲವೆನ್ನಲಾಗಿದ್ದು, ಪ್ರಾಚೀನ ಕಾಲದಿಂದಲೇ ಚಾಲ್ತಿಯಲ್ಲಿದೆ. ಇವುಗಳಿಗೆ ಕಾನೂನು ಮಾನ್ಯತೆ ಇಲ್ಲದಿರುವುದರಿಂದ ಭೂಗತ ಬ್ಯಾಂಕಿಂಗ್ ಎಂಬ ಅಡ್ಡ ಹೆಸರಿದೆ.
- ಇದು ಮಧ್ಯವರ್ತಿ ಅಥವಾ ಹವಾಲಾ ಡೀಲರ್‌ಗಳ ಮೂಲಕ ನಡೆಯುವ ಹಣ ವರ್ಗಾವಣೆ, ನಂಬಿಕೆಯ ಆಧಾರದಲ್ಲಿ ನಡೆಯುವ ವ್ಯವಹಾರವಿದು. ಮುಸ್ಲಿಂ ರಾಷ್ಟ್ರಗಳಿಗೂ ಹವಾಲಾಗೂ ನಂಟು ಹೆಚ್ಚು.

ಹೇಗೆ ವರ್ಗಾವಣೆ?

- ದೇಶದ ಒಳಗೂ–ಹೊರಗೂ ಹವಾಲಾ ಜಾಲ ಚಾಲ್ತಿಯಲ್ಲಿದೆ. ಹವಾಲಾ ಬ್ರೋಕರ್ ಗಳ ಮೂಲಕವೇ ಇದು ನಡೆಯುತ್ತದೆ.
- ಅಕ್ಷರಶಃ ಹಣದ ಸಾಗಣೆ ಇಲ್ಲಿ ಇರದಿದ್ದರೂ, ಹಣದ ಸಾಗಣೆಯಾಗುವುದೇ ಇದರ ವಿಶೇಷತೆ. (Money transfer without money movement) ಉದಾಹರಣೆಗೆ ಗ್ರಾಹಕರೊಬ್ಬರಿಗೆ ಬೆಂಗಳೂರಿನಿಂದ ದಿಲ್ಲಿಗೆ ಹವಾಲಾ ಮೂಲಕ ಹಣ ಕಳಿಸಬೇಕು ಎಂದಿಟ್ಟುಕೊಳ್ಳೋಣ.
- ಹವಾಲಾ ಬ್ರೋಕರ್‌ಗೆ ಹಣ ನೀಡಿದರಾಯಿತು. ಅದನ್ನು ಆ ಬ್ರೋಕರ್ ದಿಲ್ಲಿಗೆ ತನ್ನ ಕೈಯಲ್ಲಿ ತೆಗೆದುಕೊಂಡು ಹೋಗಬೇಕೆಂದೇನಿಲ್ಲ. ದಿಲ್ಲಿಯಲ್ಲಿ ಮತ್ತೊಬ್ಬ ಬ್ರೋಕರ್ ಹಣವನ್ನು ಯಾರಿಗೆ ತಲುಪಿಸಬೇಕೋ ಅವರಿಗೆ ಮುಟ್ಟಿಸುತ್ತಾನೆ.
- ಹಣಕಾಸು ವರ್ಗಾವಣೆಯಲ್ಲಿ ನಿರ್ದಿಷ್ಟ ಕೋಡ್ ವರ್ಡ್ ಬಳಕೆಯಾಗುತ್ತದೆ. ಕೋಡ್ ವರ್ಡ್ ಸರಿಯಾಗಿದ್ದರೆ ಮಾತ್ರ ಕಮಿಷನರ್ ಹಣ ವರ್ಗಾಯಿಸುತ್ತಾನೆ. ಪ್ರತಿಯಾಗಿ ನಿರ್ದಿಷ್ಟ ಮೊತ್ತದ ಕಮೀಶನ್ ಅನ್ನು ಬ್ರೋಕರ್ ಮುರಿದುಕೊಳ್ಳುತ್ತಾನೆ.

ನಿಷೇಧವಿದ್ದರೂ ಬಳಸುವುದೇಕೆ?

- ಭಾರತ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಹವಾಲಾಗೆ ನಿಷೇಧ ಇದ್ದರೂ ಬಳಕೆಯಲ್ಲಿರುವುದಕ್ಕೆ ಕಾರಣ, ಇಲ್ಲಿ ನಿಮ್ಮ ಹಣದ ಮೂಲ ಯಾವುದು ಎಂದು ಯಾರೊಬ್ಬರೂ ಕೇಳುವುದಿಲ್ಲ.

- ನಗದಿನ ಭೌತಿಕ ಸಾಗಣೆ ಇಲ್ಲದಿರುವುದರಿಂದ ಅಧಿಕೃತ ವಿದೇಶಿ ವಿನಿಮಯ ದರಗಳಿಗೆ ಹೋಲಿಸಿದರೆ ವಿನಿಮಯದ ದರ ಅಗ್ಗವಾದೀತು. ಅಘೋಷಿತ ಅಥವಾ ಕಪ್ಪು ಹಣದ ವರ್ಗಾವಣೆಗೆ ಇದು ದಾರಿ.

ಹವಾಲಾ ವಿರುದ್ಧದ ಕಾನೂನು?

- ಭಾರತದಲ್ಲಿ ಎಫ್ಇಎಂಎ (ವಿದೇಶಿ ವಿನಿಮಯ ನಿರ್ವಹಣೆ ಕಾಯಿದೆ) 2000 ಮತ್ತು ಪಿಎಂಎಲ್ಎ (ಅಕ್ರಮ ಹಣಕಾಸು ವರ್ಗಾವಣೆ ತಡೆ ಕಾಯಿದೆ) ಎಂಬ ಎರಡು ಕಾನೂನುಗಳು ಜಾರಿಯಲ್ಲಿವೆ.
- ಇವೆರಡೂ ಕಾನೂನುಗಳ ಜಾರಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಕೈಗೊಳ್ಳುತ್ತದೆ.

ತಪ್ಪಿಸ್ಥರಿಗೆ ಶಿಕ್ಷೆ ಏನು?

- ಪಿಎಂಎಲ್ಎ ಪ್ರಕಾರ ಅಕ್ರಮ ಹಣ ವರ್ಗಾವಣೆ ಅಥವಾ ಹವಾಲಾ ಕೇಸ್ಗಳಲ್ಲಿ ತಪ್ಪಿತಸ್ಥರಿಗೆ 3 –7 ವರ್ಷದ ತನಕ ಜೈಲು ಶಿಕ್ಷೆ ವಿಧಿಸಲು ಅವಕಾಶ ಇದೆ.
- ನಿರ್ದಿಷ್ಟ ಕ್ರಿಮಿನಲ್ ಅಪರಾಧಗಳೂ ಸಾಬೀತಾದರೆ ಗರಿಷ್ಠ 10 ವರ್ಷದ ತನಕ ಶಿಕ್ಷೆ ವಿಸ್ತರಿಸಬಹುದು.

8. ಆರಿಫ್ ಮೊಹಮ್ಮದ್ ಖಾನ್:



- ಕೇರಳದ 24ನೇ ರಾಜ್ಯಪಾಲರಾಗಿ ಮಾಜಿ ಕೇಂದ್ರ ಸಚಿವ ಮತ್ತು ರಾಜಕಾರಣಿ ಆರಿಫ್ ಮೊಹಮ್ಮದ್ ಖಾನ್ ಅವರು ಪ್ರಮಾಣ ವಚನ ಸ್ವೀಕರಿಸಿದ್ದಾರೆ.
- ತಿರುವನಂತಪುರದಲ್ಲಿರುವ ರಾಜಭವನದಲ್ಲಿ ಕೇರಳ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಹೃಷಿಕೇಶ್ ರಾಯ್ ಅವರು ಪ್ರಮಾಣವಚನ ಬೋಧಿಸಿದರು.

9. ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾದ (ಪಿಟಿಐ) ನೂತನ ಅಧ್ಯಕ್ಷರಾಗಿ ವಿಜಯ್ ಕುಮಾರ್ ಚೋಪ್ರಾ

- ಅವರು ಪಂಜಾಬ್ ಕೇಸರಿ ಪತ್ರಿಕಾ ಸಮೂಹದ ಮುಖ್ಯ ಸಂಪಾದಕರು. ಪಂಜಾಬ್ ಕೇಸರಿ ಪತ್ರಿಕಾ ಸಮೂಹ, ಪಂಜಾಬ್ ಕೇಸರಿ (ಹಿಂದಿ), ಜಗ್ಯಾನಿ (ಪಂಜಾಬಿ) ಹಾಗೂ ಹಿಂದ್ ಸಮಾಚಾರ್ (ಉರ್ದು) ಎಂಬ ಮೂರು ಭಾಷಾ ಪತ್ರಿಕೆ ಹೊರತರುತ್ತದೆ.
- ಇವರು ಸಮಾಜ ಕಲ್ಯಾಣ ಕಾರ್ಯಕ್ರಮದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದು, 1990ರಲ್ಲಿ ಭಾರತದ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ. 1994ರಲ್ಲಿ ಸಂತ ನಾಮದೇವ್ ಪ್ರಶಸ್ತಿ, 1991ರಲ್ಲಿ ಮುಖ್ಯ ಪ್ರೇಮ್ ಚಂದ್ ಪ್ರಶಸ್ತಿ 2006ರಲ್ಲಿ ರಾಷ್ಟ್ರೀಯ ಏಕತಾ ಸನ್ಮಾನ್ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.
- ವಿಜಯ್ ಕುಮಾರ್ ಚೋಪ್ರಾ ಅವರು ಜನವರಿ 31, 1932ರಲ್ಲಿ ಪಾಕಿಸ್ತಾನದ ಲಾಹೋರ್ನಲ್ಲಿ ಜನಿಸಿದರು.
- ಗಮನಿಸಿ: ಇದೇವೇಳೆ ಬೆನೆಟ್ ಕೋಲ್ಮನ್ ಆ್ಯಂಡ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ವಿನಿತ್ ಜೈನ್ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

10. ಮಿಲಿಟರಿ ಮೆಡಿಸಿನ್ ಸಮಾವೇಶ:

- ಶಾಂಗೈ ಕೋ–ಆಪರೇಶನ್ ಆರ್ಗನೈಸೇಶನ್ (ಎಸ್ಸಿಒ) ಸದಸ್ಯ ರಾಷ್ಟ್ರಗಳ ಮಿಲಿಟರಿ ಮೆಡಿಸಿನ್ ಮೊದಲ ಸಮಾವೇಶ ನವದೆಹಲಿಯಲ್ಲಿ ಸೆ.12 ಮತ್ತು 13ರಂದು ನಡೆಯಲಿದೆ. ಎಸ್ ಸಿಒ ಡಿಫೆನ್ಸ್ ಕೋ–ಆಪರೇಷನ್ ಪ್ಲಾನ್ 2019–20ರಡಿ ಭಾರತ ಮುನ್ನಡೆಸುತ್ತಿರುವ ಮೊದಲ ಸಮಾವೇಶವಾಗಿದೆ.
- ಸಮಾವೇಶದಲ್ಲಿ ಭಾರತೀಯ ಸಶಸ್ತ್ರ ಪಡೆಗಳು ಕ್ಷಿಪ್ರ ಕ್ರಿಯಾ ವೈದ್ಯಕೀಯ ತಂಡದ ಜತೆಗೆ ಸೇನಾ ಸಂಶೋಧನೆ ಮತ್ತು ಸೇನಾ ಆಸ್ಪತ್ರೆಗೆ ಗಣ್ಯರ ಭೇಟಿಯನ್ನು ಆಯೋಜಿಸಲಿದೆ.
- ಯುದ್ಧ, ವೈದ್ಯಕೀಯ ಬೆಂಬಲ, ರೋಗಿಗಳ ಸುರಕ್ಷತೆಯನ್ನು ಸುಧಾರಿಸುವ ಕ್ರಮಗಳು ಮತ್ತು ವಿಪತ್ತುಗಳ ಸಮಯದಲ್ಲಿ ಮಾನವೀಯ ನೆರವು ನೀಡುವ ಕುರಿತು ಎಸ್ ಸಿಒ ಸದಸ್ಯ ರಾಷ್ಟ್ರಗಳ ಮಿಲಿಟರಿ ತಜ್ಞರ ನಡುವೆ ಚರ್ಚೆಗಳು ನಡೆಯಲಿವೆ.
- ಮಿಲಿಟರಿ ಮೆಡಿಸಿನ್ ಕ್ಷೇತ್ರದಲ್ಲಿ ಸದಸ್ಯ ರಾಷ್ಟ್ರಗಳ ಸಹಭಾಗಿತ್ವಕ್ಕೆ ಈ ಸಮಾವೇಶ ನೆರವಾಗಲಿದೆ.

11. ವಿಮೆಗೂ ಟ್ರಾಫಿಕ್ ಉಲ್ಲಂಘನೆಗೂ ಲಿಂಕ್:

- ಕೇಂದ್ರ ಸರಕಾರ ಮಹಾನಗರ ಹಾಗೂ ಸ್ಮಾರ್ಟ್ ಸಿಟಿಗಳಲ್ಲಿ 'ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್' ವ್ಯವಸ್ಥೆಯನ್ನು ಜಾರಿಗೆ ತರಲು ಮುಂದಾಗಿದೆ.
- ಸ್ವಯಂ ಟ್ರಾಫಿಕ್ ನಿಗಾ ವ್ಯವಸ್ಥೆ ಮೂಲಕ ಸಂಚಾರ ನಿಯಮ ಉಲ್ಲಂಘಿಸುವ ವಾಹನಕ್ಕೆ ಸಂಬಂಧಿಸಿದಂತೆ ಇ–ಚಲನ್ ಸೃಷ್ಟಿಯಾಗುತ್ತದೆ.
- ಇದನ್ನು ಆಧರಿಸಿ ಅಪರಾಧ ಎಸಗಿದ ವಾಹನದ ಮಾಲೀಕ/ಚಾಲಕನ ವಿರುದ್ಧ ಕ್ರಮ ಕೈಗೊಳ್ಳಬಹುದಾಗಿರುತ್ತದೆ.
- ಟ್ರಾಫಿಕ್ ನಿಯಮ ಉಲ್ಲಂಘನೆಯನ್ನು ವಾಹನದ ವಿಮೆ ಈ ಪ್ರೀಮಿಯಂ ಮೊತ್ತಕ್ಕೆ ಲಿಂಕ್ ಮಾಡಿ ಅದನ್ನು ಕ್ರಮೇಣ ಏರಿಕೆ ಮಾಡುವುದು ಹೊಸ ಅಸ್ತ್ರವಾಗಿದೆ.

12. ಒಡಿಶಾದ ನಕ್ಸಲ್ ಪೀಡಿತ ಹಿಂದುಳಿದ ಜಿಲ್ಲೆ ಮಲ್ಕಾನ್ ಗಿರಿಯ ಯುವತಿ ಅನುಪ್ರಿಯಾ ಲಾಕ್ರಾ ಈಗ ಪೈಲಟ್:

13. ಹೆಲಿಕಾಪ್ಟರ್ ಶೃಂಗಸಭೆ:

- ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ದೇಶದ ಮೊಟ್ಟಮೊದಲ ಹೆಲಿಕಾಪ್ಟರ್ ಶೃಂಗಸಭೆಯನ್ನು ಉತ್ತರಾಖಂಡದ ರಾಜಧಾನಿ ಡಹ್ರಾಡೂನ್‌ನಲ್ಲಿರುವ ಸಹಸ್ರಧಾರ ಹೆಲಿ ಡ್ರೋಮ್‌ನಲ್ಲಿ ಆಯೋಜಿಸಿತು.
- ಹೆಲಿಕಾಪ್ಟರ್‌ಗಳ ಮೂಲಕ ಸಂಪರ್ಕವನ್ನು ವಿಸ್ತರಿಸುವುದು ಸಭೆಯ ಉದ್ದೇಶವಾಗಿತ್ತು. ನಾಗರಿಕ ವಿಮಾನಯಾನ ಸಚಿವಾಲಯ, ಉತ್ತರಾಖಂಡ ಸರ್ಕಾರ ಮತ್ತು ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರೀಸ್ (ಐಸಿಸಿಐ) ಸಹಭಾಗಿತ್ವದಲ್ಲಿ ಕಾರ್ಯಕ್ರಮ ಆಯೋಜಿಸಿಲಾಗಿತ್ತು.

14. ಇಂಡಿಯನ್ ಬಸ್ಟರ್ಡ್ ರಕ್ಷಣೆಗೆ ಯೋಜನೆ:



- ರಾಜಸ್ಥಾನ, ಗುಜರಾತ್ ಹಾಗೂ ಮಹಾರಾಷ್ಟ್ರದಲ್ಲಿ ಹೆಚ್ಚಾಗಿ ಕಂಡುಬರುವ ಗ್ರೇಟ್ ಇಂಡಿಯನ್ ಬಸ್ಟರ್ಡ್ ಹಕ್ಕಿಗಳ ರಕ್ಷಣೆಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯನ್ನು ಎರಡು ತಿಂಗಳ ಒಳಗೆ ರಚಿಸಬೇಕೆಂದು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ (ಎನ್‌ಜಿಟಿ), ಕೇಂದ್ರ ಸರಕಾರಕ್ಕೆ ನಿರ್ದೇಶನ ನೀಡಿದೆ.

ಪಕ್ಷಿಯ ಬಗ್ಗೆ :

- ಅತ್ಯಂತ ದೊಡ್ಡ ಪಕ್ಷಿಗಳ ಸಾಲಿನಲ್ಲಿ ಗ್ರೇಟ್ ಇಂಡಿಯನ್ ಬಸ್ಟರ್ಡ್ ಪಕ್ಷಿ ಕೂಡ ಸೇರುತ್ತದೆ. ಇದರ ವೈಜ್ಞಾನಿಕ ಹೆಸರು ಆಡೋರ್ಟಿಸ್ ನೈಗ್ರಿಸೆಪ್ಸ್.
- ಇದು ಭಾರತ ಮತ್ತು ಪಾಕಿಸ್ತಾನ ಹುಲ್ಲುಗಾವಲು ಪ್ರದೇಶ, ಮರುಭೂಮಿ ಪ್ರದೇಶ ಮತ್ತು ಅರೆ ಶುಷ್ಕ ಪ್ರದೇಶದಲ್ಲಿ ಕಂಡುಬರುತ್ತದೆ.

150 ಹಕ್ಕಿಗಳಿವೆ:

- ಪ್ರಸ್ತುತ ಭಾರತದಲ್ಲಿ ಸುಮಾರು 150 ಈ ಪಕ್ಷಿಗಳಿವೆ ಎಂದು ಸಮೀಕ್ಷೆಯಲ್ಲಿ ತಿಳಿಸಲಾಗಿದೆ. ರಾಜಸ್ಥಾನದ ಡೆಸರ್ಟ್ ನ್ಯಾಷನಲ್ ಪಾರ್ಕ್, ಗುಜರಾತ್‌ನ ಕಚ್ ಅಭಯಾರಣ್ಯ ಸೇರಿದಂತೆ ಕೆಲವು ರಾಷ್ಟ್ರೀಯ ಉದ್ಯಾನಗಳು, ಅಭಯಾರಣ್ಯಗಳಲ್ಲಿ ಈ ಪಕ್ಷಿಗಳ ಸಂರಕ್ಷಿಸಲಾಗುತ್ತಿದೆ.

15. ಸಂಚಾರ ನಿಯಮ ಉಲ್ಲಂಘನೆಗೆ ಯಾವ ದೇಶದಲ್ಲಿ ಎಷ್ಟು ದಂಡ ಗೊತ್ತ:

	ಭಾರತ	ಅಮೆರಿಕಾ	ಇಂಗ್ಲೆಂಡ್	ಜರ್ಮನಿ	ಸಿಂಗಾಪುರ	ಜಪಾನ್	ಹಾಂಕಾಂಗ್
ಸಿಗ್ನಲ್ ಜಂಪ್	5000	3,598	8,677	7,101	25,877	6,094	5505
ಅತೀ ವೇಗದ ಚಾಲನೆ	2000	10,794	8,667	789	7736	23699	2936
ಮದ್ಯಪಾನ ಮಾಡಿ ವಾಹನ ಚಾಲನೆ	10,000	1,79,905	2,16,929	1,18,359	2,58,771	6,77,115	2,29,376
ನಿಷೇದಿತ ಪ್ರದೇಶದಲ್ಲಿ ನಿಲುಗಡೆ	1000	5397	7809	5523	(ದಂಡವಿಲ್ಲ)	13,542	18,350
ಚಾಲನಾ ಪರವಾನಗಿ ಇಲ್ಲದ ಚಾಲನೆ	5000	21,588	86,671	–	5,17,543	2,03,134	91,750
ವಿಮೆ ರಹಿತ ವಾಹನ ಚಾಲನೆ	2000	1,07,943	26,031	–	51,754	–	33,030

16. ವಿಶ್ವಸಂಸ್ಥೆ ಮಾನವ ಹಕ್ಕುಗಳ ಮಂಡಳಿ (ಯುಎನ್‌ಎಚ್‌ಆರ್‌ಸಿ) ಸಭೆ: ಸ್ವಿಡ್ಜರ್‌ಲೆಂಡ್‌ನ ಜಿನಿವಾದಲ್ಲಿ

ಏನಿದು ಸಭೆ :

- ವಿಶ್ವಸಂಸ್ಥೆಯ ಪ್ರಮುಖ ಅಂಗಸಂಸ್ಥೆಗಳಲ್ಲಿ ಮಾನವ ಹಕ್ಕುಗಳ ಮಂಡಳಿಯೂ ಒಂದು. ಈ ಮಂಡಳಿಯ 42ನೇ ಸಭೆ (ಸೆ.9ರಿಂದ) ಆರಂಭವಾಗಿದ್ದು, 27ರವರೆಗೂ

ನಡೆಯಲಿದೆ. ಪ್ರಸ್ತುತ ಮಂಡಳಿಯಲ್ಲಿ ಭಾರತ, ಪಾಕಿಸ್ತಾನ ಸೇರಿದಂತೆ ಒಟ್ಟು 47 ಸದಸ್ಯ ರಾಷ್ಟ್ರಗಳಿವೆ.

- ಭೂಪ್ರದೇಶದ ಹಂಚಿಕೆ ಆಧಾರದ ಮೇಲೆ ಮಂಡಳಿಯಲ್ಲಿ ಸದಸ್ಯತ್ವ ನೀಡಲಾಗುತ್ತದೆ. ಆಫ್ರಿಕಾದ 13 ರಾಷ್ಟ್ರಗಳು, ಏಷ್ಯಾ–ಫೆಸಿಫಿಕ್ ಪ್ರದೇಶದ 13 ರಾಷ್ಟ್ರ ಲ್ಯಾಟಿನ್ ಅಮೆರಿಕ ಮತ್ತು ಕೆರೆಬಿಯನ್ 8 ರಾಷ್ಟ್ರ ಪಶ್ಚಿಮ ಯುರೋಪ್ ನಿಂದ 7 ಮತ್ತು ಪೂರ್ವ ಯುರೋಪ್‌ನ 6 ರಾಷ್ಟ್ರಗಳು ಮಂಡಳಿಯ ಸದಸ್ಯತ್ವ ಪಡೆದಿವೆ.
- ಮಂಡಳಿಯ ಸದಸ್ಯರು ಮೂರು ವರ್ಷ ಸೇವೆ ಸಲ್ಲಿಸಿದ ಬಳಿಕ ತಕ್ಷಣಕ್ಕೆ ಸದಸ್ಯ ರಾಷ್ಟ್ರಗಳ ಮರುಚುನಾವಣೆ ಸಾಧ್ಯವಿಲ್ಲ, ಇದರ ಸದಸ್ಯರನ್ನು ವಿಶ್ವಸಂಸ್ಥೆಯು ಸದಸ್ಯ ರಾಷ್ಟ್ರಗಳ ಮಾನವ ಹಕ್ಕುಗಳ ರಕ್ಷಣೆಯಲ್ಲಿನ ಬದ್ಧತೆಯನ್ನು ಪರಿಗಣಿಸಿ ಆಯ್ಕೆ ಮಾಡುತ್ತದೆ.

ಉದ್ದೇಶ:

- ವಿಶ್ವಾದ್ಯಂತ ಮಾನವ ಹಕ್ಕುಗಳನ್ನು ಉತ್ತೇಜಿಸುವ ಮತ್ತು ರಕ್ಷಿಸುವ ಉದ್ದೇಶದಿಂದ ಈ ಮಂಡಳಿಯನ್ನು ಸ್ಥಾಪಿಸಲಾಯಿತು. ಮಾನವ ಹಕ್ಕು ಕುರಿತ ವಿಶ್ವಸಂಸ್ಥೆಯ ಆಯೋಗದ ಬದಲಿಗೆ ಈ ಮಂಡಳಿ 2006 ಮಾರ್ಚ್ 14ರಂದು ಸ್ಥಾಪಿಸಲಾಯಿತು.
- ಇದರ ಕೇಂದ್ರ ಕಛೇರಿ ಸ್ವಿಡ್ಜರ್ಲೆಂಡ್‌ನ ಜಿನೀವಾದಲ್ಲಿದೆ. ಮಂಡಳಿಯಲ್ಲಿ ಭಾರತದ ಸದಸ್ಯತ್ವ 2021ರವರೆಗೆ ಇರಲಿದ್ದು ಪಾಕಿಸ್ತಾನದ ಸದಸ್ಯತ್ವ 2020ಕ್ಕೆ ಮುಗಿಯಲಿದೆ.

ಕಾರ್ಯವೇನು?

- ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಲ್ಲಿನ ಮಾನವ ಹಕ್ಕುಗಳ ಉಲ್ಲಂಘನೆಗಳ ಆರೋಪಗಳನ್ನು ತನಿಖೆ ಮಾಡುತ್ತದೆ ಮತ್ತು ಸಂಘಟನೆ ಹಾಗೂ ಸಭೆ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ನಂಬಿಕೆ ಮತ್ತು ಧರ್ಮದ ಸ್ವಾತಂತ್ರ್ಯ, ಮಹಿಳಾ ಹಕ್ಕುಗಳು, ಜನಾಂಗೀಯ ಹಕ್ಕುಗಳಂತಹ ವಿಷಯಾಧಾರಿತ ಮಾನವ ಹಕ್ಕುಗಳ ಸಮಸ್ಯೆಗಳನ್ನು ಪರಿಹರಿಸುತ್ತದೆ.

ಮೊದಲ ಬಾರಿಗೆ:

- 2006ರಲ್ಲಿ ಭಾರತವು ಮೊದಲ ಬಾರಿ ಚುನಾಯಿತವಾಗಿತ್ತು. ಬಳಿಕ 2007, 2011 ಮತ್ತು 2014ರಲ್ಲಿ ಆಯ್ಕೆಯಾಗಿತ್ತು.
- ಯಾವುದೇ ದೇಶವು ಮಂಡಳಿಗೆ ಸತತ ಎರಡು ಬಾರಿ ಮಾತ್ರ ಆಯ್ಕೆಯಾಗಲು ಮಾತ್ರ ಅವಕಾಶವಿದೆ. 2017ರಲ್ಲಿ ಅವಧಿ ಮುಗಿದ ಬಳಿಕ ಭಾರತ, 1 ವರ್ಷದ ಕಾಲ ಮಂಡಳಿಯ ಅಧಿಕಾರದಿಂದ ದೂರವಿತ್ತು.

17. ಹಂಪಿ ಸೇರಿ ಐತಿಹಾಸಿಕ ಕ್ಷೇತ್ರ ಪುನರುಜ್ಜೀವನ:



100 ವಸ್ತು ಸಂಗ್ರಹಾಲಯ:

- ಐತಿಹಾಸಿಕ ಸ್ಥಳಗಳಲ್ಲಿ ಉತ್ಖನನ ಸಂದರ್ಭದಲ್ಲಿ ಸಿಗುವ ವಸ್ತುಗಳ ರಕ್ಷಣೆಗೆ ಗ್ರೀಕ್‌ನ ಅಕ್ರೊಪೊಲೀಸ್ ಮ್ಯೂಸಿಯಂ ಮಾದರಿಯಲ್ಲಿ ದೇಶಾದ್ಯಂತ 100 ವಸ್ತು ಸಂಗ್ರಹಾಲಯಗಳ ನಿರ್ಮಾಣ.
- ವಸ್ತುಸಂಗ್ರಹಾಲಯಗಳ ನಿರ್ವಹಣೆ, ಪುರಾತತ್ವ ಸ್ಥಳಗಳ ರಕ್ಷಣೆ ಸೇರಿ ಇತರ ಕ್ಷೇತ್ರಗಳಲ್ಲಿ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಕಲ್ಚರ್ (ಐಐಸಿ) ತರಬೇತಿ ಒದಗಿಸಲಿದೆ.

ವೆಡ್‌ನಗರದಲ್ಲಿ ಎಎಸ್‌ಐ ಮ್ಯೂಸಿಯಂ

- ಪ್ರಧಾನಿ ನರೇಂದ್ರ ಮೋದಿ ಅವರ ತವರು ಗುಜರಾತಿನ ವಡ್‌ನಗರದಲ್ಲಿ ಎಎಸ್‌ಐ ವತಿಯಿಂದ ಅತ್ಯಾಧುನಿಕ 'ನ್ಯಾಷನಲ್ ಎಕ್ಸಿರಿಯನ್ಸಿಯಲ್ ಮ್ಯೂಸಿಯಂ' ನಿರ್ಮಾಣ

ರಾಜ್ಯ ಸರಕಾರ ಭೂ ಸ್ವಾಧೀನ ಪ್ರಕ್ರಿಯೆ ಆರಂಭಿಸಿದೆ.

ಕಾಶ್ಮೀರ ಉತ್ಸವ:

- ಜಮ್ಮು–ಕಾಶ್ಮೀರದ ಜನಪದ ಕ್ರೀಡೆಗಳ ಆಚರಣೆಗೆ ರಾಷ್ಟ್ರಮಟ್ಟದಲ್ಲಿ ಜಶ್ನ–ಇ–ಕಾಶ್ಮೀರ ಉತ್ಸವ ಆಯೋಜನೆ

ನೀಲಿ ನಕ್ಷೆಯಲ್ಲಿ ಇನ್ನೂ ಏನೆಲ್ಲಾ ಸೇರಿವೆ

- ಆರ್ಕಿಯಾಲಜಿ, ಮೂಸಿಯಾಲಜಿ ಮತ್ತು ಕಲ್ಚರಲ್ ಎಕಾನಮಿ ಕ್ಷೇತ್ರಗಳಲ್ಲಿ ಐಐಸಿಯಿಂದ ಡಿಪ್ಲೊಮಾಗಳ ಜತೆಗೆ ಪದವಿ, ಸ್ನಾತಕೋತ್ತರ ಪದವಿ.
- ನೆಹರೂ ಸ್ಮಾರಕ ವಸ್ತು ಸಂಗ್ರಹಾಲಯದಲ್ಲಿ ದೇಶದ ಪ್ರಧಾನಿಗಳ ಮ್ಯೂಸಿಯಂ ಸ್ಥಾಪನೆ.
- ಪ್ರಧಾನಿಗಳ ಮೂಸಿಯಂ ಹಾಗೂ 1000 ಗ್ರಂಥಾಲಯಗಳ ಆಧುನೀಕರಣಕ್ಕೆ 1,240 ಕೋಟಿ ರೂ. ಹಂಚಿಕೆ.
- ವೇದಿಕ್ ಹೆರಿಟೇಜ್ ಪೋರ್ಟಲ್ ಉನ್ನತೀಕರಣ, ಪುಣೆಯ ಅಫಾ ಖಾನ್ ಪ್ಯಾಲೇಸ್‌ನ ಗಾಂಧಿ ಮ್ಯೂಸಿಯಂ ಅಭಿವೃದ್ಧಿ.

11 ಸ್ಥಳಗಳ ಪುನರ್ ನಿರ್ಮಾಣ

- ವಿಜಯನಗರ ಸಾಮ್ರಾಜ್ಯದ ಹಂಪಿ, ಸಿಂಧೂ ನಾಗರಿಕತೆಯ ಕುರುಹುಗಳಿರುವ ಧೋಲಾವಿರಾ, ರಾಖಿಗಢಿಯಲ್ಲಿ ಅಧಿಕೃತ ಮಾಹಿತಿ ಅನುಸಾರ ಐತಿಹಾಸಿಕ ಸ್ಥಳಗಳ ಪುನರ್ ನಿರ್ಮಾಣಕ್ಕೆ ಸಂಸ್ಕೃತಿ ಸಚಿವಾಲಯ ಮುಂದಾಗಿದೆ.
- ಸಿಂಧೂ ನಾಗರಿಕತೆ ಕುರಿತು ಅಧ್ಯಯನ ನಡೆಸಿರುವ 19 ಪ್ರಾಚ್ಯವಸ್ತು ತಜ್ಞರ ತಂಡ ಇದಕ್ಕೆ ನೆರವು ನೀಡಲಿದೆ.

- ಐಐಟಿ ಬಾಂಬೆ ಯೋಜನಾ ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸಲಿದೆ. ನ್ಯಾಷನಲ್ ಕೌನ್ಸಿಲ್ ಆಫ್ ಸೈನ್ಸ್ ಮ್ಯೂಸಿಯಂ ತಾಂತ್ರಿಕ ನೆರವು ನೀಡಲಿದೆ.
- ವಿಕಿಪಿಡಿಯಾ ಮಾದರಿಯಲ್ಲಿ ಆನ್‌ಲೈನ್‌ಲ್ಲಿ ಗಾಂಧಿಪಿಡಿಯಾ ರೂಪಿಸುವುದಕ್ಕೂ ಯೋಜನೆ ಸಿದ್ದವಾಗಿದೆ.
- ಮಹಾತ್ಮಗಾಂಧಿ, ಗುರುನಾನಕ್ ಹಾಗೂ ರವೀಂದ್ರನಾಥ ಟ್ಯಾಗೋರರ ಬೋಧನೆಗಳ ಜ್ಞಾನ ಭಂಡಾರವಿರಲಿದೆ. ಈ ಯೋಜನೆ ಇನ್ನೂ ಪ್ರಸ್ತಾವನೆ ಹಂತದಲ್ಲಿದೆ.

3.60,000 ಕಿ.ಮೀ ಹೆದ್ದಾರಿ ಯೋಜನೆಗೆ ಕೇಂದ್ರ ಸಜ್ಜು:

ಹೆದ್ದಾರಿ ಪ್ರಗತಿಗೆ ಹೊಸ ಟ್ರಸ್ಟ್:

- ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಉದ್ದೇಶಿತ ಮೂಲಸೌಕರ್ಯ ಹೂಡಿಕೆ ಟ್ರಸ್ಟ್ (ಇನ್‌ಫ್ರಾಸ್ಟ್ರಕ್ಚರ್ ಟ್ರಸ್ಟ್) ರಚಿಸುತ್ತಿದೆ.
- ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ (ಎನ್‌ಎಚ್‌ಎಐ) ಇದರ ನೇತೃತ್ವ ವಹಿಸಿದೆ. ಪ್ರಸ್ತಾಪ ಅಂತಿಮ ಹಂತದಲ್ಲಿದ್ದು, ಕೇಂದ್ರ ಸಚಿವ ಸಂಪುಟದ ಅನುಮೋದನೆ ಸಿಗಬೇಕಿದೆ.

3.60,000 ಕಿ.ಮೀ ಹೆದ್ದಾರಿ ನಿರ್ಮಾಣ

- ಭಾರತ ವಿಶ್ವದಲ್ಲಿಯೆ ಎರಡನೇ ಅತಿ ದೊಡ್ಡ ರಸ್ತೆ ನೆಟ್‌ವರ್ಕ್ ಹೊಂದಿದೆ. ಸಾರಿಗೆ ಸಚಿವಾಲಯವು ಮುಂದಿನ 5 ವರ್ಷಗಳಲ್ಲಿ 60,000 ಕಿ.ಮೀ ಹೆದ್ದಾರಿ ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

ಹೆದ್ದಾರಿ ನಿರ್ವಹಣೆಯಲ್ಲಿ ಆದಾಯ:

- ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರವು ಹೆದ್ದಾರಿಗಳ ನಿರ್ವಹಣೆ ಕುರಿತ ಟೋಲ್–ಆಪರೇಟ್–ಟ್ರಾನ್ಸ್‌ಫರ್ (ಟಿಒಟಿ) ಮಾದರಿಯ ಮೂಲಕ 2025ರ ವೇಳೆಗೆ 85,000 ಕೋಟಿ ರೂ.ಗೂ ಹೆಚ್ಚು ಆದಾಯ ಗಳಿಸಲು ನಿರ್ಧರಿಸಿದೆ.
- ಈ ಟಿಒಟಿ ಮಾದರಿಯಲ್ಲಿ ರಸ್ತೆ ವಲಯಕ್ಕೆ ಖಾಸಗಿ ವಲಯದ ಡೆವಲಪರ್‌ಗಳ ಸಹಭಾಗಿತ್ವ ಸಿಗಲಿದೆ.
- ಎನ್‌ಎಚ್‌ಎಐ ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹಿಸುವ ಹಕ್ಕುಗಳನ್ನು ಖಾಸಗಿ ಡೆವಲಪರ್‌ಗಳಿಗೆ 30 ವರ್ಷಗಳ ಅವಧಿಗೆ ವಹಿಸಲಿದೆ.

ದಿನಕ್ಕೆ 31 ಕಿ.ಮೀ ಹೆದ್ದಾರಿ ನಿರ್ಮಾಣ:

- ದೇಶದಲ್ಲಿ ಈಗ ದಿನಕ್ಕೆ ಸರಾಸರಿ 31 ಕಿ.ಮೀ ಹೆದ್ದಾರಿ ನಿರ್ಮಾಣವಾಗುತ್ತಿದೆ. 2019–20ರಲ್ಲಿ ಇದು 41 ಕಿ.ಮೀಗೆ ವಿಸ್ತರಿಸಲಿದೆ.

19 ಲಕ್ಷ ಕೋಟಿ ರೂ. ವೆಚ್ಚ

- ಕನ್ಸಲ್ಟೆನ್ಸಿ ಕಂಪನಿ ಕೆಪಿಎಂಜಿ ಪ್ರಕಾರ ಈ 60 ಸಾವಿರ ಕಿ.ಮೀ ಹೆದ್ದಾರಿ ನಿರ್ಮಾಣಕ್ಕೆ 19 ಲಕ್ಷ ಕೋಟಿ ರೂ. ವೆಚ್ಚವಾಗಲಿದೆ.
- ಸರಕಾರ ಯಾವುದೇ ನಿಧಿಯ ಕೊರತೆಯಾಗದಂತೆ ವಿನೂತನ ಮಾರ್ಗವನ್ನು ಅನುಸರಿಸಬೇಕು.
- ಈ ನಿಟ್ಟಿನಲ್ಲಿ ಹೊಸ ಟ್ರಸ್ಟ್ ಸಹಕರಿಸಲಿದೆ. ಭೂಸ್ವಾಧೀನ ಸೇರಿದಂತೆ ಪ್ರತಿ ಕಿ.ಮೀ ಹೆದ್ದಾರಿ ನಿರ್ಮಾಣಕ್ಕೆ ಅಂದಾಜು 30 ಕೋಟಿ ರೂ. ವೆಚ್ಚವಾಗಲಿದೆ.

18. ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧಕ್ಕೆ ಕರೆ:

- ಉತ್ತರ ಪ್ರದೇಶದ ಮಥುರಾದಲ್ಲಿ 'ಸ್ವಚ್ಛತಾ ಹೀ ಸೇವಾ' ಪ್ರೋಗ್ರಾಂ 2019ಕ್ಕೆ ಚಾಲನೆ ದೊರೆತಿದೆ.
- ಅಕ್ಟೋಬರ್ 2ರಂದು ದೇಶ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ 150ನೇ ಜಯಂತಿ ಆಚರಿಸುತ್ತಿದೆ, ಆ ಹೊತ್ತಿಗೆ ಅವರ ಕನಸಾದ 'ಸ್ವಚ್ಛಭಾರತ'ದ ಕನಸು ನನಸಾಗಬೇಕು. ಈ ಕಾರ್ಯದಲ್ಲಿ ಪ್ರತಿಯೊಬ್ಬ ಪ್ರಜೆಯೂ ಭಾಗವಹಿಸಬೇಕು.
- ಇದೇ ವೇಳೆ ಅವರು, ನ್ಯಾಷನಲ್ ಅನಿಮಲ್ ಡಿಸೀಸ್ ಕಂಟ್ರೋಲ್ ಪ್ರೋಗ್ರಾಂ, ನ್ಯಾಷನಲ್ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಪ್ರೋಗ್ರಾಂ ಸೇರಿ 16 ವಿವಿಧ ಯೋಜನೆಗಳಿಗೆ ಚಾಲನೆ ನೀಡಿದರು.

ಮಾರ್ಗಸೂಚಿಯಲ್ಲೇನಿದೆ?

- ಪ್ಲಾಸ್ಟಿಕ್ ಬಳಕೆ ನಿಷೇಧ ದೇಶದ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗೂ ಅನ್ವಯ ಸ್ವಚ್ಛ ಮತ್ತು ಪ್ಲಾಸ್ಟಿಕ್ ಮುಕ್ತ ಕ್ಯಾಂಪಸ್ ಖಾತ್ರಿಗೊಳಿಸುವ ನಿಟ್ಟಿನಲ್ಲಿ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳು ಸೂಕ್ತ ನಿಯಮಾವಳಿ ಜಾರಿಗೊಳಿಸುವುದು.
- ಪರಿಸರ ಸ್ನೇಹಿ ವಸ್ತುಗಳ ಬಳಕೆಯ ಮೂಲಕ ಪ್ಲಾಸ್ಟಿಕ್ ಬಳಕೆಯನ್ನು ಹಂತ ಹಂತವಾಗಿ ಮತ್ತು ವ್ಯವಸ್ಥಿತವಾಗಿ ನಿಲ್ಲಿಸಿ, ಕ್ಯಾಂಪಸನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವುದು
- ಕ್ಯಾಂಪಸ್ ಕ್ಯಾಂಟೀನ್ ಮತ್ತು ಷಾಪಿಂಗ್ ಕಾಂಪ್ಲೆಕ್ಸ್, ಹಾಸ್ಟೆಲ್‌ಗಳಲ್ಲಿ ಏಕಬಳಕೆಯ ಪ್ಲಾಸ್ಟಿಕ್ ನಿಷೇಧಿಸುವುದು.
- ಏಕ ಬಳಕೆಯ ಪ್ಲಾಸ್ಟಿಕ್ ನಿಂದಾಗಿ ಆಗುವ ಅಪಾಯಗಳ ಕುರಿತು ಜಾಗೃತಿ ಮೂಡಿಸುವುದು ಮತ್ತು ಕಾರ್ಯಾಗಾರಗಳನ್ನು ಏರ್ಪಡಿಸುವುದು
- ಬಯೋ ಡಿಗ್ರೆಡಬಲ್ ಅಲ್ಲದ ವಸ್ತುಗಳನ್ನು ಕ್ಯಾಂಪಸ್‌ಗೆ ತಾರದಂತೆ ವಿದ್ಯಾರ್ಥಿಗಳಿಗೆ ತಾಕೀತು ಮಾಡುವುದು.
- ಮನೆಗಳಲ್ಲೂ ಪ್ಲಾಸ್ಟಿಕ್ ಬಳಕೆ ನಿಲ್ಲಿಸುವಂತೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುದು
- ಪ್ಲಾಸ್ಟಿಕ್ ಬಾಟಲಿಗಳಲ್ಲಿ ವಿದ್ಯಾರ್ಥಿಗಳು ನೀರು ತರುವುದನ್ನು ನಿಲ್ಲಿಸುವುದಕ್ಕಾಗಿ ಶಿಕ್ಷಣ ಸಂಸ್ಥೆಗಳಲ್ಲೇ ಪರಿಶುದ್ದ ಕುಡಿವ ನೀರಿನ ಘಟಕಗಳನ್ನು ಸ್ಥಾಪಿಸುವುದು.
- ಪ್ಲಾಸ್ಟಿಕ್ ಚೀಲಗಳ ಬದಲಾಗಿ ಬಟ್ಟೆ ಮತ್ತು ಪೇಪರ್ ಬ್ಯಾಗ್ ಬಳಕೆಗೆ ಉತ್ತೇಜನ ನೀಡುವುದು
- ಉನ್ನತ ಭಾರತ ಅಭಿಯಾನದಲ್ಲಿ ಗ್ರಾಮಗಳನ್ನು ದತ್ತು ತೆಗೆದುಕೊಂಡಿರುವ ಉನ್ನತ ಶಿಕ್ಷಣ ಸಂಸ್ಥೆಗಳು ಆ

ಗ್ರಾಮಗಳನ್ನು ಪ್ಲಾಸ್ಟಿಕ್ ಮುಕ್ತ ಗ್ರಾಮಗಳನ್ನಾಗಿ ರೂಪಿಸುವುದಕ್ಕೆ ಪ್ರಯತ್ನಿಸುವುದು.

19. ಎತ್ತರದ ಎಟಿಸಿ ಟವರ್:

- ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೆ.2ರಂದು 'ಏರ್ ಟ್ರಾಫಿಕ್ ಕಂಟ್ರೋಲ್' (ಎಟಿಸಿ) ಟವರ್ ಅನ್ನು ನಾಗರಿಕ ವಿಮಾನಯಾನ ಸಚಿವ ಹರ್ದೀಪ್ ಸಿಂಗ್ ಪುರಿ ಉದ್ಘಾಟಿಸಿದರು. ಇದು ಭಾರತದಲ್ಲಿರುವ ಅತಿ ಎತ್ತರದ ಎಟಿಸಿ ಎಂಬ ಕೀರ್ತಿಗೆ ಭಾಜನವಾಗಿದೆ.
- ವಿಶ್ವದಲ್ಲಿ 8 ರಾಷ್ಟ್ರಗಳು ದೆಹಲಿ ಎಟಿಸಿಗಿಂತ ಎತ್ತರದ ಟವರ್ ಹೊಂದಿದೆ.
- 102 ಮೀಟರ್ ಎತ್ತರವಿರುವ ಎಟಿಸಿ ಟವರ್ ಏರೋ ಡೋಮ್ ಕಂಟ್ರೋಲ್ ಟವರ್, ಏರಿಯಾ ಆ್ಯಂಡ್ ಅಪ್ರೋಚ್ ಕಂಟ್ರೋಲ್ ಸರ್ವಿಸಸ್ ಬಿಲ್ಡಿಂಗ್ ಮತ್ತು ಆಡಳಿತ ಕಚೇರಿಯನ್ನು ಒಳಗೊಂಡಿದೆ.

1200 ವಿಮಾನಗಳನ್ನು ನಿಭಾಯಿಸುವ ಸಾಮರ್ಥ್ಯ:

- ಹಳೇ ಎಟಿಸಿ 60 ಮೀ. ಇದ್ದು, ಇದನ್ನು ಬ್ಯಾಕ್–ಅಪ್ ಆಗಿ ಬಳಸಲಾಗುತ್ತದೆ. ದೆಹಲಿ ವಿಮಾನ ನಿಲ್ದಾಣದಲ್ಲಿನ ಹೊಸ ಎಟಿಸಿ ದಿನಕ್ಕೆ 1,200 ಕ್ಕೂ ಹೆಚ್ಚು ವಿಮಾನಗಳನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿದ್ದು, ಗರಿಷ್ಠ ಒತ್ತಡ ಅವಧಿಯಲ್ಲೂ 75 ವಿಮಾನಗಳ ನಿರ್ವಹಣಾ ಸಾಮರ್ಥ್ಯ ಹೊಂದಿದೆ.

ಎಟಿಸಿಗಳ ವಿವರ

ವಿಮಾನ ನಿಲ್ದಾಣ	ಎಟಿಸಿ ಎತ್ತರ(ಮೀ.)
ಛತ್ರಪತಿ ಶಿವಾಜಿ ಏರ್‌ಪೋರ್ಟ್, ಮುಂಬೈ	84,
ರಾಜೀವ್‌ಗಾಂಧಿ ಏರ್ ಫೋರ್ಟ್, ಹೈದರಾಬಾದ್	75
ಕೆಂಪೇಗೌಡ ಏರ್‌ಪೋರ್ಟ್, ಬೆಂಗಳೂರು	65

ಹೊಸ ಯೋಜನೆಗಳ ಅನುಷ್ಠಾನ:

- ನಾಗರಿಕ ವಿಮಾನಯಾನ ಸಚಿವಾಲಯ ವಾಯುಯಾನ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕ್ರಮಗಳನ್ನು ಕೈಗೊಂಡಿದ್ದು, ಅಹಮದಾಬಾದ್, ಮಂಗಳೂರು ಮತ್ತು ಲಕ್ನೌ ಮಾಹಿತಿ ಮೂರು ಭಾರತೀಯ ವಿಮಾನ ನಿಲ್ದಾಣಗಳನ್ನು ಪಬ್ಲಿಕ್ ಪ್ರೈವೇಟ್ ಪಾರ್ಟ್‌ನರ್‌ಷಿಪ್ (ಪಿಪಿಪಿ)ಗೆ ನೀಡಲಾಗಿದೆ.
- ಸೇವೆಯಲ್ಲಿ ಪರಿಣತಿ, ವೃತ್ತಿಪರತೆ, ದಕ್ಷತೆ ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಆ.29ರಂದು ಏವಿಯೇಷನ್ ಜಾಬ್ ಎಂಬ ವೆಬ್ ಆಧಾರಿತ ಪೋರ್ಟಲ್ ಪ್ರಾರಂಭಿಸಿದ್ದು, ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ನಿರೀಕ್ಷಿತ ಉದ್ಯೋಗದಾತರು ಮತ್ತು ಉದ್ಯೋಗಾಕಾಂಕ್ಷಿಗಳನ್ನು ಒಟ್ಟುಗೂಡಿಸಲು ಪೋರ್ಟಲ್ ಪ್ರಯತ್ನಿಸುತ್ತದೆ.
- ಇದು ಅಭ್ಯರ್ಥಿಗಳಿಗೆ ವಿವಿಧ ಉದ್ಯೋಗ ಕ್ಷೇತ್ರಗಳಲ್ಲಿ ತಮ್ಮ ಆಸಕ್ತಿಯನ್ನು ನೋಂದಾಯಿಸಿಕೊಳ್ಳಲು ಸಹಕಾರಿಯಾಗಿದೆ.
- ಈ ಪೋರ್ಟಲ್ ಉದ್ಯೋಗ ರಹಿತರಿಗೆ ಉದ್ಯೋಗ ನೀಡುವುದಲ್ಲದೆ ವಿಮಾನಯಾನ ಕ್ಷೇತ್ರದ ಇತರ ವಿಭಾಗದಲ್ಲಿ ಕೆಲಸ ನಿರ್ವಹಿಸಲು ಆಸಕ್ತಿ ಹೊಂದಿದವರಿಗೆ ಮರು ಉದ್ಯೋಗನೀಡಲೂ ಸಹಕಾರಿಯಾಗಿದೆ.
- ಪ್ರವಾಸೋದ್ಯಮದ ರೀಜನಲ್ ಕನೆಕ್ಟಿವಿಟಿ ಸ್ಕೀಮ್ (ಆರ್‌ಸಿಎಸ್) ಭಾಗವಾಗಿ ವಿಮಾನಯಾನ ಸಚಿವಾಲಯ 34 ಮಾರ್ಗಗಳನ್ನು ಕಾರ್ಯರೂಪಕ್ಕೆ ತಂದಿದೆ.
- 34, ಆರ್‌ಸಿಎಸ್ ಮಾರ್ಗಗಳು ಅನ್‌ಸರ್ವ್‌ಡ್ (ವೇಳಾಪಟ್ಟಿಯಿಲ್ಲದ) ಮೈಸೂರು, ಜಾರ್ಸುಗುಡಾ, ಕೊಲ್ಲಾಪುರ, ಜಲ್ಗಾಂವ್ ಮತ್ತು 4 ಅಂಡರ್ ಸರ್ವ್‌ಡ್(ಸೇವೆ ನೀಡಲು ಅಗತ್ಯ ಶಕ್ತಿ ಇರದ) ಗ್ವಾಲಿಯರ್, ಬೆಳಗಾವಿ, ದುರ್ಗಾಪುರ ಮತ್ತು ಶಿಲ್ಲಾಂಗ್ ವಿಮಾನ ನಿಲ್ದಾಣಗಳಿಗೆ ಸೇವೆಯಲ್ಲಿರುವ 10 ವಿಮಾನ ನಿಲ್ದಾಣಗಳ ಸಂಪರ್ಕ ಕಲ್ಪಿಸುತ್ತದೆ.

20. ನಂಬರ್17 ಸ್ಕ್ವಾಡ್ರನ್ ಪುನರ್ ಬಳಕೆ:

- ಕಾರ್ಗಿಲ್ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ನಂ.17 ಸ್ಕ್ವಾಡ್ರನ್ ಅನ್ನು ಮತ್ತೆ ಪುನಾರಂಭಿಸಲಾಗಿದೆ.
- ಈ ಸ್ಕ್ವಾಡ್ರನ್ ಅನ್ನು ಅಕ್ಟೋಬರ್ 8ರಂದು ಭಾರತಕ್ಕೆ ಅಧಿಕೃತವಾಗಿ ಹಸ್ತಾಂತರ ಗೊಳ್ಳಲಿರುವ ರಫೇಲ್ ಯುದ್ಧ ವಿಮಾನದ ನಿರ್ವಹಣೆ ಮತ್ತು ಬಳಕೆಯ ಉಸ್ತುವಾರಿಗಾಗಿ ಬಳಸಿಕೊಳ್ಳಲಾಗುತ್ತದೆ.
- ಇದನ್ನು ದೇಶದ ಮೊದಲ ರಫೇಲ್ ಸ್ಕ್ವಾಡ್ರನ್ ಆಗಿ ಗುರುತಿಸಲಾಗುತ್ತದೆ. ಹರಿಯಾಣದ ಅಂಬಾಲದಲ್ಲಿರುವ ಭಾರತೀಯ ವಾಯುಪಡೆ ಸ್ಟೇಷನ್‌ನಲ್ಲಿ ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಬಿರೇಂದ್ರ ಸಿಂಗ್ ಧನೋವಾ, ಗೋಲ್ಡನ್ ಆ್ಯರೋ ನಂ. 17 ಸ್ಕ್ವಾಡ್ರನ್ ಅನ್ನು ಪುನರ್ ಲೋಕಾರ್ಪಣೆಗೊಳಿಸಿದ್ದಾರೆ.

1951ರಲ್ಲಿ ಆರಂಭ:

- 1951ರ ಅ.1ರಂದು ನಂ.17 ಸ್ಕ್ವಾಡ್ರನ್ ಅನ್ನು ಆರಂಭಿಸಲಾಗಿತ್ತು. ಆರಂಭದಲ್ಲಿ ಹಾರ್ವರ್ಡ್ 2ಬಿ ಟ್ರೈನರ್ ಅನ್ನು ಬಳಸಿ ಕೊಳ್ಳಲಾಗುತ್ತಿತ್ತು.
- 1999ರಲ್ಲಿ ಬಿಎಸ್ ಧನೋವಾ ಅವರು ವಿಂಗ್ ಕಮಾಂಡರ್ ಆಗಿದ್ದರು. ಅವರ ನೇತೃತ್ವದಲ್ಲಿ ನಂ. 17 ಸ್ಕ್ವಾಡ್ರನ್‌ನ ಯೋಧರು ಅಪರೇಷನ್ ಸಫೇದ್ ಸಾಗರ್ ಮೂಲಕ ಕಾರ್ಗಿಲ್‌ನಲ್ಲಿ ವಾಯುದಾಳಿ ನಡೆಸಿದ್ದರು.

2016ರಲ್ಲಿ ರದ್ದು:

- ವಾಯುಪಡೆಯ 17ನೇ ಸ್ಕ್ವಾಡ್ರನ್ ಹಿಂದೆ ಮಿಗ್–21 ಯುದ್ಧ ವಿಮಾನಗಳನ್ನು ಬಳಸುತ್ತಿತ್ತು. ಬದಲಾದ ಹಾಗೆ ಮಿಗ್21 ಯುದ್ಧ ವಿಮಾನಗಳನ್ನು ಹಂತ ಹಂತವಾಗಿ ಹಿಂಪಡೆದುಕೊಳ್ಳಲು ಆರಂಭಿಸಿದ್ದರಿಂದ 2016ರಲ್ಲಿ ಅದನ್ನು ರದ್ದು ಮಾಡಲಾಯಿತು.
- ರಫೇಲ್ ನಿರ್ವಹಣೆ ಮತ್ತು ಬಳಕೆಗಾಗಿ 24 ಮಂದಿ ಐಎಎಫ್ ಪೈಲಟ್‌ಗಳ ತಂಡವನ್ನು ಆಯ್ಕೆ ಮಾಡಲಾಗಿದೆ.

ಸ್ಕ್ವಾಡ್ರನ್ ಎಂದರೇನು?

- ಎರಡು ಅಥವಾ ಅದಕ್ಕಿಂತ ಹೆಚ್ಚಿನ ಯುದ್ಧ ವಿಮಾನಗಳಿರುವ ಹಾಗೂ ಅವುಗಳನ್ನು ಹಾರಾಟ ನಡೆಸುವ ನುರಿತ ಸಿಬ್ಬಂದಿಗಳನ್ನು ಒಳಗೊಂಡ ವಾಯುಸೇನೆಯಲ್ಲಿನ ಕಾರ್ಯಚರಣಾ ಘಟಕವನ್ನು ಸ್ಕ್ವಾಡ್ರನ್ ಎಂದು ಕರೆಯುವರು.

21. ಸಂತೋಷದ ಸೂಚ್ಯಂಕ:

ಸಂತೋಷದ ಜೀವನ ಎಂದರೇನು?

- ಉತ್ತಮ ಆಡಳಿತ ವ್ಯವಸ್ಥೆಯಡಿ ಅಭಿವೃದ್ಧಿ ಮತ್ತು ಸಂಬಂಧಗಳನ್ನು ಅರ್ಥಪೂರ್ಣವಾಗಿ ಕಟ್ಟಿಕೊಳ್ಳುವ ಮೂಲಕ ಆನಂದದ ಬದುಕನ್ನು ಜನರು ನಡೆಸುವುದನ್ನು ಸಂತೋಷದ ಜೀವನ ಎಂದು ಕರೆಯಲಾಗುತ್ತದೆ.

ಭಾರತಕ್ಕೆ ಎಷ್ಟನೇ ಸ್ಥಾನ:

- ಭಾರತ 2018ರ ಸಾಲಿನಲ್ಲಿ 133ನೇ ಸ್ಥಾನ ಪಡೆದುಕೊಂಡಿತ್ತು. ಈ ವರ್ಷ 7 ಸ್ಥಾನ ಕುಸಿದು 140ನೇ ಸ್ಥಾನ ಪಡೆದುಕೊಂಡಿದೆ.

ಫಿನ್ಲೆಂಡ್‌ಗೆ ಮೊದಲ ಸ್ಥಾನ:

- ವಿಶ್ವದ ಅತ್ಯಂತ ಸಂತೃಪ್ತ ರಾಷ್ಟ್ರವಾಗಿ ಫಿನ್‌ಲ್ಯಾಂಡ್ ಮೊದಲ ಸ್ಥಾನ ಪಡೆದಿದೆ. ಈ ಮೂಲಕ ಅದು ಎರಡನೇ ಬಾರಿಗೆ ಮೊದಲ ಸ್ಥಾನ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ ಸಮೀಕ್ಷೆಯಲ್ಲಿ ಒಟ್ಟು 156 ದೇಶಗಳಿಗೆ ಸ್ಥಾನಗಳನ್ನು ನೀಡಲಾಗಿದೆ.
- ಅದರಲ್ಲಿ ಡೆನ್ಮಾರ್ಕ್, ಸ್ವಿಡ್ಜರ್‌ಲ್ಯಾಂಡ್, ನಾರ್ವೆ ಹಾಗೂ ಫಿನ್‌ಲ್ಯಾಂಡ್ ಕಳೆದ ನಾಲ್ಕು ವರ್ಷಗಳಿಂದ ತಮ್ಮ ಸ್ಥಾನಗಳಲ್ಲಿ ಸ್ಥಿರತೆ ಕಾಯ್ದುಕೊಂಡಿವೆ.

ಸಂತೋಷ ಎಲ್ಲಿ ಕಡಿಮೆ:

- ದಕ್ಷಿಣ ಸೂಡಾನ್, ಕೇಂದ್ರ ಆಫ್ರಿಕಾ, ಅಫ್ಘಾನಿಸ್ತಾನ, ತಾಂಜೇನಿಯಾ, ರವಾಂಡ, ಯೆಮನ್, ಮಾಲ್ವಿ,

ಬೋಟ್ಸಾನ, ಹೈಟಿ,
ಕಾರಣವೇನು?

- ಸುಸ್ಥಿರ ಅಭಿವೃದ್ಧಿ ದರ ಕಾಯ್ದುಕೊಳ್ಳುವಿಕೆಯಲ್ಲಿ ಸೋಲು, ನಿರುದ್ಯೋಗ, ಬಡತನ, ಮೂಲ ಸೌಕರ್ಯಗಳ ಕೊರತೆಯಿಂದಾಗಿ ಜನರು ಕಡಿಮೆ ಸಂತುಷ್ಟರಾಗಿದ್ದಾರೆ ಎಂದು ವರದಿ ತಿಳಿಸಿದೆ.

22. ಜಗತ್ತಿನ ಶ್ರೇಷ್ಠ ವಿಶ್ವವಿದ್ಯಾನಿಲಯಗಳ ಹೊಸ ರ್‍ಯಾಂಕಿಂಗ್ ಪಟ್ಟಿ ಬಿಡುಗಡೆಯಾಗಿದ್ದು, ಭಾರತಕ್ಕೆ ಮಿಶ್ರಫಲ:

ಟಾಪ್ 5 ವಿವಿಗಳು

- ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ
- ಕ್ಯಾಲಿಫೋರ್ನಿಯಾ ಐಟಿ
- ಕೇಂಬ್ರಿಡ್ಜ್ ವಿವಿ
- ಸ್ಟಾನ್ ಫೋರ್ಡ್ ವಿವಿ
- ಮೆಸಾಚ್ಯುಸೆಟ್ಸ್ ಐಟಿ

23. ಮಿಲಿಟರಿ ವೆಚ್ಚ

- **1914 ರಿಂದ 2018 ರವರೆಗಿನ ವಿವಿಧ ದೇಶಗಳ ಮಿಲಿಟರಿ ವೆಚ್ಚ (ಮೂಲ ವಿಶ್ವ ಸಂಸ್ಥೆ) (ಶತಕೋಟಿ ಅಮೆರಿಕನ್ ಡಾಲರ್ ಲೆಕ್ಕದಲ್ಲಿ)**

1914

ದೇಶ	ಮಿಲಿಟರಿ ವೆಚ್ಚ
ಜರ್ಮನಿ	23.7
ಬ್ರಿಟನ್	22.3
ಫ್ರಾನ್ಸ್	16.4

ಆಸ್ಟ್ರೀಯಾ–ಹಂಗೇರಿ	13.9
ರಷ್ಯಾ	11.4
ಅಮೆರಿಕಾ	3.4
ಜಪಾನ್	1.4
ಸ್ಪೇನ್	1.3
ಇಟಲಿ	1.2
ಚೀನಾ	0.9

1939

ದೇಶ	ಮಿಲಿಟರಿ ವೆಚ್ಚ
ಜರ್ಮನಿ	122.2
ಬ್ರಿಟನ್	80.4
ರಷ್ಯಾ	61
ಜಪಾನ್	17.3
ಫ್ರಾನ್ಸ್	10.4
ಅಮೆರಿಕಾ	10
ಪೋಲ್ಯಾಂಡ್	9.9
ಇಟಲಿ	6.8
ಜಿಕೋಸ್ಲೋವೋಕಿಯಾ	2.7
ಚೀನಾ	1.8

2010

ದೇಶ	ಮಿಲಿಟರಿ ವೆಚ್ಚ
ಅಮೆರಿಕಾ	478.8
ಚೀನಾ	179.4
ಫ್ರಾನ್ಸ್	42.4
ರಷ್ಯಾ	40.3
ಬ್ರಿಟನ್	39.8
ಜಪಾನ್	37.5
ಜರ್ಮನಿ	31.7
ಭಾರತ	31.6
ಸೌದಿ ಅರೇಬಿಯಾ	31
ಬ್ರೆಜೀಲ್	23.3

2018

ದೇಶ	ಮಿಲಿಟರಿ ವೆಚ್ಚ
ಅಮೆರಿಕಾ	444.9
ಚೀನಾ	46.3
ಸೌದಿ ಅರೇಬಿಯಾ	46.3
ಭಾರತ	45.6
ಫ್ರಾನ್ಸ್	43.8
ರಷ್ಯಾ	42.1
ಬ್ರಿಟನ್	34.3
ಜರ್ಮನಿ	33.9
ಜಪಾನ್	32.0
ದ.ಕೋರಿಯಾ	29.5

24. 2022ಕ್ಕೆ ಹೊಸ ಸಂಸತ್ ಭವನ:

- ದೇಶದ ಎಪತ್ತೈದನೇ ವರ್ಷದ ಸ್ವಾತಂತ್ರ್ಯ ದಿನಾಚರಣೆ ಸಂಭ್ರಮಕ್ಕೆ ಹೊಸ ಸಂಸತ್ ಕಟ್ಟಡವನ್ನು ಉದ್ಘಾಟಿಸಲು ಪ್ರಧಾನಿ ಮೋದಿ ನಿರ್ಧರಿಸಿದ್ದು, ಶೀಘ್ರದಲ್ಲೇ ಹೊಸ ಕಟ್ಟಡದ ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಲಿದೆ ಎನ್ನಲಾಗಿದೆ.

ಸಂಸತ್ ಭವನದಲ್ಲಿ ನೂರಾರು ಸಮಸ್ಯೆ:

- ಸದ್ಯ ಅಸ್ತಿತ್ವದಲ್ಲಿರುವ ಸಂಸತ್ ಭವನದ ನಿರ್ಮಾಣ ಕಾಮಗಾರಿಯನ್ನು ಬ್ರಿಟಿಷ್ ಆಳ್ವಿಕೆಯಲ್ಲಿ 1911ರಲ್ಲಿ ಪ್ರಾರಂಭಿಸಲಾಗಿದ್ದು, 1927ರಲ್ಲಿ ಉದ್ಘಾಟಿಸಲಾಗಿತ್ತು. ಆದರೆ ಸದ್ಯ ಮಾಹಿತಿ ಹಳೇಯದಾಗಿರುವ ಸಂಸತ್ ಭವನದಲ್ಲಿ ಈಗ ಸಾಕಷ್ಟು ಸಮಸ್ಯೆಗಳು ಕಾಣುತ್ತಿವೆ.
- ಪ್ರಮುಖ ಸಮಸ್ಯೆಯೆಂದರೆ ಮಂತ್ರಿಗಳಿಗೆ ಸಂಸತ್ತಿನಲ್ಲಿ ಕುಳಿತುಕೊಳ್ಳಲು ಎಲ್ಲ ಸಂಸದರಿಗೆ ಸರಿಯಾದ ಕೋಣೆಗಳ ವ್ಯವಸ್ಥೆ ಇಲ್ಲ.
- ಅಲ್ಲದೇ ಕಟ್ಟಡದ ವಿದ್ಯುತ್ ಸರಬರಾಜು ವ್ಯವಸ್ಥೆಯು ಹಳೆಯದಾಗಿದ್ದು, ಮಳೆಗಾಲದಲ್ಲಿ ಕೆಲ ಕಟ್ಟಡಗಳು ಸೋರುತ್ತಿವೆ.

ನವೀಕರಣ ಯಾಕೆ?

- 47 ಕಚೇರಿ ಕಟ್ಟಡಗಳಿದ್ದು, ಸಿಬ್ಬಂದಿ ಕಚೇರಿಯಿಂದ ಕಚೇರಿಗೆ ಓಡಾಡುವಷ್ಟರಲ್ಲಿ ಬಹುತೇಕ ಸಮಯ ಪೋಲು ಇದನ್ನು ತಪ್ಪಿಸುವುದು ನವೀಕರಣದ ಉದ್ದೇಶ.
- 40–50 ವರ್ಷ ಬಹುತೇಕ ಕಟ್ಟಡಗಳ ಸರಾಸರಿ ಆಯುಸ್ಸು ಭೂಕಂಪ ಆದರೆ ಅದನ್ನು ತಡೆದುಕೊಳ್ಳುವ ಸಾಮರ್ಥ್ಯ ಇಲ್ಲದಿರುವುದು ನವೀಕರಣ ಯೋಜನೆಗೆ ಕಾರಣ.
- 70,000 ಸರ್ಕಾರಿ ನೌಕರರಿಗೆ ಮೂಲಸೌಕರ್ಯ ಕಲ್ಪಿಸುವ ಸವಾಲು.

25. 1.023 ಫಾಸ್ಟ್ ಟ್ರ್ಯಾಕ್ ಕೋರ್ಟ್:

- ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿ ಬಾಕಿ ಉಳಿದಿರುವ ಪ್ರಕರಣಗಳ ವಿಚಾರಣೆಗೆ 1,023 ವಿಶೇಷ ತ್ವರಿತ ನ್ಯಾಯಾಲಯಗಳ ಸ್ಥಾಪನೆಗೆ ಕೇಂದ್ರ ಸರಕಾರ ಮುಂದಾಗಿದೆ.
- 389 ಜಿಲ್ಲೆಗಳಲ್ಲಿ ಇದ್ದು, ಇಲ್ಲಿ ಪೋಕ್ಸೋ ಕೇಸ್ ತಲಾ 1 ಪೋಕ್ಸೋ ಕೇಸ್ ಕೋರ್ಟ್ ಕಡ್ಡಾಯ
- 1,66,882 ಬಾಕಿ ಇರುವ ರೇಡ್ ಮತ್ತು ಪೋಕ್ಸೋ ಕೇಸ್‌ಗಳು.
- 1023 ಸ್ಥಾಪನೆಯಾಗಲಿರುವ ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳು

- 389 ಕೋರ್ಟ್ ಕೇವಲ ಪ್ರಕರಣಗಳ ಈಗ ಇರುವ ಸ್ಪೆಸಲ್ ಕೋರ್ಟ್‌ಗಳು
- 41–42 ಪ್ರಕರಣಗಳ ವಿಚಾರಣೆಯನ್ನು 3ತಿಂಗಳು ಪೂರ್ಣಗೊಳಿಸುವ ಟಾರ್ಗೆಟ್ ಅನ್ನು ವಿಶೇಷ ನ್ಯಾಯಾಲಯಗಳ ನೀಡಲಾಗಿದೆ.

26. ಬೇಟಿ ಬಚಾವೊ,ಗೆ ಹೊಸ ಅಭಿಯಾನದ ಸಾತ್:

- ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ 'ಬೇಟಿ ಬಚಾವೊ, ಬೇಟಿ ಪಢಾವೊ' ಜಾಗೃತಿ ಜನಾಂದೋಲನ ಕಾರ್ಯಕ್ರಮಕ್ಕೆ ಉತ್ತೇಜನ ನೀಡುವ ದಿಸೆಯಲ್ಲಿ ಬಿಜೆಪಿ 'ಸಪ್ಟೆ ಬಡಾ ಧನ್ ಬೇಟಿ, ಜಲ್ ಔರ್ ವನ್' ಎಂಬ ನೂತನ ಅಭಿಯಾನ ರೂಪಿಸಿದೆ.
- 'ಹೆಣ್ಣು ಮಗು, ನೀರು ಮತ್ತು ವನ ಈ ಮೂರು ಬಹುದೊಡ್ಡ ಸಂಪತ್ತು' ಎನ್ನುವುದು ನೂತನ ಘೋಷಣೆಯ ಅರ್ಥ.
- ಪ್ರಧಾನಿ ಮೋದಿ ಅವರ ಹುಟ್ಟುಹಬ್ಬ (ಸೆ.17)ದ ಅಂಗವಾಗಿ ನಡೆಯುತ್ತಿರುವ 'ಸೇವಾ ಸಪ್ತಾಹ'ದ ಭಾಗವಾಗಿ ಈ ಆಂದೋಲನ ಆರಂಭಿಸಲಾಗಿದೆ.

27. 118 ಕಮ್ಯೂನಿಟಿ ರೇಡಿಯೋ ಸ್ಥಾಪನೆ:

- ದೇಶದ ವಿವಿಧ ರಾಜ್ಯಗಳಲ್ಲಿ 6 ತಿಂಗಳೊಳಗೆ 118 ಕಮ್ಯೂನಿಟಿ ರೇಡಿಯೋ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಮಾಹಿತಿ ಮತ್ತು ಪ್ರಸರಣಾ ಇಲಾಖೆ ಸಚಿವ ಪ್ರಕಾಶ್ ಜಾವಡೇಕರ್ ಘೋಷಿಸಿದ್ದಾರೆ.
- ಸಾರ್ವಜನಿಕರೊಂದಿಗೆ ಸಂಪರ್ಕ ಸಾಧಿಸಲು ಮತ್ತು ಸ್ಥಳೀಯ ಕಲಾವಿದರಿಗೆ ಅವಕಾಶ ನೀಡಲು ಕಮ್ಯೂನಿಟಿ ರೇಡಿಯೋ ಉತ್ತಮ ವೇದಿಕೆ ಎಂದು ಜಾವಡೇಕರ್ ಹೇಳಿದರು.
- ಜಮ್ಮು–ಕಾಶ್ಮೀರದಲ್ಲಿ 370ನೇ ವಿಧಿ ರದ್ದತಿ ಮೂಲಕ 2 ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು–ಕಾಶ್ಮೀರ ಮತ್ತು ಲಢಾಕ್‌ನಲ್ಲಿ 2 ಕಮ್ಯೂನಿಟಿ ರೇಡಿಯೋ, ನಕ್ಸಲ್ ಮತ್ತು ಮಾವೋ ಪೀಡಿತ ಪ್ರದೇಶಗಳಲ್ಲಿ 16, ತೀವ್ರವಾಗಿ ಮಾವೋ ಪೀಡಿತ ಪ್ರದೇಶಗಳಲ್ಲಿ 6.17 ಮಹತ್ವಕಾಂಕ್ಷಿ ಜಿಲ್ಲೆಗಳಲ್ಲಿ ಈಶಾನ್ಯ ರಾಜ್ಯಗಳಲ್ಲಿ 3 ಹಾಗೂ 25 ಕರಾವಳಿ ಪ್ರದೇಶಗಳಲ್ಲಿ ಕಮ್ಯೂನಿಟಿ ರೇಡಿಯೋ ಸ್ಥಾಪಿಸುವುದಾಗಿ ಸಚಿವಾಲಯ ಹೇಳಿದೆ.

28. "ಏಕರೂಪ ನಾಗರಿಕ ಸಂಹಿತೆ" (ಯುಸಿಸಿ)ಗೆ ಸುಪ್ರೀಂ ಒಲವು:

- ಸಂವಿಧಾನ ರಚನೆಕಾರರು ಮತ್ತು ಹಲವು ಬಾರಿ ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯಮೂರ್ತಿಗಳು ದೇಶಾದ್ಯಂತ 'ಏಕರೂಪ ನಾಗರಿಕ ಸಂಹಿತೆ' (ಯುಸಿಸಿ) ಜಾರಿ ಪರ ಒಲವು ವ್ಯಕ್ತಪಡಿಸಿದ್ದರೂ, ಅದಕ್ಕೆ ವಾಸ್ತವ ರೂಪ ಕೊಡಲು ಆಡಳಿತ ಯಂತ್ರದಲ್ಲಿ ಇಚ್ಛಾ ಕೊರತೆ ಎದ್ದು ಕಾಣಿಸುತ್ತಿದೆ ಎಂದು ಸುಪ್ರೀಂಕೋರ್ಟ್ ಅಸಮಾಧಾನ ಹೊರಹಾಕಿದೆ.
- ಸಂವಿಧಾನದ 44ನೇ ವಿಧಿಯಲ್ಲಿ ಯುಸಿಸಿ ಕುರಿತಾದ ಸಕಾರಾತ್ಮಕ ಉಲ್ಲೇಖ ವ್ಯಕ್ತವಾಗಿದೆ ಎಂದು ನ್ಯಾಯಪೀಠ ತೀರ್ಪೊಂದನ್ನು ನೀಡುವ ವೇಳೆ ಹೇಳಿದೆ.

ಏನಿದು ಏಕರೂಪ ನಾಗರಿಕ ಸಂಹಿತೆ?

- ಭಾರತ ಹಲವು ಧರ್ಮ–ಜಾತಿಗಳ ದೇಶ. ವಿವಿಧ ರೀತಿ ಆಚರಣೆಗಳು ಅಸ್ತಿತ್ವದಲ್ಲಿದೆ. ಸದ್ಯದ ಕಾನೂನುಗಳೂ ಆಯಾ ಧರ್ಮದ ವಿವಿಧ ಅಭ್ಯಾಸಗಳಿಗೆ ಅನುಗುಣವಾಗಿದೆ.
- ಇದರಿಂದಾಗಿ ವೈಯಕ್ತಿಕ ಕಾನೂನುಗಳೂ ವಿವಿಧ ಧರ್ಮಗಳಿಗೆ ಬೇರೆ ಬೇರೆಯ ರೀತಿಯಲ್ಲಿವೆ. ಇದಕ್ಕೆ ಹೊರತಾಗಿ ವೈಯಕ್ತಿಕ ಕಾನೂನುಗಳಾದ, ವಿಶೇಷವಾಗಿ ವಿವಾಹ, ವಿಚ್ಛೇದನ, ಆಸ್ತಿ ಹಂಚಿಕೆ, ಉತ್ತರಾಧಿಕಾರ ವಿಚಾರಗಳಿಗೆ ಏಕರೂಪದ ಕಾನೂನು ತರುವುದು ಇದರ ಉದ್ದೇಶ.
- ಇದನ್ನೇ ಏಕರೂಪ ನಾಗರಿಕ ಸಂಹಿತೆ ಎನ್ನುತ್ತಾರೆ. ಸದ್ಯ ವಿಚ್ಛೇದನವನ್ನು ತೆಗೆದುಕೊಂಡರೆ, ಹಿಂದೂಗಳಲ್ಲೊಂದು, ಮುಸಲ್ಮಾನರಲ್ಲೊಂದು, ಕ್ರೈಸ್ತರಲ್ಲೊಂದು ಎಂಬಂತೆ ಕಾನೂನು ಜಾರಿಯಲ್ಲಿದೆ.

29. ಚೀನಾದ ಯುದ್ಧ ನೌಕೆಯ ಮೇಲೆ ಭಾರತದ ವಿಮಾನದ ಹದ್ದಿನ ಕಣ್ಣು:

- ಏಡನ್ ಕೊಲ್ಲಿಯಲ್ಲಿ ನಿಯೋಜಿಸಲಾಗಿರುವ ಚೀನಾದ ಏಳು ಯುದ್ಧ ನೌಕೆಗಳ ಮೇಲೆ ರಹಸ್ಯವಾಗಿ ಹದ್ದಿನ ಕಣ್ಣಿರಿಸಿರುವ ಭಾರತದ ಅತ್ಯಾಧುನಿಕ ಪಿ–8ಎಲ್' ವಿಮಾನವು ಅವುಗಳ ಚಿತ್ರ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದೆ.

- ಅಮೆರಿಕ ತಯಾರಿತ 'ಪಿ–8ಎಲ್' ಸಬ್‌ಮೆರಿನ್ ಪ್ರತಿರೋಧಕ ಗುಪ್ತ ವಿಮಾನವು, ಈ ನೌಕೆಗಳ ಚಲನವಲನದ ಮೇಲೆ ಸತತ ನಿಗಾ ಇರಿಸಿದೆ.
- ಈ ವಿಮಾನದ ಜತೆಗೆ ಇತರೆ ನಿಗಾ ವ್ಯವಸ್ಥೆಗಳನ್ನು ಬಳಸಿ ಭಾರತೀಯ ನೌಕಾಪಡೆ ಸೆರೆಹಿಡಿದ ಹಲವು ಚಿತ್ರಗಳನ್ನು ಸರ್ಕಾರ ಸುದ್ದಿಸಂಸ್ಥೆಯೊಂದು ಬಿಡುಗಡೆ ಮಾಡಿದೆ.

ಭಾರತದ ಸ್ಥಿತಿಗತಿ:

- ಭಾರತವು ಪ್ರಸ್ತುತ 'ಐಎನ್‌ಎಸ್ ವಿಕ್ರಮಾದಿತ್ಯ' ಹೆಸರಿನ ಯುದ್ಧ ವಿಮಾನ ಸಾಗಣೆ ನೌಕೆಯನ್ನು ಹೊಂದಿದ್ದು, ಇಂತಹ ಮತ್ತೊಂದು ನೌಕೆ ಕೊಚ್ಚಿನ್ ಶಿಪ್‌ಯಾರ್ಡ್‌ನಲ್ಲಿ ನಿರ್ಮಾಣ ಹಂತದಲ್ಲಿದೆ.
- ಆಳ ಸಮುದ್ರದಲ್ಲಿ ಸುದೀರ್ಘ ಕಾಲ ನಿಯೋಜಿಸಲು ಸಾಧ್ಯವಾಗುವಂತಹ 60,000 ಟನ್ ಗಿಂತಲೂ ಅಧಿಕ ಸಾಮರ್ಥ್ಯದ ಮತ್ತೊಂದು ಏರ್‌ಕ್ರಾಫ್ಟ್ ಕ್ಯಾರಿಯರ್ ಅನ್ನು ಅಭಿವೃದ್ಧಿ ಪಡಿಸಲು ನೌಕಾಪಡೆ ಯೋಜಿಸಿದೆ.
- ಉದ್ದೇಶಿತ ಎರಡು ನೌಕೆಗಳು ಸೇವೆಗೆ ಸನ್ನದ್ಧಗೊಂಡಾಗ ಅವುಗಳಲ್ಲಿ ಯಾವುದಾದರೂ ಎರಡನ್ನು ಆಳ ಸಾಗರದಲ್ಲಿ ನಿಯೋಜಿಸಲು ಸಾಧ್ಯವಾಗಲಿದೆ ಎಂದು ನೌಕಾಪಡೆ ತಿಳಿಸಿದೆ.

30. ಸಮುದ್ರ ಸಂವಹನ ಸೇವೆಗಳಿಗೆ ಚಾಲನೆ:

- ಸಮುದ್ರದಲ್ಲಿ ಪ್ರಯಾಣಿಸುವವರಿಗೆ ಬ್ರಾಡ್‌ಬ್ಯಾಂಡ್ ಸೇವೆಗಳನ್ನು ನೀಡಲು ಸಮುದ್ರ ಸಂವಹನ ಸೇವೆಗಳಿಗೆ ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ಮುಂಬೈನಲ್ಲಿ ಚಾಲನೆ ನೀಡಿದರು.
- ಭಾರತದಲ್ಲಿ ನೌಕಾಯಾನಕ್ಕೆ ಬೆಂಬಲ ನೀಡಲು ಹಡಗುಗಳಲ್ಲಿ ಪ್ರಯಾಣಿಸುವವರಿಗೆ ಸ್ಯಾಟಲೈಟ್ ತಂತ್ರಜ್ಞಾನದ ಮೂಲಕ ಧ್ವನಿ, ಡೇಟಾ ಮತ್ತು ವಿಡಿಯೋ ಸೇವೆಗಳನ್ನು ಒದಗಿಸಲಿದೆ ಎಂದು ಹೇಳಿದರು.
- ಭಾರತದ ಪ್ರಮುಖ VSAT (ವೆರಿ ಸ್ಮಾಲ್ ಅಪಾರ್ ಚರ್ ಟರ್ಮಿನಲ್) ನೆಲ್ಕೊ ಲಿಮಿಟೆಡ್ ಸಮುದ್ರ ಕ್ಷೇತ್ರಕ್ಕೆ ಗುಣಮಟ್ಟದ ಬ್ರಾಡ್‌ಬ್ಯಾಂಡ್ ಸೇವೆಗಳನ್ನು ಒದಗಿಸಲಿದೆ.
- ನೆಲ್ಕೊ ಜಾಗತಿಕ ಸಹಭಾಗಿತ್ವದ ಮೂಲಕ ಇಸ್ರೋ ಉಪಗ್ರಹದಲ್ಲಿ ಟ್ರಾನ್ಸ್ ಪಾಂಡರ್ ಸಾಮರ್ಥ್ಯ ಮತ್ತು ಸಮಗ್ರ ಸೇವಾ ಪೋರ್ಟ್‌ಫೋಲಿಯೊ ಸೇರಿದಂತೆ ಮೂಲಸೌಕರ್ಯ, ಗ್ರಾಹಕ ಸೇವೆಗಳನ್ನು ಸಕ್ರಿಯಗೊಳಿಸುವ ಮೂಲಕ ಸರಕು ಮತ್ತು ಕ್ರೂಸ್ ಹಡಗುಗಳಿಗೆ ಸಹಾಯ ಮಾಡುತ್ತದೆ ಎಂದು ಇಲಾಖೆ ತಿಳಿಸಿದೆ.
- IFMC (ಇನ್–ಫ್ಲೈಟ್ ಮತ್ತು ಮೆರಿಟೈಮ್ ಕನೆಕ್ಟಿವಿಟಿ) ಪರವಾನಗಿ ಹಡಗುಗಳಲ್ಲಿ ಬಳಕೆದಾರರಿಗೆ ಸಂಪರ್ಕವನ್ನು ಸಕ್ರಿಯಗೊಳಿಸುವುದು ಮಾತ್ರವಲ್ಲದೆ ಹಡಗು ಕಂಪನಿಗಳ ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸಲಿದೆ.
- ಕದ್ದ ಮೊಬೈಲ್‌ಗಳನ್ನು ಪತ್ತೆಹಚ್ಚಲು ಸಹಾಯ ಮಾಡುವ ವೆಬ್ ಪೋರ್ಟಲ್ ಅನ್ನು ಇದೇ ವೇಳೆ ಸಚಿವರು ಉದ್ಘಾಟಿಸಿದರು.

31. ಜಮ್ಮು–ಕಾಶ್ಮೀರ ಸೇಫ್ಟಿ ಆಕ್ಟ್:

- ಜಮ್ಮು–ಕಾಶ್ಮೀರ ಸಾರ್ವಜನಿಕ ಸುರಕ್ಷತಾ ಕಾಯ್ದೆಯನ್ನು 1978ರಲ್ಲಿ ಅಂದಿನ ಮುಖ್ಯಮಂತ್ರಿ ಶೇಕ್ ಅಬ್ದುಲ್ಲಾ ಜಾರಿಗೊಳಿಸಿದ್ದರು.
- ಈ ಕಾಯ್ದೆ ಪ್ರಕಾರ ರಾಜ್ಯದ ಸುರಕ್ಷತಾ ಕ್ರಮವಾಗಿ ವ್ಯಕ್ತಿಯನ್ನು ಬಂಧಿಸ ಬಹುದು ಆದರೆ ಶಿಕ್ಷಿಸುವಂತಿಲ್ಲ.
- ವಿಭಾಗೀಯ ಆಯುಕ್ತರು ಅಥವಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅಂಗೀಕರಿಸಿದ ಆಡಳಿತಾತ್ಮಕ ಆದೇಶದಿಂದ ಈ ಕಾಯ್ದೆ ಜಾರಿಗೆ ಬರುತ್ತದೆ.
- ಮಾನವ ಹಕ್ಕು ಹೋರಾಟಗಾರರು ನೀಡಿರುವ ಮಾಹಿತಿ ಪ್ರಕಾರ 1978 ರಿಂದ ಇಲ್ಲಿಯವರೆಗೆ ಸುಮಾರು 20 ಸಾವಿರ ಜನರನ್ನು ಈ ಕಾಯ್ದೆಯಡಿಯಲ್ಲಿ ಬಂಧಿಸಲಾಗಿದೆ.

ಕಾಯ್ದೆಯಲ್ಲಿ ಏನಿದೆ?

- ಈ ಕಾಯ್ದೆಯ 8ನೇ ಸೆಕ್ಷನ್ ಪ್ರಕಾರ ಸಮಾಜದ ಶಾಂತಿ ಕದಡುವ ಕಾರ್ಯದಲ್ಲಿ ಭಾಗಿಯಾದವರನ್ನು ಬಂಧಿಸಬಹುದು.
- ಈ ಸಮಾಜ ಘಾತುಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ವ್ಯಕ್ತಿಗಳನ್ನು ಬಂಧಿಸುವಂತೆ ಸರ್ಕಾರ ಆದೇಶ ನೀಡಬಹುದು.
- ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳು ಮಾಡಲು ಪ್ರಯತ್ನ ಮಾಡಿದವರನ್ನು ಬಂಧಿಸುವುದು.

ಕಾಯ್ದೆ ವಿಶೇಷ:

- ಯಾವುದೇ ವಿಚಾರಣೆ ಅಥವಾ ಆರೋಪ ಪಟ್ಟಿ ಇಲ್ಲದೆ ವ್ಯಕ್ತಿಯನ್ನು ಬಂಧಿಸಲು ಈ ಕಾಯ್ದೆ ಅನುವು ಮಾಡಿಕೊಡುತ್ತದೆ.
- ಈಗಾಗಲೇ ಪೊಲೀಸ್ ಕಸ್ಟಡಿಯಲ್ಲಿರುವ ವ್ಯಕ್ತಿ ನ್ಯಾಯಾಲಯದಿಂದ ಜಾಮೀನು ಪಡೆದ ತಕ್ಷಣ ಈ ಕಾಯ್ದೆ ಮೂಲಕ ಬಂಧಿಸಬಹುದು.
- ನ್ಯಾಯಾಲಯದಲ್ಲಿ ಆರೋಪಗಳಿಂದ ಖುಲಾಸೆಗೊಂಡು ಹೊರಬಂದು ವ್ಯಕ್ತಿಯನ್ನೂ ಬಂಧಿಸಬಹುದು.
- ಬಂಧನದ ಅವಧಿ ಎರಡು ವರ್ಷಗಳವರೆಗೆ ಮುಂದುವರಿಯಬಹುದು. ಬಂಧನಕ್ಕೊಳಗಾದ ವ್ಯಕ್ತಿಗೆ ಜಾಮೀನು ಅರ್ಜಿ ಸಲ್ಲಿಸುವ, ವಕೀಲರನ್ನು ನೇಮಿಸುವ ಹಕ್ಕಿರುವುದಿಲ್ಲ.

ಬಿಡುಗಡೆ ಹೇಗೆ ಸಾಧ್ಯ?

- ಆಡಳಿತಾತ್ಮಕ ಬಂಧನವನ್ನು ಪ್ರಶ್ನಿಸಲಿರುವ ಒಂದೇ ಮಾರ್ಗವೆಂದರೆ ಸಂಬಂಧಿಕರು ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಬಹುದು.
- ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಇಂತಹ ಅರ್ಜಿಗಳನ್ನು ಆಲಿಸುವ ಮತ್ತು ಪಿಎಸ್ಎ ರದ್ದುಗೊಳಿಸುವಂತೆ ಕೋರಿ ಅಂತಿಮ ಆದೇಶ ನೀಡುವ ಅಧಿಕಾರ ಹೊಂದಿವೆ.
- ಆದರೆ ಸರ್ಕಾರ ಪಿಎಸ್ಎ ಅಡಿ ಮತ್ತೊಂದು ಬಂಧನ ಆದೇಶ ಹೊರಡಿಸಿ ವ್ಯಕ್ತಿಯನ್ನು ಮತ್ತೊಮ್ಮೆ ಬಂಧಿಸಲು ಯಾವುದೇ ನಿರ್ಬಂಧವಿಲ್ಲ.

ಬಂಧನ ನಂತರ ಏನು ಪ್ರಕ್ರಿಯೆ?

- ಬಂಧನಕ್ಕೊಳಗಾದ ವ್ಯಕ್ತಿ ಜತೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ 5 ದಿನದೊಳಗೆ ಲಿಖಿತ ರೂಪದಲ್ಲಿ ಸಂವಹನ ನಡೆಸಿ ಬಂಧನಕ್ಕೆ ಕಾರಣವನ್ನು ತಿಳಿಸುತ್ತಾರೆ.
- ಕೆಲವು ಸಂದರ್ಭಗಳಲ್ಲಿ 10 ದಿನ ತೆಗೆದುಕೊಳ್ಳಬಹುದು. ಈ ಸಂವಹನ ಮುಖ್ಯವಾದುದು ಏಕೆಂದರೆ ಬಂಧನಕ್ಕೊಳಗಾದ ವ್ಯಕ್ತಿಗೆ ಆದೇಶದ ವಿರುದ್ಧ ತನ್ನನ್ನು ಸಮರ್ಥಿಸಿಕೊಳ್ಳಲು ಅವಕಾಶ ಸಿಗುತ್ತದೆ.
- ಹೈಕೋರ್ಟ್‌ನ ಮಾಜಿ ನ್ಯಾಯಾಧೀಶರಾಗಿರುವ ಅಧ್ಯಕ್ಷರು ಸೇರಿ ಮೂವರು ಸದಸ್ಯರನ್ನು ಒಳಗೊಂಡ ಸಲಹಾ ಮಂಡಳಿಯ ಮುಂದೆ ನಾಲ್ಕು ವಾರಗಳಲ್ಲಿ ಡಿಎಂ ಬಂಧನ ಆದೇಶ ಸಲ್ಲಿಸಬೇಕು.
- ಬಂಧಿತ ವ್ಯಕ್ತಿ ಮಾಡಿದ ತಪ್ಪನ್ನು ತಿಳಿಸಬೇಕು. ಇದೇ ವೇಳೆ ಬಂಧಿತ ವ್ಯಕ್ತಿಯೂ ಮಂಡಳಿಯ ಮುಂದೆ ವಾದ ಮಂಡಿಸಬಹುದು.
- ಬಂಧನಕ್ಕೊಳಗಾದ ದಿನಾಂಕದಿಂದ ಎಂಟು ವಾರಗಳಲ್ಲಿ, ಮಂಡಳಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತದೆ.
- ಇದು ಬಂಧನ ಸಾರ್ವಜನಿಕ ಹಿತಾಸಕ್ತಿಗೊಳಪಟ್ಟಿದೆಯೇ ಎಂದು ನಿರ್ಧರಿಸುತ್ತದೆ. ಈ ವರದಿಗೆ ಸರ್ಕಾರ ಬದ್ಧವಾಗಿರುತ್ತದೆ.

32. ಭಾರತದಲ್ಲಿ ಇ–ಸಿಗರೇಟ್ ಸಂಪೂರ್ಣ ನಿಷೇದ:

- ತಂಬಾಕು ಆಧರಿತ ಸಿಗರೇಟ್‌ಗೆ ಪರ್ಯಾಯವಾಗಿ ಬಳಕೆಯಲ್ಲಿದ್ದ ಇ–ಸಿಗರೇಟ್ (ಎಲೆಕ್ಟ್ರಾನಿಕ್ ಸಿಗರೇಟ್) ಉತ್ಪಾದನೆ, ಆಮದು, ವಿತರಣೆ ಮತ್ತು ಮಾರಾಟವನ್ನು ಸಂಪೂರ್ಣವಾಗಿ ಕೇಂದ್ರ ಸರಕಾರ ನಿಷೇಧಿಸಿದೆ.

ರಾಷ್ಟ್ರಪತಿ ಅಂಕಿತಕ್ಕೆ:

- ಸುಗ್ರೀವಾಜ್ಞೆಗೆ ರಾಷ್ಟ್ರಪತಿಗಳ ಅಂಕಿತದ ಬಳಿಕ ಅಧಿಕೃತವಾಗಿ ನಿಷೇಧ ಜಾರಿಗೆ ಬರಲಿದೆ. ಮುಂದಿನ ಸಂಸತ್ ಅಧಿವೇಶನದ ವೇಳೆ ಸರಕಾರ ಇದಕ್ಕೆ ಸಂಬಂಧಿಸಿದ ವಿಧೇಯಕವನ್ನು ಮಂಡಿಸಿ, ಅನುಮೋದನೆ ಪಡೆಯಲಿದೆ.

ಏನಿದು ಇ–ಸಿಗರೇಟ್.

- ಇದು ತಂಬಾಕು ಆಧರಿತ ಸಾಮಾನ್ಯ ಸಿಗರೇಟ್‌ಗೆ ಪರ್ಯಾಯವಾಗಿ ಬಳಸುವ ವಿದ್ಯುನ್ಮಾನ ಸಾಧನ.
- ಇ–ಸಿಗರೇಟ್‌ನಲ್ಲಿ ತಂಬಾಕು ಇರುವುದಿಲ್ಲ ಬೆಂಕಿಯನ್ನೂ ಹೊತ್ತಿಸುವ ಅಗತ್ಯವಿಲ್ಲ ರೀಚಾರ್ಜಬಲ್ ಲಿಥಿಯಂ ಬ್ಯಾಟರಿ ನೆರವಿನಿಂದ ಇದು ಕಾರ್ಯನಿರ್ವಹಿಸುತ್ತದೆ.
- ಲೈಟರ್ ಮಾದರಿ ಇರುವ ಇ–ಸಿಗರೇಟ್ ಒಳಗೆ ದ್ರವರೂಪದ ನಿಕೊಟಿನ್ ತುಂಬಲಾಗಿರುತ್ತದೆ.ಜೊತೆಗೆ ಕೆಲವು ಹಾನಿಕಾರಕ ರಾಸಾಯನಿಕಗಳನ್ನು ಸೇರಿಸಲಾಗಿರುತ್ತದೆ.
- ಬ್ಯಾಟರಿಯಿಂದ ಉಂಟಾದ ಶಾಖದ ನೆರವಿಂದ ದ್ರವರೂಪದ ನಿಕೊಟಿನ್ ಹಬೆಯಾಗಿ ಪರಿವರ್ತಿಸಿ ಬಾಯಿಯ ಮೂಲಕ ಸಾಮಾನ್ಯ ಸಿಗರೇಟಿ ನಂತೆಯೇ ಎಳೆದುಕೊಳ್ಳಲಾಗುತ್ತದೆ.
- ತಂಬಾಕು ಮಾತ್ರವಲ್ಲದೆ, ಬೇರೆ ಬೇರೆ ರೀತಿಯ ಫ್ಲೇವರ್‌ಗಳಲ್ಲಿ ಇದನ್ನು ತಯಾರಿಸಲಾಗುತ್ತದೆ.

ಆರೋಗ್ಯದ ಮೇಲೆ ಪರಿಣಾಮವೇನು?

- ಮೆದುಳು: ಆಹ್ಲಾದ ನೀಡುವ ಕೆಮಿಕಲ್‌ಗಳು ಮೆದುಳಿನಲ್ಲಿ ಬಿಡುಗಡೆಯಾಗುವಂತೆ ನಿಕೊಟಿನ್ ಮಾಡುತ್ತದೆ. ಇದರಿಂದ ಸಿಗುವ ಮಾದಕತೆಯು ಚಟವಾಗಿಬಿಡುತ್ತದೆ. ಕೆಲವರಲ್ಲಿ ತಲೆಸುತ್ತು ಅಥವಾ ಹೊಯ್ದಾಟ ಕಾಣಿಸುತ್ತದೆ.
- ಶ್ವಾಕೋಶ: ನಿಕೊಟಿನ್‌ನ ವೇಗದ ಉಸಿರಾಟಕ್ಕೆ ಕಾರಣವಾಗುತ್ತದೆ. ಶಾಶ್ವತ ಶ್ವಾಸಕೋಶ ಹಾನಿ, ಲಂಗ್ ಕ್ಯಾನ್ಸರ್‌ಗೂ ಕಾರಣವಾಗಬಹುದು.
- ಹೃದಯ: ಹೃದಯ ಬಡಿತ ಹೆಚ್ಚಾಗಿ, ಹೃದಯದ ಮೇಲೆ ಒತ್ತಡ ಹೆಚ್ಚುತ್ತದೆ. ದೀರ್ಘಕಾಲ ಬಳಕೆಯಿಂದ ಹೃದಯಾಘಾತದ ಸಾಧ್ಯತೆ.
- ವರ್ತನೆ: ಇ–ಸಿಗರೇಟ್‌ನಲ್ಲಿರುವ ನಿಕೊಟಿನ್ ಕೊನೆಗೆ ಗಾಂಜಾದಂತಹ ಮತ್ತಷ್ಟು ಮಾದಕ ವಸ್ತುಗಳತ್ತ ಮನಸ್ಸನ್ನು ಸೆಳೆಯಬಹುದು. ಭಾವನೆಗಳ ನಿಯಂತ್ರಣ ಅಸಾಧ್ಯವಾಗುತ್ತದೆ, ಏಕಾಗ್ರತೆ ಕೊರತೆ, ಮುಂಗೋಪ, ಚಂಚಲತೆ.
- ವಿಷ ಪ್ರಾಷಣ: ಇ–ಸಿಗರೆಟ್‌ನಲ್ಲಿರುವ ದ್ರವರೂಪದ ನಿಕೊಟಿನ್ ದೇಹಕ್ಕೆ ಸೇರಿದರೆ, ಅದು ವಿಷವಾಗಿ ಪರಿಣಮಿಸಿ ಸಾವಿಗೆ ದಾರಿಯಾಗಬಹುದು.

33. ಭೂ ಆಸ್ತಿಗಳಿಗೆ ಆಧಾರ್ ಮಾದರಿಯ ಸಂಖ್ಯೆ:

- ಜಮೀನು, ನಿವೇಶನಗಳಿಗೆ ಆಧಾರ್ ಮಾದರಿಯ ವಿಶಿಷ್ಟ ಗುರುತಿನ ಸಂಖ್ಯೆ ನೀಡುವ ವ್ಯವಸ್ಥೆ ಸದ್ಯದಲ್ಲಿಯೇ ಜಾರಿಗೆ ಬರಲಿದೆ.

- ಇದರಿಂದಾಗಿ ಆಸ್ತಿಗಳ ಮಾಲೀಕತ್ವಕ್ಕೆ ಸಂಬಂಧಿಸಿದ ವಂಚನೆ ಮತ್ತು ಆಸ್ತಿ ವಿಕ್ರಯದಲ್ಲಿ ಪಾರದರ್ಶಕತೆ ತರಲು ಸಾಧ್ಯವಾಗಲಿದೆ.

ವಿಶಿಷ್ಟ ಸಂಖ್ಯೆಯಲ್ಲೇನಿರುತ್ತದೆ?

- ಈ ಸಂಖ್ಯೆಯೊಂದಿಗೆ ಭೂ ಆಸ್ತಿಯಿರುವ ರಾಜ್ಯ, ಜಿಲ್ಲೆ, ತಾಲೂಕು, ಬ್ಲಾಕ್, ಬಡವಾಣೆ/ಬೀದಿಯ ಮಾಹಿತಿ, ಪ್ಲಾಟ್‌ನ ಅಳತೆ ಮತ್ತು ಮಾಲೀಕತ್ವದ ವಿವರಗಳು ಇರಲಿವೆ. ರಿಯಲ್ ಎಸ್ಟೇಟ್ ವ್ಯವಹಾರಗಳಿಗೆ, ತೆರಿಗೆ ಮತ್ತು ಭೂಮಾಲೀಕತ್ವದ ವಿವಾದಗಳನ್ನು ಇತ್ಯರ್ಥಗೊಳಿಸಲು ಈ ವಿಶಿಷ್ಟ ಸಂಖ್ಯೆ ವ್ಯವಸ್ಥೆಯು ಸಹಾಯಕವಾಗಲಿದೆ.

ಪ್ರಮುಖಾಂಶಗಳು

- ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಪಾರದರ್ಶಕತೆ ಹಾಗೂ ಆಸ್ತಿ ತೆರಿಗೆ ಪಾವತಿ ಸುಲಭವಾಗಲಿದೆ.
- ಖಾಲಿ ಸೈಟು ಮತ್ತು ಮನೆ ಖರೀದಿದಾರರಿಗೆ ತಾವು ಖರೀದಿಸಲು ಬಯಸುವ ಆಸ್ತಿಯ ವಿವರಗಳನ್ನು ಬೇಗ ಪಡೆಯಲು ಸಾಧ್ಯ.
- ಆಸ್ತಿಯ ಹಕ್ಕುದಾರರು, ಸಂಬಂಧಪಟ್ಟ ದಾಖಲೆಗಳು, ಆ ಆಸ್ತಿಗಳ ಹೆಸರಲ್ಲಿ ಇರುವ ಕಾನೂನು ವ್ಯಾಜ್ಯಗಳ ಸಂಪೂರ್ಣ ಮಾಹಿತಿ ಪಡೆಯಲು ಸಾಧ್ಯ.

34. ಭಾರತ ಅತಿದೊಡ್ಡ 5 ಕೇಂದ್ರ ಜೈಲುಗಳು:

- ತಿಹಾರ್ ಜೈಲು (ದಿಲ್ಲಿ)
- ಯೆರವಾಡಾ ಕೇಂದ್ರ ಜೈಲು (ಮಹಾರಾಷ್ಟ್ರ)
- ಪುಜಲ್ ಕೇಂದ್ರ ಕಾರಾಗೃಹ (ತಮಿಳುನಾಡು)
- ರಾಜಮಂಡ್ರಿ ಕೇಂದ್ರ ಕಾರಾಗೃಹ (ಆಂಧ್ರಪ್ರದೇಶ)
- ನೈನಿ ಕೇಂದ್ರ ಕಾರಾಗೃಹ (ಉತ್ತರ ಪ್ರದೇಶ)

ಸದ್ಯ ಸುದ್ದಿಯಲ್ಲಿರುವ ತಿಹಾರ್ ಜೈಲಿನ ಬಗ್ಗೆ :

- ದಿಲ್ಲಿಯಲ್ಲಿರುವ ತಿಹಾರ್ ಜೈಲು ಹಲವಾರು ವಿಐಪಿಗಳ ಸೆರಮನೆಯಾಗಿದೆ. 1957ರಲ್ಲಿ ಸ್ಥಾಪನೆ ಮಾಡಲಾದ ಈ ಕಾರಾಗೃಹದ ಸಾಮರ್ಥ್ಯ 6250 ಇದ್ದು, ಸದ್ಯ 10 ಸಾವಿರಕ್ಕೂ ಅಧಿಕ ಕೈದಿಗಳಿದ್ದಾರೆ.
- ಸುಮಾರು ಮೂರು ಕಿಲೋಮೀಟರ್ ವಿಸ್ತಾರವಿದೆ. ದಕ್ಷಿಣ ವಿಷ್ಯಾದಲ್ಲಿಯೇ ದೊಡ್ಡ ಜೈಲು ಸಂಕೀರ್ಣ ಹೊಂದಿರುವ ಸೆರಮನೆ ಇದು ಎನ್ನುವ ಹೆಗ್ಗಳಿಕೆ ಇದೆ.

35. ಉನ್ನತ ಶಿಕ್ಷಣದಲ್ಲಿ ಹೆಣ್ಣು ಮಕ್ಕಳೇ ಹೆಚ್ಚು:

- ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಬಿಡುಗಡೆಗೊಳಿಸಿರುವ 'ಉನ್ನತ ಶಿಕ್ಷಣ' ಕುರಿತಾದ ಅಖಿಲ ಭಾರತ ಸಮೀಕ್ಷೆಯ ವರದಿ ಈ ಬಗ್ಗೆ ಬೆಳಕು ಚೆಲ್ಲಿದೆ.
- ದೇಶಾದ್ಯಂತ ಉನ್ನತ ಶಿಕ್ಷಣದಲ್ಲಿ ಲಿಂಗಾನುಪಾತ ಹೆಚ್ಚುತ್ತಿರುವ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.
- ವಿಶೇಷವಾಗಿ ಉತ್ತರ ಪ್ರದೇಶ ಮತ್ತು ಕರ್ನಾಟಕದ ಬೆಳವಣಿಗೆಯನ್ನು ಒತ್ತಿ ಹೇಳಲಾಗಿದೆ. 2017–18ರಲ್ಲಿ ನಾನಾ ವಿವಿಗಳಿಗೆ ದಾಖಲಾಗುವ ಯುವತಿಯರ ಪ್ರಮಾಣ 47.6% ಇತ್ತು. 2018–19ರಲ್ಲಿ ಈ ಪ್ರಮಾಣವು 48.6ಕ್ಕೆ ಹೆಚ್ಚಿದೆ.
- 90,000 ಉತ್ತರ ಪ್ರದೇಶದಲ್ಲಿ ಯುವಕರಿಗಿಂತ ಯುವತಿಯರ ದಾಖಲಾತಿಯಲ್ಲಿ ಹೆಚ್ಚಳ ಪ್ರಮಾಣ.
- 1,600 ಕರ್ನಾಟಕದಲ್ಲಿ ಯುವಕರಿಗಿಂತ ಯುವತಿಯರ ವಿವಿ ದಾಖಲಾತಿಯಲ್ಲಿ ಹೆಚ್ಚಳ.

36. ವಿಮಾನ ಪ್ರಮಾಣ ಮೇಲ್ವಿಚಾರಣೆಗೆ ಸೂಚನೆ:

- ದೇಶದಲ್ಲಿ ವಿಮಾನಯಾನ ದರವನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಲು ಹೊಸ ಕಾರ್ಯವಿಧಾನ ರೂಪಿಸಲು ನಾಗರಿಕ ವಿಮಾನಯಾನ ಸಚಿವ ಹರ್ದೀಪ್ ಸಿಂಗ್ ಪುರಿ ಆದೇಶಿಸಿದ್ದಾರೆ.
- ಇದರಿಂದ ನಾಗರಿಕ ವಿಮಾನಯಾನ ಸಚಿವಾಲಯ ಮತ್ತು ಡೈರಕ್ಟೋರೇಟ್ ಜನರಲ್ ಆಫ್ ಸಿವಿಲ್ ಏವಿಯೇಷನ್

(ಡಿಜಿಸಿಎ) ಗೆ ಈ ಕುರಿತು ಮೇಲ್ವಿಚಾರಣೆ ನಡೆಸಲು ಸಾಧ್ಯವಾಗುತ್ತದೆ.

- ವಿಮಾನಯಾನ ಬೆಲೆ ಎಷ್ಟು ಪ್ರಸ್ತುತವಾಗಿದೆ, ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಮತ್ತು ಈ ಬಗ್ಗೆ ವಿಮಾನಯಾನ ಸಿಇಒಗಳೊಂದಿಗೆ ಚರ್ಚಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

37. ಅನುಷ್ಕಾ ಶರ್ಮಾ:

- ಫಾರ್ಚುನ್ ಇಂಡಿಯಾ ನಿಯತಕಾಲಿಕದ 2019ನೇ ಸಾಲಿನ ಅತ್ಯಂತ ಪ್ರಭಾವಶಾಲಿ ಮಹಿಳೆಯರ ಪಟ್ಟಿಯಲ್ಲಿ ಸ್ಥಾನ ಪಡೆಯುವ ಮೂಲಕ ಅನುಷ್ಕಾ ಶರ್ಮಾ ಸುದ್ದಿಯಲ್ಲಿದ್ದಾರೆ.
- 2008ರಲ್ಲಿ ತೆರೆ ಕಂಡ 'ರಬ್ನೆ ಬನಾ ಡಿ ಜೋಡಿ' ಚಿತ್ರದ ಮೂಲಕ ಬಾಲಿವುಡ್ ಪ್ರವೇಶಿಸಿದ ಅನುಷ್ಕಾ ಶರ್ಮಾ ಅವರು ಪ್ರಭಾವಿ ಮಹಿಳೆಯರ ಪಟ್ಟಿಯಲ್ಲಿ 39ನೇ ಸ್ಥಾನ ಪಡೆದಿದ್ದಾರೆ. ಮತ್ತು ಈ ಪಟ್ಟಿಯಲ್ಲಿ ಸ್ಥಾನ ಪಡೆದ ಅತ್ಯಂತ ಕಿರಿಯ ಮಹಿಳೆ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

38. ಸಿನಿಮಾ ಪೈರಸಿ:



- ಸಿನಿಮಾ ಮತ್ತು ಮನರಂಜನೆ ಕ್ಷೇತ್ರಕ್ಕೆ ಪೈರಸಿ ಎಂಬುದು ದೊಡ್ಡ ಕಂಟಕವಾಗಿದ್ದು, ಹೊಸ ಸಿನಿಮಾ ಬಿಡುಗಡೆಯಾದ ಕೆಲವೇ ಕ್ಷಣಗಳಲ್ಲಿ ಆನ್ ಲೈನ್‌ನ ವಿವಿಧ ಪೈರಸಿ ತಾಣಗಳಲ್ಲಿ ಸಿನಿಮಾ ಪ್ರತಿ ಲಭ್ಯವಾಗುತ್ತದೆ.

ಪೈರಸಿ ಎಂದರೇನು?

- ಹೊಸದಾಗಿ ಬಿಡುಗಡೆಯಾದ ಸಿನಿಮಾಗಳನ್ನು ಚಿತ್ರಮಂದಿರದಿಂದಲೇ ವಿಡಿಯೋ ರೆಕಾರ್ಡ್ ಮಾಡಿ ವಿವಿಧ ಮೂಲಗಳ ಮೂಲಕ ಹರಿಯಬಿಡುವ ವ್ಯವಸ್ಥಿತ ಜಾಲವನ್ನು ಫಿಲ್ಮ್ ಪೈರಸಿ ಎಂದು ಕರೆಯಲಾಗುತ್ತದೆ.
- ವಿಡಿಯೊ, ಕೇಬಲ್ ಮತ್ತು ಡಿವಿಡಿ/ಸಿಡಿ, ಪೇಸ್‌ಬುಕ್‌ನಲ್ಲಿ ಸಿನಿಮಾದ ಲಿಂಕ್, ತಮಿಳುರಾಕರ್ಸ್ ಹೀಗೆ ನಾನಾ ರೂಪದಲ್ಲಿ ಸಿನಿಮಾದ ಪೈರಸಿಯನ್ನು ನಡೆಸಲಾಗುತ್ತದೆ.

3 ವರ್ಷ ಜೈಲು, 10 ಲಕ್ಷದಂಡ

- ಕೇಂದ್ರ ಸರಕಾರ ಸಿನಿಮಾ ಟೋಗ್ರಫಿ ಕಾಯ್ದೆ 1952ಕ್ಕೆ ತಿದ್ದುಪಡಿ ತಂದಿದ್ದು, ತಂತ್ರಜ್ಞಾನವನ್ನು ದುರುಪಯೋಗ ಮಾಡಿಕೊಂಡು, ಅದರ ಮೂಲಕ–ಉದ್ಯಮಕ್ಕೆ ನಷ್ಟ ಉಂಟುಮಾಡುವವರಿಗೆ 10 ಲಕ್ಷ ರೂ. ದಂಡದ ಜತೆಗೆ 3 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಲಿದೆ.

ತಮಿಳುರಾಕರ್ಸ್ ಎಂದರೇನು?

- 'ತಮಿಳುರಾಕರ್ಸ್' ಎಂಬುದು ವೆಬ್‌ಸೈಟ್ ಇಲ್ಲಿ ಹೊಸ ಹೊಸ ಸಿನಿಮಾಗಳು ಬಹುಬೇಗ ಸಿಗುತ್ತವೆ.
- 2007ರಲ್ಲಿ ಈ ವೆಬ್‌ಸೈಟ್ ಆರಂಭವಾಯಿತು. ಒಮ್ಮೆ ತಮಿಳುನಾಡು ಸರ್ಕಾರ ಈ ವೆಬ್‌ಸೈಟ್ ಬ್ಲಾಕ್ ಮಾಡಿತ್ತು.
- ಆಗ ಸೂಪರ್ ಸ್ಟಾರ್ ರಜನೀಕಾಂತ್ ಅವರ 'ಶಿವಾಜಿ' ಸಿನಿಮಾ ತೆರೆಕಂಡಿತ್ತು. ಆದರೆ ಈ ವೆಬ್ ಸೈಟ್ ಅಡ್ಮಿನ್ ಮತ್ತೊಂದು ಹೊಸ ಸೈಟ್ ಕ್ರಿಯೇಟ್ ಮಾಡಿದರು.
- ಇದನ್ನು ಯಾರಿಗೂ ತಿಳಿಸದೇ ಗುಪ್ತವಾಗಿ ತಮ್ಮ ಕೆಲಸ ಸಾದಿಸಿಕೊಳ್ಳುತ್ತ ಹೋದರು. ಅಷ್ಟೇ ಅಲ್ಲದೆ ತಮಿಳುನಾಡು ಸರ್ಕಾರದ ವಿರುದ್ಧವೂ ಸಮರ ಸಾರಿದ್ದರು.
- 2018ರಂದು ಈ ಗುಂಪಿನ ಐವರು ಜೈಲು ಸೇರಿದ್ದರು.

ಟಾರ್ಗೆಟ್ ಏನು?

- ಕನ್ನಡದ ಎಷ್ಟೋ ಸಿನಿಮಾಗಳು ಇವರಿಗೆ ಬಲಿಯಾಗಿವೆ. ಯಾವುದೇ ಪೊಲೀಸ್ ಏಜೆನ್ಸಿಗಳಿಂದಾನೂ ಇವರನ್ನು ಮಟ್ಟಹಾಕಲಾಗಲಿಲ್ಲ.
- ಬೇರೆ ಬೇರೆ ದೇಶಗಳ ಸರ್ವರ್ ಗಳಿಂದ ತಮ್ಮ ಕೆಲಸವನ್ನು ಇವರು ಸಾಧಿಸಬಲ್ಲರು. ಕಾಪಿರೈಟೆಡ್ ಜನಪ್ರಿಯ ಟಿವಿ ಶೋ, ಸಿರೀಸ್‌ಗಳು, ಆಡಿಯೋವನ್ನು ಕೂಡ ಇವರು ಪೈರಸಿ ಮಾಡಿ ವೆಬ್‌ಸೈಟ್ ನಲ್ಲಿ ಹರಿಬಿಡಲು ಎತ್ತಿದ ಕೈ.

ಪೈರಸಿ ಮಾರುಕಟ್ಟೆ

- ಭಾರತದಲ್ಲಿ ಸಿನಿಮಾ ಮಾರುಕಟ್ಟೆ 14 ಸಾವಿರ ಕೋಟಿ ವಹಿವಾಟು ನಡೆಸುಗತ್ತಿದ್ದು, 2025ರ ವೇಳೆಗೆ 25 ಸಾವಿರ ಕೋಟಿಯನ್ನು ದಾಟುವ ನಿರೀಕ್ಷೆ ಇದೆ.
- ಆದರೆ 2016–17ರ ವರದಿ ಪ್ರಕಾರ ಭಾರತದಲ್ಲಿ ಪೈರೇಟೆಡ್ ಚಿತ್ರಗಳ ಒಟ್ಟು ಮಾರು ಕಟ್ಟೆ ಮೌಲ್ಯ 18 ಸಾವಿರ ಕೋಟಿಯಿದ್ದು, ಇಡೀ ಸಿನಿಮಾ ಇಂಡಸ್ಟ್ರೀಗಿಂತ ವೇಗವಾಗಿ ಬೆಳೆಯುತ್ತಿದೆ.

39. ಪ್ರಮಾಣ ವಚನ ಸ್ವೀಕರಿಸಿದ ನೂತನ ನ್ಯಾಯಮೂರ್ತಿಗಳು :

- ಸುಪ್ರೀಂ ಕೋರ್ಟ್‌ನ ನಾಲ್ವರು ನೂತನ ನ್ಯಾಯ ಮೂರ್ತಿಗಳು ಪ್ರಮಾಣ ವಚನ ಸ್ವೀಕರಿಸಿದ್ದು ಸರ್ವೋಚ್ಚ ನ್ಯಾಯಾಲಯದ ನ್ಯಾಯ ಮೂರ್ತಿಗಳ ಸಂಖ್ಯೆ 34ಕ್ಕೆ ಏರಿಕೆಯಾಗಿದೆ.
- ಕೃಷ್ಣನ್ ಮುರಾರಿ. ಎಸ್ ರವೀಂದ್ರ ಭಟ್, ವಿ.ರಾಮಸುಬ್ರ ಮಣಿಯನ್ ಮತ್ತು ಹೃಷಿಕೇಶ್ ರಾಯ್ ಪ್ರಮಾಣ ಸ್ವೀಕರಿಸಿದ ನ್ಯಾಯ ಮೂರ್ತಿಗಳು.
- ನ್ಯಾಯಮೂರ್ತಿಗಳಾದ ಮುರಾರಿ, ಭಟ್, ರಾಮಸುಬ್ರಮಣಿಯನ್ ಮತ್ತು ರಾಯ್ ಅವರು ಕ್ರಮವಾಗಿ ಪಂಜಾಬ್, ರಾಜಸ್ಥಾನ, ಕೇರಳ ಮತ್ತು ಹಿಮಾಚಲ ಪ್ರದೇಶ ಹೈಕೋರ್ಟ್‌ಗಳ ಸಿಜೆ ಆಗಿದ್ದರು.

40. ಉಪನ್ಯಾಸಕ ವೃತ್ತಿ ಪುರುಷರೇ ಅಧಿಕ:

- ದೇಶದಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆ (ಕಾಲೇಜು ಮತ್ತು ವಿವಿ)ಗಳಲ್ಲಿ ಮಹಿಳಾ ಉಪನ್ಯಾಸಕಿಯರಿಗಿಂತಾ ಪುರುಷ ಉಪನ್ಯಾಸಕರೇ ಹೆಚ್ಚಾಗಿದ್ದಾರೆ.
- ಬೋಧಕೇತರ ಹುದ್ದೆಗಳಲ್ಲೂ ಪುರುಷರೇ ಪ್ರಧಾನವಾಗಿದ್ದಾರೆಂದು 'ಆಲ್ ಇಂಡಿಯಾ ಸರ್ವೇ ಆಫ್ ಹೈಯರ್ ಎಜುಕೇಷನ್' (ಎಐಎಸ್‌ಎಚ್‌ಇ) ತಿಳಿಸಿದೆ.

41. ದೀಪಾವಳಿಗೆ ಬರಲಿದೆ ಹಸಿರು ಪಟಾಕಿ :

ಹಸಿರು ಪಟಾಕಿ ಎಂದರೇನು?

- ಕಡಿಮೆ ಬೆಳಕು ಮತ್ತು ಶಬ್ದ ಹೊರಸೂಸುವ, ಸಿಡಿತದ ಬಳಿಕ ಕಡಿಮೆ ಪ್ರಮಾಣದ ನೈಟ್ರೋಜನ್ ಆಕ್ಸೈಡ್, ಸಲ್ಫರ್ ಡೈ ಆಕ್ಸೈಡ್ ಹೊರಚೆಲ್ಲುವ ಪಟಾಕಿಗಳನ್ನು ಹಸಿರು ಪಟಾಕಿ ಎಂದು ಪರಿಗಣಿಸಲಾಗುತ್ತದೆ.

ಸುಪ್ರೀಂ ತೀರ್ಪಿನಲ್ಲಿ ಏನಿತ್ತು?

- 2018ರಲ್ಲಿ ದಿಲ್ಲಿಯ ನಿಗದಿತ ಜಾಗಗಳಲ್ಲಿ ಸಾಮೂಹಿಕವಾಗಿ ಪಟಾಕಿ ಸಿಡಿಸಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು.
- ಇದಕ್ಕಾಗಿ ಸ್ಥಳ ಗುರುತಿಸಬೇಕೆಂದು ನಿರ್ದೇಶನ ಮಾಡಿತ್ತು, ದೀಪಾವಳಿಯಲ್ಲಿ ರಾತ್ರಿ 8 ರಿಂದ 10 ಗಂಟೆವರೆಗೆ ಮಾತ್ರ ಪಟಾಕಿ ಸಿಡಿಸಬೇಕೆಂದು ಕೋರ್ಟ್ ಆದೇಶ ನೀಡಿತ್ತು.

42. ಲಡಾಕ್ ಡ್ಯಾನ್ಸ್ ಗಿನ್ನಿಸ್ ರೆಕಾರ್ಡ್:

- ಲಡಾಕ್‌ನ ರಾಯಲ್ ಡ್ಯಾನ್ಸ್ ಎಂದು ಕರೆಯಲ್ಪಡುವ 'ಶೊಂಡೋಲ್ ನೃತ್ಯ' ಗಿನ್ನಿಸ್ ಬುಕ್‌ನಲ್ಲಿ ದಾಖಲೆ ಬರೆದಿದೆ.
- ಶೋಂಡೋಲ್ ಪ್ರಸಿದ್ಧ ಲಡಾಕಿ ನೃತ್ಯವಾಗಿದ್ದು, ಕಲಾವಿದರು ಹಿಂದೆ ಲಡಾಕ್ ರಾಜನಿಗಾಗಿ ಈ ನೃತ್ಯ ಪ್ರದರ್ಶನ ನೀಡುತ್ತಿದ್ದರು.
- ಹೆಮಿಸ್ ಮಠದಲ್ಲಿ ಬೌದ್ಧರ ನರೋಪಾ ಉತ್ಸವದ ಕೊನೆಯ ದಿನ ಸೆ.16ರಂದು 408 ಮಹಿಳೆಯರು ಸಾಂಪ್ರದಾಯಿಕ ವೇಷಭೂಷಣದಲ್ಲಿ ಭಾಗವಹಿಸಿ ನೃತ್ಯ ಪ್ರದರ್ಶಿಸಿದ್ದು, ದಾಖಲೆ ನಿರ್ಮಿಸಿದೆ.
- 2018ರಲ್ಲಿ 299 ಕಲಾವಿದರು ಈ ನೃತ್ಯ ಪ್ರದರ್ಶಿಸಿದ್ದರು. ಈ ವರ್ಷದ ನೃತ್ಯವನ್ನು ಲಿವ್ ಟು ಲವ್ ಇಂಡಿಯಾ, ದ್ರುಕ್ಪಾ ಚಾರಿಟಬಲ್ ಟ್ರಸ್ಟ್ ಹಾಗೂ ಯಂಗ್ ದ್ರುಕ್ಪಾ ಅಸೋಸಿಯೇಷನ್ ಆಯೋಜಿಸಿತ್ತು.

43. ಸರ್ದಾರ್ ಏಕತಾ ಪ್ರಶಸ್ತಿ ಸ್ಥಾಪನೆ:

- ದೇಶದ ಏಕತೆ ಮತ್ತು ಸಮಗ್ರತೆಗೆ ಸೇವೆ ಸಲ್ಲಿಸಿದವರನ್ನು ಗೌರವಿಸುವ ಸಲುವಾಗಿ "ಸರ್ದಾರ್ ಪಟೇಲ್ ನ್ಯಾಷನಲ್ ಯೂನಿಟಿ ಅವಾರ್ಡ್" ಸ್ಥಾಪಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.

- ಈ ಪ್ರಶಸ್ತಿಯು ಪದಕ, ಪ್ರಮಾಣಪತ್ರವನ್ನು ಹೊಂದಿದ್ದು, ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳ ಪೈಕಿ ಒಂದಾಗಿ ಗುರುತಿಸಿಕೊಳ್ಳಲಿದೆ.
- ಸರ್ದಾರ್ ಪಟೇಲರ ಜಯಂತಿ ದಿನವಾದ ಅಕ್ಟೋಬರ್ 31ರಂದು ಪ್ರಶಸ್ತಿ ಘೋಷಣೆ ಆಗಲಿದೆ. ಅನಿವಾರ್ಯ ಸಂದರ್ಭದ ಹೊರತಾಗಿ ಮರಣೋತ್ತರವಾಗಿ ಈ ಪ್ರಶಸ್ತಿ ನೀಡಲಾಗುವುದಿಲ್ಲ. ಪ್ರತಿ ವರ್ಷ ಗರಿಷ್ಠ ಮೂವರಿಗೆ ಈ ಪ್ರಶಸ್ತಿ ಕೊಟ್ಟು ಗೌರವಿಸಬಹುದು.
- ಪ್ರಶಸ್ತಿ ಪತ್ರಕ್ಕೆ ರಾಷ್ಟ್ರಪತಿಯವರ ಅಂಕಿತ ಇರಲಿದ್ದು, ಪದ್ಮಪುರಸ್ಕಾರಗಳ ಜತೆಗೆ ಪ್ರದಾನ ಮಾಡಲಾಗುತ್ತದೆ.
- ಅರ್ಹರ ಆಯ್ಕೆಗೆ ಸಮಿತಿಯನ್ನು ಪ್ರಧಾನಮಂತ್ರಿ ಸ್ಥಾಪಿಸಲಿದ್ದು, ಅದರಲ್ಲಿ ಕ್ಯಾಬಿನೆಟ್ ಸೆಕ್ರಟರಿ, ಪ್ರಧಾನಿಯವರ ಮುಖ್ಯಕಾರ್ಯದರ್ಶಿ, ರಾಷ್ಟ್ರಪತಿಯವರ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ ಮತ್ತು ಪ್ರಧಾನಿ ಆಯ್ಕೆ ಮಾಡಿದ ಇತರೆ 3–4 ಪ್ರಸಿದ್ಧರು ಇರಲಿದ್ದಾರೆ ಎಂದು ಹೇಳಿಕೆ ತಿಳಿಸಿದೆ.

44. ಅರುಣಾಚಲದ ಫೋನುಂಗ್ ದೋಮಿಂಗ್ ಮೊದಲ ಮಹಿಳಾ 'ಲೆಫ್ಟಿನೆಂಟ್ ಕರ್ನಲ್':

- ಭಾರತೀಯ ಸೇನೆಯಲ್ಲಿ ಈವರೆಗೆ ಮಹಿಳೆಯರಿಗೆ ಅವಕಾಶಗಳು ಮತ್ತು ಪದೋನ್ನತಿಗಳು ದೊರಕುವುದು

ಕಷ್ಟಕರವಾದ ಸಂದರ್ಭದಲ್ಲೇ ತಮ್ಮ ಕಾರ್ಯಕ್ಷಮತೆ ಮತ್ತು ಸೇವಾ ತತ್ಪರತೆಗಳ ಮೂಲಕ ಪೋನುಂಗ್ ಉನ್ನತ ಹಂತಕ್ಕೇರಿರುತ್ತಾ ಬಂದರು.

- ತಮ್ಮ ಸೇವಾ ಅವಧಿಯಲ್ಲಿ ಎಂದೂ ಹಿಂದೆ ಬೀಳಲಿಲ್ಲ. ಗುಡ್ಡಗಾಡು ಪ್ರದೇಶದಿಂದ ಬಂದ ಇವರಿಗೆ ಕಷ್ಟಕರವಾದ ಸವಾಲುಗಳೇ ವರವಾಗಿ ಪರಿಣಮಿಸಿದವು.
- ಇದರ ಫಲವಾಗಿ 2014ರಲ್ಲಿ ಕಾಂಗೋದಲ್ಲಿ ವಿಶ್ವಸಂಸ್ಥೆಯ ಶಾಂತಿ ಪಾಲನಾ ಪಡೆಯಲ್ಲಿ ಭಾರತದ ಪ್ರತಿನಿಧಿಯಾಗಿ ಆಯ್ಕೆಗೊಂಡು 5 ವರ್ಷಗಳ ಕಾಲ ಸೇವೆ ಸಲ್ಲಿಸಿ ಸೈ ಎನಿಸಿಕೊಂಡರು.
- ಫೋನುಂಗ್, ಪೂನಾದಲ್ಲಿ ಹೊಸ ಅಧಿಕಾರ ಸ್ವೀಕರಿಸಿದ್ದಾರೆ. ಭಾರತೀಯ ವಾಯುಪಡೆಯಲ್ಲಿ ಇತ್ತೀಚೆಗಷ್ಟೇ ಶೈಲಜಾ ಧಾಮಿ ಮೊದಲ ಮಹಿಳಾ ಫ್ಲೈಟ್ ಕಮಾಂಡರ್ ಆಗಿದ್ದು, ಮಿಂಟಿ ಅಗರ್‌ವಾಲ್ ಸ್ಕ್ವಾಡ್ರನ್ ಲೀಡರ್ ಆಗಿದ್ದು, ಈ ಸಾಲಿಗೆ ಫೋನುಂಗ್ ಸಹ ಸೇರ್ಪಡೆಯಾಗಿದ್ದಾರೆ.

45. ಸಾಮಾಜಿಕ ಜಾಲತಾಣಗಳಿಗೆ ಕಡಿವಾಣ:

- ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವ ಕೆಲ ಸಂದೇಶಗಳ ಅಥವಾ ಆನ್‌ಲೈನ್ ವಿಷಯದ ಮೂಲ ಪತ್ತೆ ಹಚ್ಚಲು ಸಾಧ್ಯವಾಗದಿರುವ ಬಗ್ಗೆ ದೀಪಕ್ ಗುಪ್ತಾ ಮತ್ತು ಅನಿರುದ್ಧ ಬೋಸ್ ನೇತೃತ್ವದ ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ.
- ಈ ನಿಟ್ಟಿನಲ್ಲಿ ಕೇಂದ್ರ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಪೀಠ ಹೇಳಿದೆ.
- ವಾಟ್ಸ್‌ಆ್ಯಪ್, ಫೇಸ್‌ಬುಕ್, ಟ್ವಿಟರ್ ಸೇರಿದಂತೆ ಕೆಲವು ಸಾಮಾಜಿಕ ಜಾಲತಾಣಗಳು ಸಮಾಜದಲ್ಲಿ ಶಾಂತಿ ಕದಡುವ, ಅಪರಾಧಕ್ಕೆ ಎಡೆಮಾಡಿಕೊಡು ವಂತಹ ಸುಳ್ಳು, ನಿಂದನಾತ್ಮಕ, ಅವಹೇಳನಕಾರಿ ಸಂದೇಶಗಳ ಹಾಗೂ ಆನ್‌ಲೈನ್ ವಿಷಯಗಳ ಮೂಲವನ್ನು ಪತ್ತೆ ಹಚ್ಚುವುದು ಕಷ್ಟಸಾಧ್ಯ ಎಂದು ಕೈಚಲ್ಲಿ ಕುಳಿತುಕೊಳ್ಳುತ್ತಿರುವುದು ಪ್ರಶ್ನಾರ್ಹವಾಗಿದೆ.
- ತಂತ್ರಜ್ಞಾನ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ಯಾವುದೇ ನಿರ್ಣಯ ತೆಗೆದುಕೊಳ್ಳುವುದು ಸೂಕ್ತವಲ್ಲ, ಕೇಂದ್ರವೇ ತುರ್ತು ಕ್ರಮಕೈಗೊಳ್ಳಬೇಕು ಎಂದಿದೆ.

ತಂತ್ರಜ್ಞಾನದ ಮೂಲಕವೇ ಕಡಿವಾಣ:

- ಸಾಮಾಜಿಕ ಜಾಲತಾಣಗಳಲ್ಲಿನ ಮಾಹಿತಿ ಮತ್ತು ದತ್ತಾಂಶಗಳ ಕುರಿತು ಕೇಂದ್ರ ಸರ್ಕಾರ ಸೂಕ್ತ ಮತ್ತು ಸಮರ್ಪಕ ನೀತಿ ರೂಪಿಸಬೇಕು.
- ಸಾಮಾಜಿಕ ಜಾಲತಾಣಗಳ ದುರ್ಬಳಕೆ ವಿಚಾರಕ್ಕೆ ಸಂಬಂಧಿಸಿದರೆ ಸುಮ್ಮನಿರಲು ಸಾಧ್ಯವಿಲ್ಲ. ತಂತ್ರಜ್ಞಾನದ ಮೂಲಕವೇ ಅದಕ್ಕೆ ಕಡಿವಾಣ ಹಾಕಬೇಕಿದೆ.

ಆಧಾರ್ ಲಿಂಕ್ ಪ್ರಕರಣ ವಿಚಾರಣೆ:

- ಆಧಾರ್ ಜತೆಗೆ ಫೇಸ್‌ಬುಕ್ ಅಕೌಂಟ್ ಲಿಂಕ್ ಮಾಡುವ ವಿಚಾರದಲ್ಲಿ ಮದ್ರಾಸ್, ಮುಂಬೈ ಹಾಗೂ ಮಧ್ಯಪ್ರದೇಶ ಹೈಕೋರ್ಟ್‌ಗಳಲ್ಲಿ ಪ್ರಕರಣಗಳು ಬಾಕಿ ಇವೆ.
- ವಿವಿಧ ಹೈಕೋರ್ಟ್‌ಗಳು ಭಿನ್ನ ಭಿನ್ನ ತೀರ್ಪು ಪ್ರಕಟಿಸಿದರೆ ಗೊಂದಲ ಉಂಟಾಗುತ್ತದೆ. ಬಾಕಿ ಇರುವ ಪ್ರಕರಣಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸುವಂತೆ ಕೋರಿ ಫೇಸ್‌ಬುಕ್ ಸೇರಿ ಕೆಲವು ಜಾಲತಾಣಗಳು ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ.
- ಆಧಾರ್ ಸಂಖ್ಯೆಯ ಜತೆಗೆ ಸೋಷಿಯಲ್ ಮೀಡಿಯಾ ಅಕೌಂಟ್ ಲಿಂಕ್ ಮಾಡುವ ವಿಚಾರದಲ್ಲಿ ಈ ಹಿಂದೆಯೇ ಸುಪ್ರೀಂ ಕೋರ್ಟ್ ಕೇಂದ್ರದಿಂದ ವಿವರಣೆ ಬಯಸಿತ್ತು.

ಸುಪ್ರೀಂ ಕೋರ್ಟ್ ಹೇಳಿದ್ದೇನು

- ಅಪಾಯಕಾರಿ ಮಾರ್ಗದಲ್ಲಿ ತಂತ್ರಜ್ಞಾನ ಬೆಳವಣಿಗೆಗೆ ಕಳವಳ
- ಸಾಮಾಜಿಕ ಜಾಲತಾಣ ದುರ್ಬಳಕೆ ನಿಯಂತ್ರಣಕ್ಕೆ ಮಾರ್ಗಸೂಚಿ ರಚಿಸಲಿ
- ಮಾರ್ಗಸೂಚಿ ರಚನೆಗೆ ಸಮಯಾವಕಾಶದ ಬಗ್ಗೆ ಕೇಂದ್ರ ಮೂರು ವಾರದೊಳಗೆ ತಿಳಿಸಲಿ
- ವೈಯಕ್ತಿಕ ಘನತೆ ಹಾಗೂ ರಾಜ್ಯದ ಸಾರ್ವಭೌಮತ್ವ ಗೌರವಿಸಿ ನಿಯಮಾವಳಿ ರಚಿಸಿ
- ಮಾರ್ಗಸೂಚಿ ರಚಿಸುವಾಗ ದೇಶದ ಭದ್ರತೆ ಗಮನದಲ್ಲಿಟ್ಟುಕೊಳ್ಳಿ.
- ಸಂದೇಶದ ಮೂಲ ಪತ್ತೆಹಚ್ಚುವ ತಂತ್ರಜ್ಞಾನ ಇಲ್ಲ ಎನ್ನುವುದು ಸರಿಯಲ್ಲ

46. ವಾಲೆಂಟರಿ ಕೋಡ್ ಆಫ್ ಎಥಿಕ್ಸ್:

- ಚುನಾವಣೆ ಸಂದರ್ಭದ ಮಾಧ್ಯಮಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ರಾಜಕೀಯ ಪಕ್ಷಗಳ ಪ್ರಚಾರ ಕಾರ್ಯ ಅಬ್ಬರದಿಂದ ನಡೆಯುತ್ತದೆ.
- ಇದು ಮತದಾರರ ಹಾದಿ ತಪ್ಪಿಸುವ ಸಾಧ್ಯತೆಗಳೂ ಇರುತ್ತವೆ. ಚುನಾವಣಾ ಆಯೋಗ ನಿಗದಿಪಡಿಸಿದ ಮಾನದಂಡಗಳನ್ನು ಉಲ್ಲಂಘಿಸುವ ಪಾವತಿ ಜಾಹೀರಾತುಗಳ ವಿರುದ್ಧ ಕಾರ್ಯನಿರ್ವಹಿಸಲು ಈ ಕೋಡ್ ಅನ್ನು ಕಳೆದ ಲೋಕಸಭಾ ಚುನಾವಣೆಯಲ್ಲೇ ಜಾರಿಗೆ ತರಲಾಯಿತು.

- ಈ ನಿಯಮಗಳನ್ನು ಪಾಲಿಸಲು 'ಇಂಟರ್ನೆಟ್ ಆ್ಯಂಡ್ ಮೊಬೈಲ್ ಅಸೋಸಿಯೇಶನ್ ಆಫ್ ಇಂಡಿಯಾ' (IAMAI) ಒಪ್ಪಿಗೆ ನೀಡಿದೆ.
- ಅಕ್ಟೋಬರ್‌ನಲ್ಲಿ ನಡೆಯಲಿರುವ ಹರಿಯಾಣ ಮತ್ತು ಮಹಾರಾಷ್ಟ್ರ ವಿಧಾನ ಸಭಾ ಚುನಾವಣೆಗೂ ವಾಲೆಂಟರಿ ಕೋಡ್ ಆಫ್ ಎಥಿಕ್ಸ್ ಅನ್ವಯವಾಗಲಿದೆ.
- ಅಲ್ಲದೆ ಭಾರತದಲ್ಲಿ ನಡೆಯುವ ಎಲ್ಲ ಚುನಾವಣೆಗಳಲ್ಲೂ ಈ ನೀತಿ ಪಾಲನೆಯಾಗುವಂತೆ ನೋಡಿಕೊಳ್ಳಲು ಆಯೋಗ ಸೂಚನೆ ನೀಡಿದೆ.
- ಮುಂದಿನ ಎಲ್ಲ ಚುನಾವಣೆಗಳಲ್ಲಿ ಸ್ವಯಂಪ್ರೇರಿತ ನೀತಿ ಸಂಹಿತೆಯನ್ನು ಪಾಲಿಸುವುದಾಗಿ IAMAI ಅದರ ಸದಸ್ಯರ ಪರವಾಗಿ ಒಪ್ಪಿದೆ.
- ಐಎಎಂಎಐ ಮತ್ತು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್ ಆ್ಯಪ್, ಟ್ವಿಟ್ಟರ್, ಗೂಗಲ್, ಶೇರ್ ಚ್ಯಾಟ್ ಮತ್ತು ಟಿಕ್‌ಟಾಕ್ 2019ರ 17ನೇ ಲೋಕಸಭಾ ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿ ಈ ಸ್ವಯಂಪ್ರೇರಿತ ನೀತಿ ಸಂಹಿತೆ ಮೇಲೆ ಗಮನಹರಿಸಿತ್ತು.
- ಈ ನೀತಿ ಸಂಹಿತೆಯನ್ನು ಪಾಲಿಸುವುದಾಗಿ ಮತ್ತು ಮುಕ್ತ, ನ್ಯಾಯಯುತ ಚುನಾವಣೆಗೆ ನಿಯಮಗಳ ಪಾಲನೆಗೆ ಸಹಕರಿಸುವುದಾಗಿ ಐಎಎಂಎಐ ಸೂಚಿಸಿದೆ.

ಏತಕ್ಕಾಗಿ ನೀತಿ ಸಂಹಿತೆ

- ಚುನಾವಣಾ ಪ್ರಕ್ರಿಯೆಯಲ್ಲಿ ದಾರಿ ತಪ್ಪಿಸುವ ಪ್ರಚಾರಗಳನ್ನು ತಡೆಯಲು, ಪಾರದರ್ಶಕತೆ, ನೈಜತೆ ಕಾಪಾಡಲು ಈ ನೀತಿ ಸಂಹಿತೆ ಪಾಲಿಸುವುದು ಅಗತ್ಯವಾಗಿದೆ.
- ಸಾಮಾಜಿಕ ಜಾಲತಾಣ, ಮಾಧ್ಯಮಗಳ ದುರ್ಬಳಕೆ ತಡೆಯುವುದಲ್ಲದೆ, ನ್ಯಾಯಯುತ ಮುತ್ತ ಚುನಾವಣೆಗೆ ಅವಕಾಶ ಮಾಡಿಕೊಡುತ್ತದೆ. ಈ ನಿಯಮ ಪ್ರಕಾರ ಸಾಮಾಜಿಕ ಜಾಲತಾಣದಲ್ಲಿ ಚುನಾವಣೆಗೆ ಮುನ್ನ 48 ಗಂಟೆ ಕಾಲ ಯಾವುದೇ ಚುನಾವಣಾ ಪ್ರಚಾರ ಕಾರ್ಯ ನಡೆಸುವಂತಿಲ್ಲ. ಈ ಅವಧಿಯನ್ನು ಸೈಲೆನ್ಸ್ ಸೀರೆಡ್ ಎಂದು ಭಾವಿಸಲಾಗುತ್ತದೆ.

VCE ಪ್ರಮುಖ ಕಾರ್ಯಗಳು

- ಚುನಾವಣಾ ಕಾನೂನುಗಳು ಮತ್ತು ಇತರ ಸಂಬಂಧಿತ ಸೂಚನೆಗಳನ್ನು ಒಳಗೊಂಡಂತೆ ಜಾಗೃತಿ ಮೂಡಿಸಲು ಸಾಮಾಜಿಕ ಮಾಧ್ಯಮ ವೇದಿಕೆಗಳು ಮಾಹಿತಿ, ಶಿಕ್ಷಣ ಮತ್ತು ಸಂವಹನ ಅಭಿಯಾನಗಳನ್ನು ಸ್ವಯಂಪ್ರೇರಣೆಯಿಂದ ಕೈಗೊಳ್ಳುತ್ತವೆ.
- ಆಯೋಗ ವರದಿ ಮಾಡಿದ ಪ್ರಕರಣಗಳಲ್ಲಿ ಹೆಚ್ಚಿನ ಆದ್ಯತೆಯ ದೂರುಗಳನ್ನು ಪರಿಹರಿಸಲು ತುರ್ತು ಕ್ರಮಕೈಗೊಳ್ಳುವುದು.
- ಸೋಷಿಯಲ್ ಮೀಡಿಯಾಗಳು ಮತ್ತು ಚುನಾವಣಾ ಆಯೋಗ 1951 ಆರ್.ಪಿ.ಆ್ಯಕ್ಟ್ ಸೆಕ್ಷನ್ 126 ಮತ್ತು ಇತರ ಚುನಾವಣಾ ಆಯೋಗದ ನಿಯಮ ಉಲ್ಲಂಘನೆಯನ್ನು ಪತ್ತೆಹಚ್ಚುವ ಕಾರ್ಯವಿಧಾನ ಅಭಿವೃದ್ಧಿಪಡಿಸಿದೆ.
- ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆ ಎಲ್ಲ ಸಾಮಾಜಿಕ ತಾಣಗಳಲ್ಲಿ ರಾಜಕೀಯ ಜಾಹೀರಾತುಗಳನ್ನು ಬಿತ್ತರಿಸುವ ಮುನ್ನ ಮಾಧ್ಯಮ ಪ್ರಮಾಣಪತ್ರ ಮತ್ತು ಮಾನಿಟರಿಂಗ್ ಸಮಿತಿಗಳಿಂದ ಪ್ರಮಾಣೀಕರಿಸಿದ ಪತ್ರ ಪಡೆದಿವೆಯೇ ಎಂದು ಖಚಿತಪಡಿಸಿಕೊಳ್ಳುವುದು.
- ಶುಲ್ಕ ಪಾವತಿಸಿದ ಜಾಹೀರಾತುಗಳ ಬಗ್ಗೆ ಪಾರದರ್ಶಕತೆಯನ್ನು ಪ್ರದರ್ಶಿಸುವುದು ಮತ್ತು ಅಂತಹ ಜಾಹೀರಾತುಗಳಿಗೆ ಲೇಬಲ್ ಮತ್ತು ಪಾವತಿ ಜಾಹೀರಾತು ಎಂದು ಬಹಿರಂಗಪಡಿಸುವ ತಂತ್ರಜ್ಞಾನವನ್ನು ಅಳವಡಿಸುವುದು.

2019 ಮಾರ್ಚ್ 20ರಂದು ಜಾರಿ:

- ಚುನಾವಣಾ ಆಯೋಗ ಮನವೊಲಿಸಿದ ಪರಿಣಾಮ ಎಲ್ಲ ಪ್ರಮುಖ ಸಾಮಾಜಿಕ ಮಾಧ್ಯಮಗಳು ಮತ್ತು ಐಎಎಂಎಐ ಒಟ್ಟಾಗಿ ಸೇರಿಕೊಂಡು ಸಾರ್ವತ್ರಿಕ ಚುನಾವಣೆಗಳಿಗೆ ಸ್ವಯಂಪ್ರೇರಿತ ನೀತಿ ಸಂಹಿತೆ ರೂಪಿಸಿದವು.
- ಉಮೇಶ್ ಸಿನ್ಹಾ ಸಮಿತಿ ವರದಿಯನ್ನಾಧರಿಸಿ ಅಭಿವ್ಯಕ್ತಿ ಸ್ವಾತಂತ್ರ್ಯ ಗಮನದಲ್ಲಿಟ್ಟಿಕೊಂಡು ಮಾಧ್ಯಮಗಳಲ್ಲಿ ಬಿತ್ತರವಾಗುವ ವಿಷಯಗಳಿಗೆ ಸಂಬಂಧಿಸಿ ನೀತಿ ಸಂಹಿತೆ ಜಾರಿಗೆ ತರಲಾ ಗಿದೆ.
- 2019ರ ಮಾ. 20ರಂದು ಆಯೋಗಕ್ಕೆ ಮಂಡಿಸಿದ ದಿನದಂದೇ ಈ ನೀತಿ ಜಾರಿಗೆ ಬಂದಿತು.
- 2019ರ ಸಂಸತ್ ಚುನಾವಣೆ ಅವಧಿಯಲ್ಲಿ 909 ನಿಯಮ ಉಲ್ಲಂಘನೆ ಪ್ರಹರಣಗಳ ಕುರಿತು ಸಾಮಾಜಿಕ ಮಾಧ್ಯಮಗಳು ಕ್ರಮಕೈಗೊಂಡಿವೆ ಎಂದು ಆಯೋಗ ತಿಳಿಸಿದೆ.

47. ಮಹಾತ್ತನ ನೆನಪಿನಲ್ಲಿ 'ಗಾಂಧಿ ಸ್ಮೃತಿ':

- ಇದು ಮಹಾತ್ಮ ಗಾಂಧಿ ಕೊನೆಯುಸಿರೆಳೆದ ಸ್ಥಳ ನಾಥೋರಾಮ್ ಗೋಡ್ಸೆ ಗುಂಡಿಗೆ ಬಲಿಯಾಗಿ 'ಹೇ ರಾಮ' ಎಂದು ಉದ್ಧರಿಸಿ ಅಹಿಂಸಾವಾದಿ ಇದೇ ನೆಲದಲ್ಲಿ ಪ್ರಾಣ ಬಿಟ್ಟರು. 'ಗಾಂಧಿ ಸ್ಮೃತಿ' ಗಾಂಧೀಜಿ ಅಂತಿಮ ಹೆಜ್ಜೆ ಹಾಕಿದ ಕ್ಷಣಕ್ಕೆ ಸಾಕ್ಷಿಯಾಗಿದೆ.
- ಬಿರ್ಲಾ ಹೌಸ್ ಎಂದೇ ಕರೆಯಲಾಗುತ್ತಿದ್ದ ಸ್ಥಳದಲ್ಲಿ 'ಗಾಂಧಿ ಸ್ಮೃತಿ' ಸ್ಥಾಪಿಸಲಾಗಿದ್ದು, ಮಹಾತ್ಮ ಗಾಂಧಿ ಅವರಿಗೆ ಸಂಬಂಧಿಸಿದ ವಸ್ತು ಸಂಗ್ರಹಾಲಯವೂ ಇದೆ. ಬಾಪೂಜಿ

ತಮ್ಮ ಕೊನೆಯ 144 ದಿನಗಳು ಬಿರ್ಲಾ ಹೌಸ್‌ನಲ್ಲಿ ಕಳೆದಿದ್ದರು.

- 1973ರಲ್ಲಿ ಈ ಸ್ಥಳವನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಘೋಷಿಸಲಾಯಿತು.

48. ಜನರಲ್ ಬಿಪಿನ್ ರಾವತ್ ಚೀಫ್ ಆಫ್ ಸ್ಟಾಫ್ ಕಮಿಟಿ :

- ಚೀಫ್ಸ್ ಆಫ್ ಸ್ಟಾಫ್ ಕಮಿಟಿ ಆಗಿ ಸೇನಾ ಮುಖ್ಯಸ್ಥ ಜನರಲ್ ಬಿಪಿನ್ ರಾವತ್ ಅಧಿಕಾರ ಸ್ವೀಕರಿಸಿದ್ದಾರೆ.
- ರಾವತ್ 1958 ಮಾರ್ಚ್ 16ರಂದು ಉತ್ತರಖಂಡದ ಪೌಡಿಯಲ್ಲಿ ಜನಿಸಿದರು.

49. ಸಿಯಾಚಿನ್ ಶೀಘ್ರದಲ್ಲೇ ಪ್ರವಾಸಿ ತಾಣ:

- ಲಡಾಖ್‌ಗೆ ತೆರಳುತ್ತಿದ್ದ ಪ್ರವಾಸಿಗರು ಸಿಯಾಚಿನ್ ಪ್ರವೇಶಕ್ಕಾಗಿ ಆಗ್ರಹಿಸಿಸುತ್ತಲೇ ಬಂದಿದ್ದಾರೆ, ಆದರೆ, ಆಯಕಟ್ಟಿನ ರಕ್ಷಣಾ ಪದೇಶವಾಗಿರುವುದರಿಂದ ಸೇನೆ ಜನರ ಪ್ರವೇಶವನ್ನು ನಿಷೇಧಿಸಿತ್ತು.
- 21 ಸಾವಿರ ಅಡಿ ಎತ್ತರದಲ್ಲಿರುವ ಸಿಯಾಚಿನ್ ಜಗತ್ತಿನ ಅತ್ಯಂತ ಕ್ಲಿಷ್ಟ ಯುದ್ಧಭೂಮಿಯಾಗಿದೆ. ಕಳೆದ 35 ವರ್ಷಗಳಿಂದ ಭಾರತ ಮತ್ತು ಪಾಕಿಸ್ತಾನದ ಸೇನೆಗಳು ಇಲ್ಲಿ ಎದುರುಬದರಾಗಿ ಜಮಾವಣೆಗೊಂಡಿವೆ.
- ಎರಡೂ ದೇಶಗಳು ಈ ಪ್ರದೇಶ ತಮಗೆ ಸೇರಿದ್ದು ಎಂದು ಹಕ್ಕು ಸಾಧಿಸುತ್ತಿವೆ.
- ಈ ವಿವಾದಿತ ಗ್ಲೇಸಿಯರ್ ಕುರಿತಂತೆ ಭಾರತ ಮತ್ತು ಪಾಕಿಸ್ತಾನದ ನಡುವೆ 12 ಬಾರಿ ಮಾತುಕತೆ ನಡೆದಿದ್ದರೂ, ನಿರ್ಣಾಯಕ ಫಲಿತಾಂಶ ಹೊರಹೊಮ್ಮಿಲ್ಲ.

ವಿವಾದವೇಕೆ?

- ಭಾರತ–ಪಾಕಿಸ್ತಾನ ಯುದ್ಧದ ನಂತರ 1972ರಲ್ಲಿ ಶಿಮ್ಲಾ ಒಪ್ಪಂದಕ್ಕೆ ಅಂಕಿತ ಹಾಕಲಾಯಿತು.
- ಈ ಸಂದರ್ಭದಲ್ಲಿ ಘೋಷಿಸಿದ ಕದನ ವಿರಾಮದ ವೇಳೆ ಸಿಯಾಚಿನ್ ಪ್ರದೇಶದ ಎನ್‌ಜೆ–9842 ಭಾಗವನ್ನು ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಎಂದು ನಿರ್ಧರಿಸಲಾಯಿತಾದರೂ, ಉಳಿದ ಭಾಗಗಳ ಬಗ್ಗೆ ಯಾವುದೇ ಪ್ರಸ್ತಾಪ ಇರಲಿಲ್ಲ.

50. ಚಿಕ್ಕ ಗ್ರಹಕ್ಕೆ ಜಸ್‌ರಾಜ್ ಹೆಸರು:

- ಮಂಗಳ ಮತ್ತು ಗುರು ಗ್ರಹಗಳ ನಡುವೆ ಪತ್ತೆ ಮಾಡಲಾಗಿರುವ ಚಿಕ್ಕ ಗ್ರಹವೊಂದಕ್ಕೆ ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ ಪಂ.ಜಸ್‌ರಾಜ್ ಅವರ ಹೆಸರಿಡಲಾಗಿದೆ.
- ಇಂಟರ್‌ನ್ಯಾಷನಲ್ ಅಸ್ಟ್ರಾನಾಮಿಕಲ್ ಯೂನಿಯನ್ (ಐಎಯು) ಈ ನಾಮಕರಣ ಮಾಡಿದೆ.
- 2006ರ ನವೆಂಬರ್ 11ರಂದು ಈ ಗ್ರಹವನ್ನು ಪತ್ತೆ ಮಾಡಲಾಗಿದೆ.
- ಆಗ ಇದಕ್ಕೆ '2006ವಿಪಿ32' ಎಂದು ಕರೆಯಲಾಗಿತ್ತು, ಈಗ ಜಸ್‌ರಾಜ್ ಅವರ ಜನ್ಮದಿನಾಂಕ (28–01–30) ವನ್ನು ಉಲ್ಟಾ ಬರೆದಾಗ 300128 ಆಗುತ್ತದೆ.
- ಐಎಯುನ ವೆಬ್‌ಸೈಟ್‌ನಲ್ಲಿ ಈ ಸಂಖ್ಯೆಯನ್ನು ನಮೂದಿಸಿದಾಗ "ಪಂಡಿತ್‌ಜಸ್‌ರಾಜ್" ಗ್ರಹದ ಚಿತ್ರ ಹಾಗೂ ವಿವರಗಳು ಲಭ್ಯವಾಗುತ್ತವೆ.

51. ವೈಷ್ಣೋ ದೇವಿ ದರ್ಶನಕ್ಕೆ ವಂದೇ ಭಾರತ್ ರೈಲು ಶುರು:

- ಎರಡನೆಯ ಸೆಮಿ ಹೈಸ್ಪೀಡ್ 'ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು' ಹೊಸದಿಲ್ಲಿಯಿಂದ ಕಟರಾ ವೈಷ್ಣೋದೇವಿ ಕ್ಷೇತ್ರದ ನಡುವೆ ಸಂಚರಿಸಲು ಸಿದ್ಧವಾಗಿದೆ.
- ಈ ಸೆಮಿ ಹೈಸ್ಪೀಡ್‌ನಿಂದಾಗಿ ಜನರು ಹೊಸದಿಲ್ಲಿಯಿಂದ ಕಟರಾಗೆ ಕೇವಲ 8 ಗಂಟೆಗಳಲ್ಲಿ ತಲುಪಬಹುದು.

ವಿಶೇಷತೆಗಳು:

- ವೈಫೈ ಮತ್ತು ಇನ್ಫೋಟೈನ್‌ಮೆಂಟ್ ಸೌಲಭ್ಯ
- ಜಿಪಿಎಸ್ ಆಧರಿತ ಪ್ರಯಾಣಿಕರ ಮಾಹಿತಿ ಸಿಸ್ಟಮ್

- ಬಯೊ ವ್ಯಾಕೂಮ್ ಇರುವ ಮಾಡ್ಯೂಲರ್ ಶೌಚಾಲಯಗಳು
- 360 ಡಿಗ್ರಿಯಲ್ಲಿ ತಿರುಗಬಲ್ಲ ಸೀಟ್‌ಗಳು
- ಡಿಫ್ಯೂಸ್ಡ್(ಪ್ರಸರಣ) ಎಲ್‌ಇಡಿ ಬೆಳಕಿನ ವ್ಯವಸ್ಥೆ
- ವಿಶೇಷಚೇತನರು ಸರಳವಾಗಿ ಬಳಸಲು ಅನುಕೂಲವಾಗುವಂಥಹ ಶೌಚಾಲಯಗಳು
- ಬೋಗಿಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳು
- ಕಳೆದ ಫಬ್ರವರಿ 17ರಿಂದ ಆರಂಭವಾಗಿದೆ.

52. ಹದಿನೈದು ವರ್ಷಗಳು ಕಠಿಣ ಪರಿಶ್ರಮದ ಬಳಿಕ ಭಾರತದ ಅತ್ಯಂತ ಶಕ್ತಿಶಾಲಿ ಗೋಚರ ಸಾಮರ್ಥ್ಯವನ್ನು ಮೀರುವ ಆಕಾಶದಿಂದ ಆಕಾಶಕ್ಕೆ ಚಿಮ್ಮುವ(ಬಿವಿಆರ್‌ಎಎಎಂ) ಸ್ವದೇಶಿ ಸೂಪರ್‌ಸಾನಿಕ್ ಕ್ಷಿಪಣಿ 'ಅಸ್ತ್ರ ವಾಯು'ಪಡೆಗೆ ಸೇರ್ಪಡೆಯಾಗಲು ಸನ್ನದ್ಧವಾಗಿದೆ:

- ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), 15 ವರ್ಷಗಳ ಕಾಲ 30 ಬಾರಿ ಈ ಕ್ಷಿಪಣಿಯನ್ನು ಪರೀಕ್ಷಿಸಿ ಅಂತಿಮಗೊಳಿಸಿದೆ.
- ಈ ಕ್ಷಿಪಣಿಯನ್ನು ಸುಖೋಯಿ–30 ಯುದ್ಧವಿಮಾನಗಳ ಮೂಲಕ ಉಡಾಯಿಸಲಾಗುತ್ತದೆ.
- ಸದ್ಯ ಆಕಾಶದಿಂದ ಆಕಾಶಕ್ಕೆ ಚಿಮ್ಮುವ ಗೋಚರ ಸಾಮರ್ಥವನ್ನು ಮೀರುವ ಕ್ಷಿಪಣಿಗಳ ವರ್ಗದಲ್ಲಿ ಅಸ್ತ್ರ ಕ್ಷಿಪಣಿಯು ಜಗತ್ತಿನ ಅತ್ಯಂತ ಶಕ್ತಿಶಾಲಿ ಕ್ಷಿಪಣಿಯಾಗಿದೆ.
- "ಅಸಕ್ತ ದೂರ ವ್ಯಾಪ್ತಿ ಗುರಿ ತಲುಪಬಲ್ಲ ಕ್ಷಿಪಣಿಯನ್ನಾಗಿ ರೂಪಿಸುವ ಸಾಮರ್ಥ್ಯ ಕೂಡ ಇದೆ", ಎಂದು ಡಿಆರ್‌ಡಿಒ ಮುಖ್ಯಸ್ಥ ಡಾ.ಜಿ.ಸತೀಶ್‌ರೆಡ್ಡಿ ಅವರು ತಿಳಿಸಿದ್ದಾರೆ.

ಕ್ಲಬ್ ಸೇರಿದ ಇಂಡಿಯಾ :

- ಶಕ್ತಿಶಾಲಿ ವಾಯುಯುದ್ಧ ಕ್ಷಿಪಣಿಗಳನ್ನು ಹೊಂದಿರುವ ಜಗತ್ತಿನ ಅಮೆರಿಕ, ರಷ್ಯಾ, ಫ್ರಾನ್ಸ್ ಮತ್ತು ಇಸ್ರೇಲ್ ರಾಷ್ಟ್ರಗಳ ಸಾಲಿಗೆ ಇದೀಗ ಭಾರತ ಕೂಡ ಸೇರಿದೆ.
- ಈ ರಾಷ್ಟ್ರಗಳು ಆಕಾಶದಲ್ಲೇ ವೈರಿ ರಾಷ್ಟ್ರಗಳ ಯುದ್ಧವಿಮಾನಗಳನ್ನು ಹೊಡೆದುರುಳಿಸುವ ಸಾಮರ್ಥ್ಯವನ್ನು ಹೊಂದಿವೆ. ಇದೀಗ ಭಾರತ ಕೂಡ ಅಂಥದ್ದೇ ಸಾಮರ್ಥ್ಯವನ್ನು ಅಸ್ತ್ರದ ಮೂಲಕ ಸಂಪಾದಿಸಿದೆ.

ಅಸ್ತ್ರದ ವಿಶೇಷತೆಗಳು :

- ಅಸ್ತ್ರ ಒಟ್ಟು57 ಮೀಟರ್ ಉದ್ದ ಇದ್ದು, 154 ಕೆ.ಜಿ. ತೂಕವಿದೆ. ಹಾಗೆಯೇ ಇದು ಬೆಳಕಿನ ವೇಗಕ್ಕಿಂತ ನಾಲ್ಕು ಪಟ್ಟು ಹೆಚ್ಚು ವೇಗದಲ್ಲಿ ತನ್ನ ಗುರಿಯನ್ನು ತಲುಪತ್ತದೆ.

ಅತಿ ದೂರ ನೆಗೆಯಬಲ್ಲಿ ಜಗತ್ತಿನ 3ಚಾಪ್ 5 ಖಂಡಾಂತರ ಕ್ಷಿಪಣಿಗಳು:

- 16,000 ಕಿಮೀ, ಆರ್–36ಎಂ (ಸತಾನ್) ರಷ್ಯಾ
- 13,000 ಕಿಮೀ, ಡಾಂಗ್‌ಫ್ರಾಂಗ್ 4, ಚೀನಾ
- 11,547 ಕಿಮೀ, ಆರ್29ಆರ್‌ಎಂಯು, ಸಿನೆವಾ–ರಷ್ಯಾ
- 11,200 ಕಿಮೀ, ಡಾಂಗ್ ಫ್ರಾಂಗ್ 31 ಎ, ಚೀನಾ
- 11,000 ಕಿಮೀ, ಆರ್‌ಟಿ ಟೋಪೋಲ್, ರಷ್ಯಾ

ಅಂತರ–ರಾಷ್ಟ್ರೀಯ

1. ಯುರೋಪ್‌ಗೆ ಎಚ್‌ಎಎಲ್ ವಿಮಾನ:

- ಎಚ್‌ಎಎಲ್ ನಿರ್ಮಿಸಿರುವ ಚೊಚ್ಚಲ ಮೇಡ್ ಇನ್ ಇಂಡಿಯಾ ವಿಮಾನ ಡೋರ್ನಿಯರ್ 228 ಈಗ ಯುರೋಪ್‌ನಲ್ಲಿ ಬಳಕೆಯಾಗುತ್ತಿದೆ.
- ಡೋರ್ನಿಯರ್ 228ಗೆ ಭಾರತದ ಡೈರೆಕ್ಟರೇಟ್ ಜನರಲ್ ಆಫ್ ಸಿವಿಲ್ 1 ಏವಿಯೇಷನ್ 2017 ಅಂತ್ಯದಲ್ಲೇ ಅನುಮತಿ ಪತ್ರ ನೀಡಿತ್ತು.
- ಇದು ಮೇಕ್ ಇನ್ ಇಂಡಿಯಾಗೆ ಸಿಕ್ಕಿದ ದೊಡ್ಡಗೆಲುವು ಎಂದು ಡಿಜಿಸಿಎ ಮುಖ್ಯಸ್ಥ ನ ಅರುಣ್ ಕುಮಾರ್ ತಿಳಿಸಿದ್ದಾರೆ.

ಡೋರ್ನಿಯರ್ ವಿಶೇಷ:

- ಈ ವಿಮಾನವು 19 ಸೀಟುಗಳನ್ನು ಹೊಂದಿದ್ದು, ಇದುವರೆಗೆ ಸೇನೆ ಬಳಸುತ್ತಿತ್ತು. ಉಡಾನ್ ಅಡಿಯಲ್ಲೂ ಬಳಕೆಯಾಗುತ್ತಿದೆ. ರಾತ್ರಿಯಲ್ಲೂ ಹಾರಾಟ ನಡೆಸಬಲ್ಲ ಸಾಮರ್ಥ್ಯ ಹೊಂದಿದೆ.

ಕಾನ್ಪುರ ಘಟಕದಲ್ಲಿ ತಯಾರಿ:

- ಈ ಡೋರ್ನಿಯರ್ ವಿಮಾನವನ್ನು ಎಚ್‌ಎಎಲ್‌ನ ಕಾನ್ಪುರ ಘಟಕದಲ್ಲಿ ತಯಾರಿಸಲಾಗುತ್ತಿದೆ.
- ಇದರ ವಿನ್ಯಾಸದ ಉದ್ದೇಶವೇ ಏರ್ ಟ್ಯಾಕ್ಸಿ ಹಾಗೂ ಸಣ್ಣಮಟ್ಟದ ಸಾಗಣೆಯಾಗಿದೆ. ಸದ್ಯ ಭಾರತದಲ್ಲಿ ಕರಾವಳಿ ಕಾವಲು ಹಾಗೂ ವೈಮಾನಿಕ ಮೇಲ್ವಿಚಾರಣೆಗೂ ಇದನ್ನು ಬಳಸಿಕೊಳ್ಳ ಬಹುದಾಗಿದೆ.

2. ಬ್ರಹ್ಮೋಸ್–ಎನ್ಜಿ ಕ್ರೂಸ್ ಕ್ಷಿಪಣಿ ಶೋಧನೆ:

- ಅತ್ಯಾಧುನಿಕ ತಂತ್ರಜ್ಞಾನದ ಬಲ ಪಡೆಯಲಿರುವ ಬ್ರಹ್ಮೋಸ್ –ಎನ್ಜಿ ಕ್ರೂಸ್ ಕ್ಷಿಪಣಿ ಈಗ ಸಂಶೋಧನೆಯ ಹಂತದಲ್ಲಿದ್ದು, ಮುಂದಿನ 4 ವರ್ಷಗಳಲ್ಲಿ ಸೇನಾ ಸೇವೆಗೆ ಲಭ್ಯವಾಗಲಿದೆ ಎಂದು ರಷ್ಯಾ–ಭಾರತ ಬ್ರಹ್ಮೋಸ್ ಏರೋಸ್ಪೇಸ್ ಜಂಟಿ ಉದ್ಯಮ ಸಹ–ನಿರ್ದೇಶಕ ಸುಧೀರ್ ಕುಮಾರ್ ಮಿಶ್ರಾ ಹೇಳಿದ್ದಾರೆ.

3. WHO ರೀಜನಲ್ ಕಮಿಟಿ ಸಮಾವೇಶ:

- 'ವರ್ಲ್ಡ್ ಹೆಲ್ತ್ ಆರ್ಗನೈಸೇಶನ್' (WHO) ಸೌತ್ ಈಸ್ಟ್ ಏಷಿಯಾದ ಕಮಿಟಿ ಪ್ರಾದೇಶಿಕ ಸಮಿತಿಗಳ 72ನೇ ಸಮಾವೇಶವನ್ನು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ನವದೆಹಲಿಯಲ್ಲಿ ಉದ್ಘಾಟಿಸಿದರು:
- ಇದು ಭಾರತದಲ್ಲಿ ಆಯೋಜಿಸಿರುವ 2ನೇ ಸಮಾವೇಶ. ಹರ್ಷವರ್ಧನ್ ಈ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಕಳೆದ ಬಾರಿಯ ಸಮಾವೇಶವೂ ಭಾರತದಲ್ಲೇ ನಡೆದಿತ್ತು.
- ಈ ಸಮಾವೇಶದಲ್ಲಿ ಆರೋಗ್ಯ ಸಚಿವರು ಮತ್ತು ಸದಸ್ಯ ರಾಷ್ಟ್ರಗಳು ಭಾಗವಹಿಸಿ ಸಾರ್ವಜನಿಕ ಆರೋಗ್ಯ ಮತ್ತು ರೋಗಗಳನ್ನು ನಿವಾರಿಸುವಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿದವು.
- **11 ರಾಷ್ಟ್ರಗಳ 8 ಆರೋಗ್ಯ ಸಚಿವರು ಭಾಗವಹಿಸಿದರು.**

4. ಬ್ರಿಟನ್‌ನ 'ದಿ ಎಕಾನಮಿಸ್ಟ್ ಗ್ರೂಪ್‌ನ ವಿಭಾಗವಾದ ಎಕಾನಮಿಕ್ ಇಂಟಲಿಜೆನ್ಸ್ ಯೂನಿಟ್' (ಯುಐಯು) ನಡೆಸಿದ ಜಾಗತಿಕ ಸಮೀಕ್ಷೆಯಲ್ಲಿ ವಿಯೆನ್ನಾಗೆ ಸತತ ಎರಡನೇ ಅವಧಿಗೆ ಅಗ್ರ ಸ್ಥಾನ ಲಭಿಸಿದೆ:

ಮಾನದಂಡಗಳೇನು?

- ಯುಐಯು ಪ್ರತಿ ವರ್ಷ 140 ನಗರಗಳಿಗೆ ವಾಸಯೋಗ್ಯ ನಗರದ ಶ್ರೇಯಾಂಕ ನೀಡುತ್ತದೆ. ನಗರ ವಾಸಿಗಳ ಜೀವನ ಮಟ್ಟ, ಅಪರಾಧ, ಸಾರಿಗೆ, ಮೂಲ ಸೌಕರ್ಯ, ಶಿಕ್ಷಣ ಮತ್ತು ಆರೋಗ್ಯ, ಆರ್ಥಿಕ ಸ್ಥಿರತೆ ಸೇರಿದಂತೆ ಹಲವು ಮಾನದಂಡಗಳ ಅನುಸಾರ ಗರಿಷ್ಠ 100 ಅಂಕಗಳನ್ನು ನೀಡುವ ಆಧಾರದಲ್ಲಿ ರ‍್ಯಾಂಕಿಂಗ್ ನೀಡಲಾಗುತ್ತದೆ.
- ಸಮೀಕ್ಷೆಯಲ್ಲಿ ವಿಯೆನ್ನಾ 1 ಅಂಕಗಳಿಸಿದೆ. ಪಶ್ಚಿಮ ಯುರೋಪ್ ಮತ್ತು ಉತ್ತರ ಅಮೆರಿಕ, ವಿಶ್ವದ ಅತ್ಯಂತ ವಾಸಯೋಗ್ಯ ನಗರಗಳಾಗಿ ಮುಂದುವರೆದಿವೆ.

ವಾಸಯೋಗ್ಯ ಟಾಪ್ 10 ನಗರಗಳು:

- ವಿಯೆನ್ನಾ– ಆಸ್ಟ್ರಿಯಾ
- ಮೆಲ್ಬೋರ್ನ್ – ಆಸ್ಟ್ರೇಲಿಯಾ
- ಸಿಡ್ನಿ–ಆಸ್ಟ್ರೇಲಿಯಾ
- ಒಸಾಕ – ಜಪಾನ್
- ಕ್ಯಾಲ್ಗರಿ – ಕೆನಡಾ
- ವ್ಯಾಂಕೋವರ್–ಕೆನಡಾ
- ಟೊರೊಂಟೊ – ಕೆನಡಾ
- ಟೋಕಿಯೊ –ಜಪಾನ್
- ಕೋಪನ್ ಹ್ಯಾಗನ್–ಡೆನ್ಮಾರ್ಕ್
- ಅಡಿಲೇಡ್ – ಆಸ್ಟ್ರೇಲಿಯಾ

5. ಹಿಂದೂ ಯುವತಿ ಪಾಕ್ ಪೊಲೀಸ್ ಅಧಿಕಾರಿ:

- ಪುಷ್ಪಾ ಕೊಹ್ಲಿ ಎಂಬ ಯುವತಿ ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಎಎಸ್‌ಐ) ಆಗಿ ನೇಮಕಗೊಂಡಿದ್ದಾರೆ ಎಂದು ಜಿಯೋ ನ್ಯೂಸ್ ವರದಿ ಮಾಡಿದೆ.

6. ಮಳೆಕಾಡು:

- ಅಮೇಜಾನ್ ಕಾಡು ವಿಶ್ವದ ಅತಿದೊಡ್ಡ ಮಳೆಕಾಡು ಎನ್ನುವ ಹೆಗ್ಗಳಿಕೆ ಪಾತ್ರವಾಗಿದೆ. ಆದರೆ ಇಂದು ಬೆಂಕಿಯ ಕೆನ್ನಾಲಿಗೆಯಲ್ಲಿ ಬೆಂದು ಭಸ್ಮವಾಗುತ್ತಿದೆ. ಪ್ರತಿವರ್ಷ ಸುಮಾರು 1,50,000 ಚದರ ಕಿಲೋಮಿಟರ್ ಮಳೆಕಾಡು ನಾಶವಾಗುತ್ತದೆ. ಮಳೆಕಾಡುಗಳ ನಾಶದಿಂದ ಮಳೆಯ ಕೊರತೆ ಅನುಭವಿಸಬೇಕಾಗುತ್ತದೆ. ಮಳೆಕಾಡುಗಳನ್ನು ಭೂಮಿಯ ಆಭರಣಗಳು ಮತ್ತು ಪ್ರಪಂಚದ ಅತ್ಯಂತ ದೊಡ್ಡ ಔಷಧ ಶಾಲೆ ಎಂದು ಕರೆಯಲಾಗುತ್ತದೆ.

ಮಳೆಕಾಡು ಎಂದರೇನು?

- ವಾರ್ಷಿಕ ಕನಿಷ್ಠ 1750–2000 ಮಿಮೀ (68–78 ಇಂಚುಗಳು) ಮಳೆ ಬೀಳುವ ಪ್ರದೇಶದ ಕಾಡನ್ನು ಮಳೆಕಾಡು ಎಂದು ಕರೆಯುವರು.
- ಮಳೆಕಾಡುಗಳಲ್ಲಿ ಎರಡು ವಿಧ ಉಷ್ಣವಲಯದ ಮಳೆಕಾಡು ಮತ್ತು ಸಮಶೀತೋಷ್ಣ ಮಳೆಕಾಡು.

ಸಮಶೀತೋಷ್ಣ ಮಳೆಕಾಡು

1. ಉತ್ತರ ಅಮೆರಿಕದ ಪೆಸಿಫಿಕ್ ಕರಾವಳಿ
2. ವಾಯುವ್ಯ ಬ್ರಿಟಿಷ್ ಕೊಲಂಬಿಯಾದ ಒಳನಾಡು
3. ಪೂರ್ವ ಕೆನಡಾ
4. ಯುರೋಪ್
5. ಪಶ್ಚಿಮ ಯುರೇಶಿಯನ್ ಕಾಕಸಸ್ ಪರ್ವತ ಶ್ರೇಣಿ
6. ದಕ್ಷಿಣ ಸೈಬಿರಿಯಾದ ಒಳನಾಡು ಮತ್ತು ರಷ್ಯಾ
7. ಜಪಾನ್ ಮತ್ತು ಕೊರಿಯಾ
8. ಆಸ್ಟ್ರೇಲಿಯಾ
9. ದಕ್ಷಿಣ ಆಫ್ರಿಕಾ
10. ಚಿಲಿ ಮತ್ತು ಅರ್ಜೆಂಟೀನಾ

ಉಷ್ಣ ವಲಯದ ಮಳೆಕಾಡುಗಳು

- ಆಗ್ನೇಯ ಏಷ್ಯಾ ಮಳೆಕಾಡು
- ಮಧ್ಯ ಅಮೇರಿಕಾ ಮಳೆಕಾಡು
- ಭಾರತದ ಪಶ್ಚಿಮ ಘಟ್ಟ ಮಳೆಕಾಡು
- ಕಾಂಗೊ/ನದಿಪಾತ್ರದ ಮಳೆಕಾಡು
- ಅಮೇಜಾನ್ ಮಳೆಕಾಡು
- ಮಡಗಾಸ್ಕರ್ – ಮಳೆಕಾಡು

7. ಕೊನೆಗೂ ಮಣಿದ ಹಾಂಕಾಂಗ್:

- ದಶಕಗಳ ಬಳಿಕ ಹಾಂಕಾಂಗ್‌ನಲ್ಲಿ ಧಂಗೆ ಬುಗಿಲೇಳುವಂತೆ ಮಾಡಿದ್ದ ವಿವಾದಾತ್ಮಕ ಮಸೂದೆಯನ್ನು ಹಿಂಪಡೆದುಕೊಳ್ಳುವುದಾಗಿ ಹಾಂಕಾಂಗ್‌ನ ನಾಯಕಿ ಕ್ಯಾರಿ ಲಾಮ್ ಘೋಷಣೆ ಮಾಡಿದ್ದಾರೆ.
- ಶಂಕಿತ ಅಪರಾಧಿಗಳ ಹಸ್ತಾಂತರ ಮಸೂದೆಗೆ ತಡೆ ನೀಡಲಾಗಿದೆ. ಈ ಮೂಲಕ ಕಳೆದ ಜೂನ್‌ನಿಂದ ಆರಂಭವಾಗಿರುವ ಪ್ರತಿಭಟನೆ ಅಂತ್ಯ ಕಾಣುವಂತಾಗಿದೆ.

ಏನಿದು ಹಸ್ತಾಂತರ ಕಾಯ್ದೆ?

- ಹಾಂಕಾಂಗ್ ಚೀನಾದ ಭಾಗವಾಗಿದ್ದರೂ ಪ್ರತ್ಯೇಕವಾದ ಕಾನೂನು ವ್ಯವಸ್ಥೆ ಹೊಂದಿದೆ. ಕಳೆದ ಫೆಬ್ರವರಿಯಲ್ಲಿ ಹಾಂಕಾಂಗ್‌ನ ಸೆಕ್ಯುರಿಟಿ ಬ್ಯೂರೋ, ಹಸ್ತಾಂತರ ಮಸೂದೆಯಲ್ಲಿ ತಿದ್ದುಪಡಿ ಮಾಡುವ ಸಂಬಂಧಿಸಿದ ಕರಡು ಸಲ್ಲಿಸಿತ್ತು.
- ಅದರಂತೆ ಶಂಕಿತ ಅಪರಾಧಿಗಳನ್ನು ಚೀನಾಗೆ ಹಸ್ತಾಂತರಿಸಲು ಅವಕಾಶವಿತ್ತು. ಇದರಿಂದ ಹಾಂಕಾಂಗ್ ಮೇಲೆ ಚೀನಾ ಪ್ರಾಬಲ್ಯ ಹೆಚ್ಚಲಿದೆ.
- ನೂತನ ಕಾನೂನಿನನ್ವಯ ಪ್ರತಿಯೊಂದು ಪ್ರಕರಣಗಳನ್ನೂ ಚೀನಾಗೆ ಹಸ್ತಾಂತರಿಸಲು ಅವಕಾಶವಿರುತ್ತದೆ.
- ಇದರಿಂದ ಹಾಂಕಾಂಗ್‌ನ ಕಾನೂನು ವ್ಯವಸ್ಥೆ ತನ್ನ ಬಲವನ್ನು ಕಳೆದುಕೊಳ್ಳಲಿದೆ ಎಂಬ ಆರೋಪ ವ್ಯಕ್ತವಾಗಿತ್ತು. ಹೀಗಾಗಿ ಈ ಕಾಯ್ದೆ ವಿರುದ್ಧ ಜನರು ಹೋರಾಟ ಆರಂಭಿಸಿದ್ದರು.

ಚೀನಾದ ಭಾಗ ಹಾಂಕಾಂಗ್:

- ಬ್ರಿಟಿಷ್ ವಸಾಹತು ಆಗಿದ್ದ ಹಾಂಕಾಂಗ್ 1997ರಲ್ಲಿ ಚೀನಾ ಆಡಳಿತಕ್ಕೆ ಒಳಪಟ್ಟಿತು. ಹಾಂಕಾಂಗ್‌ನ್ನು ಚೀನಾದ ಭಾಗ ಎಂದು ಗುರುತಿಸಲಾಗುತ್ತದೆಯಾದರೂ ಇದರ ನ್ಯಾಯಾಂಗ ವ್ಯವಸ್ಥೆ, ಕಾನೂನು ವ್ಯವಸ್ಥೆ ಚೀನಾಗಿಂತ ಭಿನ್ನವಾಗಿದೆ.
- ಶಂಕಿತ ಅಪರಾಧಿಗಳನ್ನು ವಿಚಾರಣೆಗಾಗಿ ಚೀನಾಗೆ ಹಸ್ತಾಂತರಿಸಬೇಕೆಂದು ರೂಪಿಸಲಾಗಿರುವ ಮಸೂದೆ ವಿವಾದಕ್ಕೆ ಕಾರಣವಾಗಿದೆ.
- ಚೀನಾ ಮತ್ತು ಹಾಂಕಾಂಗ್ ನಡುವಿನ ಕಾನೂನು 2047ರಲ್ಲಿ ಅಂತ್ಯಗೊಳ್ಳಲಿದೆ. ನಂತರ ಹಾಂಕಾಂಗ್‌ನ ಸ್ಥಿತಿ ಏನು ಎನ್ನುವುದರ ಬಗ್ಗೆ ಸ್ಪಷ್ಟತೆ ಇಲ್ಲ.
- ಚೀನಾ ಹಾಂಕಾಂಗ್‌ನ್ನು ಸಂಪೂರ್ಣವಾಗಿ ತನ್ನ ಅಧೀನಕ್ಕೆ ತರುವ ಯತ್ನದಲ್ಲಿದ್ದು, ಇದರ ಭಾಗವಾಗಿಯೇ ಶಂಕಿತ ಅಪರಾಧಿಗಳ ಮಸೂದೆಯನ್ನು ರೂಪಿಸಲು ಸೂಚಿಸಲಾಗಿತ್ತು ಎನ್ನಲಾಗಿದೆ.

ಪ್ರತಿಭಟನಾಕಾರರ ಬೇಡಿಕೆಯೇನು?

- ಶಂಕಿತರ ಹಸ್ತಾಂತರ ಕಾಯ್ದೆಯನ್ನು ಸಂಪೂರ್ಣವಾಗಿ ಹಿಂಪಡೆದುಕೊಳ್ಳುವುದು.
- ಪ್ರತಿಭಟನಾಕಾರರ ವಿರುದ್ಧ ಮಾಡಲಾಗಿರುವ ದಂಗೆ ಆರೋಪಗಳನ್ನು ಹಿಂಪಡೆಯುವುದು.
- ಬಂಧಿತ ಪ್ರತಿಭಟನಾಕಾರರಿಗೆ ಕ್ಷಮೆ
- ಪೊಲೀಸರ ದೌರ್ಜನ್ಯದ ವಿರುದ್ಧ ಸ್ವತಂತ್ರ ಸಂಸ್ಥೆಯಿಂದ ತನಿಖೆ
- ಚೀನಾದ ಕೈಗೊಂಬೆಯಂತೆ ಆಡುವ ಕ್ಯಾರಿ ಲಾಮ್ ರಾಜೀನಾಮೆ ನೀಡುವುದು

ಪ್ರತಿಭಟನೆ ಹಾದಿ:

- ಮಾ.31: ಸಾವಿರಾರು ಜನರು ನೂತನ ತಿದ್ದುಪಡಿಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದರು.
- ಏ.28: ಹತ್ತಾರು ಸಾವಿರ ಜನರು ಹಾಂಕಾಂಗ್ ಸಂಸತ್ತಿನ ಎದುರು ಪ್ರತಿಭಟನೆ ನಡೆಸಿದರು.
- ಮೇ 11: ಸಂಸತ್ತಿನಲ್ಲೇ ಇಬ್ಬಣವಾಯಿತು. ಸ್ವಾತಂತ್ರ್ಯ ಪರವಾದ ಮತ್ತು ಚೀನಾ ಪರವಾದ ತಂಡಗಳೆಂದು ವಿಂಗಡಣೆಗಳಾದವು.
- ಮೇ 30: ಹಸ್ತಾಂತರ ಕಾಯ್ದೆಯಲ್ಲಿ ಕೆಲ ಬದಲಾವಣೆಗಳನ್ನು ಮಾಡಿ ಪ್ರಕರಣಗಳ ಆಧಾರದಲ್ಲಿ ಆರೋಪಿಗಳನ್ನು

ಹಸ್ತಾಂತರಿಸಲು ಸರ್ಕಾರ ಒಪ್ಪಿತು.

- ಜೂ.6: ಇದಕ್ಕೆ ಸಮ್ಮತಿಸದ ಹಾಂಕಾಂಗ್‌ನ 3000 ರಾಜಕೀಯ ನಾಯಕರು ಕಪ್ಪು ಬಟ್ಟೆ ತೊಟ್ಟು ರಸ್ತೆಗಿಳಿದು ಪ್ರತಿಭಟನೆ ನಡೆಸಿದರು. ಇದರಿಂದ ಪ್ರತಿಭಟನೆಗೆ ಅಧಿಕೃತ ಚಾಲನೆ ನೀಡಿದಂತಾಯಿತು.
- ಜೂ.12: ಶಾಂತಿಯುತವಾಗಿ ನಡೆಯುತ್ತಿದ್ದ ಪ್ರತಿಭಟನೆ ಹಿಂಸಾರೂಪ ಪಡೆದುಕೊಂಡಿತು. 5 ಲಕ್ಷ ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದರು. ಪೊಲೀಸರು ಅಶ್ರುವಾಯು, ರಬ್ಬರ್ ಬುಲೆಟ್ಗಳ ಪ್ರಯೋಗ ಮಾಡಿದರಾದರೂ ಹೆಚ್ಚು ಫಲಕಾರಿಯಾಗಲಿಲ್ಲ. ಸರ್ಕಾರಿ ಕಚೇರಿಗಳನ್ನು ಮುಚ್ಚಲಾಯಿತು.
- ಆ.9: ಪ್ರತಿಭಟನೆಯಲ್ಲಿ ಭಾಗವಹಿಸಿದ ಕಾರಣಕ್ಕೆ ವಿಮಾನ ಪೈಲಟ್ ಓರ್ವನನ್ನು ತೆಗೆದು ಹಾಕಲಾಯಿತು.
- ಆ.14: ಹಾಂಕಾಂಗ್‌ನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಯೇ ಭಾರಿ ಪ್ರತಿಭಟನೆ ಆರಂಭವಾಯಿತು. ವಿಮಾನಗಳ ಹಾರಾಟ ರದ್ದುಪಡಿಸಲಾಯಿತು.
- ಸೆ. 4: ಸರ್ಕಾರ ಅಂತಿಮವಾಗಿ ಮಸೂದೆ ಹಿಂಪಡೆಯಲು ಸಮ್ಮತಿ ಸೂಚಿಸಿತು.

8. ಯುಎಸ್‌ನಲ್ಲಿ ಯುದ್ಧ ಅಭ್ಯಾಸ:

- ಇಂಡೋ–ಯುಎಸ್ ರಕ್ಷಣಾ ಸಹಕಾರದ ಭಾಗವಾಗಿ ಜಂಟಿ ಮಿಲಿಟರಿ ತರಬೇತಿ 'ಯುದ್ಧ ಅಭ್ಯಾಸ್ 2019' ಸೆಪ್ಟೆಂಬರ್ 5–18 ರವರೆಗೆ ಅಮೆರಿಕದ ವಾಷಿಂಗ್ಟನ್‌ನ ಜಾಯಿಂಟ್ ಬೇಸ್ ಮೆಕ್ ಬೋರ್ಡ್‌ನಲ್ಲಿ ನಡೆಯಲಿದೆ.

9. **ಭಾರತ –ರಷ್ಯಾ ನಡುವೆ 15 ಒಪ್ಪಂದ:**

ಪ್ರಮುಖ ಒಪ್ಪಂದಗಳು:

- ರಷ್ಯಾ ಮಿಲಿಟರಿ ಸಾಧನಗಳ ಬಿಡಿ ಭಾಗಗಳ ಉತ್ಪಾದನೆ
- ಆಡಿಯೊ ವಿಶುವಲ್ ಜಂಟಿ ಉತ್ಪಾದನೆ
- ರಸ್ತೆ ಸಾರಿಗೆ ಅಭಿವೃದ್ಧಿಗೆ ಸಹಕಾರ
- ಪರೋಕ್ಷ ತೆರಿಗೆಗಳ ಉಲ್ಲಂಘನೆ ತಡೆಗೆ ಕ್ರಮ
- ನೈಸರ್ಗಿಕ ಅನಿಲ ಬಳಕೆಗೆ ಉತ್ತೇಜನ
- ಕಲ್ಲಿದ್ದಲು ಗಣಿಗಾರಿಕೆಗೆ ಸಹಕಾರ
- ಹೂಡಿಕೆಗೆ ಉತ್ತೇಜನ
- ವಾಣಿಜ್ಯ ಕ್ಷೇತ್ರದಲ್ಲಿ ಪರಸ್ಪರ ಸಹಯೋಗ
- ಬಾಹ್ಯಾಕಾಶ
- ವಾಯು ಮತ್ತು ಸಮುದ್ರ ಮಾರ್ಗ ಸಂಪರ್ಕ
- ಪರಮಾಣು ಇಂಧನ
- ತೈಲ ಮತ್ತ ಅನಿಲ ಒಪ್ಪಂದಗಳಿಗೆ ಉಭಯ ದೇಶಗಳ ನಡುವೆ ಪ್ರತಿನಿಧಿಗಳ ಮಟ್ಟದ ಸಭೆಯಲ್ಲಿ ಸಹಿ ಹಾಕಲಾಗಿದೆ.

ಚೆನ್ನೈ–ವ್ಲಾಡಿವೊಸ್ಟೊಕ್ ನಡುವೆ ಜಲಮಾರ್ಗ:

- ಸರಕುಗಳ ಸಾಗಣೆಗೆ ಅನುವಾಗಲು ಚೆನ್ನೈನಿಂದ ರಷ್ಯಾದ ಬಂದರು ನಗರಿ ವ್ಲಾಡಿವೊಸ್ಟೊಕ್ವರೆಗೆ ಸುಸಜ್ಜಿತ ಜಲ ಮಾರ್ಗ ರಚನೆಗೆ ಭಾರತ–ರಷ್ಯಾ ಒಪ್ಪಂದಕ್ಕೆ ಸಹಿ ಹಾಕಿವೆ.
- ಮೊದಲು ಉಭಯ ದೇಶಗಳ ತಜ್ಞರು ಪ್ರಸ್ತಾವನೆಯೊಂದನ್ನು ಸಿದ್ದಪಡಿಸಲಿದ್ದಾರೆ.

ಗಗನಯಾತ್ರಿಕರಿಗೆ ರಷ್ಯಾ ತರಬೇತಿ:

- ಭಾರತದ ಮಹತ್ವಾಕಾಂಕ್ಷೆಯ ಯೋಜನೆ 'ಗಗನಯಾನ'ಕ್ಕೆ ಭಾರತೀಯ ಗಗನಯಾತ್ರಿಕರನ್ನು ಎಲ್ಲ ರೀತಿಯಲ್ಲಿ ಸನ್ನದ್ಧಗೊಳಿಸಲು ರಷ್ಯಾ ಬಾಹ್ಯಾಕಾಶ ಸಂಸ್ಥೆ 'ರೋಸ್‌ಕಾಸ್ಮೋಸ್' ವತಿಯಿಂದ ತರಬೇತಿ ನೀಡುವ ಒಪ್ಪಂದಕ್ಕೆ ಕೂಡ ಸಹಿ ಹಾಕಲಾಗಿದೆ.

10. ಪ್ರಸಕ್ತ ಸಾಲಿನ 'ಪ್ರಯಾಣ ಮತ್ತು ಪ್ರವಾಸೋದ್ಯಮ ಸ್ಪರ್ಧಾತ್ಮಕತೆ ವರದಿ'ಯಲ್ಲಿ ಭಾರತ ಪಟ್ಟಿಯಲ್ಲಿ 34ನೇ ಸ್ಥಾನ:

- ದಕ್ಷಿಣ ಏಷ್ಯಾದಲ್ಲೇ ಅಗ್ರಗಣ್ಯ ಸ್ಥಾನ ಗಳಿಸಿದ ದೇಶವೆಂಬ ಹಿರಿಮೆಗೆ ಭಾರತ ಪಾತ್ರವಾಗಿದೆ.
- 121ನೇ ಸ್ಥಾನದ ಮೂಲಕ ಪಾಕಿಸ್ತಾನವು ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲೇ ಕೊನೆಯ ರ್‍ಯಾಂಕಿಂಗ್ ಪಡೆದಿದೆ. 140ನೇ ಸ್ಥಾನದೊಂದಿಗೆ ಯೆಮೆನ್ ಪಟ್ಟಿಯಲ್ಲಿ ಕಟ್ಟಕಡೆಯ ಸ್ಥಾನದಲ್ಲಿದೆ.

ಟಾಪ್ 10 ದೇಶಗಳು

- ಸ್ಪೇನ್
- ಫ್ರಾನ್ಸ್
- ಜರ್ಮನಿ
- ಜಪಾನ್
- ಅಮೆರಿಕ
- ಬ್ರಿಟನ್
- ಆಸ್ಟ್ರೇಲಿಯಾ

- ಇಟಲಿ
- ಕೆನಡಾ
- ಸ್ವಿಜ್ಜರ್‌ಲೆಂಡ್

11. ಭಯೋತ್ಪಾದನೆ ವಿರುದ್ದ ಒಗ್ಗಟ್ಟಿನ ಹೋರಾಟ:

- ದಕ್ಷಿಣ ಕೊರಿಯಾದಲ್ಲಿ ನಡೆಯುತ್ತಿರುವ 'ಸಿಯೋಲ್ ಡಿಫೆನ್ಸ್ ಡೈಲಾಗ್ 2019' ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗವಹಿಸಿ ಭಯೋತ್ಪಾದನೆ ವಿರುದ್ದ ಒಗ್ಗಟ್ಟಿನ ಹೋರಾಟ ಅಗತ್ಯ ಎಂದಿದ್ದಾರೆ.
- ಭಾರತ ಶಾಂತಿ, ಸಮಾಧಾನಪ್ರಿಯ ರಾಷ್ಟ್ರ. ನೆರೆಹೊರೆ ರಾಷ್ಟ್ರಗಳ ಜತೆಗೆ ಶಾಂತಿ, ಸ್ನೇಹದಿಂದಿರಲು ಬಯಸುತ್ತದೆ. ಭಾರತದ ವಿದೇಶಾಂಗ ನೀತಿಯೂ ನೆರೆಹೊರೆಯವರೊಂದಿಗಿನ ಉತ್ತಮ ಸಂಬಂಧಗಳಿಗೆ ಆದ್ಯತೆ ನೀಡುತ್ತದೆ. ಕೊರಿಯಾದಲ್ಲಿ ಶಾಂತಿ, ಸ್ಥಿರತೆ ಮತ್ತು ಸಂಭಾಷಣೆ ಮತ್ತು ಅಣ್ವಸ್ತ್ರ ವಿರೋಧಿ ರಾಜತಾಂತ್ರಿಕ ನಡೆಗೆ ಭಾರತ ಪ್ರೋತ್ಸಾಹಿಸುತ್ತದೆ ಎಂದರು.
  ಈ ಸಮಾವೇಶದಲ್ಲಿ 50 ರಾಷ್ಟ್ರಗಳ ರಕ್ಷಣಾ ಅಧಿಕಾರಿಗಳು ಮತ್ತು 5 ಅಂತಾರಾಷ್ಟ್ರೀಯ ಸಂಸ್ಥೆಗಳು ಭಾಗವಹಿಸಿದ್ದವು.

12. ತೈಲ ಪೈಪ್‌ಲೈನ್ ಲೋಕಾರ್ಪಣೆ :

- ಮೋತಿಹಾರ್ (ಭಾರತದ ಬಿಹಾರದಲ್ಲಿರುವ ಈಸ್ಟ್ ಚಂಪಾರಣ್ ಜಿಲ್ಲೆಯ ಪ್ರದೇಶ) ಅಮ್ಲೇಕ್ ಗಂಜ್ (ನೇಪಾಳದ ಬಾರಾ ಜಿಲ್ಲೆಯ ಪ್ರದೇಶ) 60 ಕಿ.ಮೀ. ಉದ್ದದ ತೈಲ ಪೈಪ್‌ಲೈನ್ ಯೋಜನೆಯನ್ನು ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ನೇಪಾಳ ಪ್ರಧಾನಿ ಕೆ.ಪಿ.ಶರ್ಮಾ ಒಲಿ ಜಂಟಿಯಾಗಿ ವಿಡಿಯೋ ಕಾರ್ಯಕ್ರಮದ ಮೂಲಕ ಲೋಕಾರ್ಪಣೆ ಮಾಡಿದ್ದಾರೆ.
- ನೇಪಾಳಕ್ಕೆ 1973ರಿಂದ ಈಚೆಗೆ ಟ್ಯಾಂಕರ್‌ಗಳ ಮೂಲಕವೇ ಪೆಟ್ರೋಲಿಯಂ ಉತ್ಪನ್ನಗಳ ಸಾಗಣೆ ಆಗುತ್ತಿದೆ.
- ನೇಪಾಳ ಆಯಿಲ್ ಕಾರ್ಪೊರೇಷನ್‌ಗೆ ಪೆಟ್ರೋಲಿಯಂ ಉತ್ಪನ್ನಗಳ ಸಾಗಾಟಕ್ಕೆ ವಾರ್ಷಿಕ 200 ಕೋಟಿ ರೂಪಾಯಿ ವೆಚ್ಚವಾಗುತ್ತಿತ್ತು.
- ನೇಪಾಳ ಎದುರಿಸುತ್ತಿದ್ದ ಇಂಧನ ಸಾಗಣೆಗೆ ಸಂಬಂಧಿಸಿದ ವೆಚ್ಚದ ಹೊರೆಯನ್ನು ಈ ಪೈಪ್‌ಲೈನ್ ಇಳಿಸಿದೆ. ಅಲ್ಲದೆ, ತೈಲೋತ್ಪನ್ನ ಸೋರಿಕೆ ಪ್ರಮಾಣವೂ ಇಳಿಕೆಯಾಗುವ ನಿರೀಕ್ಷೆ ಇದೆ. ಈ ಪ್ರಾಜೆಕ್ಟ್ ಗೆ ಭಾರತ 324 ಕೋಟಿ ರೂಪಾಯಿ ಹಣಕಾಸಿನ ನೆರವನ್ನೂ ಒದಗಿಸಿದೆ.

ಯೋಜನೆಯ ಪಥ:

- 1996ರಲ್ಲಿ ಮೊದಲ ಬಾರಿ ಮೋತಿಹಾರಿ– ಅಮೇಜ್ ಗಂಜ್ ಪೈಪ್‌ಲೈನ್ ಪ್ರಸ್ತಾವನೆ
- 2014ರಲ್ಲಿ ಪ್ರಧಾನಿ ಮೋದಿ ಕಾಠ್ಮಂಡು ಪ್ರವಾಸದ ವೇಳೆ ಪೈಪ್ ಲೈನ್ ಯೋಜನೆಗೆ ಮರುಜೀವ
- 2015ರ ಆಗಸ್ಟ್‌ನಲ್ಲಿ ಯೋಜನೆ ಜಾರಿಗೆ ಸಂಬಂಧ ಉಭಯ ರಾಷ್ಟ್ರಗಳ ನಡುವೆ ಒಪ್ಪಂದ
- 2015ರ ಭೂಕಂಪ ಅನಾಹುತದ ಕಾರಣ ಯೋಜನೆ ಜಾರಿಯಲ್ಲಿ ವಿಳಂಬ
- 2018ರ ಏಪ್ರಿಲ್‌ನಲ್ಲಿ ಕಾಮಗಾರಿಗೆ ಚಾಲನೆ

13. ಸಾಹಸಿ ನಮಿರಾ –

- ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೋ 'ಚಂದ್ರಯಾನ–2'ರ ಯಶಸ್ವಿ ಆಯಿತೇ ಎಂದು ಜಗತ್ತೇ ಬೆರಗಿನಿಂದ ನೋಡುತ್ತಿದೆ.
- ಈ ನಡುವೆ ಕೆಲವರ ಹೇಳಿಕೆಗಳು ಕೂಡ ಜಗತ್ತಿನ ಗಮನಸೆಳೆಯುತ್ತಿದೆ. ಅಂತಹ ಕೆಲವರ ಪೈಕಿ ಪಾಕಿಸ್ತಾನಿ ಮೂಲದ 'ನಮೀರಾ ಸಲೀಂ' ಒಬ್ಬರು.
- ಐತಿಹಾಸಿಕ ಚಂದ್ರಯಾನ 2 ಆಯೋಜಿಸಿದ ಇಸ್ರೋ ತಂಡವನ್ನು ಅಭಿನಂದಿಸುವ ಮೂಲಕ ಗಮನ ಸೆಳೆದವರು ನಮೀರಾ, 'ಸೇವ್ಸ್ ಟ್ರಸ್ಟ್' ಎಂಬ ಸರ್ಕಾರೇತರ ಸಂಸ್ಥೆಯೊಂದರ ಸಂಸ್ಥಾಪಕಿಯೂ ಹೌದು.
- ಕರಾಚಿಯಲ್ಲಿ ಜನಿಸಿದ ನಮೀರಾ ಸಲೀಂ, ಮೊನಾಕೊ ಮತ್ತು ದುಬೈನಲ್ಲಿ ನೆಲೆಕಂಡುಕೊಂಡಿದ್ದಾರೆ.
- ಅನ್ವೇಷಕಿಯಾಗಿ, ಪ್ರವಾಸಿಯಾಗಿ, ಕಲಾವಿದೆಯಾಗಿ ಬದುಕನ್ನು ರೂಪಿಸಿಕೊಂಡಿರುವ ಅವರು, 2017ರ ಏಪ್ರಿಲ್‌ನಲ್ಲಿ ಉತ್ತರ

ಧ್ರುವಕ್ಕೆ ಹೋಗಿ, ಅಲ್ಲಿಗೆ ತಲುಪಿದ ಮೊದಲ ಪಾಕಿಸ್ತಾನಿ ಎಂದೆನಿಸಿಕೊಂಡಿದ್ದರು.

- ಅದಕ್ಕೂ ಮೊದಲು 2008ರ ಜನವರಿಯಲ್ಲಿ ದಕ್ಷಿಣ ಧ್ರುವಕ್ಕೂ ಹೋಗಿದ್ದರು. ಇದಲ್ಲದೆ, ಮೌಂಟ್ ಎವರೆಸ್ಟ್‌ನಿಂದ ಸ್ಕೈಡೈವ್ ಮಾಡಿದ ಮೊದಲ ಏಷ್ಯನ್ ಎಂಬ ಕೀರ್ತಿಗೂ ಭಾಜನರಾಗಿದ್ದಾರೆ.
- ಮೊನಾಕೊದಲ್ಲಿ ಪಾಕಿಸ್ತಾನದ ಗೌರವ ರಾಯಭಾರಿಯಾಗಿ 2011ರಿಂದೀಚೆಗೆ. ಉಭಯ ದೇಶಗಳ ಸಂಬಂಧ ವೃದ್ಧಿಗೆ ನೆರವು ನೀಡುತ್ತಿದ್ದಾರೆ.

14. ಚಿನ್ನವನ್ನು ಹೆಚ್ಚು ದಾಸ್ತಾನು ಮಾಡಿಕೊಂಡಿರುವ ಪ್ರಮುಖ ದೇಶಗಳು.

• ಅಮೆರಿಕ	• ಚೀನಾ	• ಟರ್ಕಿ
• ಜರ್ಮನಿ	• ಸ್ವಿಜ್ಜರ್‌ಲ್ಯಾಂಡ್	• ತೈವಾನ್
• ಇಟಲಿ	• ಜಪಾನ್	• ಪೋರ್ಚುಗಲ್
• ಫ್ರಾನ್ಸ್	• ಭಾರತ	• ಕಜಕಿಸ್ತಾನ
• ರಷ್ಯಾ	• ನೆದರ್‌ಲ್ಯಾಂಡ್	• ಸೌದಿ ಅರೇಬಿಯಾ
• ಇಂಗ್ಲೆಂಡ್	• ಸ್ವೀಡನ್	• ಆಸ್ಟ್ರೇಲಿಯಾ
• ಲೆಬನಾನ್	• ಬೆಲ್ಜಿಯಂ	

15. ಐವರು ಮಹಿಳಾ ಪೊಲೀಸರಿಗೆ ವಿಶ್ವಸಂಸ್ಥೆ ಸೇವಾ ಪದಕದ ಗರಿ:

- ದಕ್ಷಿಣ ಸೂಡಾನ್‌ನ ಸಂಘರ್ಷ ಪೀಡಿತ ಪ್ರದೇಶಗಳಲ್ಲಿ ಮಾಡಿದ ಶಾಂತಿಪಾಲನಾ ಕೆಲಸಕ್ಕಾಗಿ ಭಾರತದ ಐವರು ಮಹಿಳಾ ಪೊಲೀಸರನ್ನು ವಿಶ್ವಸಂಸ್ಥೆ ಗೌರವಿಸಿದೆ. ಎಂದು ಗೃಹ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.
- ಚಂಡೀಗಢ ಪೊಲೀಸ್ ಇಲಾಖೆಯ ಇನ್‌ಸ್ಪೆಕ್ಟರ್ ರೀನಾ ಯಾದವ್, ಮಹಾರಾಷ್ಟ್ರ ಪೊಲೀಸ್ ಇಲಾಖೆಯ ಡಿಎಸ್‌ಪಿ ಗೋಪಿಕಾ ಜಹಗೀರ್‌ದಾರ್, ಗೃಹ ಸಚಿವಾಲಯದ ಡಿಎಸ್ಪಿ ಭಾರತಿ ಸಮಂತ್ರೆ, ಇನ್‌ಸ್ಪೆಕ್ಟರ್ ರಾಗಿಣಿ ಕುಮಾರಿ, ರಾಜಸ್ಥಾನ ಪೊಲೀಸ್ ಎಎಸ್‌ಪಿ ಕಮಲಾ ಶೇಖಾವತ್ ವಿಶ್ವಸಂಸ್ಥೆಯ ಸೇವಾ ಪದಕ ಪುರಸ್ಕೃತ ಅಧಿಕಾರಿಗಳು.

16. ಉತ್ತರ ಪ್ರದೇಶದ ಗ್ರೇಟರ್ ನೋಯ್ಡಾದಲ್ಲಿ ಆಯೋಜಿಸಿದ್ದ ವಿಶ್ವಸಂಸ್ಥೆಯ ಕನ್ವೆನ್ಷನ್ ಟು ಕಂಬ್ಯಾಟ್ ಡೆಸರ್ಟಿಫಿಕೇಶನ್ ಸಮಾವೇಶದ 14ನೇ ಅಧಿವೇಶನದಲ್ಲಿ 'ಡ್ರಾಟ್ ಟೂಲ್ ಬಾಕ್ಸ್' ಅನ್ನು ಅನಾವರಣ ಗೊಳಿಸಲಾಯಿತು:

- ಡ್ರಾಟ್ ಟೂಲ್ ಬಾಕ್ಸ್ ಬರಗಾಲದ ಬಗ್ಗೆ ಎಚ್ಚರಿಕೆ ನೀಡುವುದಲ್ಲದೆ, ತೀವ್ರವಾದ ನೀರಿನ ಕೊರತೆಯ ಪ್ರತಿಕೂಲ ಪರಿಣಾಮವನ್ನು ತಗ್ಗಿಸುವ ವಿಧಾನವನ್ನೂ ಸೂಚಿಸುತ್ತದೆ.
- 70 ದೇಶಗಳು ಟೂಲ್ ಬಾಕ್ಸ್ ಅನ್ನು ಬಳಸಲು ಆಸಕ್ತಿ ತೋರಿಸಿದೆ ಎಂದು ಯುಎನ್ ಕನ್ವೆನ್ಷನ್ ಟು ಕಂಬ್ಯಾಟ್ ಡೆಸರ್ಟಿಫಿಕೇಷನ್ (ಯುಎನ್‌ಸಿಸಿಡಿ) ಅಧಿಕಾರಿಗಳು ತಿಳಿಸಿದ್ದಾರೆ.

17. ಮಿಲಿಟರಿ ಮೆಡಿಸಿನ್ ಸಮಾವೇಶ:

- ಶಾಂಘೈ ಕೋ–ಆಪರೇಶನ್ ಆರ್ಗನೈಸೇಷನ್ (ಎಸ್‌ಸಿಒ) ಸದಸ್ಯ ರಾಷ್ಟ್ರಗಳ ಮಿಲಿಟರಿ ಮೆಡಿಸಿನ್ ಸಮಾವೇಶವನ್ನು ನವದೆಹಲಿಯಲ್ಲಿ ಸೆ.12ರಂದು ರಾಜನಾಥ್ ಸಿಂಗ್ ಉದ್ಘಾಟಿಸಿದರು.
- ಭಾರತ ಇದೇ ಮೊದಲ ಬಾರಿ ಎರಡು ದಿನಗಳ ಎಸ್‌ಸಿಒ ಸಮಾವೇಶವನ್ನು ಆಯೋಜಿಸಿದೆ.
- ಸಮಾವೇಶದಲ್ಲಿ 27 ಅಂತಾರಾಷ್ಟ್ರೀಯ ಮತ್ತು 40 ಭಾರತೀಯ ಪ್ರತಿನಿಧಿಗಳು ಭಾಗವಹಿಸಿದ್ದರು.

2017ರಲ್ಲಿ ಭಾರತ ಸೇರ್ಪಡೆ:

- 'ಶಾಂಘೈ ಕೋ– ಆಪರೇಷನ್ ಆರ್ಗನೈಸೇಷನ್' (ಎಸ್‌ಸಿಒ) ಯುರೇಷಿಯಾದ ರಾಜಕೀಯ, ಆರ್ಥಿಕ ಮತ್ತು ಭದ್ರತಾ ಮೈತ್ರಿ ಚೀನಾದ ಶಾಂಘೈನಲ್ಲಿ 2001ರ ಜೂನ್ 15ರಂದು

ಚೀನಾ, ಕಜಕಿಸ್ತಾನ, ರಷ್ಯಾ, ಕಿರ್ಗಿಸ್ತಾನ್, ತಜಿಕಿಸ್ತಾನ್ ಮತ್ತು ಅಜ್ ಬೇಕಿಸ್ತಾನ್ ರಾಷ್ಟ್ರಗಳು ಈ ಒಪ್ಪಂದವನ್ನು ಘೋಷಿಸಿದವು.

- 2002ರ ಜೂನ್‌ನಲ್ಲಿ ಎಸ್‌ಸಿಒ ಚಾರ್ಟರ್ಗೆ ಸಹಿ ಹಾಕಿದವು, ಮತ್ತು 2003ರ ಸೆಪ್ಟೆಂಬರ್ 19ರಂದು ಈ ಸಂಸ್ಥೆ ಅಥವಾ ಒಪ್ಪಂದ ಜಾರಿಗೆ ಬಂತು.
- ಅಜ್ ಬೇಕಿಸ್ತಾನ್ ಅನ್ನು ಹೊರತುಪಡಿಸಿ ಉಳಿದ ಐದು ರಾಷ್ಟ್ರಗಳು 1996ರಲ್ಲಿ ಸ್ಥಾಪಿಸಲಾದ ಶಾಂಘೈ ಫೈವ್ ಗ್ರೂಪ್‌ನ ಸದಸ್ಯರಾಗಿತ್ತು.
- 2017ರಲ್ಲಿ ಭಾರತ ಮತ್ತು ಪಾಕಿಸ್ತಾನ ಸದಸ್ಯತ್ವ ಪಡೆಯುವುದರೊಂದಿಗೆ ಎಸ್‌ಸಿಒ ಶಾಶ್ವತ ಸದಸ್ಯ ರಾಷ್ಟ್ರಗಳ ಸಂಖ್ಯೆ 8ಕ್ಕೆ ವಿಸ್ತರಣೆಗೊಂಡಿತು.
- ರಕ್ಷಣೆ, ಮಿಲಿಟರಿ ಕಾರ್ಯಾಚರಣೆ, ಆರ್ಥಿಕ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಸಹಕಾರ ನೀಡುವುದು ಈ ಸಂಘಟನೆಯ ಉದ್ದೇಶ.

18. ಭಾರತದ ಜನರಲ್ ಗುಹಾಗೆ ಯುಎನ್ಎಂಎಚ್ಎ ಸಾರಥ್ಯ :

- ಯೆಮೆನ್‌ನ ಬಂದರು ನಗರ ಹುದ್ದೆದ್ದಾಕ್ಕೆ ಸಂಬಂಧಿಸಿದ ಯುನೈಟೆಡ್ ನೇಷನ್ಸ್ ಮಿಷನ್ ಇನ್ ಸಪೋರ್ಟ್ ಆಫ್ ಹುದ್ದಾ ಅಗ್ರಿಮೆಂಟ್‌ನ ಮುಖ್ಯಸ್ಥ ಮತ್ತು ರೀಡಿಪ್ಲೋಯ್ಮೆಂಟ್ ಕೋಆರ್ಡಿನೇಷನ್ ಕಮಿಟಿ(ಆರ್‌ಸಿಸಿ)ಯ ಅಧ್ಯಕ್ಷರಾಗಿ ಲೆಫ್ಟಿನೆಂಟ್ ಜನರಲ್(ನಿವೃತ್ತ) ಅಭಿಜಿತ್ ಗುಹಾ ನೇಮಕವಾಗಿದ್ದಾರೆ.
- ಈ ವಿಷಯವನ್ನು ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್ ಆಂಟೊನಿಯೋ ಗುಟೆರಸ್ ಪ್ರಕಟಿಸಿದ್ದು, ಜನರಲ್ ಗುಹಾ ಅವರು ಲೆಫ್ಟಿನೆಂಟ್ ಜನರಲ್ ಮೈಕೆಲ್ ಲೊಲ್ಲೆಸ್‌ಗಾರ್ಡ್ ಅವರ ವ್ಯಕ್ತಿ ಉತ್ತರಾಧಿಕಾರಿಯಾಗಿದ್ದಾರೆ.

19. ಹವಾಮಾನ ವೈಪರೀತ್ಯದ ಅರಿವು ಮೂಡಿಸುವ ಗ್ರೇಟಾ ಥನ್ ಬರ್ಗ್:

- ಹವಾಮಾನ ವೈಪರೀತ್ಯದ ಪರಿಣಾಮಗಳನ್ನು ತಪ್ಪಿಸಲು ಕೈಗೊಳ್ಳ ಬಹುದಾದ ತುರ್ತು ಕ್ರಮಗಳನ್ನು ಪ್ರಚಾರಗೊಳಿಸುವಲ್ಲಿ ಮಹತ್ತರ ಸಾಧನೆ ಮಾಡಿದ ಸ್ವೀಡನ್ನ ಪರಿಸರ ಹೋರಾಟಗಾರ್ತಿ ಗ್ರೇಟಾ ಥನ್ ಬರ್ಗ್ ಅವರಿಗೆ ಅಮ್ನೆಸ್ಟಿ ಇಂಟರ್ ನ್ಯಾಷನಲ್‌ನ ಆತ್ಮಸಾಕ್ಷಿಯ ರಾಯಭಾರಿಗಳು ಪ್ರಶಸ್ತಿ ಮುಡಿಗೇರಿದೆ.

20. ರಣವೀರ್ ಸಿಂಗ್:



- 'ಅಂತಾರಾಷ್ಟ್ರೀಯ ಭಾರತೀಯ ಚಲನಚಿತ್ರ ಅಕಾಡೆಮಿ' (ಐಐಎಫ್ಎ–ಐಫಾ) 20ನೇ ಸಾಲಿನ ಪ್ರಶಸ್ತಿ ಪ್ರಕಟಿಸಿದ್ದು, ರಣವೀರ್ ಸಿಂಗ್ ಅತ್ಯುತ್ತಮ ನಟ ಪ್ರಶಸ್ತಿ ಪಡೆದುಕೊಂಡಿದ್ದಾರೆ.
- ಪದ್ಮಾವತ್ ಚಿತ್ರದ ಅಭಿನಯಕ್ಕೆ ರಣವೀರ್ ಸಿಂಗ್‌ಗೆ ಈ ಪ್ರಶಸ್ತಿ ನೀಡಲಾಗಿದೆ.
- ಭಾಜಿರಾವ್ ಮಸ್ತಾನಿ ಚಿತ್ರಕ್ಕೆ 2016ರಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದಾರೆ. ಫಿಲ್ಮಫೇರ್, ಜೀ ಸಿನಿಮಾ ಪ್ರಶಸ್ತಿ, ಫೆಮಿನಾ ಬ್ಯೂಟಿ ಅವಾರ್ಡ್, ಟೈಮ್ಸ್ ಆಫ್ ಇಂಡಿಯಾ ಫಿಲ್ಮ್ ಅವಾರ್ಡ್ ಸೇರಿದಂತೆ ಹಲವು ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ.
- ಅಮೆರಿಕದ ಬ್ಲೂಮಿಂಗ್ಟನ್ ಇಂಡಿಯಾನಾ ವಿಶ್ವವಿದ್ಯಾಲಯದಲ್ಲಿ ಕಲಾ ವಿಭಾಗದಲ್ಲಿ ಪದವಿ ಪಡೆದಿದ್ದಾರೆ.
- ರಣವೀರ್ ಸಿಂಗ್ ಮಹಾರಾಷ್ಟ್ರದ ಮುಂಬಯಿನಲ್ಲಿ ಜುಲೈ 6, 1985ರಲ್ಲಿ ಜನಿಸಿದರು.

ಗಮನಿಸಿ:

- ಇದೇ ವೇಳೆ ರಾಝಿ ಚಿತ್ರದ ಅಭಿನಯಕ್ಕೆ ಆಲಿಯಾ ಭಟ್‌ಗೆ ಅತ್ಯುತ್ತಮ ನಟಿ ಪ್ರಶಸ್ತಿ, ಭಾರತೀಯ ಚಿತ್ರರಂಗಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಬಾಲಿವುಡ್ ನಟ ಜಗದೀಪ್ ಜೆಫ್ರಿ ಅವರಿಗೆ ಜೀವಮಾನ ಶ್ರೇಷ್ಠ ಪ್ರಶಸ್ತಿ ನೀಡಿ ಗೌರವಿಸಲಾಯಿತು.

21. ಗೂಗಲ್ ಅಸಿಸ್ಟೆಂಟ್ ಭಾಷೆ: ಹಿಂದಿಗೆ 2ನೇ ಸ್ಥಾನ:

- ಭಾರತದಲ್ಲಿ ಅತಿ ಹೆಚ್ಚು ಜನ ಮಾತನಾಡುವ ಹಿಂದಿ ಭಾಷೆ, ಇದೀಗ ವಿಶ್ವದಲ್ಲಿ ಅತಿ ಹೆಚ್ಚು ಬಳಕೆಯಲ್ಲಿರುವ 'ಗೂಗಲ್ ಅಸಿಸ್ಟೆಂಟ್ ಭಾಷೆ' ಯಾಗಿ ಹೊರಹೊಮ್ಮಿದೆ.
- ತಂತ್ರಜ್ಞಾನ ದಿಗ್ಗಜ ಗೂಗಲ್‌ನ ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟಲಿಜೆನ್ಸ್) ಆಧಾರಿತ ಅಸಿಸ್ಟೆಂಟ್ ಭಾಷೆಗಳಲ್ಲಿ ಇಂಗ್ಲಿಷ್ ಮೊದಲ ಸ್ಥಾನದಲ್ಲಿದ್ದು, ನಂತರದ ಸ್ಥಾನದಲ್ಲಿ ಹಿಂದಿ ಇದೆ.
- ಗೂಗಲ್ ಅಸಿಸ್ಟೆಂಟ್‌ನಲ್ಲಿ ಸುಮಾರು 80 ರಾಷ್ಟ್ರಗಳ 30 ಭಾಷೆಗಳಿವೆ. ಗೂಗಲ್ ತನ್ನಲ್ಲಿ ಹುಡುಕಾಟ ನಡೆಸುವ ಭಾರತೀಯರಿಗೆ ಅನುಕೂಲವಾಗಲೆಂದು ಎರಡು ವರ್ಷಗಳ

ಹಿಂದೆ ಭಾರತೀಯ ಭಾಷೆಗಳನ್ನು ಅಸಿಸ್ಟೆಂಟ್ ಭಾಷೆಗಳಾಗಿ ಸೇರಿಸಿತ್ತು.

- ಹಿಂದಿ ಸೇರಿದಂತೆ ಇತರೆ 8 ಭಾರತೀಯ ಭಾಷೆಗಳು ಗೂಗಲ್ ಅಸಿಸ್ಟೆಂಟ್ ಭಾಷೆಗಳಾಗಿ ಸೇರ್ಪಡೆಯಾಗಿದ್ದವು.
- 2011ರ ಜನಗಣತಿಯ ಪ್ರಕಾರ ಭಾರತದಲ್ಲಿ ಒಟ್ಟು 52,83,47,193 ಹಿಂದಿ ಭಾಷಿಗರಿದ್ದಾರೆ.

ಹಿಂದಿಯಲ್ಲಿ ಗೂಗಲ್ ಟಾಕ್

- ಇದೀಗ 'ಹೇ ಗೂಗಲ್, ಟಾಕ್ ಟು ಮಿ ಇನ್ ಹಿಂದಿ' ಎನ್ನುವ ಮೂಲಕ ಗೂಗಲ್‌ನಲ್ಲಿ ನೇರವಾಗಿ ಹಿಂದಿಯಲ್ಲಿ ಮಾತನಾಡ ಬಹುದು.
- ಗೂಗಲ್ ಮತ್ತು ಅಮೆಜಾನ್ ಕಂಪನಿಗಳು ದೇಶದ ಪ್ರಾದೇಶಿಕ ಭಾಷೆಗಳ ಮೂಲಕ ಜನರನ್ನು ತಲುಪಲು ಪ್ರಯತ್ನಿಸುತ್ತಿವೆ.

22. ವಿಶ್ವಸಂಸ್ಥೆ ಆವರಣದಲ್ಲಿ ಸೋಲಾರ್ ಪಾರ್ಕ್ :

- ವಿಶ್ವಸಂಸ್ಥೆ ಪ್ರಧಾನ ಕಚೇರಿ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸೆಪ್ಟೆಂಬರ್ 24ರಂದು 'ಗಾಂಧಿ ಸೋಲಾರ್ ಪಾರ್ಕ್' ಉದ್ಘಾಟಿಸಲಿದ್ದಾರೆ.
- ಮಹಾತ್ಮಗಾಂಧೀಜಿ ಅವರ 150ನೇ ಜನ್ಮದಿನಾಚರಣೆ ಸ್ಮರಣಾರ್ಥ 71.04 ಕೋಟಿ ಮೌಲ್ಯದ ಸೋಲಾರ್ ಪ್ಯಾನಲ್ ಅನ್ನು ಭಾರತ ಉಡುಗೊರೆಯಾಗಿ ನೀಡಿದೆ.
- ಇದರ ಗರಿಷ್ಠ 50 ಕಿಲೋ ವಾಟ್, ಈ ಸಂದರ್ಭದಲ್ಲಿ ವಿಶ್ವಸಂಸ್ಥೆ ವಿಶೇಷ ಅಂಚೆ ಚೀಟಿಯನ್ನು ಮೋದಿ ಬಿಡುಗಡೆ ಮಾಡಲಿದ್ದಾರೆ,
- ಇದು ಮೊದಲ ಪ್ರಯತ್ನ, ಇಲ್ಲಿ 193 ಸೌರ ಫಲಕಗಳಿದ್ದು, ವಿಶ್ವಸಂಸ್ಥೆಯ ಎಲ್ಲ 193 ಸದಸ್ಯ ರಾಷ್ಟ್ರಗಳನ್ನು ಪ್ರತಿಬಿಂಬಿಸುತ್ತದೆ.

23. ಸಾಗರೋತ್ತರ ವಲಸಿಗರಲ್ಲಿ ಭಾರತ ನಂ.1:

- ಪ್ರಸ್ತುತ ವರ್ಷ ಭಾರತವು ಅಂತಾರಾಷ್ಟ್ರೀಯ ವಲಸಿಗರ ಮೂಲದೇಶಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.
- 2019ರಲ್ಲಿ ಸಾಗರೋತ್ತರ ಭಾರತೀಯರ ಸಂಖ್ಯೆ 1.75 ಕೋಟಿ ತಲುಪಿದೆ ಎಂದು ವಿಶ್ವಸಂಸ್ಥೆಯ ಸಾಮಾಜಿಕ ಮತ್ತು ಆರ್ಥಿಕ ವ್ಯವಹಾರಗಳ ಇಲಾಖೆಯ (ಡಿಇಎಸ್‌ಎ) ಜನಸಂಖ್ಯಾ ವಿಭಾಗವು ಬಿಡುಗಡೆಗೊಳಿಸಿರುವ ದಿ ಇಂಟರ್‌ನ್ಯಾಷನಲ್ ಮೈಗ್ರಂಟ್ ಸ್ಟಾಕ್ 2019ರ ವರದಿಯಲ್ಲಿ ತಿಳಿಸಲಾಗಿದೆ. ವಿಶ್ವಾದ್ಯಂತ ವಲಸಿಗರ ಸಂಖ್ಯೆಯು ಅಂದಾಜು 27.20 ಕೋಟಿ ತಲುಪಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಟಾಪ್ 10 ದೇಶಗಳು:

- 2019ರಲ್ಲಿ ಭಾರತದ 75 ಕೋಟಿ ಜನ ವಿದೇಶದಲ್ಲಿ ನೆಲೆ ನಿಲ್ಲುವ ಮೂಲಕ ಅಗ್ರಸ್ಥಾನ ತನ್ನದಾಗಿಸಿಕೊಂಡಿದೆ. ನಂತರದ ಸ್ಥಾನದಲ್ಲಿ ಮೆಕ್ಸಿಕೊ (18 ಕೋಟಿ),
  - ಚೀನಾ. (08),
  - ರಷ್ಯಾ (05 ಕೋಟಿ),
  - ಸಿರಿಯಾ (82 ಕೋಟಿ),
  - ಬಾಂಗ್ಲಾದೇಶ (78 ಕೋಟಿ),
  - ಪಾಕಿಸ್ತಾನ (63 ಕೋಟಿ),
  - ಉಕ್ರೇನ್ (59 ಕೋಟಿ),
  - ಫಿಲಿಪೀನ್ಸ್ (54 ಕೋಟಿ),
  - ಅಫ್ಘಾನಿಸ್ತಾನ (51 ಕೋಟಿ) ದೇಶಗಳಿವೆ.

ಭಾರತದಲ್ಲಿ ವಲಸಿಗರು:

- 2019ರಲ್ಲಿ ಭಾರತದಲ್ಲಿ 51 ಲಕ್ಷ ಜನರು ವಲಸಿಗರು ನೆಲೆ ಕಂಡುಕೊಂಡಿದ್ದಾರೆ. ಈ ಪ್ರಮಾಣ 2015ರಲ್ಲಿ 52 ಲಕ್ಷ ಇತ್ತು.
- 2010ರಿಂದ 2019ರವರೆಗಿನ ಅವಧಿಯಲ್ಲಿ ಭಾರತದಲ್ಲಿ ನೆಲೆಸಿದ ವಿದೇಶಿಗರ ಪಾಲು ಶೇ.4ರಲ್ಲಿ ಸ್ಥಿರವಾಗಿದೆ.
- ಈ ಅವಧಿಯಲ್ಲಿ ಭಾರತವು 2,07,000 ನಿರಾಶ್ರಿತರಿಗೆ ಆಶ್ರಯವನ್ನು ಒದಗಿಸಿದ್ದು, ಇದು ದೇಶದಲ್ಲಿಯ ಒಟ್ಟು ವಿದೇಶಿ ವಲಸಿಗರ ಸಂಖ್ಯೆಯ ಶೇ.4ರಷ್ಟಿದೆ. ಇದರಲ್ಲಿ ಶೇ.8ರಷ್ಟು ಮಹಿಳೆಯರಿದ್ದಾರೆ.
- ಭಾರತದಲ್ಲಿರುವ ವಿದೇಶಿ ವಲಸಿಗರ ಸರಾಸರಿ ವಯಸ್ಸು 47.1 ಆಗಿದೆ. ಭಾರತದಲ್ಲಿನ ಹೆಚ್ಚಿನ ವಲಸಿಗರು ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ನೇಪಾಳದವರು.
- 2019ರಲ್ಲಿ ಪ್ರಾದೇಶಿಕವಾಗಿ ಯುರೋಪ್ ಅತಿಹೆಚ್ಚು ವಲಸಿಗರಿಗೆ ಆತಿಥ್ಯ ನೀಡಿದೆ. ಯೂರೋಪ್ ಒಟ್ಟು8.2 ಕೋಟಿ ವಿದೇಶಿಗರಿಗೆ ನೆಲೆಯಾಗಿದೆ.
- ಆನಂತರ ಉತ್ತರ ಅಮೆರಿಕ (5.9 ಕೋಟಿ) ಹಾಗೂ ಉತ್ತರ ಆಫ್ರಿಕಾ ಮತ್ತು ಪಶ್ಚಿಮ – ಏಷ್ಯಾ (4.90 ಕೋಟಿ) ದೇಶಗಳಿವೆ.

24. ನೌಕಾಪಡೆಯ ಡ್ರೈ ಡಾಕ್:

- ಹಡಗು ಕಟ್ಟೆಯನ್ನು ಡ್ರೈ ಡಾಕ್ ಎಂದು ಕರೆಯಲಾಗುತ್ತದೆ. ಹಡಗಿನ ದುರಸ್ಥಿ, ಇಂಧನ ತುಂಬುವಿಕೆ ಮತ್ತು ಭಾರೀ ಯಂತ್ರೋಪಕರಣಗಳನ್ನು ತೆಗೆದು ಹಾಕುವ ನಿರ್ವಹಣೆಯ ಚಟುವಟಿಕೆಗಳು ಈ ಪ್ರದೇಶದಲ್ಲಿ ನಡೆಯುತ್ತದೆ.
- ಮುಂಬೈ ಬಂದರಿನಲ್ಲಿ 281 ಮೀ. ಉದ್ದದ ಡ್ರೈ ಡಾಕ್ ಅನ್ನು ಹಿಂದುಸ್ತಾನ್ ಕನ್‌ಸ್ಟ್ರಕ್ಷನ್ ಕಂಪನಿ (ಎಚ್‌ಸಿಸಿ) ನಿರ್ಮಿಸಿದ್ದು, ಸೆ.28ರಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉದ್ಘಾಟಿಸಲಿದ್ದಾರೆ.

ದೇಶದ ಅತಿ ದೊಡ್ಡ ಡ್ರೈ ಡಾಕ್

- ಹಡಗು ಕಟ್ಟೆ ಒಟ್ಟು 81 ಮೀಟರ್ ಉದ್ದ, 45 ಮೀ. ಅಗಲ ಮತ್ತು 17 ಮೀ. ಆಳವಿದೆ. ವಿಕ್ರಮಾದಿತ್ಯನಂತಹ ಯುದ್ಧ ವಿಮಾನ ವಾಹಕ ನೌಕೆ ಜತೆಗೆ ಇನ್ನೆರಡು ಸಣ್ಣ ನೌಕೆಯನ್ನು ಒಂದೇ ಸಲ ರಿಪೇರಿಗೆ ನಿಲ್ಲಿಸಬಹುದಾದಂತಹ ಸ್ಥಳಾವಕಾಶ ಹೊಂದಿದೆ. ಇದು ದೇಶದ ಅತಿ ದೊಡ್ಡ ಡ್ರೈ ಡಾಕ್.

25. ಗ್ರೆಟಾ ಟನ್‌ಬರ್ಗ್:

- ಸ್ವೀಡಿಷ್ ಯುವ ಪರಿಸರ ಹೋರಾಟಗಾರ್ತಿ ಗ್ರೆಟಾ ಟನ್‌ಬರ್ಗ್ ಅವರು ಅಮ್ನೆಸ್ಟಿಇಂಟರ್‌ನ್ಯಾಷನಲ್ ನೀಡುವ ಪ್ರತಿಷ್ಠಿತ 'ಆತ್ಮಸಾಕ್ಷಿಯ ರಾಯಭಾರಿ'ಗಳು (Ambassador of Conscience Award) ಪ್ರಶಸ್ತಿಗೆ ಭಾಜನರಾಗಿದ್ದಾರೆ.
- ಹವಾಮಾನ ದುರಂತವನ್ನು ತಪ್ಪಿಸುವ ನಿಟ್ಟಿನಲ್ಲಿ ತುರ್ತಾಗಿ ಕ್ರಮ ಕೈಗೊಳ್ಳಬೇಕಾದ ಅಗತ್ಯಗಳನ್ನು ಪ್ರಚುರಪಡಿಸಿದ ಆಕೆಯ ಕೆಲಸಗಳನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.
- 'ಫ್ರೈಡೇ ಫಾರ್ ಫ್ಯೂಚರ್' ಚಳವಳಿ ಶಾಲಾ ಇತಿಹಾಸದಲ್ಲೇ ದಾಖಲಾದ ವಿನೂತನ ಚಳವಳಿ ಎಂದು ಗುರುತಿಸಲಾಗಿದೆ.
- 16 ವರ್ಷದ ಗ್ರೆಟಾ 2018ರ ಡಿಸೆಂಬರ್ ತಿಂಗಳಿನಲ್ಲಿ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮ್ಮೇಳನದಲ್ಲಿ ಭಾಷಣ ಮಾಡಿದ್ದರು, ಈ ಭಾಷಣಕ್ಕೆ ರಾಜಕೀಯ ನಾಯಕರು ಮತ್ತು ಪರಿಸರ ಹೋರಾಟಗಾರರು ಮೆಚ್ಚುಗೆ ವ್ಯಕ್ತಪಡಿಸಿದ್ದರು.

26. ಅಮೆರಿಕದಲ್ಲಿನ ಭಾರತೀಯರು:



- ಅಮೆರಿಕದಲ್ಲಿನ ವಲಸಿಗರ ಸಂಖ್ಯೆಯಲ್ಲಿ ಭಾರತದ ಜನಸಂಖ್ಯೆ 4 ದಶಲಕ್ಷದಷ್ಟಿದೆ. ಯುಎಸ್‌ನಲ್ಲಿರುವ ಭಾರತೀಯರ ಸಂಖ್ಯೆ ಎಷ್ಟು ಎನ್ನುವುದರ ಬಗ್ಗೆ ಮಾಹಿತಿ.

27. ದೈಹಿಕ ವಿಕಲತೆ ಮೀರಿ ದಾಖಲೆ ನಿರ್ಮಿಸಿದ ಸ್ವರ್ಶ್ ಷಾ:

- ಭಾರತ–ಅಮೆರಿಕ ನಡುವಿನ ಭಾಂಧವ್ಯ ವೃದ್ದಿಗಾಗಿ ಅಮೆರಿಕದ ಭಾರತೀಯರು ಹೂಸ್ಟನ್‌ನಲ್ಲಿ ಆಯೋಜಿಸಿದ್ದ ಹೌಡಿ ಮೋದಿ ಕಾರ್ಯಕ್ರಮದಲ್ಲಿ 50 ಸಾವಿರ ಜನರ ಸಮ್ಮುಖ ಸ್ವರ್ಶ್ ಷಾ ಭಾರತದ ರಾಷ್ಟ್ರಗೀತೆ ಹಾಡಿ ಗಮನ ಸೆಳೆದಿದ್ದಾರೆ.
- ಒಸೆಜೆನೆಸಿಸ್ ಇಂಪರ್ಫೆಕ್ಟಾ ಎನ್ನುವ ಅತಿ ವಿರಳವಾದ ಕಾಯಿಲೆಯಿಂದ ಬಳಲುತ್ತಿರುವ 16 ವರ್ಷದ ಸ್ವರ್ಶ್ ಷಾ ಅಮೆರಿಕದಾದ್ಯಂತ ಅಪ್ರತಿಮ ಗಾಯಕನಾಗಿ ಹೊರ ಹೊಮ್ಮಿದ್ದಾನೆ ಎಂಬುದು ಹೆಮ್ಮೆಯ ಸಂಗತಿ.
- ನ್ಯೂಜರ್ಸಿ ಸಮೀಪದ ಇಸಿಲಿನ್ ಎಂಬಲ್ಲಿ ಷಾ 2003ರಲ್ಲಿ ಜನಿಸಿದರು. ಜನಿಸುವಾಗಲೇ 40ಕ್ಕೂ ಹೆಚ್ಚು ಭಾಗದಲ್ಲಿ ಮೂಳೆ ಮುರಿತಗೊಂಡಿತ್ತು.
- ವೈದ್ಯಕೀಯ ರಂಗಕ್ಕೆ ಸವಾಲಾದ ಚಿಕಿತ್ಸೆಗಳಿಂದ ಬದುಕಿದ ಈತ ಬಹುಮುಖ ಪ್ರತಿಭಾವಂತ. ದೇಹದ ಅನೇಕ ಮೂಳೆಗಳು ಗಾಜಿನಷ್ಟು ನಾಜೂಕಾಗಿವೆ.
- 130ಕ್ಕೂ ಹೆಚ್ಚು ಬಾರಿ ಮೂಳೆ ಮುರಿದುಕೊಂಡಿದ್ದರೂ ಗಾಯಕ, ಗೀತರಚನೆ ಮಾಡುವ ಮೂಲಕ ಅನೇಕ ದಾಖಲೆಗಳನ್ನು ಮುರಿದ ಖ್ಯಾತಿಗೆ ಪಾತ್ರನಾಗಿದ್ದಾನೆ.
- 8 ವರ್ಷಗಳಿಂದ ಹಿಂದುಸ್ತಾನಿ ಸಂಗೀತ ಕಲಿಯುತ್ತಿರುವ ಷಾ, 4 ವರ್ಷ ಅಮೆರಿಕನ್ ಸಂಗೀತವನ್ನೂ ಅಭ್ಯಾಸ ಮಾಡಿರುವುದು ಗಮನೀಯ.

- 6 ವರ್ಷದವನಿದ್ದಾಗ ಆಂಗ್ಲ ಶಬ್ದಕೋಶದ 12ಕ್ಕೂ ಹೆಚ್ಚು ಅತಿ ಉದ್ದದ ಶಬ್ದಗಳನ್ನು ಲೀಲಾಜಾಲವಾಗಿ ಹೇಳುತ್ತಿದ್ದ.
- ಈತನ ಗಾಯನ ಪ್ರತಿಭೆಗೆ ಸ್ಥಳೀಯಬಾನುಲಿ ಕೇಂದ್ರಗಳು ಮತ್ತು ವಿವಿಧ ಸಂಘಸಂಸ್ಥೆಗಳ ವೇದಿಕೆಗಳು ಆಶಯವಿತ್ತವು.
- ಹತ್ತಾರು ಕಥೆ, ಕವಿಗೆ ಬರೆದಿರುವ ಷಾ ಪ್ರೆರಣಾ ಭಾಷಣ ಮಾಡುವಲ್ಲೂ ಅಗ್ರಗಣ್ಯ. ನಾಲ್ಕು ಸ್ಥಳೀಯ ಸೊಗಡಿನಲ್ಲಿ ಆಂಗ್ಲ ಭಾಷಣ ಮಾಡುವ ಈತ ಪ್ರತಿಷ್ಠಿತ ಗ್ಯಾಮಿ, ವಿಶ್ವಸಂಸ್ಥೆ ವೇದಿಕೆಗಳಲ್ಲೂ ಗಾನಸುಧೆ ಹರಿಸಿದ ಪ್ರತಿಭೆ.
- ದೈಹಿಕ ವಿಕಲತೆಗಳನ್ನೂ ಮೀರಿ ದಾಖಲೆ ನಿರ್ಮಿಸುವ ಮಟ್ಟಕ್ಕೆ ಬೆಳೆಯಬಹುದು ಎಂಬುದಕ್ಕೆ ಈತನೇ ಸಾಕ್ಷಿ.

28. ಜಾಗತಿಕ ತಾಪಮಾನ ಶೃಂಗಸಭೆ:

ಏನಿದು ಶೃಂಗಸಭೆ ?

- ಜಾಗತಿಕ ತಾಪಮಾನ ನಿಯಂತ್ರಣಕ್ಕೆ ವಿಶ್ವಸಂಸ್ಥೆಯು ಪ್ರತಿವರ್ಷ ಕಾನ್ಫರೆನ್ಸ್ ಆಫ್ ದಿ ಪಾರ್ಟಿಸ್ ಅನ್ನು (ಸಿಒಪಿ) ಹಮ್ಮಿಕೊಳ್ಳುತ್ತದೆ.
- ಹೆಚ್ಚುತ್ತಿರುವ ಜಾಗತಿಕ ತಾಪಮಾನದ ನಿಯಂತ್ರಣಕ್ಕೆ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ವಿಶ್ವನಾಯಕರು ಈ ಶೃಂಗಸಭೆಯಲ್ಲಿ ಚರ್ಚಿಸುತ್ತಾರೆ.
- ಈ ಶೃಂಗಸಭೆಯಲ್ಲಿ ವಿಶ್ವನಾಯಕರು ತಾಪಮಾನ ನಿಯಂತ್ರಣಕ್ಕೆ ಹೊಸ ಒಪ್ಪಂದಗಳನ್ನು ಸರ್ವಾನುಮತದಿಂದ ಅಂಗೀಕರಿಸುತ್ತಾರೆ.

ಯಾರಾರು ಭಾಗಿ?

- ಭಾರತದ ಪ್ರಧಾನಿ ನರೇಂದ್ರ ಮೋದಿ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ವಿವಿಧ ದೇಶಗಳ ನಾಯಕರು ಈ ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದಾರೆ.
- ಮಹಾತ್ಮ ಗಾಂಧೀಜಿ ಅವರ 150ನೇ ಜನ್ಮ ದಿನಾಚರಣೆ ಸ್ಮರಣಾರ್ಥವಾಗಿ 04 ಕೋಟಿ ಮೌಲ್ಯದ ಸೋಲಾರ್ ಪ್ಯಾನಲ್ ಅನ್ನು ಭಾರತ ನೀಡಿದೆ.

ಭಾರತಕ್ಕೆ 3ನೇ ಸ್ಥಾನ:

- ಅತಿ ಹೆಚ್ಚು ಇಂಗಾಲ ಹೊರಸೂಸುವ ರಾಷ್ಟ್ರಗಳಲ್ಲಿ ಅಮೆರಿಕ ಮೊದಲ ಸ್ಥಾನದಲ್ಲಿದ್ದು, ಚೀನಾ ಮತ್ತು ಭಾರತ ಕ್ರಮವಾಗಿ 2 ಮತ್ತು 3ನೇ ಸ್ಥಾನದಲ್ಲಿವೆ.
- ಆಸ್ಟ್ರೇಲಿಯಾ ನಾಲ್ಕನೇ ಸ್ಥಾನದಲ್ಲಿದೆ ಜತೆಗೆ ವಿಶ್ವದಲ್ಲೇ ಅತಿ ಹೆಚ್ಚು ಹಸಿರುಮನೆ ಅನಿಲವನ್ನು ಹೊರಸೂಸುವ ಚೀನಾವು ಗಡುವು ಮುಗಿಯಲು 6 ತಿಂಗಳಿರುವಾಗಲೇ ಮಾಲಿನ್ಯ ತಗ್ಗಿಸುವ ಗುರಿಯನ್ನು ತಲುಪಿದೆ.

ಯುವ ಶೃಂಗಸಭೆ:

- ಇದೇ ಮೊದಲ ಬಾರಿಗೆ ಸೆಪ್ಟೆಂಬರ್ 21ರಂದು ಹವಾಮಾನ ಬದಲಾವಣೆ ಯುವ ಶೃಂಗಸಭೆಯನ್ನು ಆಯೋಜಿಸಲಾಗಿತ್ತು.
- ಇದರಲ್ಲಿ 600ಕ್ಕೂ ಹೆಚ್ಚು ಯುವ ಸದಸ್ಯರು ಪಾಲ್ಗೊಂಡಿದ್ದಾರೆ. ಭಾರತದಿಂದ ತಿರುವನಂತಪುರದ ಪಿ.ಆರ್.ವಿಷ್ಣು ಯುವ ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದಾರೆ.
- ಹವಾಮಾನ ಬದಲಾವಣೆ ತಗ್ಗಿಸಲು ಈಗಾಗಲೇ ಸಾಕಷ್ಟು ಕ್ರಮಕೈಗೊಂಡಿರುವ ಯುವ ನಾಯಕರು ಇದರಲ್ಲಿ ಭಾಗವಹಿಸಿದ್ದಾರೆ ಮತ್ತು ಹವಾಮಾನ ಬದಲಾವಣೆ ತಗ್ಗಿಸಲು ಪರಿಹಾರೋಪಾಯಗಳನ್ನು ಈ ಶೃಂಗಸಭೆಯಲ್ಲಿ ಚರ್ಚಿಸಿದ್ದಾರೆ.

ಹಸಿರುಮನೆ ಅನಿಲ ಪರಿಣಾಮ:

- ಭೂಮಿಯ ವಾತಾವರಣದಲ್ಲಿರುವ ನೀರಿನ ಆವಿ, ಕಾರ್ಬನ್ ಡೈ ಆಕ್ಸೈಡ್, ನೈಟ್ರಸ್ ಆಕ್ಸೈಡ್ ಮತ್ತು ಓಜೋನ್ ಅನಿಲಗಳು ಭೂಮಿಯ ಮೇಲಿನ ತಾಪಮಾನ ನಿಯಂತ್ರಿಸಲು ನೆರವಾಗುತ್ತವೆ.
- ಭೂಮಿಯ ಮೇಲ್ಮೈ ನಿಂದ ಹೊರಸೂಸುವ ಉಷ್ಣಾಂಶವನ್ನು ಈ ಹಸಿರುಮನೆ ಅನಿಲಗಳು ಹೀರಿಕೊಂಡು ಎಲ್ಲಾ ದಿಕ್ಕುಗಳಿಗೂ ಪಸರಿಸುತ್ತವೆ. ಇದರಿಂದ ಭೂಮಿಯ ವಾತಾವರಣ ಸಮತೋಲನದಲ್ಲಿ ಇರಲು ಸಾಧ್ಯವಾಗುತ್ತದೆ.
- ಕೈಗಾರಿಕಾ ಕ್ರಾಂತಿಗೂ ಮುನ್ನ ಜಗತ್ತಿನಾದ್ಯಂತ ಇದ್ದ ಜಾಗತಿಕ ತಾಪಮಾನವು 2100ರ ವೇಳೆಗೆ 2 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗದಂತೆ ನೋಡಿಕೊಳ್ಳಬೇಕಾಗುತ್ತದೆ.
- ಆದರೆ, ಈ ಉದ್ದೇಶ ಸಾಧಿಸುವುದು ಅಷ್ಟು ಸುಲಭವಲ್ಲ ಎಂದೆನಿಸುತ್ತದೆ. ಸೌರಶಕ್ತಿ ಸೇರಿದಂತೆ ನವೀಕರಿಸಬಹುದಾದ ಶಕ್ತಿಯ ಮೂಲಗಳತ್ತ ಎಲ್ಲಾ ದೇಶಗಳು ಗಮನ ನೀಡಲು ಪ್ರೋತ್ಸಾಹಿಸಲಾಗುತ್ತಿದೆ.

29. ಸಮಗ್ರ ವಿಧಾನದ ಶಿಕ್ಷಣ ಅಗತ್ಯ:

- ಪ್ರಸ್ತುತ ಮೌಲ್ಯಗಳು ಮತ್ತು ಜೀವನಶೈಲಿಯಿಂದ ಅಭಿವೃದ್ಧಿ ತತ್ವಶಾಸ್ತ್ರದವರೆಗಿನ ಎಲ್ಲವನ್ನೂ ಒಳಗೊಂಡಿರುವ ಒಂದು ಸಮಗ್ರ ವಿಧಾನದ ಶಿಕ್ಷಣ ಅಗತ್ಯವಿದೆ.
- ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ವರ್ತನೆಯನ್ನು ಬದಲಾಯಿಸಿ ಕೊಂಡರೆ ಮಾತ್ರ ಪ್ರಗತಿ ಸಾಧಿಸಲು ಸಾಧ್ಯ ಎಂದು ಭಾರತದ ಪ್ರಧಾನಿ ನರೇಂದ್ರ ಮೋದಿ ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆ ಪ್ರಧಾನ ಕಚೇರಿಯಲ್ಲಿ ನಡೆದ ಜಾಗತಿಕ ಹವಾಮಾನ ಸಮಾವೇಶದಲ್ಲಿ ಪ್ರತಿ ಪಾದಿಸಿದ್ದಾರೆ.
- ಭಾರತದಲ್ಲಿ ನವೀಕರಿಸಬಹುದಾದ ಇಂಧನ ಉತ್ಪಾದನೆಯನ್ನು 450 ಗಿಗಾವ್ಯಾಟ್‌ಗೆ ಏರಿಸಲಾಗುವುದು. ಪರಿಸರಕ್ಕೆ ಹಾನಿ ಉಂಟು ಮಾಡುವ ಸಾಂಪ್ರದಾಯಿಕ ಮೂಲದ ಇಂಧನ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಲಾಗುವುದು ಎಂದು ಮೋದಿ ಭರವಸೆ ನೀಡಿದರು.
- ಅಲ್ಲದೆ, ಹವಾಮಾನ ಬದಲಾವಣೆಯಂತಹ ಗಂಭೀರ ಸವಾಲನ್ನು ಎದುರಿಸಬೇಕಾದರೆ ಎಲ್ಲ ರಾಷ್ಟ್ರಗಳು ಹೆಚ್ಚಿನ ಜವಾಬ್ದಾರಿ ಹೊರಬೇಕು ಎಂದರು.
- 2022ರ ವೇಳೆಗೆ ನಾವು ನವೀಕರಿಸಬಹುದಾದ ಪರಿಸರ ಸ್ನೇಹಿ ಇಂಧನ ಬಳಕೆ ಪ್ರಮಾಣವನ್ನು 175 ಗಿಗಾವ್ಯಾಟ್‌ಗೆ ಹೆಚ್ಚಿಸುತ್ತೇವೆ.
- ಮುಂದಿನ ದಿನಗಳಲ್ಲಿ ಈ ಪ್ರಮಾಣವನ್ನು 450 ಗಿಗಾವ್ಯಾಟ್‌ಗೆ ಕೊಂಡೊಯ್ಯುತ್ತೇವೆ ಎಂದರು.
- ಜಲ್ ಜೀವನ್ ಮಿಷನ್ ಕಾರ್ಯಕ್ರಮದಲ್ಲಿ ನೀರು ಸಂರಕ್ಷಣೆ, ಮಳೆನೀರು ಕೊಯ್ಲು ಮತ್ತು ಜಲಸಂಪನ್ಮೂಲ ಅಭಿವೃದ್ಧಿಪಡಿಸಲು ಭಾರತ ಕೆಲವೇ ವರ್ಷಗಳಲ್ಲಿ 5000 ಕೋಟಿ ರೂ. ಖರ್ಚು ಮಾಡಲಿದೆ.
- ಎಲೆಕ್ಟ್ರಿಕಲ್ ವಾಹನಗಳನ್ನು ಬಳಸುವ ಮೂಲಕ ಸಾರಿಗೆ ಕ್ಷೇತ್ರವನ್ನು ಹಸಿರುಗೊಳಿಸುವ ಯೋಜನೆ ರೂಪಿಸಿದೆ.
- ಪೆಟ್ರೋಲ್ ಮತ್ತು ಡೀಸೆಲ್‌ನಲ್ಲಿ ಜೈವಿಕ ಇಂಧನ ಮಿಶ್ರಣದ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲು ಭಾರತ ಯೋಜಿಸಿದೆ ಎಂದು ಮೋದಿ ಹೇಳಿದರು.

30. ವಾತಾವರಣ ಸಂರಕ್ಷಣೆ ಹೋರಾಟಗಾರ್ತಿ ರಿಧಿಮಾ:

- ವಿಶ್ವ ಸಂಸ್ಥೆಯ ಕ್ಲೈಮೇಟ್ ಚೇಂಜ್ (ವಾತಾವರಣದ ಬದಲಾವಣೆ) ಶೃಂಗ ಸಭೆಯಲ್ಲಿ ಹದಿಹರೆಯದ ಹೋರಾಟಗಾರ್ತಿ ಭಾರತದ ಹವಾಮಾನ ಕಾರ್ಯಕರ್ತೆ ರಿಧಿಮಾ ಪಾಂಡೆ ಪರ್ಯಾವರಣದ ಸಂರಕ್ಷಣೆಯಲ್ಲಿ ಸರ್ಕಾರಗಳು ಸೋತಿವೆ ಎಂಬ ದೂರು ಸಲ್ಲಿಸುವ ಮೂಲಕ ಗಮನ ಸೆಳೆದಿದ್ದಾರೆ.
- ಸ್ವೀಡನ್ ನ ಪರಿಸರ ಹೋರಾಟಗಾರ್ತಿ ಗ್ರೇಟಾ ಥನ್ ಬರ್ಗ್ ಸೇರಿ ಶೃಂಗ ಸಭೆಯಲ್ಲಿ ಭಾಗವಹಿಸಿರುವ ಹದಿಹರೆಯದ ಹೋರಾಟಗಾರರೆಲ್ಲರೂ ಇದಕ್ಕೆ ವಿಶೇಷ ಬೆಂಬಲ ವ್ಯಕ್ತಪಡಿಸಿದ್ದಾರೆ. ರಿಧಿಮಾ ಪಾಂಡೆ ಉತ್ತರಾಖಂಡ ಮೂಲದವರು.

31. ರಾಷ್ಟ್ರೀಯ ಭದ್ರತೆಗೂ ಟಿಕ್ ಟಾಕ್ ಸವಾಲು:

- ಆ್ಯಪ್ ಸ್ಟೋರ್‌ನಲ್ಲಿ ಕಳೆದ ವರ್ಷ ಇನ್ಸ್‌ಟಾಗ್ರಾಮ್‌ಗಿಂತ ಸೋಷಿಯಲ್ ವಿಡಿಯೊ ಷೇರಿಂಗ್ ಆ್ಯಪ್ ಟಿಕ್ ಟಾಕ್ ಹೆಚ್ಚಿನ ಸಂಖ್ಯೆಯಲ್ಲಿ ಡೌನ್ ಲೋಡ್ ಆಗಿದೆ.
- ಟಿಕ್ ಟಾಕ್ ವಿಡಿಯೊಗಳು ಕೇವಲ ಬಳಕೆದಾರರ ಖಾಸಗಿತನಕ್ಕೆ ಧಕ್ಕೆ ತರುವುದು ಮಾತ್ರವಲ್ಲದೇ, ರಾಷ್ಟ್ರೀಯ ಭದ್ರತೆಗೂ ಸವಾಲಾಗಿ ಪರಿಣಮಿಸುತ್ತಿವೆ!
- ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ನಿಕ್ ಫ್ರಿಶ್ ಅವರ ಬರೆದಿರುವ ಲೇಖನ ಈ ಬಗ್ಗೆ ಮಾಹಿತಿ ಚೆಲ್ಲಿದ್ದು, ಪಶ್ಚಿಮದ ತಂತ್ರಜ್ಞಾನವು ಚೀನಾಗೆ ಒಡ್ಡಿಕೊಳ್ಳುತ್ತಿರುವುದರಿಂದ ನಾವು ಅನಪೇಕ್ಷಿತ ಪರಿಣಾಮಗಳನ್ನು ಎದುರಿಸಬೇಕಾಗಬಹುದು.
- ಫೇಸ್‌ಬುಕ್‌ನಂಥ ಅಮೆರಿಕದ ಕಂಪನಿಗಳು ಆಕ್ರಮಣಕಾರಿಯಾಗಿವೆ ಎಂದು ದೂರುವವರು ಚೀನಾದ ದೈತ್ಯ ತಂತ್ರಜ್ಞಾನ ಕಂಪನಿಗಳತ್ತ ದೃಷ್ಟಿ ಹರಿಸಲಾರರು ಎನಿಸುತ್ತದೆ.
- ಅವು ಅಪಾರದರ್ಶಕ ಮತ್ತು ಸೆನ್ಸಾರ್‌ಶಿಪ್ ಅನ್ನು ನಿರಾಕರಿಸುವ ಕಣ್ಗಾವಲು ಉಪಕರಣಗಳೊಂದಿಗೆ ಸಹಕರಿಸುತ್ತವೆ' ಎಂದು ಅವರು ಬರೆದುಕೊಂಡಿದ್ದಾರೆ.

- ಅಮೆರಿಕದ ಸೇನಾ ಅಧಿಕಾರಿಯೊಬ್ಬರು ತಮ್ಮ ಮಗುವಿನೊಂದಿಗೆ ವಿಡಿಯೊ ಮಾಡಿ ಟಿಕ್ ಟಾಕ್‌ನಲ್ಲಿ ಷೇರ್ ಮಾಡಿಕೊಂಡಿದ್ದಾರೆ.
- ಇಂಥ ವಿಡಿಯೊಗಳಿಂದ ಚೀನಾದ ಗುಪ್ತಚರಕ್ಕೆ ಅನುಕೂಲವಾಗುವ ಮಾಹಿತಿಯನ್ನು ಕಲೆ ಹಾಕಲು ಸಾಧ್ಯವಿದೆಯೇ?, ಹೌದು ಸಾಧ್ಯವಿದೆ. ಆದರೆ, ಅದಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಗಳಿಲ್ಲ, ಎಂದು ಚೀನಾ ಎಡಿಟರ್ ಗ್ರಹಾಂ ವೆಬ್ಸ್ಟರ್ ಅವರು ಆಕ್ಸಿಯೋಸ್‌ನ ವರದಿಗಾರ್ತಿ ಎರಿಕಾ ಪಾಂಡೆಗೆ ತಿಳಿಸಿದ್ದಾರೆ.

32. ಪ್ರಧಾನಿ ನರೇಂದ್ರ ಮೋದಿ ಅವರಿಗೆ 'ಗ್ಲೋಬಲ್ ಗೋಲ್‌ಕೀಪರ್':

- ವಿಶ್ವಸಂಸ್ಥೆ ಮಹಾಅಧಿವೇಶನದಲ್ಲಿ ಪಾಲ್ಗೊಳ್ಳುವ ಸಲುವಾಗಿ ಅಮೆರಿಕ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ವಿಶ್ವದ ಅಗ್ರ ಶ್ರೀಮಂತರಲ್ಲಿ ಒಬ್ಬರಾದ ಬಿಲ್ ಗೇಟ್ಸ್ ಅವರ ಪ್ರತಿಷ್ಠಾನದಿಂದ 'ಗ್ಲೋಬಲ್ ಗೋಲ್‌ಕೀಪರ್' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.
- 'ಬಿಲ್ ಮತ್ತು ಮಿಲಿಂಡಾ ಗೇಟ್ಸ್ ಪ್ರತಿಷ್ಠಾನ' ದಿಂದ ಆಯೋಜಿಸಲಾಗಿದ್ದ ವಿಶೇಷ ಸಮಾರಂಭದಲ್ಲಿ ಮೋದಿ ಪ್ರಶಸ್ತಿ ಸ್ವೀಕರಿಸಿದರು.

ಗಾಂಧೀಜಿಯ ಸ್ಮರಣೆ:

- ವಿಶ್ವಸಂಸ್ಥೆಯ ಮುಖ್ಯ ಕಚೇರಿಯ ಆವರಣದಲ್ಲಿ ಪ್ರಧಾನಿ ಮೋದಿ ಗಾಂಧಿ ಸೋಲಾರ್ ಪಾರ್ಕ್ (50 ಕಿ. ವ್ಯಾಟ್ ಸಾಮರ್ಥ್ಯ), ಗಾಂಧಿ ಪೀಸ್ ಗಾರ್ಡನ್ ಉದ್ಘಾಟಿಸಿದ್ದಾರೆ.
- ಈ ಸಂದರ್ಭದಲ್ಲಿ ವಿಶ್ವಸಂಸ್ಥೆ ಮುಖ್ಯಸ್ಥ ಆ್ಯಂಟೋನಿಯೊ ಗುಟೆರೆಸ್, ದಕ್ಷಿಣ ಕೊರಿಯಾ ಅಧ್ಯಕ್ಷ ಮೂನ್ ಜೇ–ಇನ್, ಸಿಂಗಾಪುರ ಪ್ರಧಾನಿ ಲೀ ಸೀನ್ ಲೂಂಗ್, ಬಾಂಗ್ಲಾದೇಶ ಪ್ರಧಾನಿ ಶೇಖ್ ಹಸೀನಾ ಸೇರಿದಂತೆ ಇತರ ವಿಶ್ವನಾಯಕರು ಉಪಸ್ಥಿತರಿದ್ದರು.
- ಇದೇ ಸಂದರ್ಭದಲ್ಲಿ ಗಾಂಧೀಜಿಯ 150ನೇ ಜನ್ಮವರ್ಷಾಚರಣೆ ನಿಮಿತ್ತ ವಿಶ್ವಸಂಸ್ಥೆ ಹೊರತಂದಿರುವ ವಿಶೇಷ ಸ್ಟ್ಯಾಂಪ್ ಬಿಡುಗಡೆ ಮಾಡಲಾಯಿತು.

33. ರಾಷ್ಟ್ರಪಿತರು:

- ಭಾರತಕ್ಕೆ ಗಾಂಧೀಜಿ ಹೇಗೆ ರಾಷ್ಟ್ರಪಿತರೊ ಹಾಗೆ ಬೇರೆದೇಶಗಳಿಗೂ ರಾಷ್ಟ್ರಪಿತರಿದ್ದಾರೆ.

ಪ್ರಮುಖ ದೇಶಗಳ ರಾಷ್ಟ್ರಪಿತರು.

- ಎಂ.ಕೆ.ಗಾಂಧಿ: ಭಾರತ
- ಜಾರ್ಜ್ ವಾಷಿಂಗ್ಟನ್ : ಅಮೆರಿಕಾ
- ನೆಲ್ಸನ್ ಮಂಡೇಲಾ : ದಕ್ಷಿಣ ಆಫ್ರಿಕಾ
- ಮಹಮ್ಮದ್ ಆಲಿ ಜಿನ್ನ : ಪಾಕಿಸ್ತಾನ
- ಸನ್ ಯಾತ್–ಸೇನ್ : ಚೀನಾ
- ಮುಜಿಬುರ್ ರೆಹಾಮನ್ : ಬಾಂಗ್ಲದೇಶ
- ಡಿ. ಎಸ್.ಸೇನಾ ನಾಯಕೆ : ಶ್ರೀಲಂಕಾ
- ರಾಜ ತ್ರಿಭುವನ್ : ನೇಪಾಳ
- ಕೆ.ಎಂ.ಡಿ ಕೋಸ್ಪೆಡೆಸ್ : ಕ್ಯೂಬಾ
- ಪೀಟರ್ : ರಷ್ಯಾ
- ಇಬ್ನ್ ಸೌದ್ : ಸೌದಿ ಅರೇಬಿಯಾ
- ಸುಲ್ತಾನ್ ಆಲ್ ನಹ್ಯಾನ್ : ಯುಎಇ
- ಅಹ್ಮದ್ ಷಾ ದುರಾನಿ : ಆಫ್ಘಾನಿಸ್ತಾನ
- ಡಾನ್ ಜೋಸ್ ಡೆ : ಅರ್ಜೆಂಟಿನಾ
- ಅಂಗ್ ಸ್ಯಾನ್ : ಬರ್ಮಾ
- ಜಾನ್ ಎ.ಮ್ಯಾಕ್ಡೊನಾಲ್ಡ್ : ಕೆನಡಾ
- ಸೈರಸ್ ದಿ ಗ್ರೇಡ್ : ಇರಾನ್
- ಡೇವಿಡ್ ಬೆನ್ ಗುರಿಯನ್ : ಇಸ್ರೇಲ್
- ಡಿ ಸಾವೊ ಯಿಯಾ : ಇಟಲಿ
- ಜೋಮೋ ಕೆನ್ಯಾಟ್ಟಾ : ಕೀನ್ಯಾ

34. ಭಾರತ ಹೊರತುಪಡಿಸಿ ವಿಶ್ವದಲ್ಲೇ ಅತಿ ಹೆಚ್ಚು ಮಹಾತ್ಮಗಾಂಧಿ ಪ್ರತಿಮೆ ಮತ್ತು ಸ್ಮಾರಕಗಳಿರುವ ದೇಶ ಅಮೆರಿಕ:

- ವಿಶೇಷವೆಂದರೆ ಅಮೆರಿಕಕ್ಕೆ ಗಾಂಧಿ ಒಮ್ಮೆಯೂ ಭೇಟಿ ನೀಡಿರಲಿಲ್ಲ, ದೇಶದ ವಿವಿಧ ಭಾಗಗಳಲ್ಲಿ ಗಾಂಧಿ ಅವರ 24 ಪ್ರಮುಖ ಪ್ರತಿಮೆಗಳಿದ್ದು, ಹಲವು ಸಮುದಾಯ ಮತ್ತು ಸೇವಾ ಸಂಸ್ಥೆಗಳು ಅವರ ತತ್ವವನ್ನು ಅಳವಡಿಸಿಕೊಂಡಿವೆ.
- ವಾಷಿಂಗ್ಟನ್‌ನ ಬೆಥೆಸ್ಡಾದಲ್ಲಿ ಇರುವ 'ಗಾಂಧಿ ಸ್ಮಾರಕ ಕೇಂದ್ರ' ಅಮೆರಿಕದ ಮೊದಲ ಗಾಂಧಿ ನೆನಪಿನ ಸ್ಮಾರಕವಾಗಿದೆ.

35. ಸುಧಾರಿತ 20 ದೇಶಗಳ ಪಟ್ಟಿಯಲ್ಲಿ ಭಾರತ:

- ಸುಲಲಿತ ವ್ಯವಹಾರ ಅಥವಾ ಉದ್ಯಮಸ್ನೇಹಿ ವಾತಾವರಣ ಸೃಷ್ಟಿಗೆ ಸಂಬಂಧಿಸಿದಂತೆ ಹೆಚ್ಚು ಸುಧಾರಣೆ ಕಂಡಿರುವ 20 ದೇಶಗಳ ಪಟ್ಟಿಯನ್ನು ವಿಶ್ವಬ್ಯಾಂಕ್ ಸಿದ್ದಪಡಿಸಿದ್ದು ಅದರಲ್ಲಿ ಭಾರತವೂ ಒಂದಾಗಿದೆ. ಪಟ್ಟಿಯಲ್ಲಿ ಚೀನಾ, ಬಾಂಗ್ಲಾ, ಮ್ಯಾನ್ಮಾರ್ ಮತ್ತು ಪಾಕಿಸ್ತಾನಗಳೂ ಇವೆ.
- ವಿಶ್ವದಲ್ಲಿನ ಸುಲಲಿತ ವ್ಯವಹಾರದ ರಾಷ್ಟ್ರಗಳ ಪಟ್ಟಿಯಲ್ಲಿ 2014ರಲ್ಲಿ 142ನೇ ಸ್ಥಾನದಲ್ಲಿದ್ದ ಭಾರತ 2017ರಲ್ಲಿ 100ನೇ ಸ್ಥಾನಕ್ಕೆ ಜಿಗಿದಿತ್ತು, 2018ರಲ್ಲಿ 23 ಸ್ಥಾನ ಜಿಗಿದು 77ನೇ ಸ್ಥಾನಕ್ಕೇರಿತ್ತು. ಮುಂದಿನ ಹಂತದಲ್ಲಿ ಭಾರತವನ್ನು ಟಾಪ್–50ರೊಳಗೆ ಮೇಲೇರಿಸಬೇಕು ಎನ್ನುವ ಗುರಿಯನ್ನು ಕೇಂದ್ರ ಸರಕಾರ ಹೊಂದಿದೆ. ಪಾಕಿಸ್ತಾನವು 2018ರಲ್ಲಿ 136ನೇ ಸ್ಥಾನದಲ್ಲಿತ್ತು.

36. ಕ್ವಾಡ್ ಒಕ್ಕೂಟ :

- ದೇಶಗಳ ಮೊದಲ ಸಭೆ ಇತ್ತೀಚೆಗೆ ನಡೆದಿದೆ. ಚೀನಾವನ್ನು ಮಟ್ಟಹಾಕಲು ಹೆಣೆಯಲಾಗಿರುವ ಒಕ್ಕೂಟ ಎಂದೇ ವ್ಯಾಖ್ಯಾನಿಸಲಾಗುತ್ತಿರುವ ಈ ಒಕ್ಕೂಟದ ಬಗ್ಗೆ ಓದಿಷ್ಟು ಮಾಹಿತಿ ಇಲ್ಲಿದೆ.

ಕ್ವಾಡ್ ಎಂದರೇನು?:

- ಕ್ವಾಡ್ ಎಂದರೆ 'ಕ್ವಾಡ್ರಿಲ್ಯಾಟರಲ್ ಸೆಕ್ಯುರಿಟಿ ಡಯಲಾಗ್' ಅಥವಾ ಚತುಷ್ಕೋನ ಭದ್ರತಾ ಕೂಟ. ಭಾರತ, ಆಸ್ಟ್ರೇಲಿಯಾ, ಜಪಾನ್ ಹಾಗೂ ಅಮೆರಿಕಗಳು ಈ ಕೂಟದಲ್ಲಿವೆ.
- ಚೀನಾದ ಮಿಲಿಟರಿ ದಾಹವನ್ನು ಅರ್ಥ ಮಾಡಿಕೊಂಡು, ಅದಕ್ಕೆ ಎದುರಾಗಿ ಬಲಿಷ್ಠ ರಾಷ್ಟ್ರಗಳ ಕೂಟವೊಂದನ್ನು ಕಟ್ಟುವ ಈ ಮೂಲ ಪರಿಕಲ್ಪನೆ ಮೊಳೆತದ್ದು ಜಾರ್ಜ್.ಬುಶ್ ಹಾಗೂ ಜಪಾನಿನ ಪ್ರಧಾನಿ ಶಿಂಜೋ ಅಬೆ ಆಡಳಿತಾವಧಿ(2007)ಯಲ್ಲಿ.
- ಆದರೆ ಇದರಿಂದ ಆಗಬಹುದಾದ ಪ್ರತಿಕೂಲತೆಗಳನ್ನು ಥಟ್ಟನೆ ಅರ್ಥ ಮಾಡಿಕೊಂಡ ಚೀನಾ, ಆಸ್ಟ್ರೇಲಿಯಾವನ್ನು ಇದರಿಂದ ಹಿಂದೆ ಸರಿಯುವಂತೆ ಒತ್ತಾಯಿಸಿತು. ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಆಡಳಿತದಡಿಯಲ್ಲಿ ಈ ಪ್ರಾಂತ್ಯದಲ್ಲಿ ಹೆಚ್ಚುತ್ತಿರುವ ಆತಂಕವನ್ನು ಮನಗಂಡ ಆಸ್ಟ್ರೇಲಿಯಾ, ಬಳಿಕ ಕೂಟವನ್ನು ಸೇರಿಕೊಂಡಿತು.
- ಬರಾಕ್ ಒಬಾಮ ಅವಧಿಯಲ್ಲಿ ಕ್ವಾಡ್ ಪ್ರಕ್ರಿಯೆ ಹೆಚ್ಚು ಚುರುಕಾಯಿತು. ಇಂಡೊ–ಪೆಸಿಫಿಕ್ ಪ್ರಾಂತ್ಯದಲ್ಲಿ ತಡೆಯಿಲ್ಲದೆ ಸಮುದ್ರ ವಹಿವಾಟು ಹಾಗೂ ಭದ್ರತೆ ಇದರ ಮೂಲ ಆಶಯ.

ವಿಜ್ಞಾನ

1. ಚಂದ್ರಯಾನ–2 ಕ್ಕೆ ನಾಸಾ ಗಗನಯಾತ್ರಿ ಮೆಚ್ಚುಗೆ:

- ನಾಸಾದ ಹಿರಿಯ ಗಗನಯಾನಿ ಡೊನಾಲ್ಡ್ ಎ ಥಾಮಸ್ ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, ಭಾರತದ ಚಂದ್ರಯಾನವನ್ನು ನಾಸಾ ಬೆರಗುಗಣ್ಣಿನಿಂದ ನೋಡುತ್ತಿದೆ ಎಂದಿದ್ದಾರೆ.
- ನಾಸಾವು ಐದು ವರ್ಷದ ಬಳಿಕ ತನ್ನ ಗಗನಯಾತ್ರಿಕರನ್ನು ಚಂದ್ರನ ಇದೇ ಭಾಗದಲ್ಲಿ ಇಳಿಸುವ ಮಹತ್ವದ ಯೋಜನೆ ರೂಪಿಸಿದೆ.
- ಹೀಗಾಗಿ ಚಂದ್ರನ ಈ ಭಾಗದ ಮೇಲೆ ಯಾವ ರೀತಿ ಇದೆ, ಅಲ್ಲಿ ಇರುವ ಖನಿಜ, ರಾಸಾಯನಿಕ ಯಾವುವು ಎಂದು ಅರಿಯಲು ನಾವೆಲ್ಲಾ ಕಾತರರಾಗಿದ್ದೇವೆ ಎಂದು ಅವರು ಹೇಳಿದ್ದಾರೆ.
- ಚಂದ್ರನ ಅಂಗಳದಲ್ಲಿ – ಚಂದ್ರಯಾನ –2 ನೌಕೆ ಇಳಿಯುವ ಸಂದರ್ಭಕ್ಕೆ (ಸೆ. 7) ಪ್ರಧಾನಿ ಮೋದಿ ಸಾಕ್ಷಿಯಾಗಲಿದ್ದಾರೆ.
- ಬೆಂಗಳೂರಿನ ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರದ ಕಚೇರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೇಶದ ವಿವಿಧ ರಾಜ್ಯಗಳಿಂದ ಆಯ್ದ ಶಾಲಾ ವಿದ್ಯಾರ್ಥಿಗಳೂ ಭಾಗಿಯಾಗಲಿದ್ದಾರೆ.

2. ಪಿಒಪಿ ಗಣೇಶ:

- ಪಿಒಪಿ ಎಂದರೆ ಪ್ಲಾಸ್ಟರ್ ಆಫ್ ಪ್ಯಾರಿಸ್. ಇದರ ವೈಜ್ಞಾನಿಕ ಹೆಸರು ಜಿಪ್ಸಮ್. ಇದನ್ನು ಸುಮಾರು 150 ಡಿಗ್ರಿ ಸೆಲ್ಸಿಯಸ್ ಉಷ್ಣತೆಯಲ್ಲಿ ಬಿಸಿಯಾಗಿಸಿದಾಗ ಅದರಲ್ಲಿನ ತೇವಾಂಶ ಇಲ್ಲವಾಗುತ್ತದೆ.
- ಅದಕ್ಕೆ ಮತ್ತೆ ದ್ರವ (ನೀರು) ಬೆರೆಸಿದಾಗ ಅದು ಬಹುಬೇಗ ಹೀರಿಕೊಂಡು ಗಡುಸಾಗುತ್ತದೆ. ಇದನ್ನು ಸಾಮಾನ್ಯ ನೀರಿನಲ್ಲಿ ಮುಳುಗಿಸಿದಾಗ ಕರಗುವುದಿಲ್ಲ.
- ಅದರಿಂದ ಅದರ ಗಟ್ಟಿಮುದ್ದೆಯು ನೀರಿನ ಮೂಲವನ್ನೇ ತಡೆಯಬಹುದಾಗಿದೆ. ಇದರಲ್ಲಿ ಬಳಕೆಯಾಗಿರುವ ರಾಸಾಯನಿಕ ಬಣ್ಣಗಳು ಸೇರಿದಾಗ ಅವುಗಳಿಂದ ಭಾರವಾದ ಲೋಹಗಳು ಹೊರಬರುತ್ತವೆ.
- ಇದಲ್ಲದೆ, ನೀರಿನಲ್ಲಿನ ಆಮ್ಲೀಯತೆಯು ಹೆಚ್ಚಾಗುವುದಲ್ಲದೆ ಅದರಲ್ಲಿನ ಆಮ್ಲಜನಕದ ಪ್ರಮಾಣ ಕುಸಿತವಾಗುತ್ತದೆ.

ಎಲ್ಲೆಲ್ಲಿ ಬಳಕೆ?

- ಕಟ್ಟಡ ನಿರ್ಮಾಣದಲ್ಲಿ ಬಳಸುವ ಸಿಮೆಂಟ್ ಜೊತೆಗೆ ಒಳಾಂಗಣ ಅಲಂಕಾರಿಕ ವಸ್ತುವಾಗಿಯೂ ಇದು ವಿಸ್ತೃತ ಬಳಕೆಯಾಗುತ್ತದೆ.
- ಇಲ್ಲಿ ಇದನ್ನು ನುಣ್ಣಗೆ ಪುಡಿ ಮಾಡಿ ಮರುಬಳಕೆ ಮಾಡಲಾಗುತ್ತದೆ. ಕೈಕಾಲು ಮುರಿದವರಿಗೆ ಪ್ಲಾಸ್ಟರ್ ರೂಪದಲ್ಲಿಯೂ ಇದನ್ನು ಬಳಸಲಾಗುತ್ತದೆ.
- ಗಣೇಶ, ದುರ್ಗೆ, ವಿಶ್ವಕರ್ಮ ಸೇರಿದಂತೆ ಹಲವಾರು ಮೂರ್ತಿಗಳನ್ನು ಮಾಡಬಹುದು. ಜಿಪ್ಸಮ್‌ನಲ್ಲಿ ಕ್ಯಾಲ್ಸಿಯಂ ಮತ್ತು ಸಲ್ಫರ್ (ಗಂಧಕ) ಇರುವುದರಿಂದ ಅದನ್ನು ರಸಗೊಬ್ಬರ ಉತ್ಪಾದನೆಗೂ ಬಳಸಬಹುದು.

ದುಷ್ಪರಿಣಾಮ:

- ಪಿಒಪಿ ತಾನಾಗಿ ವಿಷಕಾರಿ ಅಲ್ಲ, ಆದರೆ ಅದರ ಉತ್ಪಾದನೆಗೆ ಭಾರಿ ಪ್ರಮಾಣದ ವಿದ್ಯುತ್ ಶಕ್ತಿ ಬಳಕೆಯಾಗಿರುತ್ತದೆ.
- ಕಾರ್ಖಾನೆಗಳಲ್ಲಿ ಕೆಲಸ ಮಾಡುವವರಿಗೆ ಸೂಕ್ತ ರಕ್ಷಣಾ ವ್ಯವಸ್ಥೆ ಕೊಡದಿದ್ದರೆ ಶ್ವಾಸಕೋಶ ಕಾಯಿಲೆಗೆ ತುತ್ತಾಗುತ್ತಾರೆ.
- ಫ್ಯಾಕ್ಟರಿ ಸುತ್ತ ವಾಯುಮಾಲಿನ್ಯ ಜಾಸ್ತಿ ಪ್ರಮಾಣದಲ್ಲಿರುತ್ತದೆ. ಪಿಒಪಿ ಗಣಪನನ್ನು ನೀರಲ್ಲಿ ಮುಳುಗಿಸಿದರೆ ಅಪಾಯಕಾರಿ ಅಲ್ಲ ಆದರೆ ಅದಕ್ಕೆ ಲೇಪಿಸಿದ ಬಣ್ಣ ತುಂಬ ಅಪಾಯಕಾರಿ.
- ಬಣ್ಣದಲ್ಲಿರುವ ಕೆಮಿಕಲ್ಗಳು ಜಲಚರಗಳಿಗೆ ಅಪಾಯಕಾರಿ ಅದೇ ನೀರು ಅಂತರ್ಜಲಕ್ಕೆ ಸೇರಿ ನಮ್ಮ ದೇಹಕ್ಕೂ ಅಪಾಯ ತರುತ್ತದೆ ಮಾನವನ ಜೀರ್ಣಾಂಗಕ್ಕೆ ಬಹುದೊಡ್ಡ ಸಮಸ್ಯೆಯನ್ನು ತಂದೊಡ್ಡುತ್ತದೆ ಸೀಸದ ಬಣ್ಣವಂತೂ ಬುದ್ಧಿಮಾಂದ್ಯಕ್ಕೂ ಕಾರಣವಾಗುತ್ತದೆ.
- ಪಿಒಪಿ ನೀರಿನಲ್ಲಿ ಕರಗಲು ಹಲವು ತಿಂಗಳು ತೆಗೆದುಕೊಳ್ಳುತ್ತದೆ. ಆ ಸಂದರ್ಭದ ಜಲಮೂಲವನ್ನು ವಿಷಕಾರಿಯಾಗಿ ಪರಿವರ್ತಿಸುವ ಕಾರ್ಯ ದೀರ್ಘವಾಗಿ ನಡೆಯುತ್ತದೆ.
- ಅದಲ್ಲದೆ ಮೂರ್ತಿ ತಯಾರಿಕೆಯಲ್ಲಿ ಬಳಕೆಯಾಗುವ ಬಣ್ಣಗಳಲ್ಲಿ ಮತ್ತು ಅಲಂಕಾರಿಕ ಸಾಮಾಗ್ರಿಗಳಲ್ಲಿ ಸತು, ಕ್ಯಾಲ್ಸಿಯಂ, ಸೀಸ,ಕಾರ್ಬನ್ ಮುಂತಾದ ಅಪಾಯಕಾರಿ ರಾಸಾಯನಿಕಗಳು ಉದರಬಾಧೆ ಉಸಿರಾಟದ ಕಾಯಿಲೆಗಳು, ರಕ್ತದ ಕಾಯಿಲೆಗಳ ಚರ್ಮದ ಕಾಯಿಲೆಗಳನ್ನು ಉಂಟುಮಾಡುತ್ತವೆ.

3. ಅಣಬೆಯಿಂದ ವಿದ್ಯುತ್ ಉತ್ಪಾದನೆ ಆವಿಷ್ಕಾರ:

- ನ್ಯೂಜೆರ್ಸಿ ಹೋಬೆನ್ಕೆನ್ ಸ್ಟೀವನ್ ಯೂನಿವರ್ಸಿಟಿ ಆಫ್ ಟೆಕ್ನಾಲಜಿ ಈ ಸಂಶೋಧನೆ ನಡೆಸಿದೆ.
- ಅಣಬೆ ಸೂರ್ಯನ ಬೆಳಕಿನಿಂದ ಶಕ್ತಿಯನ್ನು ಸೆರೆಹಿಡಿಯುತ್ತವೆ. ಇದೇ ಆಧಾರದಲ್ಲಿ ವಿಜ್ಞಾನಿಗಳು ವಿದ್ಯುತ್ ತಯಾರಿಸಲು ಈ ಬ್ಯಾಕ್ಟಿರಿಯಾಗಳನ್ನು ಬಳಸುತ್ತಿದ್ದಾರೆ.
- ಸಂಶೋಧಕರು ಅಣಬೆ– ಶಿಲೀಂಧ್ರವನ್ನು ಮಿನಿ ಎನರ್ಜಿ ಫಾರ್ಮ್ ಆಗಿ ಪರಿವರ್ತಿಸಿದ್ದಾರೆ. ಈ ಬಯೋನಿಕ್ ಮತ್ತೂಮ್ ಮೇಲ್ಮೈಯಲ್ಲಿ 3–ಡಿ ಮುದ್ರಣ, ವಾಹಕ ಶಾಯಿಯನ್ನು ಅಳವಡಿಸಲಾಗುತ್ತದೆ.

4. ಪ್ಲಾಸ್ಟಿಕ್ ಸಂಗ್ರಹಕ್ಕೆ ಗಾರ್ಬೇಜ್ ಕೆಫೆ:

- ಭಾರತದಲ್ಲಿ ಇದೇ ಮೊದಲು ಬಾರಿಗೆ 'ಗಾರ್ಬೇಜ್ ಕೆಫೆ'ಯೊಂದು ಆರಂಭವಾಗಿದೆ. ಛತ್ತೀಸ್‌ಗಢದ ಅಂಬಿಕಾಪುರ ನಗರಪಾಲಿಕೆಯು 'ಸ್ವಚ್ಛ ಭಾರತ ಅಭಿಯಾನ'ದಡಿ ಇಂಥದ್ದೊಂದು ವಿನೂತನ ಮಾದರಿಯ ಕೆಫೆ ಪರಿಚಯಿಸಿದೆ.

ಪ್ಲಾಸ್ಟಿಕ್ ಕೊಟ್ಟರೆ ಆಹಾರ:

- ಗ್ರಾಹಕರು ತರುವ ಪ್ಲಾಸ್ಟಿಕ್ ತ್ಯಾಜ್ಯಕ್ಕೆ ಅನುಗುಣವಾಗಿ ಅವರಿಗೆ ಉಚಿತ ಊಟ ನೀಡಲಾಗುತ್ತದೆ. ಭೂಮಿ ಸಂರಕ್ಷಣೆಯ ಜೊತೆಗೆ ಹಸಿವನ್ನು ನಿಯಂತ್ರಿಸುವ ಉದ್ದೇಶದಿಂದ ಈ ಕೆಫೆಯನ್ನು ಆರಂಭಿಸಲಾಗಿದೆ.
- ಕಸ ಆಯುವವರು ಮತ್ತು ಪ್ರತಿದಿನದ ಊಟಕ್ಕೆ ಪರದಾಡುವ ಬಡವರು ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತಂದು ಅದಕ್ಕೆ ಪ್ರತಿಯಾಗಿ ಊಟ ಮಾಡಿಕೊಂಡು ಹೋಗುತ್ತಾರೆ.

ಯಾವುದಕ್ಕೆ ಬಳಕೆ:

- ಹೀಗೆ ಕೆಫೆಯಲ್ಲಿ ಸಂಗ್ರಹಿಸಲಾಗುವ ಪ್ಲಾಸ್ಟಿಕ್ ತ್ಯಾಜ್ಯವನ್ನು ರಸ್ತೆ ನಿರ್ಮಾಣ ಕಾರ್ಯಕ್ಕೆ ಬಳಸಲು ಪಾಲಿಕೆ ಚಿಂತನೆ ನಡೆಸಿದೆ. ಅಲ್ಲದೆ ಈಗಾಗಲೇ ನಗರದ ಕೆಲವು ರಸ್ತೆಗಳನ್ನು ಡಾಂಬರು ಹಾಗೂ 8 ಲಕ್ಷ ಪ್ಲಾಸಿಕ್ ಚೀಲಗಳ ಮೂಲಕ ನಿರ್ಮಿಸಲಾಗಿದೆ.

ದೇಶದ ಎರಡನೇ ಸ್ವಚ್ಛ ನಗರ:

- ಸದ್ಯ ಸ್ವಚ್ಛ ಭಾರತ ಅಭಿಯಾನದ ಪಟ್ಟಿಯಲ್ಲಿ ಇಂದೋರ್ ಬಳಿಕ ಛತ್ತೀಸ್‌ಗಢದ ಅಂಬಿಕಾನಗರ 2ನೇ ಸ್ವಚ್ಛ ನಗರವಾಗಿದೆ.

5. ಹಲ್ಲಿನ ಕವಚ ಮರು ರಚನೆಗೆ ಔಷದ ಆವಿಷ್ಕಾರ:

- ಚೀನಾದ ಸಂಶೋಧಕರ ತಂಡ ಹಲ್ಲಿನ ಸವೆತ ತಡೆಯಲು ಔಷಧ ಕಂಡು ಹಿಡಿದಿದೆ
- ಈ ದ್ರವ ರೂಪದ ಔಷಧ ಹಲ್ಲಿನ ಮೇಲ್ಮೈ ಕವಚ ಮರುಬೆಳವಣಿಗೆಗೆ ಸಹಕಾರಿಯಾಗಿದೆ.
- ಯೋಮಿನರಲೈಸೇಶನ್ ಪ್ರಕ್ರಿಯೆಯಲ್ಲಿ ಹಲ್ಲಿನ ಕವಚ ರೂಪುಗೊಳ್ಳುತ್ತದೆ, ಈ ಮೂಲಕ ಅಮೆಲೋಬ್ಲಾಸ್ಟ್ ಎಂದು ಕರೆಯಲ್ಪಡುವ ಕೋಶಗಳು ಪ್ರೋಟಿನ್ ಸ್ರವಿಸಿ ಅಂತಿಮವಾಗಿ ಹಲ್ಲುಗಳ ಬಲಿಷ್ಠ ಬಾಹ್ಯ ಲೇಪನಕ್ಕೆ ಕಾರಣವಾಗುತ್ತದೆ.
- ಅಮೆಲೋಬ್ಲಾಸ್ಟ್ ಹಲ್ಲಿನ ಬೆಳವಣಿಗೆಯ ಸಮಯದಲ್ಲಿ ಮಾತ್ರ ಇರುತ್ತವೆ, ಅಂದರೆ ನಮ್ಮ ಪ್ರಬುದ್ಧ ಹಲ್ಲುಗಳು ರೂಪುಗೊಂಡ ನಂತರ ಸ್ವಯಂ–ದುರಸ್ತಿ ಮಾಡುವ ನೈಸರ್ಗಿಕ ಸಾಮರ್ಥ್ಯವನ್ನು ಹೊಂದಿರುವುದಿಲ್ಲ.
- ಈ ನಿಟ್ಟಿನಲ್ಲಿ ಕೃತಕವಾಗಿ ದಂತಕವಚ ರಚನೆಗೆ ವಿಜ್ಞಾನಿಗಳು ಹಲವಾರು ವಿಧಾನಗಳನ್ನು ಪ್ರಯತ್ನಿಸಿದ್ದಾರೆ. ಹೊಸ ಪ್ರಯೋಗ ಹಲ್ಲಿನ ಮೇಲ್ಪದರ ರಚನೆಗೆ ಸಹಕಾರಿಯಾಗಿದೆ ಎಂದು, ವಿಜ್ಞಾನಿಗಳು ತಿಳಿಸಿದ್ದಾರೆ.
- ಕ್ಯಾಲ್ಸಿಯಂ ಫಾಸ್ಫೇಟ್ ಅಯಾನ್ ಕ್ಲಸ್ಟರ್‌ಗಳಿಂದ ವಿನ್ಯಾಸಗೊಳಿಸಲಾದ ವಸ್ತುವನ್ನು ದಂತಕವಚ ರಚನೆಗೆ ಬಳಸಲಾಗಿದೆ.
- ಈ ಔಷಧ ತಯಾರಿಗೆ ಹೊಸ ರೀತಿಯ ಕ್ಯಾಲ್ಸಿಯಂ ಫಾಸ್ಫೇಟ್ ಅಯಾನ್ ಕ್ಲಸ್ಟರ್‌ಗಳು (ಸಿಪಿಐಸಿಗಳು) ಬೇಕಾಗುತ್ತವೆ, ಇದು ಕೇವಲ 1.5 ನ್ಯಾನೋಮೀಟರ್ ವ್ಯಾಸವನ್ನು ಅಳೆಯುತ್ತದೆ.
- ಈ ಸಣ್ಣ ಕಣಗಳನ್ನು ಟ್ರೈಥೈಲಾಮೈನ್ ಎಂಬ ರಾಸಾಯನಿಕದೊಂದಿಗೆ ಎಥೆನಾಲ್ ದ್ರಾವಣದಲ್ಲಿ ಸ್ಥಿರಗೊಳಿಸಲಾಗುತ್ತದೆ.

6. ಅಣ್ವಸ್ತ್ರ ಇಳಿಕೆ :ವಿಶ್ವಾದ್ಯಂತ ಅಣುಬಾಂಬ್ ಬತ್ತಳಿಕೆ

ಯಾವ ದೇಶಗಳು ಎಷ್ಟು ಅಣ್ವಸ್ತ್ರಗಳನ್ನು ಹೊಂದಿವೆ ಎಂಬುದರ ಬಗ್ಗೆ ಮಾಹಿತಿ

- ರಷ್ಯಾ
- ಅಮೆರಿಕ
- ಫ್ರಾನ್ಸ್
- ಚೀನಾ
- ಬ್ರಿಟನ್
- ಪಾಕಿಸ್ತಾನ
- ಭಾರತ
- ಇಸ್ರೇಲ್
- ಉತ್ತರ ಕೊರಿಯಾ

ಪ್ರಯೋಗಕ್ಕೆ ಸನ್ನದವಾಗಿರುವ ಆಣ್ವಸ್ತ್ರಗಳು

ರಷ್ಯಾ	1600
ಅಮೆರಿಕ	1600
ಫ್ರಾನ್ಸ್	280
ಬ್ರಿಟನ್	215

ವಿಶ್ವದ 90% ಆಣ್ವಸ್ತ್ರಗಳು ಅಮೆರಿಕ ಮತ್ತು ರಷ್ಯಾ ಕೈಯಲ್ಲಿವೆ.

7. ಭಾರತೀಯ ವಾಯುಪಡೆ ಅಪಾಚೆ ಹೆಲಿಕಾಪ್ಟರ್ ಸೇರ್ಪಡೆ:

- ಅಮೆರಿಕದಿಂದ ಖರೀದಿಸಲಾಗಿರುವ ಅತ್ಯಾಧುನಿಕ 8 ಅಪಾಚೆ ಹೆಲಿಕಾಪ್ಟರ್‌ಗಳನ್ನು ಭಾರತೀಯ ವಾಯುಪಡೆ ಸೇವೆಗೆ ಸಮರ್ಪಿಸಲಾಗಿದೆ.
- ಪಂಜಾಬ್‌ನ ಪಠಾಣ್‌ಕೋಟ್ ವಾಯುನೆಲೆಯಲ್ಲಿ ನೂತನ ಹೆಲಿಕಾಪ್ಟರ್‌ಗಳ ಸೇವೆ ಆರಂಭವಾಗಿದೆ.
- ಏರ್ ಚೀಫ್ ಮಾರ್ಷಲ್ ಬಿ.ಎಸ್. ಧನೋವಾ ಉಪಸ್ಥಿತಿಯಲ್ಲಿ ವಾಟರ್ ಕೆನನ್ ಸೆಲ್ಯೂಟ್ ಮೂಲಕ ವಾಯುಪಡೆಗೆ ಸೇರ್ಪಡೆ ಮಾಡಲಾಗಿದೆ.

ಅಪಾಚೆ ಸಾಮರ್ಥ್ಯ

- ವಿಶ್ವದಲ್ಲೇ ಸುಧಾರಿತ ಮಲ್ಟಿ ಕಾಂಬೇಟ್ ಹೆಲಿಕಾಪ್ಟರ್
- ಪ್ರತಿಗಂಟೆಗೆ 293 ಕಿಮೀ ಹಾರಾಟ ನಡೆಸುತ್ತದೆ.
- ಹೈ ಕ್ವಾಲಿಟಿ ನೈಟ್ ವಿಷನ್ ಸಿಸ್ಟಂ ಹೊಂದಿದೆ
- 114, ಹೆಲಿಕಾಪ್ಟರ್ ಕ್ಷಿಪಣಿಗಳನ್ನು ಹೊತ್ತು ಒಯ್ಯಲಿದೆ
- ಕತ್ತಲಲ್ಲೂ ಕಾರ್ಯ ನಿರ್ವಹಿಸಿ ಶತ್ರು ಪಡೆ ಧ್ವಂಸ ಮಾಡಲಿದೆ
- ವಿಶೇಷ ಸೆನ್ಸರ್‌ಗಳನ್ನು ಹೊಂದಿದೆ
- ಕ್ಷಿಪಣಿ ಸಜ್ಜಿತ ಹೆಲಿಕಾಪ್ಟರ್
- ಒಂದು ನಿಮಿಷದಲ್ಲಿ 128 ಶತ್ರು ತಂಡಗಳ ಮೇಲೆ ದಾಳಿ ಮಾಡುತ್ತದೆ
- ಭಾರಿ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಕೊಂಡೊಯ್ಯುವ ಶಕ್ತಿ ಹೊಂದಿದೆ.

ರಫೇಲ್ ವಿಶೇಷತೆ

- ಅತ್ಯಾಧುನಿಕ ಯುದ್ಧವಿಮಾನ
- ರಡಾರ್ ವಾರ್ನಿಂಗ್ ರಿಸೀವರ್
- ಇನ್ ಫಾರೆಡ್ ಸರ್ಚ್ ಮತ್ತು ಟ್ರ್ಯಾಕ್ ಸಿಸ್ಟಮ್
- ಹೆಲ್ಮಟ್ ಮೌಂಟೆಡ್ ಸೈಟ್, ಜಾಮರ್
- ಅತಿ ಶೀಥ ಪ್ರದೇಶದಲ್ಲೂ ಎಂಜಿನ್ ಕ್ರಿಯಾಶೀಲ
- ದುರ್ಗಮ ಪರ್ವತಗಳ ಮೇಲೂ ಕಾರ್ಯಾಚರಣೆ

8. ಚಂದ್ರನ ಸಮೀಪಕ್ಕೆ ವಿಕ್ರಮ್:

- ಭಾರತದ ಮಹತ್ವಾಕಾಂಕ್ಷೆಯ ಚಂದ್ರಯಾನ–2 ಕಕ್ಷೆಗಾಮಿಯಿಂದ ಪ್ರತ್ಯೇಕ ಗೊಂಡ ನಂತರ ಮೊದಲ ಬಾರಿಗೆ ಲ್ಯಾಂಡರ್ ವಿಕ್ರಮ್ ಅನ್ನು ಚಂದ್ರನ ಮೇಲೆ ಇಳಿಸಲು ಅನುಕೂಲವಾಗುವಂತೆ ಕೆಳಗಿನ ಕಕ್ಷೆಗೆ ನೂಕುವಲ್ಲಿ ಇಸ್ರೋ ಯಶಗೊಂಡಿದೆ.
- ಉಡಾವಣೆಯಿಂದ ಈವರೆಗೆ ಕಕ್ಷೆಗಾಮಿಗೇ ನಿರ್ದೇಶನಗಳನ್ನು (ಕಮಾಂಡ್) ರವಾನಿಸುವ ಮೂಲಕ ವಿಕ್ರಮ್ ಮತ್ತು ಪಜ್ಞಾನ್ (ರೋವರ್)ಗಳನ್ನು ನಿಯಂತ್ರಿಸಲಾಗುತ್ತಿತ್ತು.
- ಇದೀಗ ನೇರವಾಗಿ ಲ್ಯಾಂಡರ್ ಮತ್ತು ರೋವರ್‌ಗಳಿಗೆ ಕಮಾಂಡ್ ರವಾನಿಸಬಹುದಾಗಿದೆ. ಸೆ.7ರ ಬೆಳಗಿನ ಜಾವ ವೇಳೆಯಲ್ಲಿ ವಿಕ್ರಮ್ ಮತ್ತು ಪ್ರಜ್ಞಾನ್ ಚಂದ್ರನ ಮೇಲ್ಮೈ ಸ್ಪರ್ಶಿಸಲಿವೆ.

9. ಚಂದ್ರಯಾನ ವೀಕ್ಷಣೆಗೆ ವೈಷ್ಣವಿ ಆಯ್ಕೆ:

- ಚಂದ್ರಯಾನ ನೌಕೆ ಸೆ.7ಕ್ಕೆ ಚಂದ್ರನ ಮೇಲೆ ಇಳಿಯುವುದನ್ನು ಪ್ರಧಾನಿ ನರೇಂದ್ರ ಮೋದಿ ಜತೆಗೆ ವೀಕ್ಷಿಸಲು ಸಿಂಧನೂರಿನ ವಿದ್ಯಾರ್ಥಿನಿ ವೈಷ್ಣವಿ ಆಯ್ಕೆಯಾಗಿದ್ದಾರೆ.

- ಇಸ್ರೋ ವತಿಯಿಂದ ಆಯೋಜಿಸಿದ್ದ ಆನ್‌ಲೈನ್ ರಸಪ್ರಶ್ನೆಯಲ್ಲಿ ಉತ್ತಮ ಸಾಧನೆ ಮಾಡಿದ್ದ ಡಾಫಡಿಲ್ಸ್ ಕಾನ್ಸೆಪ್ಟ್ ಶಾಲೆಯ ವಿದ್ಯಾರ್ಥಿನಿ ವೈಷ್ಣವಿ ಆಯ್ಕೆಯಾಗಿದ್ದಾರೆ.

10. ಎಥನಾಲ್:

- ಅರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಎಥನಾಲ್ ಬೆಲೆ ಹೆಚ್ಚಳಕ್ಕೆ ಅನುಮೋದನೆ ನೀಡಿದೆ 'ಸಿ' ಹೆವಿ ಮೊಲಾಸೆಸ್ ಮತ್ತು ಬಿ ಹೆವಿ ಮೊಲಾಸೆಸ್ ಬೆಲೆಯನ್ನು ಕ್ರಮವಾಗಿ ಲೀಟರ್‌ಗೆ 29 ಪೈಸೆ ಹಾಗೂ 1.84 ರೂ. ಹೆಚ್ಚಿಸಿದೆ.

ಎಥನಾಲ್ ಎಂದರೇನು?

- ಕಬ್ಬು, ಸಿಹಿಜೋಳ, ಗೋವಿನಜೋಳ, ಕೃಷಿ ತ್ಯಾಜ್ಯಗಳಾದ ಕಬ್ಬಿನ ಸಿಪ್ಪೆ, ಹುಲ್ಲು ಮೊದಲಾದವುಗಳಲ್ಲಿರುವ ಸೆಲ್ಯುಲೋಸ್ ಎಂಬ ಸಂಯುಕ್ತ ಸಕ್ಕರೆ ಅಂಶದಿಂದ ತಯಾರಿಸಲಾಗುವ ಜೈವಿಕ ಇಂಧನವನ್ನು ಎಥನಾಲ್ ಎಂದು ಕರೆಯಲಾಗುತ್ತದೆ.
- ಅನುಪಯುಕ್ತ ಹಣ್ಣುಗಳನ್ನು ಬಳಸಿ ಎಥನಾಲ್ ತಯಾರಿಸುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ.

ಉಪಯೋಗವೇನು?

- ಆಲ್ಕೋಹಾಲ್‌ನ ಒಂದು ರೂಪವಾಗಿರುವ ಎಥನಾಲ್, ಪೆಟ್ರೋಲ್ ಅಥವಾ ಡೀಸೆಲ್‌ಗೆ ಬೆರೆಸಿದಲ್ಲಿ ವಾಹನದ ಕಾರ್ಯಕ್ಷಮತೆ ಉತ್ತಮವಾಗುತ್ತದೆ.
- ವಾಹನದಿಂದ ವಾತಾವರಣಕ್ಕೆ ಬಿಡುಗಡೆಯಾಗುವ ಇಂಗಾಲದ ಡೈ ಆಕ್ಸೈಡ್ ಪ್ರಮಾಣವೂ ತಗ್ಗಲಿದೆ.
- ಕಬ್ಬನ್ನು ಅರೆದು ಅದರ ರಸದಿಂದ ಉತ್ಪಾದಿಸಲಾಗುವ ಎಥನಾಲ್‌ನಲ್ಲಿ ಕೈಗಾರಿಕಾ ಆಲ್ಕೋಹಾಲ್, ಪೋಟಬಲ್ ಆಲ್ಕೋಹಾಲ್ ಹಾಗೂ ಎಥನಾಲ್ ಎಂಬ ಮೂರು ಉತ್ಪನ್ನಗಳು ಲಭ್ಯವಿವೆ.

ಜಾರಿಗೆ ತಂದಿದ್ದು ಬ್ರೆಜಿಲ್ :

- ಪೆಟ್ರೋಲ್‌ಗೆ ಕಬ್ಬಿನಿಂದ ತೆಗೆದ ಎಥನಾಲ್ ಬಳಸುವ ಪದ್ಧತಿಯನ್ನು ಮೊದಲು ಪ್ರಾಯೋಗಿಕವಾಗಿ ಜಾರಿಗೆ ತಂದಿದ್ದು ಬ್ರೆಜಿಲ್, 44 ವರ್ಷಗಳ ಹಿಂದೆ ಜಗತ್ತಿನಲ್ಲಿ ಎಥನಾಲ್ ಇಂಧನ ಉತ್ಪಾದಿಸುತ್ತಿರುವ ಎರಡನೇ ರಾಷ್ಟ್ರ ಆಗಿತ್ತು.
- ಬ್ರೆಜಿಲ್‌ನಲ್ಲಿ ಹೈಡ್ರಸ್ ಎಥನಾಲ್ (ಇ100) ಮತ್ತು ಪೆಟ್ರೋಲ್ (ಇ20 ಹಗೂ ಇ25) ಲಭ್ಯ.

2014ರಲ್ಲಿ:

- ಎಥನಾಲ್ ಅನ್ನು ಸಮರ್ಪಕವಾಗಿ ಸರಬರಾಜು ಮಾಡುವ ಉದ್ದೇಶದಿಂದ ಕೇಂದ್ರ ಸರಕಾರ 2014 ಡಿಸೆಂಬರ್‌ನಲ್ಲಿ ಎಥನಾಲ್ ಮಿಶ್ರಿತ ಪೆಟ್ರೋಲ್ ಕಾರ್ಯ ಕ್ರಮದಡಿ ಎಥನಾಲ್ ಬೆಲೆ ಪರಿಷ್ಕರಣೆ ಜಾರಿಗೆ ತಂದಿದೆ.
- ಎಥನಾಲ್ ಮಿಶ್ರಿತ ಪೆಟ್ರೋಲ್ (ಇಬಿಪಿ) ಯೋಜನೆಯಡಿ ಎಥನಾಲ್ ಅನ್ನು ಸಾರ್ವಜನಿಕ ವಲಯದ ತೈಲ ಕಂಪನಿಗಳಿಗೆ ಪೂರೈಸಲಾಗುತ್ತದೆ.

ಎಥನಾಲ್ ಮಿಶ್ರಣ:

- ಪೆಟ್ರೋಲ್ ನೊಂದಿಗೆ ಎಥನಾಲ್ ಅನ್ನು ಬೆರೆಸುವ ವಿಧಾನವನ್ನು ಎಥನಾಲ್ ಮಿಶ್ರಿತ ಪೆಟ್ರೋಲ್ ಎಂದು ಕರೆಯಲಾಗುತ್ತದೆ.
- ಈ ಮಿಶ್ರಣವನ್ನು ಎಥನಾಲ್ ಇಂಧನ ಅಥವಾ ಗ್ಯಾಸೊಹಾಲ್ ಎನ್ನಲಾಗುವುದು. ಇದೊಂದು ಅರೆ ನವೀಕರಿಸಬಹುದಾದ ಇಂಧನ ಭಾರತದಲ್ಲಿ ಎಥನಾಲ್ ಮಿಶ್ರಣ ಕಾರ್ಯಕ್ರಮವನ್ನು 2001ರಿಂದ ಪರಿಚಯಿಸಲಾಗಿದೆ.
- ವಾಹನ ಇಂಧನ ನೀತಿ 2003ರಲ್ಲಿ ಮೊದಲ ಬಾರಿಗೆ ಎಥನಾಲ್ ಮಿಶ್ರಣವನ್ನು ಉಲ್ಲೇಖಿಸಲಾಗಿದೆ.
- ರಾಷ್ಟ್ರೀಯ ಜೈವಿಕ ಇಂಧನ ನೀತಿ–2009ರ ಅನ್ವಯ ಎಲ್ಲ ತೈಲ ಕಂಪನಿಗಳು ಶೇ.5 ಎಥನಾಲ್‌ಅನ್ನು ಪೆಟ್ರೋಲ್‌ನೊಂದಿಗೆ ಮಿಶ್ರಣ ಮಾಡುವುದು ಕಡ್ಡಾಯವಾಗಿದೆ.

11. ತೀವ್ರ ಬೆಳಕಿನಿಂದ ಗಿಡ ರಕ್ಷಿಸಲು MOF ಆವಿಷ್ಕಾರ:

- ಆಸ್ಟ್ರೇಲಿಯಾದ ಸಂಶೋಧಕರ ತಂಡ ಸುಡು ಬಿಸಿಲಿನ ಕಾಲದಲ್ಲೂ ಅಂತಃ ನಿರ್ಮಿತ ಸನ್‌ಸ್ಕ್ರೀನ್‌ನಿಂದ ಸಸಿಗಳನ್ನು ಉಳಿಸಿಕೊಳ್ಳುವ ಮತ್ತು ತರಕಾರಿ, ಹಣ್ಣು ಬೆಳೆಯುವ ವಿಧಾನ ಸಂಶೋಧಿಸುತ್ತಿದ್ದಾರೆ.
- ಮೆಟಲ್ ಆರ್ಗ್ಯಾನಿಕ್ ಫೇಮ್(MOF) ಎಂದು ಕರೆಯಲ್ಪಡುವ ನ್ಯಾನೋ ಪರ್ಟಿಕಲ್ಸ್ ಹಾನಿಕಾರಕ ಅಲ್ಟ್ರಾವಾಯ್ಲೆಟ್ (ಯುವಿ) ವಿಕಿರಣವನ್ನು ಹೀರಿಕೊಳ್ಳುತ್ತದೆ.
- ಇದನ್ನು ಸಸ್ಯಕ್ಕೆ ಲೇಪಿಸಿದರೆ ಯುವಿ ಕಿರಣಗಳಿಂದ ಸಸ್ಯಗಳನ್ನು ರಕ್ಷಿಸುತ್ತದೆ ಎಂದು ಸಂಶೋಧಿಸಲಾಗಿದೆ.

- ಕೆಲವು ಮೆಟಲ್ ಆರ್ಗ್ಯಾನಿಕ್ ಫೇಮ್‌ಗಳು ಯುವಿ ಕಿರಣಗಳನ್ನು ಇತರ ತರಂಗಾಂತರಗಳಾಗಿ ಪರಿವರ್ತಿಸಬಹುದು. ಹಾಗೂ ಸಸ್ಯಗಳು ಬೆಳಕಿನಿಂದ ಆಹಾರವನ್ನು ಉತ್ಪಾದಿಸುವ ಪ್ರಕ್ರಿಯೆ ದ್ಯುತಿಸಂಶ್ಲೇಷಣೆಗೆ ಬಳಸಬಹುದು ಎಂದು ಮೆಲ್ಬೋರ್ನ್ ನಲ್ಲಿ ಆಸ್ಟ್ರೇಲಿಯನ್ ರಿಸರ್ಚ್ ಕೌನ್ಸಿಲ್ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಬಯೋ–ನ್ಯಾನೋ ಸೈನ್ಸ್ ಅ್ಯಂಡ್ ಟೆಕ್ನಾಲಜಿಯಲ್ಲಿ ಕೆಲಸ ಮಾಡುವ ನ್ಯಾನೊ–ಎಂಜಿನಿಯರ್ ಜೋಸೆಫ್ ರಿಚರ್ಡ್ಸನ್ ತಿಳಿಸಿದ್ದಾರೆ.
- ಈ ಪ್ರಯೋಗದಲ್ಲಿ ತನ್ನ ಕೆಲವು ಸಮಸ್ಯೆಗಳು ಕಂಡುಬಂದಿವೆ.
- ಸಸ್ಯಗಳನ್ನು ನ್ಯಾನೊಪರ್ಟಿಕಲ್‌ನೊಂದಿಗೆ ಲೋಡ್ ಮಾಡಲು ಪ್ರಯತ್ನಿಸಿದಾಗ ಕಾಂಡಗಳಿಗೆ ಹಾನಿಯಾಗುವ ಸಾಧ್ಯತೆಗಳಿವೆ.
- ಈ ನಿಟ್ಟಿನಲ್ಲಿ ಸಸ್ಯಗಳು ತಮ್ಮದೇ ಆದ MOF ಗಳನ್ನು ರಚಿಸುವಂತೆ ಮಾಡಲು ಸಂಶೋಧಕರ ತಂಡ ಕೆಲಸ ಮಾಡುತ್ತಿದೆ. ಆ MOF ಗಳು ಅಂಗಾಂಶ–ಹಾನಿಕಾರಕ ಯುವಿ ಕಿರಣಗಳನ್ನು ಸೆರೆಹಿಡಿಯಲು ಸಾಧ್ಯವಾದರೆ, ಅವು ಭೂಮಿಯ ಮೇಲೆ ಮತ್ತು ಬಾಹ್ಯಾಕಾಶದ ಕಠಿಣ ಹವಾಮಾನದಲ್ಲೂ ಬದುಕಲು ಸಾಧ್ಯವಾಗಲಿದೆ ಎಂದು ಸಂಶೋಧಕರ ತಂಡ ತಿಳಿಸಿದೆ.

12. ಭಾರತದ ಆಟೋಮೊಬೈಲ್ ಕ್ಷೇತ್ರ ಕುಸಿತ:

- ಮಧ್ಯಮ – ಮತ್ತು ಭಾರಿ ವಾಣಿಜ್ಯ ವಾಹನಗಳ ಮಾರಾಟ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. ರಷ್ಟು ಕುಷಿತವಾಗಿದೆ.
- ಬೇರೆ ವಾಹನಗಳಿಗೆ ಹೋಲಿಸಿದರೆ ಹಗುರ ವಾಣಿಜ್ಯ ವಾಹನಗಳ ಸದ್ದು ಮಾರಾಟ ತುಸು ಉತ್ತಮವಾಗಿದೆ.
- ಆದಾಗ್ಯೂ ಶೇ.19ರಷ್ಟು ಕುಸಿತವಾಗಿದೆ. ಭವಿಷ್ಯದ ಬಿಎಸ್–6 ವಾಹನಗಳ ಖರೀದಿಸುವ ಸಲುವಾಗಿ ವಾಹನ ಖರೀದಿಯನ್ನು ಜನರು ಮುಂದೂಡುತ್ತಿರುವುದು ಮಾರಾಟ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ.

13. ಸೌರಶಕ್ತಿ ಬಳಸಿ ಸಾಗರ ನೀರಿನ ಶುದ್ದೀಕರಣ:

- ಸೂರ್ಯನ ಬೆಳಕನ್ನು ಹೀರಿಕೊಂಡು ವಿದ್ಯುತ್ ಉತ್ಪಾದನೆ ಜತೆಗೆ ನೀರು ಶುದ್ಧಗೊಳಿಸುವ ತಂತ್ರಜ್ಞಾನವನ್ನು 'ಸೌದಿ ಅರೇಬಿಯಾದ ಕಿಂಗ್ ಅಬ್ದುಲ್ಲ ಯೂನಿವರ್ಸಿಟಿ ಸೈನ್ಸ್ ಅ್ಯಂಡ್ ಟೆಕ್ನಾಲಜಿ' ವಿಭಾಗದ ಸಂಶೋಧಕರು ಕಂಡುಹಿಡಿದಿದ್ದಾರೆ.
- ನೀರಿನ ಆವಿ ಪ್ಲಾಸ್ಟಿಕ್‌ನಿಂದ ಮಾಡಿದ ಸರಂಧ್ರ ಪೊರೆಯ ಮೂಲಕ ಹೊರಹೊಮ್ಮುತ್ತದೆ. ಇದು ಉಪ್ಪು ಸೇರಿದಂತೆ ಮಾಲಿನ್ಯಕಾರಕಗಳನ್ನು ಶೋಧಿಸಿ ಶುದ್ದ ಸಿಹಿನೀರಿ ನೀಡುತ್ತದೆ.

14. EEE ಕಲಿಕೆಗೆ ಪೂರಕ ಚಾಟ್‌ಬೋಟ್– ಅಲ್ಬೆಲಾ :

- ಐಐಟಿ ಗುವಾಹಟಿಯ ಸ್ನಾತಕೋತ್ತರ ವಿದ್ಯಾರ್ಥಿಗಳ ತಂಡ ಶಿಕ್ಷಕರ ಸಹಯೋಗದಲ್ಲಿ 'ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್' (EEE) ಪ್ರಥಮ ವರ್ಷದ ವಿದ್ಯಾರ್ಥಿಗಳ ಕಲಿಕೆಗೆ ಸುಲಭವಾಗುವಂತೆ ಕೃತಕ ಬುದ್ದಿಮತ್ತೆ–ಶಕ್ತಗೊಂಡ ಚಾಟ್‌ಬೋಟ್ ಅಲ್ಬೆಲಾವನ್ನು ಅಭಿವೃದ್ಧಿಪಡಿಸಿದೆ.

- ಅಲ್ಬೆಲಾ ಎಐ ಚಾಟ್‌ಬೋಟ್ ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಇಇಇ ಕಲಿಯುತ್ತಿರುವ ಸುಮಾರು 850 ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬರ ಪ್ರಶ್ನೆಗಳು ಮತ್ತು ಅನುಮಾನಗಳನ್ನು ಪರಿಹರಿಸುವ ಸಾಮರ್ಥ್ಯ ಹೊಂದಿದೆ.

15. ಮರಗಳು ಸಿಒ2 ಹೀರುವುದನ್ನು ನಿಲ್ಲಿಸಿದರೆ:

- ಮರಗಳು ಸಿಒ2 ಸಂಗ್ರಹವನ್ನು ಹೆಚ್ಚಿಸಿಕೊಂಡು ವಾತಾವರಣದಲ್ಲಿರುವ ಇಂಗಾಲದ ಡೈಆಕ್ಸೈಡ್ ಅನ್ನು ಹೀರುವುದನ್ನು ನಿಲ್ಲಿಸಿಬಿಡಬಹುದು ಎಂದು ಅಧ್ಯಯನ ಹೇಳಿದೆ.
- ಜಾಗತಿಕ ತಾಪಮಾನ ಕಡಿಮೆ ಮಾಡಲು ಹೆಚ್ಚು ಮರಗಳನ್ನು ನೆಡಬಹುದು. ಆದರೆ, ಇದು ಮಾತ್ರವೇ ಇರುವ ಪರಿಹಾರವಲ್ಲ. ಪಳೆಯುಳಿಕೆ ಇಂಧನಗಳ ಬಳಕೆಯನ್ನು ತಗ್ಗಿಸಿದರೆ ಸಾಕಷ್ಟು ಬದಲಾವಣೆ ಉಂಟಾಗಬಹುದು ಎಂದು ಸ್ಟಾನ್ ಫೋರ್ಡ್ ಯೂನಿವರ್ಸಿಟಿಯ ವಿಜ್ಞಾನಿ ಸೀಸೆರ್ ಟೆರೆರ್ ನೇತೃತ್ವದಲ್ಲಿ ನಡೆಸಿದ ಅಧ್ಯಯನ ತಿಳಿಸಿದೆ.
- ಎಲ್ಲಾದರೂ ಸಿಒ2 ಸಾಂದ್ರತೆ ಹೆಚ್ಚಾದರೆ ಮರಗಳಿಗೆ ತಮ್ಮ ಡಯೆಟ್ ಸಮತೋಲನ ಸಾಧಿಸಲು ಪೋಷಕಾಂಶಗಳ ಅಗತ್ಯವಿರುತ್ತದೆ.

- ಇದನ್ನು ಪಡೆಯಲು ಮರಗಳು ಮಣ್ಣಿನಲ್ಲಿರುವ ಸೂಕ್ಷ್ಮಜೀವಿಗಳು ಮತ್ತು ಶಿಲೀಂಧ್ರಗಳ ಜೊತೆ ಹೊಸ ಮೈತ್ರಿ ನಡೆಸಿ ತಮಗೆ ಬೇಕಾದ ಹೆಚ್ಚುವರಿ ಪೋಷಕಾಂಶಗಳನ್ನು ಪಡೆದುಕೊಳ್ಳಲಿವೆ ಎಂದು ಅಧ್ಯಯನ ಕಂಡು ಕೊಂಡಿದೆ.
- ಸ್ಟ್ಯಾಟಿಸ್ಟಿಕಲ್ ವಿಧಾನ, ಮೆಷಿನ್ ಲರ್ನಿಂಗ್, – ಮಾಡೆಲ್ಸ್ ಮತ್ತು ಉಪಗ್ರಹ ಚಿತ್ರಗಳ ಆಧರಿತ ವಿವರಗಳನ್ನು ಬಳಸಿಕೊಂಡು ಹುಲ್ಲುಗಾವಲು, ಒಣಭೂಮಿ, ಕೃಷಿಭೂಮಿ ಮತ್ತು ಅರಣ್ಯ ವ್ಯವಸ್ಥೆಯನ್ನು ಈ ವಿಜ್ಞಾನಿಗಳು ಅಧ್ಯಯನ ನಡೆಸಿದ್ದಾರೆ.

16. ಆಕಾಶ್ ಕ್ಷಿಪಣಿ:

- ಪಾಕಿಸ್ತಾನ ಮತ್ತು ಚೀನಾ ಗಡಿ ಭಾಗದಲ್ಲಿ ದಾಳಿ ಇಡುವ ಶತ್ರು ಪಡೆಗಳ ಯುದ್ಧ ವಿಮಾನಗಳನ್ನು ಹೊಡೆದುರುಳಿಸುವ ಸಾಮರ್ಥ್ಯದ ಆಕಾಶ್ ವಾಯು ಕ್ಷಿಪಣಿ – ರಕ್ಷಣಾ ವ್ಯವಸ್ಥೆ ಖರೀದಿಗೆ ಕೇಂದ್ರ ಸರಕಾರ ಸಮ್ಮತಿ ಸೂಚಿಸಿದೆ.

ಕ್ಷಿಪಣಿಗಳ ಬಗ್ಗೆ ಗೊತ್ತೆ?

- ಕ್ಷಿಪಣಿ ಮೂಲಭೂತವಾಗಿ ಒಂದು ಅತ್ಯಾಧುನಿಕ ಬಾಂಬ್ ಆಗಿದ್ದು, ಇದು ಬ್ಯಾಲಿಸ್ಟಿಕ್ಸ್ ನಿಯಮಗಳ ಅನುಗುಣವಾಗಿ ಚಲಿಸುತ್ತದೆ.
- ಅಂದರೆ, ಆರಂಭದಲ್ಲಿ ಇಂಧನ ಬಲ ಹಾಗೂ ದಿಕ್ಕು ನಿರ್ದೇಶನದ – ಬಳಿಕ ಸಂಪೂರ್ಣವಾಗಿ ಗುರುತ್ವಾಕರ್ಷಣ ಬಲದಿಂದಲೇ ತನ್ನ ಗುರಿಯನ್ನು ಸೇರುತ್ತದೆ.
- ಕ್ಷಿಪಣಿಗೆ ನೋದನ (ಪ್ರಪಲ್ಷನ್) ವ್ಯವಸ್ಥೆಯನ್ನು ಅಳವಡಿಸಿಕೊಂಡರೆ ಇನ್ನೂ ವೇಗ ಹಾಗೂ ನಿಖರತೆಯನ್ನು ಸಾಧಿಸುತ್ತದೆ.
- ಪ್ರಪಲ್ಷನ್ ಸಿಸ್ಟಮ್ ಹೊಂದಿರುವ ಬಾಂಬ್ ಅನ್ನೇ ರಾಕೆಟ್ ಎಂದು ಕರೆಯಲಾಗುತ್ತದೆ. ಒಂದು ವೇಳೆ, ಸೂಕ್ತ ನಿಯಂತ್ರಣ ಮತ್ತು ಮಾರ್ಗದರ್ಶನ ದೊರೆತ ರಾಕೆಟ್ ಕೂಡ ಅತ್ಯಂತ ಅಪಾಯಕಾರಿಯಾಗಬಲ್ಲದು. ಅದನ್ನೇ ಕ್ಷಿಪಣಿ ಎಂದು ಕರೆಯುತ್ತೇವೆ.

17. ಚಂದಮಾಮ ಜಸ್ಟ್ ಮಿಸ್:

- ಸೆಪ್ಟೆಂಬರ್ 7ನೇ ರಾತ್ರಿ 1.38ರ ವೇಳೆತೆ ಚಂದ್ರನ ಮೇಲೆ 'ವಿಕ್ರಮ್ ಲ್ಯಾಂಡರ್' ಇಳಿಯುವ ಪ್ರಕ್ರಿಯೆಗೆ ಚಾಲನೆ ಕೊಡುತ್ತಿದ್ದಂತೆ ಇಸ್ರೋ 'ಮಿಷನ್ ಕಂಟ್ರೋಲ್'ನಲ್ಲಿ ವಿಜ್ಞಾನಿಗಳು, ಎಂಜಿನಿಯರ್‌ಗಳ ಮುಖದಲ್ಲಿ ಸಾಧನೆಯ ಖುಷಿ ಇತ್ತು, ಚಪ್ಪಾಳೆ ತಟ್ಟಿದರು. ಆದರೆ, ಕೆಲವೇ ಸೆಕೆಂಡುಗಳಲ್ಲೇ ಆ ಖುಷಿ ಮಾಯವಾಯಿತು.
- ಸ್ವಯಂಚಾಲಿತ ಇಳಿಯುವ ಪ್ರಕ್ರಿಯೆಗೆ ಚಾಲನೆ ನೀಡುತ್ತಿದ್ದಂತೆ 441 ಕಿ.ಮೀ ಎತ್ತರದಿಂದ ನಿರ್ಧಾರಿತ ವೇಗ ಮಿತಿ ಮೀರಿ ಚಂದ್ರನ ಕಡೆಗೆ ನೌಕೆ ಸಾಗುತ್ತಿತ್ತು.
- ಈ ವೇಗ ಕಂಡು ವಿಜ್ಞಾನಿಗಳು ಕಂಗಾಲಾದರು. ವಿಕ್ರಮ್‌ಗೆ ಹಾನಿಯಾಗದ ರೀತಿಯಲ್ಲಿ ಸುರಕ್ಷಿತವಾಗಿ ಲ್ಯಾಂಡ್ ಮಾಡಿಸಲು ಲೆಕ್ಕಾಚಾರ ಹಾಕಿಕೊಂಡಿದ್ದ ಸಮಯ ಹದಿನೈದು ನಿಮಿಷಗಳು. ಆದರೆ, ಕೇವಲ 10ರಿಂದ 12 ನಿಮಿಷಗಳಲ್ಲೇ ಚಂದ್ರನ ಮೇಲೆ ಇಳಿಯುವ ಬದಲು, ಬೀಳುವ ಲಕ್ಷಣ ಗೋಚರವಾದವು.
- ಈ ವಿಚಾರವನ್ನು ಚಂದ್ರಯಾನ–2 ಇಳಿಯುವಿಕೆ ಕುರಿತು ಮಾಧ್ಯಮಗಳಿಗೆ ಕಮೆಂಟರಿ ಕೊಡುತ್ತಿದ್ದವರ ಹೇಳಿಕೆಗಳಿಂದಲೂ ಗೊತ್ತಾಗುತ್ತಿತ್ತು.
- ಇಸ್ರೋ ಅಧ್ಯಕ್ಷ ಕೆ.ಶಿವನ್, ಮಾಜಿ ಅಧ್ಯಕ್ಷ ಕಿರಣ್ ಕುಮಾರ್ ಸೇರಿದಂತೆ ಮಿಷನ್ ಕಂಟ್ರೋಲ್‌ನಲ್ಲಿದ್ದ ಪ್ರತಿಯೊಬ್ಬರ ಮುಖಭಾವವೂ ಪ್ರತಿ ಸೆಕೆಂಡ್‌ಗೂ ಆತಂಕ ಹೆಚ್ಚಳ ಕಾಣಿಸುತ್ತಿತ್ತು, ಇಳಿಯುವ ಪ್ರಕ್ರಿಯೆ ಆರಂಭವಾದ ನಂತರ ಚಂದ್ರನಿಂದ ಸುಮಾರು 5 ಕಿ.ಮೀ ಎತ್ತರದಲ್ಲಿದ್ದಾಗ ನೌಕೆಯು ನಿಗದಿತ ಪಥ ಬಿಟ್ಟು ಬೇರೆಡೆ ಸಾಗಿತು.
- ಆಗ ವಿಕ್ರಮ್‌ನಲ್ಲಿರುವ ಕಂಪ್ಯೂಟರ್ ಸಿಸ್ಟಮ್ ಗೆ ಮತ್ತೊಂದು ಕಮಾಂಡ್ ಕೊಟ್ಟು ಪಥ ಸರಿಪಡಿಸಲು ಯತ್ನಿಸಲಾಯಿತು.
- ಆದರೆ, ಪ್ರಯೋಜನ ಆಗಲಿಲ್ಲ. ನೋಡುಗರಿಗೆ ಇಳಿಯುವ ಪ್ರಕ್ರಿಯೆ ಯೋಜಿತ ರೀತಿಯಲ್ಲಾಗುತ್ತಿಲ್ಲ ಎಂಬುದು ಸ್ಪಷ್ಟವಾಯಿತು.

ರಫ್ ಬ್ರೇಕಿಂಗ್ ಯಶಸ್ವಿ:

- ಚಂದ್ರನ ಕಕ್ಷೆಯಲ್ಲಿ ತಿರುಗುತ್ತಿದ್ದ ವಿಕ್ರಮ್, ಚಂದ್ರನ ಗುರುತ್ವಾಕರ್ಷಣೆಯ ಬಲಕ್ಕೆ ಒಳಪಟ್ಟು ಕೆಳಗೆ ಇಳಿಯುವ 'ರಫ್ ಬ್ರೇಕಿಂಗ್' ಹಂತವನ್ನು ಯಶಸ್ವಿಯಾಗಿ ಪೂರೈಸಿತು.
- ಚಂದ್ರನ ಅಂಗಳದ ಮೇಲೆ ನಿಗದಿತ ಸ್ಥಳದಲ್ಲಿ ಇಳಿಯುವ 1 ಕಿ.ಮೀ ಎತ್ತರದಲ್ಲಿದ್ದಾಗ ಆನ್‌ಬೋರ್ಡ್ ಕ್ಯಾಮರಾ ಆನ್ ಎಂದು ತೋರಿಸುತ್ತಿತ್ತು. ಆದರೆ, ಸಂವಹನ ಸಂಪರ್ಕ ಆಫ್ ಆಗಿತ್ತು.

ಸೆ.7ರ ಮಧ್ಯರಾತ್ರಿ ಏನೇನಾಯ್ತು?

- 1.38 ವಿಕ್ರಮ್ ಲ್ಯಾಂಡರ್ ಚಂದ್ರನ ಕಡೆಗೆ ಇಳಿಯುವ ಪ್ರಕ್ರಿಯೆಗೆ ಚಾಲನೆ.
- ಚಂದ್ರನ ಕಡೆ ಇಳಿಯುವಿಕೆಯ ರಫ್ ಬ್ರೇಕಿಂಗ್ 30 ಕಿ.ಮೀ ಎತ್ತರದಲ್ಲಿ.
- ನ್ಯಾವಿಗೇಷನ್ ಪ್ರಕ್ರಿಯೆ ಆರಂಭ
- 1.52 ಚಂದ್ರನ ಮೊದಲ ಚಿತ್ರ ಬರಬೇಕು..
- 1.53 ಚಂದ್ರನ ಅಂಗಳಕ್ಕೆ ವಿಕ್ರಮ್ ಕಾಲಿಡಬೇಕು.
- 3.53 ವಿಕ್ರಮ್ ಒಳಗಿಂದ ಪ್ರಜ್ಞಾನ್ ರ್‍ಯಾಂಪ್ ಇಳಿಸಬೇಕು.
- 4.23 ಪ್ರಜ್ಞಾನ್ ಚಾಲನೆಗೆ ಒಳಪಡಿಸಬೇಕು.
- 5.03 ಪ್ರಜ್ಞಾನ್‌ನ ಸೋಲಾರ್ ಪ್ಯಾನಲ್ ತೆರೆದುಕೊಳ್ಳುವುದು.
- 5.19 ಪ್ರಜ್ಞಾನ್ ರೋವರ್ ವಿಕ್ರಮ್‌ನ ಒಳಗಿಂದ ಹೊರ ಬರುವುದು.
- 5.29 ಚಂದ್ರನ ಅಂಗಳನ ಮೇಲೆ 6 ಚಕ್ರದ ರೋವರ್ ಚಕ್ರದ ಚಲನೆ.
- 5.45 ರೋವರ್‌ನಿಂದ ವಿಕ್ರಮ್‌ನ ಫೋಟೋ ತೆಗೆದು ಭೂಮಿಗೆ ಕಳುಹಿಸುವದು.

ಆರ್ಬಿಟರ್‌ನಿಂದ ಸಹಜ ಕೆಲಸ:

- ವಿಕ್ರಮ್‌ನಿಂದ ಪ್ರತ್ಯೇಕಗೊಂಡಿದ್ದ ಆರ್ಬಿಟರ್ ಸುಮಾರು 100 ಕಿ.ಮೀ ಎತ್ತರದಲ್ಲಿ ಸಹಜ ಹಾರಾಟ ನಡೆಸುತ್ತಿದೆ.
- ಅದರಲ್ಲಿರುವ 8 ವೈಜ್ಞಾನಿಕ ಅಧ್ಯಯನ ಉಪಕರಣಗಳು ಮುಂದಿನ 5 ವರ್ಷ ಕಾಲ ಕಾರ್ಯ ನಿರ್ವಹಿಸಲಿವೆ.
- ಚಂದ್ರನ ಕುರಿತು ಮಹತ್ವದ ಮಾಹಿತಿಯನ್ನು ಭೂಮಿಗೆ ರವಾನೆ ಮಾಡಲಿವೆ.

18. ಸಸ್ಯಗಳ ಸ್ವಾವಲಂಬನೆಗೆ ಐಸೋಮರೇಸ್ ಕಾರಣ:

- ಮನುಷ್ಯರು ಬದುಕಲು ಪರಿಸರ, ಗಿಡ ಮರಗಳನ್ನು ಅವಲಂಬಿಸಿದ್ದಾರೆ, ಆದರೆ ಗಿಡಗಳು ತಮಗೆ ಬೇಕಾದ ಆಹಾರವನ್ನು ತಾವೇ ಉತ್ಪಾದಿಸುತ್ತವೆ.
- ಕೀಟಗಳನ್ನು ಹಿಮ್ಮೆಟ್ಟಿಸಲು, ಪರಾಗಸ್ಪರ್ಶಕಗಳನ್ನು ಆಕರ್ಷಿಸಲು, ಸೋಂಕುಗಳನ್ನು ಗುಣಪಡಿಸಲು ಮತ್ತು ಪರಿಸರದಲ್ಲಿನ ಹೆಚ್ಚುವರಿ ತಾಪಮಾನ, ಬರ ಮತ್ತು ಇತರ ಅಪಾಯಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಸಹಾಯ ಮಾಡುವ ಸಂಯುಕ್ತಗಳನ್ನು ತಾವೇ ತಯಾರಿಸುತ್ತವೆ.
- ಈ ನೈಸರ್ಗಿಕ ರಾಸಾಯನಿಕಗಳನ್ನು ತಯಾರಿಸುವ ಸಾಮರ್ಥ್ಯದೊಂದಿಗೆ ಸಸ್ಯಗಳು ಹೇಗೆ ವಿಕಸನಗೊಂಡಿವೆ ಎಂಬುದನ್ನು ಕ್ಯಾಲಿಫೋರ್ನಿಯಾದ ಸಾಲ್ಕ್ ಇನ್ಸ್ ಸ್ಟಿಟ್ಯೂಟ್ ಸಂಶೋಧಕರು ಕಂಡುಹಿಡಿದಿದ್ದಾರೆ.
- ಈ ನೈಸರ್ಗಿಕ ಪ್ರಕ್ರಿಯೆಗೆ ಸಸ್ಯಗಳಲ್ಲಿನ ಚಾಲ್ಕೋನ್ ಐಸೋಮರೇಸ್ ಎಂಬ ಕಿಣ್ವ ಕಾರಣ. ಈ ಸಂಶೋಧನೆ ಮಾನವರಿಗೆ ಅಗತ್ಯ ಆಹಾರ, ಔಷಧ, ಸುಧಾರಿತ ಬೆಳೆ ತಯಾರಿಗೆ ಸಹಾಯವಾಗಲಿದೆ ಎಂಬುದು ಸಂಶೋಧಕರ ಆಶಯ.

19. ಗ್ರಹಗಳ ನಡುವೆ ಅಂತರ:

- ಸೌರಮಂಡಲ ನಡುವೆ ವಿವಿಧ ಗ್ರಹಗಳ ನಡುವಿನ ಅಂತರವನ್ನು ಕಿಲೋಮಿಟರ್ ಲೆಕ್ಕದಲ್ಲಿ ನೀಡಲಾಗಿದೆ.
- ಬುಧ–ಶುಕ್ರ: 50,290,000 ಕಿ.ಮೀ
- ಬುಧ–ಭೂಮಿ:91,691,000 ಕಿ.ಮೀ
- ಬುಧ–ಮಂಗಳ: 170,030,000 ಕಿ.ಮೀ
- ಬುಧ–ಗುರು: 720,420,000 ಕಿ.ಮೀ
- ಬುಧ–ಶನಿ: 1,366.690,000 ಕಿ.ಮೀ
- ಬುಧ–ಯುರೆಸಸ್: 2,81,640.000 ಕಿ.ಮೀ
- ಬುಧ–ನೆಪ್ಚೂನ್: 4,443,090,000 ಕಿ.ಮೀ
- ಶುಕ್ರ– ಭೂಮಿ: 41,400,000 ಕಿ.ಮೀ
- ಶುಕ್ರ– ಮಂಗಳ: 119,740,000 ಕಿ.ಮೀ

- ಶುಕ್ರ–ಗುರು: 670.130.000 ಕಿ.ಮೀ
- ಶುಕ್ರ–ಶನಿ: 1,316,40,000 ಕಿ.ಮೀ
- ಶುಕ್ರ–ಯುರೆನಸ್: 2,765,350,000 ಕಿ.ಮೀ
- ಶುಕ್ರ– ನೆಪ್ಚೂನ್: 4,392,800,000 ಕಿ.ಮೀ
- ಶುಕ್ರ– ಯುರೆನಸ್: 1,448,950,000 ಕಿ.ಮೀ
- ಶುಕ್ರ– ನೆಪ್ಚೂನ್: 3,076,400,000 ಕಿ.ಮೀ
- ಮಂಗಳ–ಗುರು: 550,390,000 ಕಿ.ಮೀ
- ಮಂಗಳ–ಶನಿ: 1,196,660,000 ಕಿ.ಮೀ
- ಮಂಗಳ–ಯುರೆನಸ್: 2,645,610,000 ಕಿ.ಮೀ
- ಮಂಗಳ–ನೆಪ್ಚೂನ್: 4,273,060,000 ಕಿ.ಮೀ
- ಭೂಮಿ–ಮಂಗಳ: 78,.340.000 ಕಿ.ಮೀ
- ಭೂಮಿ–ಗುರು: 628,730,000 ಕಿ.ಮೀ
- ಭೂಮಿ–ಶನಿ: 1,275,000,000 ಕಿ.ಮೀ
- ಭೂಮಿ–ಯುರೆನಸ್: 2.723.950.000 ಕಿ.ಮೀ
- ಭೂಮಿ–ನೆಪ್ಚೂನ್: 4,351,400,000 ಕಿ.ಮೀ
- ಗುರು–ಶನಿ: 646,270,000 ಕಿ.ಮೀ
- ಗುರು–ಯುರೆನಸ್: 2,095,220,000 ಕಿ.ಮೀ
- ಗುರು–ನೆಪ್ಚೂನ್: 3,7222,670,000 ಕಿ.ಮೀ
- ಯುರೆನಸ್–ನೆಪ್ಚೂನ್: 1,627,450,000 ಕಿ.ಮೀ

20. ಕಾಡ್ಗಿಚ್ಚು ಹಬ್ಬುವ ವೇಗ,ಪ್ರಮಾಣ ಅಧ್ಯಯನ:

- 'ಅಮೆರಿಕದ ಉತಾಹ್ ಬ್ರಿಗಮ್ ಯಂಗ್ ಯೂನಿವರ್ಸಿಟಿ' ಕೈಗೊಂಡ ಸಂಶೋಧನೆ ಕಾಡು, ಪರ್ವತಗಳಲ್ಲಿ ಕಾಡುಪ್ರದೇಶದ ಇಂಧನಗಳ ಮೂಲಕ ಬೆಂಕಿ ಹೇಗೆ ಉರಿಯುತ್ತದೆ ಮತ್ತು ಬೆಂಕಿ ಹೇಗೆ ಪ್ರಾರಂಭವಾಗುತ್ತದೆ ಎಂಬುದರ ಸೂಕ್ಷ್ಮ ವಿವರಗಳನ್ನು ನೀಡುತ್ತದೆ.
- ನಿಯಂತ್ರಿತ ಪರಿಸರದಲ್ಲಿ ಪ್ರಯೋಗಗಳನ್ನು ನಡೆಸಿದ ತಂಡ ಪ್ರಯೋಗಗಳಿಗೆ 14 ಪೊದೆಸಸ್ಯ ಪ್ರಭೇದಗಳ ಎಲೆಗಳನ್ನು ಬಳಸಿದೆ.
- ಥರ್ಮೋಗ್ರವಿಮೆಟ್ರಿಕ್ ವಿಶ್ಲೇಷಕಕ್ಕೆ ಎಲೆಗಳನ್ನು ತುಂಬಿಸಿ ನಿಧಾನವಾಗಿ ಶಾಖವನ್ನು 800 ಡಿಗ್ರಿ ಸೆಲ್ಸಿಯಸ್ ವರೆಗೆ ಏರಿಸಿ ಎಲೆಗಳು ಉರಿಯುತ್ತಿರುವುದನ್ನು ಪರಿಶೀಲಿಸಿ ಸಸ್ಯ ಮುರಿದುಬಿದ್ದ ವೇಗ ಮತ್ತು ಶಾಖದಿಂದ ಉತ್ಪತ್ತಿಯಾಗುವ ರಾಸಾಯನಿಕಗಳನ್ನು ವರ್ಗೀಕರಿಸಿದೆ.
- ಬಳಿಕ ಎರಡು ಶಾಖ ಮೂಲಗಳಾದ ಸಂವಹನ (ಗಾಳಿ–ಚಾಲಿತ ಬೆಂಕಿ) ಮತ್ತು ವಿಕಿರಣ (ಸಸ್ಯದ ಕಣಗಳು ಅಥವಾ ಜ್ವಾಲೆಗಳನ್ನು ಸುಡುವುದರಿಂದ) ಪ್ರಭಾವವನ್ನು ಹೋಲಿಸಿ ಅಧ್ಯಯನ ನಡೆಸಿದೆ.
- ಬೆಟ್ಟದ ಪೊದೆ ಸಸ್ಯಗಳಲ್ಲಿ ಒಂದು ಪ್ರಭೇದದಿಂದ ಇನ್ನೊಂದು ಪ್ರಭೇದ ಸಸ್ಯಗಳಿಗೆ ಬೆಂಕಿ ಹರಡಲು ತೆಗೆದುಕೊಳ್ಳುವ ವೇಗ, ಉರಿಯುವ ವೇಗವನ್ನು ಅಧ್ಯಯನ ನಡೆಸಲಾಗಿದೆ.
- ಇದರಿಂದ ಮುಂದೆ ಎಷ್ಟು ವೇಗವಾಗಿ ಬೆಂಕಿ ಹರಡುತ್ತದೆ ಎಂದು ಅಂದಾಜಿಸಿ ಸುರಕ್ಷತಾ ಕ್ರಮ ತೆಗೆದುಕೊಳ್ಳಲು ಸಹಾಯವಾಗಲಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.

21. ಚಂದಿರನಲ್ಲಿ ವಿಕ್ರಮ್ ಲ್ಯಾಂಡರ್ ಪತ್ತೆ:

- ಮುಂದಿನ ಹಂತದಲ್ಲಿ ಸಂಪರ್ಕ ಸಾಧಿಸಲು ಸಾಧ್ಯವಾದರೆ ವಿಕ್ರಮ್ ಲ್ಯಾಂಡರ್‌ನ ಸ್ಥಿತಿಗತಿಗಳು ತಿಳಿದುಬರಲಿದೆ.
- ಒಂದು ಪಕ್ಷ ವಿಕ್ರಮ್ ಲ್ಯಾಂಡರ್ ಸುರಕ್ಷಿತವಾಗಿದ್ದಲ್ಲಿ, ಇದರ ಒಳಭಾಗದಲ್ಲಿ ಇರುವ ಪ್ರಜ್ಞಾನ್ ರೋವರ್ ಸಹಾ ಸುರಕ್ಷಿತವಾಗಿ ಇರಬಹುದು ಎನ್ನಲಾಗಿದೆ.
- ಚಂದ್ರನ ಅಂಗಳದಲ್ಲಿ ಉದ್ದೇಶಿತ ಇಸ್ರೋ ಯೋಜನೆ ಸಂಪೂರ್ಣ ಫಲಪ್ರದವಾಗಲಿದೆ ಎಂಬ ಆಶಾವಾದ ವಿಜ್ಞಾನಿಗಳಿಗಿದೆ.

ನಾಸಾ ಶ್ಲಾಘನೆ:

- ಭಾರತದ ಮಹತ್ವಾಕಾಂಕ್ಷೆಯ ಚಂದ್ರಯಾನ–2 ಯೋಜನೆಯನ್ನು ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ ಶ್ಲಾಘಿಸಿದೆ.
- ಇಸ್ರೋದ ಬಾಹ್ಯಾಕಾಶ ಯೋಜನೆಯಿಂದ ನಾವು ಪ್ರೇರಣೆ ಪಡೆದಿದ್ದೇವೆ. ಭವಿಷ್ಯದಲ್ಲಿ ಭಾರತದ ಜತೆಗೂಡಿ ಸೌರಮಂಡಲದ ಉನ್ನತ ಅಧ್ಯಯನ ನಡೆಸಲು ಈ ಉತ್ಸುಕರಾಗಿದ್ದೇವೆ ಎಂದು ನಾಸಾ ತಿಳಿಸಿದೆ.

ಜಪಾನ್ ಸಹಯೋಗದಲ್ಲಿ ಮತ್ತೊಂದು ಯಾನ:

- ಚಂದ್ರಾನ್ವೇಷಣೆಯ ನಿಟ್ಟಿನಲ್ಲಿ ಮತ್ತೊಂದು ಮಹಾನ್ ಯೋಜನೆಗೆ ಇಸ್ರೋ ಸಂಕಲ್ಪ ಮಾಡಿದ್ದು, ಇದಕ್ಕೆ ಜಪಾನ್ ಬಾಹ್ಯಾಕಾಶ ಕೇಂದ್ರದ ಸಹಯೋಗ ದೊರಕಲಿದೆ.
- ಚಂದ್ರನ ಧ್ರುವ ಪ್ರದೇಶದ ಶೋಧನೆ (ಲೂನಾರ್ ಪೋಲಾರ್ ಎಕ್ಸ್‌ಪ್ಲೋರೇಷನ್) ಎಂದು ಇದಕ್ಕೆ ಹೆಸರಿಸಲಾಗಿದೆ.
- ಚಂದ್ರನ ಧ್ರುವ ಪ್ರದೇಶದಿಂದ ಕೆಲವು ಸ್ಯಾಂಪಲ್‌ಗಳನ್ನು ತರುವ ಮಹತ್ವದ ಗುರಿಯನ್ನು ಈ ಯೋಜನೆ ಹೊಂದಿದೆ.

22. ಅಂತರಿಕ್ಷದಾಳದಿಂದ ಸಂದೇಶ ಬಂದಿದೆ:

- ಜಗತ್ತಿನ ಬೃಹತ್ ಮತ್ತು ಅತ್ಯಂತ ಸೂಕ್ಷ್ಮಗ್ರಾಹಿ ರೇಡಿಯೋ ದೂರದರ್ಶಕವೆಂಬ ಖ್ಯಾತಿಯ 500 ಮೀಟರ್ ಅಪಾರ್ಚರ್ ಶೆಪರಿಕಲ್ ರೇಡಿಯೊ ಟೆಲಿಸ್ಕೋಪ್‌ಗೆ (ಫಾಸ್ಟ್) 300 ಕೋಟಿ ಜ್ಯೋರ್ತಿವರ್ಷ ದೂರದಿಂದ ನಿಗೂಢ ಸಂಕೇತ ಎಂದು ನಂಬಲಾದ ಪುನರಾವರ್ತಿತ ಫಾಸ್ಟ್ ರೇಡಿಯೋ ಬರ್ಸ್ಟ್ (ಎಫ್‌ಆರ್‌ಬಿ) ತಲುಪಿದೆ.
- ವಿಜ್ಞಾನಿಗಳು ಈ ಸಂಕೇತವನ್ನು ಎಚ್ಚರಿಕೆಯಿಂದ ಮರುಪರಿಶೀಲನೆ ನಡೆಸುತ್ತಿದ್ದಾರೆ ಮತ್ತು ಅಧ್ಯಯನ ನಡೆಸುತ್ತಿದ್ದಾರೆ ಎಂದು ಚೀನಾದ ನ್ಯಾಷನಲ್ ಆಸ್ಟ್ರೋನಾಮಿಕಲ್ ಅಬ್ಸರ್ವೇಟರಿಯ ಸಂಶೋಧಕರು ತಿಳಿಸಿದ್ದಾರೆ.
- ಎಫ್‌ಆರ್‌ಬಿಗಳನ್ನು ಬ್ರಹ್ಮಾಂಡದಲ್ಲಿಯೇ ಅತ್ಯಧಿಕ ಪ್ರಬಲ ಸ್ಫೋಟಗಳಾಗಿವೆ. ಇವುಗಳ 'ಭಿಪ್' ವೇಗ ಹಲವು ಮಿಲಿ ಸೆಕೆಂಡಿಗಿಂತಲೂ ಕಡಿಮೆ ಇರುವುದರಿಂದ ಇವುಗಳನ್ನು 'ಫಾಸ್ಟ್'ಎಂದು ಕರೆಯಲಾಗುತ್ತದೆ.
- ಈ ದೈತ್ಯ ದೂರದರ್ಶಕದಲ್ಲಿ ಅತ್ಯಂತ ಸೂಕ್ಷ್ಮಗ್ರಾಹಿ – 19 ಬೀಮ್ ರಿಸೀವರ್‌ಗಳನ್ನು ಚೀನಾದ ವಿಜ್ಞಾನಿಗಳು ಅಳವಡಿಸಿದ್ದಾರೆ.
- ಎಫ್‌ಆರ್‌ಬಿ 121102 ಹೆಸರಿನ ನಿಗೂಢ ಲೋಕದ ಎಫ್ ಆರ್‌ಬಿ ಮೂಲವನ್ನು ಅವಲೋಕಿಸಲು ಈ ರಿಸೀವರ್‌ಗಳನ್ನು ವಿಜ್ಞಾನಿಗಳು ಬಳಸುತ್ತಿದ್ದಾರೆ.
- ಮೊದಲ ಬಾರಿಗೆ ಆರೆಸಿಬೊ ಅಬ್ಸರ್ವೇಟರಿಯಲ್ಲಿ 2015ರಲ್ಲಿ ಈ ಎಫ್‌ಆರ್‌ಬಿ ಸಂಕೇತ ದೊರಕಿತ್ತು.
- ಆಗಸ್ಟ್ ತಿಂಗಳಾಂತ್ಯದಿಂದ ಸೆಪ್ಟೆಂಬರ್ ಆರಂಭದವರೆಗೆ ಎಫ್‌ಆರ್‌ಬಿ 121102 ಎಂಬ ನಿಗೂಢ ಸ್ಥಳದಿಂದ ಬಂದಿರುವ 100ಕ್ಕೂ ಹೆಚ್ಚು ಸಂಕೇತಗಳು ದೂರದರ್ಶಕದಲ್ಲಿ ದಾಖಲಾಗಿವೆ.
- ಇಲ್ಲಿಯವರೆಗೆ ದೊರಕಿರುವ ಸಂಕೇತಗಳಲ್ಲಿ ಇದು ಅತ್ಯಧಿಕವಾಗಿದೆ.
- ಚೀನಾವು ಫಾಸ್ಟ್ ಎಂಬ ಈ ಬೃಹತ್ ದೂರದರ್ಶಕಕ್ಕೆ ಟಿಯಾನ್ಯಾನ್ ಎಂದು ಮರು ನಾಮಕರಣ ಮಾಡಿದೆ.
- ಈ ದೂರದರ್ಶಕವು 500 ಮೀಟರ್ ವಿಸ್ತಾರದ ದೊಡ್ಡ ಡಿಶ್ ಹೊಂದಿದೆ. ಇದು ಜಗತ್ತಿನ ಬೃಹತ್ ಅಪಾರ್ಚರ್ ರೇಡಿಯೊ ಟೆಲಿಸ್ಕೋಪ್ ಆಗಿದೆ.
- ಜಗತ್ತಿನ ಎರಡನೇ ಸಿಂಗಲ್ ಡಿಶ್ ಅಪಾರ್ಚರ್ ಆಗಿದೆ. ರಷ್ಯಾದ ರತನ್–600 ಎನ್ನುವುದು ಜಗತ್ತಿನ ಬೃಹತ್ ಸಿಂಗಲ್ ಡಿಶ್ ಅಪಾರ್ಚರ್ ಆಗಿದೆ.

23. 2050ರೊಳಗೆ ಮಲೇರಿಯಾ ನಿರ್ಮೂಲನೆ:

- ಲ್ಯಾನ್ಸೆಟ್ ಮೆಡಿಕಲ್ ಜರ್ನಲ್ ಪ್ರಕಟಿಸಿದ ಮಲೇರಿಯಾ ಪರಿಶೀಲನಾ ವರದಿಯಲ್ಲಿ ವಿಶ್ವದ 41 ವಿಜ್ಞಾನಿಗಳು, ಆರ್ಥಿಕ ಮತ್ತು ಆರೋಗ್ಯ ಯೋಜನೆ ತಜ್ಞರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.
- ಹೆಚ್ಚಿನ ಪ್ರಮಾಣದಲ್ಲಿ ಆಫ್ರಿಕಾದ ಬಡ ಪ್ರದೇಶಗಳ ಮಕ್ಕಳು ಬಲಿಯಾಗಿದ್ದಾರೆ. ವಿಶ್ವದಲ್ಲಿ ಪ್ರತಿ ಎರಡು ನಿಮಿಷಕ್ಕೆ ಒಂದು ಮಗು ಈ ರೋಗಕ್ಕೆ ಬಲಿಯಾಗುತ್ತಿರುವುದು ದುರದೃಷ್ಟ.

24. ವಿರಳ ಬಾಂಬೆ ಬ್ಲಡ್‌ಗೆ ಹೆಚ್ಚಿನ ಬೇಡಿಕೆ:

- ಇದು ಮುಂಬೈ ಪ್ರಾಂತ್ಯದ ಜನರಲ್ಲಿ ಕಂಡುಬರುವ ರಕ್ತದ ಮಾದರಿ. 1952ರಲ್ಲಿ ತಜ್ಞವೈ.ಆರ್.ಬೆಂಡೆ ಎಂಬುವರು ಈ ಮಾದರಿಯಾ ರಕ್ತ ಪತ್ತೆ ಹಚ್ಚಿದರು. ಹೀಗಾಗಿ ಇದಕ್ಕೆ ಬಾಂಬೆ ಬ್ಲಡ್ ಗ್ರೂಪ್ ಎಂದು ಹೆಸರು.

ರಕ್ತ ಕೊರತೆಗೆ ಕಾರಣ ಏನು ?

- ಬಾಂಬೆ ಬ್ಲಡ್ ಗುಂಪಿನ ರಕ್ತದ ಕೊರತೆಗೆ ಪ್ರಮುಖ ಕಾರಣ, ಅದನ್ನು ಪತ್ತೆ ಹಚ್ಚುವಲ್ಲಿ ರಕ್ತನಿಧಿ ಗಳ ನಿರ್ಲಕ್ಷ್ಯ.
- ಒ ಗುಂಪಿನ ರಕ್ತವಿದ್ದವರಲ್ಲಿ ಎಚ್– ಆ್ಯಂಟಿಜೆನ್ ಪರೀಕ್ಷೆ ಕಡ್ಡಾಯವಾಗಿ ಮಾಡಬೇಕು. ಆಗ ಮಾತ್ರ ಬಾಂಬೆ ಬ್ಲಡ್ ಹೌದೋ/ಅಲ್ಲವೋ ಎಂಬುದು ತಿಳಿಯುತ್ತದೆ.
- ಬಹುತೇಕ ರಕ್ತನಿಧಿಗಳಲ್ಲಿ ಮಾಹಿತಿಯ ಕೊರತೆಯಿಂದ ಎಚ್ ಆಂಟಿಜನ್ ಪರೀಕ್ಷೆ ಮಾಡುತ್ತಿಲ್ಲ.

25. ತಾಪಮಾನ ಏರಿಕೆಯಿಂದ ಬೆಂಕಿ ಅವಗಡ:

- ನಾಸಾ ಕಲೆಹಾಕಿದ ಅಂಕಿ ಅಂಶಗಳ ಅಧ್ಯಯನ ಪ್ರಕಾರ ಕಳೆದ ಐದು ವರ್ಷಗಳಲ್ಲಿ ದಾಖಲೆಯ ತಾಪಮಾನ ಏರಿಕೆಯಾಗಿದೆ.
- 1980ರದಶಕದಿಂದ ವರ್ಷದ ಕಾಲು ಭಾಗದಷ್ಟು ಅವಧಿ ವಾತಾವರಣದಲ್ಲಿ ಕಾಡ್ಗಿಚ್ಚು ಸಂಭವಿಸುವ ಅಪಾಯ ಹೊಂದಿದೆ.
- ಅದ್ದರಲ್ಲೂ ಕ್ಯಾಲಿಫೋರ್ನಿಯಾದಂತಹ ಕೆಲವು ಪ್ರದೇಶಗಳಲ್ಲಿ ಕಾಡ್ಗಿಚ್ಚು ಅಪಾಯ ವರ್ಷಪೂರ್ತಿ ಇರುತ್ತದೆ.
- 2018ರಲ್ಲಿ ಕ್ಯಾಲಿಫೋರ್ನಿಯಾ ಅತಿ ಕೆಟ್ಟ ತಾಪಮಾನ ಹೊಂದಿತ್ತು, ದಾಖಲೆಯ ಬೆಂಕಿ ಅವಘಡಗಳಿಗೆ ಸಾಕ್ಷಿಯಾಗಿತ್ತು.
- 2019ರಲ್ಲಿ ಅಲಾಸ್ಕಾದ ಕಾಡ್ಗಿಚ್ಚುಗಳು ಈಗಾಗಲೇ 5 ದಶಲಕ್ಷ ಎಕರೆ ಪ್ರದೇಶವನ್ನು ಸುಟ್ಟುಹಾಕಿದೆ.
- ಬೆಂಕಿ ಮಾನವ ನಿರ್ಮಿತ ಅಥವಾ ಸ್ವಾಭಾವಿಕವಾಗಿರಬಹುದು, 2 ದಶಕದಲ್ಲಿ ವಿವಿಧೆಡೆ ನಡೆದ ಬೆಂಕಿ ಅವಘಡಗಳ ಬಗ್ಗೆ ನಾಸಾ ಸ್ಯಾಟಲೈಟ್. ಕಲೆಹಾಕಿರುವ ಮಾಹಿತಿಯನ್ನು, ವಿಜ್ಞಾನಿಗಳು, ಅರಣ್ಯ ನಿರ್ವಹಣಾಧಿಕಾರಿಗಳು, ನಾಸಾ ವಿಜ್ಞಾನಿಗಳು, ಯುಎಸ್ ಏಜೆನ್ಸಿಗಳು ಮತ್ತು ಯೂನಿವರ್ಸಿಟಿಗಳು ಅಧ್ಯಯನ ನಡೆಸಿವೆ.

26. ಕಳೆದ ವರ್ಷಕ್ಕೆ ಹೋಲಿಸಿದರೆ ರಾಜ್ಯದಲ್ಲಿ ಡಿಫ್ತೀರಿಯಾ (ಗಂಟಲು ಮಾರಿ)ರೋಗ ಮೂರು ಪಟ್ಟು ಹೆಚ್ಚಳವಾಗಿದ್ದು, ಉತ್ತರ ಕರ್ನಾಟಕ ಭಾಗದಲ್ಲಿಯೇ ಹೆಚ್ಚಿನ ಪ್ರಕರಣಗಳು ದಾಖಲಾಗುತ್ತಿವೆ.

- ಡಿಫ್ತೀರಿಯಾ ಎಂಬುದು ಕಾರ್ನಿ ಬ್ಯಾಕ್ಟೀರಿಯಾ ಡಿಫ್ತೀರಿಯಾ ಟ್ಯಾಕ್ಸಿಜೆನಿಕ್ ತಳಿಯಿಂದ ಉಂಟಾಗುವ ಗಂಟಲು ಸೋಂಕು.
- ರೋಗ ನಿರೋಧಕ ಶಕ್ತಿ ಕಡಿಮೆ ಇರುವ ಹಾಗೂ ಡಿಫ್ತೀರಿಯಾ ಲಸಿಕೆ ಹಾಕಿಸಿಕೊಳ್ಳದ ಮಕ್ಕಳಲ್ಲಿ ಇದು ಕಾಣಿಸಿಕೊಳ್ಳುತ್ತದೆ.
- ಸಮಯಕ್ಕೆ ಸರಿಯಾಗಿ ಚುಚ್ಚುಮದ್ದು ಹಾಕಿಸುವಲ್ಲಿ ತೋರುವ ನಿರ್ಲಕ್ಷ್ಯವೇ ರೋಗಕ್ಕೆ ಕಾರಣ.

ರೋಗ ಲಕ್ಷಣಗಳು:

- ಗಂಟಲು ನೋವು, ನುಂಗಲು ತೊಂದರೆ, ಸ್ವಲ್ಪ ಜ್ವರ, ಗಂಟಲಲ್ಲಿ ಬೂದು ಅಥವಾ ಕಪ್ಪು ಬಣ್ಣದ ಪದರ ಕಾಣಿಸಿಕೊಳ್ಳುವುದು. ಗಂಟಲು ರಕ್ತಸ್ರಾವವಾಗುವುದು ರೋಗದ ಪ್ರಮುಖ ಲಕ್ಷಣವಾಗಿದೆ.

ಮೂರು ಪಟ್ಟು ಹೆಚ್ಚಳ:

- 2017 ರಲ್ಲಿ 203 ಶಂಕಿತ ಸೋಂಕಿತರು, 2018ರಲ್ಲಿ 115 ಶಂಕಿತ ಸೋಂಕಿತರು ಪತ್ತೆಯಾಗಿದ್ದರು.
- ಈ ಬಾರಿ ಆಗಸ್ಟ್ ಅಂತ್ಯಕ್ಕೆ 305 ಮಂದಿ ಶಂಕಿತ ಸೋಂಕಿತರು ಪತ್ತೆಯಾಗಿ ಆತಂಕ ಮೂಡಿಸಿದೆ.

ಉತ್ತರ ಕರ್ನಾಟಕದಲ್ಲಿ ಹೆಚ್ಚಳ ಏಕೆ?

- ಲಸಿಕೆ ಹಾಕಿಸುವ ಪ್ರಮಾಣ ಎಲ್ಲಿ ಕಡಿಮೆ ಇರುತ್ತದೆಯೋ ಆ ಭಾಗದಲ್ಲಿ ಈ ರೋಗ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.
- ಮಗು ಜನಿಸಿದ ಒಂದೂವರೆ ವರ್ಷದೊಳಗೆ ಹಾಗೂ ಐದು ವರ್ಷ ಇದ್ದಾಗ ಡಿಫ್ತೀರಿಯಾ ಲಸಿಕೆಯನ್ನು ಮಕ್ಕಳಿಗೆ ಕಡ್ಡಾಯವಾಗಿ ಹಾಕಿಸಬೇಕು.
- ಉತ್ತರ ಕರ್ನಾಟಕ ಭಾಗದ ಜನರಲ್ಲಿ ಹೆಚ್ಚಿರುವ ವಲಸೆ ಪ್ರವೃತ್ತಿ, ಸಂತಾನೋತ್ಪತ್ತಿ ಪ್ರಮಾಣ ಕಡಿಮೆ ಆರೋಗ್ಯ ಕಾಳಜಿಯಂತಹ ಅಂಶಗಳು ಮಕ್ಕಳಿಗೆ ಸೂಕ್ತ ಸಮಯಕ್ಕೆ ಲಸಿಕೆ ತಾಕಿಸುವುದನ್ನು ಮರೆಸುತ್ತವೆ.
- ಹೀಗಾಗಿಯೇ, ಆ ಭಾಗದಲ್ಲಿ ಹೆಚ್ಚು ಕಂಡುಬರುತ್ತದೆ ಎನ್ನುತ್ತಾರೆ ಆರೋಗ್ಯ ಇಲಾಖೆಯ ಲಸಿಕಾ ವಿಭಾಗದ ವೈದ್ಯರು.

27. ಆ್ಯಂಟಿ ಮೈಕ್ರೋಬಿಯಲ್ ಹಬ್‌ಗೆ ಭಾರತ ಸೇರ್ಪಡೆ:

- ಗ್ಲೋಬಲ್ ಆ್ಯಂಟಿ ಮೈಕ್ರೋಬಿಯಲ್ ರೆಸಿಸ್ಟೆನ್ಸ್ (ಎಎಂಆರ್) ರಿಸರ್ಚ್ ಆ್ಯಂಡ್ ಡೆವಲಪ್‌ಮೆಂಟ್ ಹಬ್‌ಗೆ ನೂತನ ಸದಸ್ಯ

ರಾಷ್ಟ್ರವಾಗಿ ಭಾರತ ಸೇರ್ಪಡೆಯಾಗಿದೆ ಎಂದು ವಿಜ್ಞಾನ ತಂತ್ರಜ್ಞಾನ ಸಚಿವಾಲಯದ ಬಯೋಟೆಕ್ನಾಲಜಿ ವಿಭಾಗ ಘೋಷಿಸಿದೆ.

28. ಕೆ2–18ಬಿ ಯಲ್ಲಿ ನೀರಿನ ಆವಿ ಪತ್ತೆ:



- ನಾಸಾ ಮತ್ತು ಯುರೋಪಿಯನ್ ಬಾಹ್ಯಾಕಾಶ ಏಜೆನ್ಸಿ ಬಳಸುವ ಹಬಲ್ ಬಾಹ್ಯಾಕಾಶ ದೂರದರ್ಶಕ ಬಳಸಿದ ಯೂನಿವರ್ಸಿಟಿ ಕಾಲೇಜ್ ಲಂಡನ್(ಯುಸಿಎಲ್) ಸಂಶೋಧಕರ ತಂಡ ನೀರಿನ ಆವಿ ಪತ್ತೆ ಮಾಡಿದೆ.
- ಲಿಯೋ ನಕ್ಷತ್ರಪುಂಜದಲ್ಲಿ ಸುಮಾರು 110 ಬೆಳಕಿನ ವರ್ಷಗಳ ದೂರದಲ್ಲಿರುವ ಸಣ್ಣ ಕೆಂಪು ಕುಬ್ಜ ನಕ್ಷತ್ರ ಕೆ2–18 ಒಂದು ಎಕ್ಸೋಪ್ಲ್ಯಾನೆಟ್ ಎಂದು ನಾಸಾ ಬಾಹ್ಯಾಕಾಶ ಸಂಸ್ಥೆ ತಿಳಿಸಿದೆ. ಈ ಗ್ರಹದ ವಾತಾವರಣದಲ್ಲಿ ಹೈಡ್ರೋಜನ್ ಮತ್ತು ಹೀಲಿಯಂ ಇರುವ ಬಗ್ಗೆಯೂ ಸಂಶೋಧನೆ ತಿಳಿಸಿದೆ.
- ಕೆಪ್ಲರ್ ಸ್ಪೇಸ್ ಟೆಲಿಸ್ಕೋಪ್ 2015ರಲ್ಲಿ ಮೊದಲ ಬಾರಿಗೆ 2–18 ಬಿ ಅನ್ನು ಪತ್ತೆ ಮಾಡಿತ್ತು.

29. ಬಾಹ್ಯಾಕಾಶದಲ್ಲಿ ಸಿಮೆಂಟ್ ಮಿಶ್ರಣ:

- ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದ ಗಗನಯಾತ್ರಿಗಳು ಆಮ್ಲಜನಕವಿಲ್ಲದ, ಗುರುತ್ವಾಕರ್ಷಣೆ ಕಡಿಮೆ ಇರುವ ವಾತಾವರಣದಲ್ಲಿ ಸಿಮೆಂಟ್ ಮಿಶ್ರಣ ಮಾಡಿ ಪರೀಕ್ಷಿಸಿರುವ ಬಗ್ಗೆ ನಾಸಾ ತಿಳಿಸಿದೆ.
- ಗಗನಯಾತ್ರಿಗಳು ಭವಿಷ್ಯದಲ್ಲಿ ಚಂದ್ರ ಮತ್ತು ಮಂಗಳ ಗ್ರಹಗಳಿಗೆ ತೆರಳುವ ಸಂದರ್ಭ ತಂಗಲು ಸುರಕ್ಷಿತ ತಾಣ ನಿರ್ಮಿಸುವುದು ಅಗತ್ಯವಾಗಿರುವುದರಿಂದ, ಕಾಂಕ್ರೀಟ್ ಮಿಶ್ರಣಕ್ಕೆ ಅಗತ್ಯ ಸಿಮೆಂಟ್‌ಅನ್ನು ನೀರಿನಲ್ಲಿ ಮಿಶ್ರಣ ಮಾಡಿ ಪರೀಕ್ಷಿಸಿದ್ದಾರೆ.
- ಈ ಸಿಮೆಂಟ್‌ನ ಮೂಲ ಉತ್ಪನ್ನದಲ್ಲಿ ಒಂದಾದ ಟ್ರೈಕ್ಯಾಲ್ಸಿಯಂ ಸಿಲಿಕೇಟ್ (ಸಿಎಸ್) ಅನ್ನು ನೀರಿನ ಜತೆ ಮಿಶ್ರಣ ಮಾಡಲಾಗಿದೆ.
- ಭೂಮಿಯಲ್ಲಿ ತಯಾರಿಸಲ್ಪಟ್ಟ ಸಿಮೆಂಟ್ ಮಿಶ್ರಣ ಮತ್ತು ಬಾಹ್ಯಾಕಾಶದಲ್ಲಿ ತಯಾರಿಸಲ್ಪಟ್ಟ ಸಿಮೆಂಟ್ ಮಿಶ್ರಣಗಳ ನಡುವಿನ ವ್ಯತ್ಯಾಸವನ್ನು ಅಧ್ಯಯನ ನಡೆಸಲಾಗಿದೆ.

30. ಹೊಸ ಅವತಾರದದಲ್ಲಿ ತೇಜಸ್:

- 5 ಟನ್ ತೇಜಸ್ ಮಾರ್ಕ್–2 ಏರ್‌ಕ್ರಾಫ್ಟ್ ತೂಕ, ಮಿರಾಜ್, ಜಾಗ್ವಾರ್, ಗ್ರಿಪ್ಪೆನ್ ಯುದ್ಧ ವಿಮಾನಗಳೂ ಇಷ್ಟೇ ತೂಕ ಹೊಂದಿವೆ.

ಉತ್ಪಾದನೆ ಯಾವಾಗ?

- ಎಚ್‌ಎಎಲ್ ಸದ್ಯ ಭಾರತೀಯ ವಾಯುಪಡೆಗೆ 123 ತೇಜಸ್ ಲಘು ಯುದ್ಧ ವಿಮಾನಗಳನ್ನು ಪೂರೈಸುತ್ತಿದೆ.
- ಮುದಿ ಮಿಗ್ 21 ಯುದ್ಧ ವಿಮಾನಗಳ ಸ್ಥಾನದಲ್ಲಿ ತೇಜಸ್ ಲಘು ಯುದ್ಧ ವಿಮಾನಗಳು ಕಾರ್ಯನಿರ್ವಹಿಸಲಿದೆ.
- ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಎಚ್‌ಎಎಲ್ ತೇಜಸ್ ಮಾರ್ಕ್ –3 ಯುದ್ಧ ವಿಮಾನಗಳನ್ನು ಉತ್ಪಾದಿಸಲಿದೆ.

ಅತ್ಯಾಧುನಿಕ ತಂತ್ರಜ್ಞಾನ

- ಗೇಮ್‌ಚೇಂಜರ್ ಆ್ಯಕ್ಟಿವ್ ಎಲೆಕ್ಟ್ರಾನಿಕಲಿ ಸ್ಕ್ಯಾನ್ಡ್ ಅರೇಸ್ರೇಡಾರ್.
- ಶಕ್ತಿಶಾಲಿ 100 ಕೆಎನ್ ಶ್ರೇಣಿಯ ಜಿಇ 414, ಟರ್ಬೋಜೆಟ್ ಅವಳಿ ಎಂಜಿನ್
- ಆಕಾಶದಿಂದ ಆಕಾಶಕ್ಕೆ ಚಿಮ್ಮುವ ಸ್ವದೇಶಿ ನಿರ್ಮಿತ ಅಸ್ತ್ರ (ಗರಿಷ್ಠ 70 ಕಿ.ಮೀ) ಕ್ಷಿಪಣಿ ಅಳವಡಿಕೆ.

ಈ ಯೋಜನೆಯೂ ಜಾರಿಯಲ್ಲಿದೆ

- ಐಎಎಫ್‌ಗೆ ಅತ್ಯಾಧುನಿಕ ಮಧ್ಯಮಗಾಮಿ ಯುದ್ಧ ವಿಮಾನ (ಎಎಂಸಿಎ) ವಿನ್ಯಾಸದಲ್ಲಿ ಎಚ್‌ಎಎಲ್ ಕಾರ್ಯನಿರತವಾಗಿದೆ.
- ಸೂಪರ್ ಕ್ರೂಸ್ ಸ್ಪೀಡ್ ಹೊಂದಿರುವ ಅವಳಿ ಎಂಜಿನ್‌ನ ಈ ಏರ್‌ಕ್ರಾಫ್ಟ್ 25 ಟನ್ ತೂಕ ಹೊಂದಿರಲಿದೆ.
- ಶತ್ರು ಪಾಳಯದ ರೇಡಾರ್‌ಗಳ ದಿಕ್ಕು ತಪ್ಪಿಸುವ ಅತ್ಯಾಧುನಿಕ ವ್ಯವಸ್ಥೆ ಇದರಲ್ಲಿ ಇರಲಿದೆ.

31. ನರಗಳ ಜತೆಗೆ ಹೊಂದಿಕೊಳ್ಳುವ ಕೃತಕ ಕಾಲು:

- ಸ್ವಿಡ್ಜರ್ಲೆಂಡ್‌ನ 'ಇಟಿಎಚ್ ಝುರಿಚ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ' ಯೂನಿವರ್ಸಿಟಿ ಸಂಶೋಧಕರ ತಂಡ ಹೆಚ್ಚು ಪರಿಣಾಮಕಾರಿಯಾಗಿರುವ ಕೃತಕ ಕಾಲುಗಳನ್ನು ತಯಾರಿಸಿದೆ.
- ಹೈ–ಟೆಕ್ ಕೃತಕ ಕಾಲುಗಳು ನರಗಳಿಗೆ ಸಂಕೇತಗಳನ್ನು ರವಾನಿಸುವುದರಿಂದ ಈ ಸಾಧನ ಹೆಚ್ಚು ಪರಿಣಾಮಕಾರಿಯಾಗಿದೆ.
- ನೆಲದ ಮೇಲೆ ಕಾಲಿನ ಒತ್ತಡವನ್ನು ಪತ್ತೆ ಮಾಡುವ ಏಳು ಸಂವೇದಕಗಳು ಮತ್ತು ಮೊಣಕಾಲಿನ ಕೋನಗಳನ್ನು ಡಿಕೋಡ್ ಮಾಡುವ ಒಂದು ಸಂವೇದಕವನ್ನು ಕೃತಕ ಕಾಲಿಗೆ ಜೋಡಿಸಲಾಗಿದೆ.
- ಸಿಯಾಟಿಕ್ ನರಕ್ಕೆ ಅಳವಡಿಸಿರುವ ಕೃತಕ ಕಾಲಿನ ಸಂವೇದಕಗಳಿಂದ ನರಗಳಿಗೆ ಸಂಕೇತ ರವಾನೆಯಾಗುತ್ತದೆ.
- ಇದು ಕೃತಕ ಕಾಲೆಂದೆನಿಸದೆ ಸಹಜ ಕಾಲಿನಂತೆ ಅನುಭವ ನೀಡುತ್ತದೆ. ಹೆಚ್ಚಿನ ಶ್ರಮವಿಲ್ಲದೆ ಸುಲಭವಾಗಿ ನಡೆದಾಡಲು ಅವಕಾಶ ಮಾಡಿಕೊಡುತ್ತದೆ.

32. ತಮಿಳುನಾಡು ಭಾಗದ ಹವಳದಿಬ್ಬಗಳಿಗೆ ಮರುಜೀವ:

- ರಾಷ್ಟ್ರದ ಆರ್ಥಿಕತೆಗೆ ಸಮುದ್ರ ವಲಯ ಬಹುದೊಡ್ಡ ಕೊಡುಗೆ ನೀಡುತ್ತದೆ. ಭಾರತದ ಪ್ರಮುಖ ಪರಿಸರ ವ್ಯವಸ್ಥೆಗಳಲ್ಲಿ ಹವಳದ ದಿಬ್ಬ ಒಂದಾಗಿದೆ.
- ಭಾರತದ ತಮಿಳುನಾಡು ಕರಾವಳಿ ಪ್ರದೇಶದಲ್ಲಿ ಸಾವಿರಾರು ಸಮುದ್ರ ಸಸ್ಯ ಮತ್ತು ಪ್ರಾಣಿಗಳಿಗೆ ಆಶ್ರಯ ಮತ್ತು ಪೋಷಣೆ ಒದಗಿಸುವ ಸಮುದ್ರ ಬಂಡೆಗಳು, ಹವಳದಿಬ್ಬಗಳು ಮರುಜೀವ ಪಡೆದುಕೊಂಡಿರುವ ವಿಚಾರ ಅಧ್ಯಯನ ವರದಿಯೊಂದರಲ್ಲಿ ಪ್ರಸ್ತಾಪವಾಗಿದೆ.
- ಈ ವರ್ಷದ ಆರಂಭದಲ್ಲಿ ಸಮುದ್ರ ತಾಪಮಾನ ಏರಿಕೆಯಿಂದ ಹಾನಿಗೊಳಗಾದ ಪಾಲ್ಕ್ ಕೊಲ್ಲಿ ಮತ್ತು ತಮಿಳುನಾಡಿನ ಮನ್ನಾರ್ ಕೊಲ್ಲಿಯ ಹವಳದ ಬಂಡೆಗಳು ಕೆಲವೇ ತಿಂಗಳುಗಳಲ್ಲಿ ಮತ್ತೆ ಜೀವ ಪಡೆದುಕೊಂಡಿದೆ ಎಂದು ಚೆನ್ನೈನ ಭೂ ವಿಜ್ಞಾನ ಸಚಿವಾಲಯದ ಅಧೀನ ಸಂಸ್ಥೆ ರಾಷ್ಟ್ರೀಯ ಕರಾವಳಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳು ತಿಳಿಸಿದ್ದಾರೆ.
- ಪಶ್ಚಿಮ ಕರಾವಳಿಯ ಕಛ್ ಕೊಲ್ಲಿಯಲ್ಲಿರುವ ಹವಳದ ಬಂಡೆಗಳು ಬೆಚ್ಚಗಿನ ನೀರಿನಿಂದಾಗಿ ಹಾನಿಯಾಗಿವೆ ಎಂದು ಅಧ್ಯಯನ ತಿಳಿಸಿದೆ.
- ಹಾಗೆಯೇ ವಿಜ್ಞಾನಿಗಳ ತಂಡ ಸೆರೆಹಿಡಿದ ನೀರೊಳಗಿನ ಚಿತ್ರಗಳು ಪಾಲ್ಕ್ ಕೊಲ್ಲಿಯಲ್ಲಿ ಹಾನಿಗೊಳಗಾದ ಎಲ್ಲ ಹವಳ ಬಂಡೆಗಳು ಚೇತರಿಸಿಕೊಂಡಿವೆ ಎಂದು ತೋರಿಸಿದೆ.
- ಭಾರತದಲ್ಲಿ ಹವಳ ಬಂಡೆಯ ಒಟ್ಟು ವಿಸ್ತೀರ್ಣ 2,374.9ಕಿ.ಮೀ. ಅದರಲ್ಲಿ ಶೇ.15 ತಮಿಳುನಾಡು ಕರಾವಳಿ ಪ್ರದೇಶದಲ್ಲಿದೆ. ಬೆಳಕು ಹೇರಳವಾಗಿರುವ ಸ್ಪಷ್ಟ ಆಳವಿಲ್ಲದ ಕರಾವಳಿ ಪ್ರದೇಶಗಳಲ್ಲಿ ಹವಳ ದಿಬ್ಬಗಳು ಕಂಡುಬರುತ್ತದೆ.
- ಕಳೆದ ಕೆಲವು ವರ್ಷಗಳಿಂದ ಜಾಗತಿಕ ತಾಪಮಾನ ಹೆಚ್ಚಳದ ಪರಿಣಾಮವಾಗಿ ಹಸಿರುಮನೆ ಅನಿಲ ಹೊರಸೂಸುವಿಕೆಯಿಂದ ವಿಶ್ವಾದ್ಯಂತ ಸಾಗರ ಬಂಡೆಗಳ ಮತ್ತು ಹವಳದ ಸವೆತ ಹೆಚ್ಚಾಗಿದೆ.
- ಹಸಿರುಮನೆ ಅನಿಲ ಹೊರಸೂಸುವಿಕೆ ಹೀಗೇ ಮುಂದುವರಿದರೆ ವಿಶ್ವದ 29 ಹವಳ ಬಂಡೆಗಳ ತಾಣಗಳೂ ಶತಮಾನದ ಅಂತ್ಯದ ವೇಳೆಗೆ ನಾಶವಾಗುತ್ತದೆ ಎಂದು ಯುನೆಸ್ಕೋ ತಿಳಿಸಿದೆ.

33. ಕಪ್ಪು ಕುಳಿಯಲ್ಲಿ ಗುರುತ್ವಾಕರ್ಷಣೆ ತರಂಗ:

- ಲೋಹಕ್ಕೆ ಹೊಡೆದಾಗ ಕಂಪನ ಪ್ರತಿಧ್ವನಿಸುವಂತೆ ಬಾಹ್ಯಾಕಾಶದಲ್ಲಿ ಹೊಸದಾಗಿ ಪತ್ತೆಯಾದ ಕಪ್ಪು ಕುಳಿಗೆ ಮತ್ತೊಂದು ಕಪ್ಪು ಕುಳಿಗೆ ಹೊಡೆದಾಗ ಬ್ರಹ್ಮಾಂಡದಲ್ಲಿ ಗುರುತ್ವಾಕರ್ಷಣೆ ತರಂಗಗಳು ಪಸರಿಸುತ್ತವೆ ಎಂದು ಸಂಶೋಧಕರು ಪತ್ತೆ ಮಾಡಿದ್ದಾರೆ.
- ಗುರುತ್ವಾಕರ್ಷಣೆಯ ತರಂಗಗಳ ರಿಂಗಿಂಗ್ ಮಾದರಿಯನ್ನು ಎನ್‌ಕೋಡ್ ಮಾಡಿದಾಗ ಕಪ್ಪು ಕುಳಿಯ ದ್ರವ್ಯರಾಶಿ ಮತ್ತು ಸ್ಪಿನ್ ಐನ್‌ಸ್ಟೈನ್‌ನ ಸಾಮಾನ್ಯ ಸಾಪೇಕ್ಷತಾ ಸಿದ್ಧಾಂತಕ್ಕೆ ಹೆಚ್ಚು

ಪುರಾವೆಗಳನ್ನು ಒದಗಿಸುತ್ತದೆ ಎಂದು ಖಗೋಳಶಾಸ್ತ್ರಜ್ಞರು ತಿಳಿಸಿದ್ದಾರೆ.

- ಯು.ಎಸ್.ನ ಮಸಚುಯೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ)ಯ ಸಂಶೋಧಕರ ತಂಡ ಈ ಅಧ್ಯಯನ ನಡೆಸಿದೆ.
- ಈ ಅಧ್ಯಯನದ ವರದಿ ಪ್ರಕಾರ ಕಪ್ಪು ಕುಳಿಗಳು ದ್ರವ್ಯರಾಶಿ, ಸ್ಪಿನ್ ಮತ್ತು ವಿದ್ಯುತ್ ಚಾರ್ಜ್ ಗುಣಲಕ್ಷಣಗಳನ್ನು ಹೊಂದುವ ಸಾಧ್ಯತೆಗಳಿದೆ ಎಂದು ಹೇಳಿದೆ.
- ಐನ್ಸ್ಟೈನ್‌ನ ಸಾಮಾನ್ಯ ಸಾಪೇಕ್ಷತಾ ಸಿದ್ಧಾಂತದ ಪ್ರಕಾರ ಕಪ್ಪು ಕುಳಿಯ ನಿರ್ದಿಷ್ಟ ದ್ರವ್ಯರಾಶಿ ಮತ್ತು ಸ್ಪಿನ್ ಒಂದು ನಿರ್ದಿಷ್ಟ ಪಿಚ್‌ನಲ್ಲಿ ಮಾತ್ರ ಸ್ವರಗಳನ್ನು ಉಂಟುಮಾಡಿ ಮರೆಯಾಗುತ್ತದೆ ಎಂದು ತಿಳಿಸಿದೆ.
- ಸಾಮಾನ್ಯ ಸಾಪೇಕ್ಷತಾ ಸಿದ್ಧಾಂತ ಸರಿಯಾಗಿದೆ. ಆದರೆ ನಾವು ಇದನ್ನು ಈ ರೀತಿ ದೃಢ ಪಡಿಸಿದ್ದು ಇದೇ ಮೊದಲು. ಈ ಸಿದ್ಧಾಂತವನ್ನು ನೇರವಾಗಿ ಪರೀಕ್ಷಿಸುವ ಮೊದಲ ಪ್ರಾಯೋಗಿಕ ಮಾಪನ ಇದಾಗಿದೆ ಎಂದು ಅಧ್ಯಯನದ ಪ್ರಮುಖ ಲೇಖಕ ಮ್ಯಾಕ್ಸಿಮಿಲಿಯಾನೊ ಐಸಿ ಹೇಳಿದ್ದಾರೆ.

34. ಚಂದ್ರನಲ್ಲಿಗೆ ನಾಸಾದ ಕ್ಯೂಬ್ ಸ್ಯಾಟ್:

- ಚಂದ್ರನಲ್ಲಿಗೆ ಮತ್ತೆ ಗಗನಯಾನಿಗಳನ್ನು ಕಳುಹಿಸಲು ಯೋಜಿಸಿರುವ ನಾಸಾವು ಇದಕ್ಕೆ ಪೂರ್ವಭಾವಿಯಾಗಿ ಈ ವರ್ಷದ ಕೊನೆಗೆ ಮೈಕ್ರೋವೇವ್ ಓವನ್ ಗಾತ್ರದ ಉಪಗ್ರಹವೊಂದನ್ನು ಚಂದ್ರನಲ್ಲಿಗೆ ಕಳುಹಿಸಲು ಯೋಜಿಸಿದೆ.
- ಇದಕ್ಕೆ ಸಂಬಂಧಪಟ್ಟಂತೆ ಎಂಜಿನಿಯರಿಂಗ್ ಸರ್ವೀಸ್ ಕಂಪನಿಯಾದ ಅಡ್ವಾನ್ಸಡ್ ಸ್ಪೇಸ್‌ಗೆ 7 ದಶಲಕ್ಷ ಡಾಲರ್‌ನ ಗುತ್ತಿಗೆಯೊಂದನ್ನು ನೀಡಿದೆ.

ನಾಸಾದಿಂದ ವಿಕ್ರಮ್ ಹುಡುಕಾಟ

- ಅಮೆರಿಕದ ಬಾಹ್ಯಾಕಾಶ ಸಂಸ್ಥೆಯ ಅಂತರಿಕ್ಷ ನೌಕೆಯೊಂದು ಭಾರತದ ಚಂದ್ರಯಾನ–2ನ ವಿಕ್ರಮ್ ಪತನವಾದ ಸ್ಥಳದ ಮಾಹಿತಿ ಮತ್ತು ಚಿತ್ರಗಳನ್ನು ಪಡೆಯಲು (ಸೆ–17) ಹೊರಟಿದೆ ಎಂದು ವರದಿಗಳು ಹೇಳಿವೆ.
- ಭಾರತದ ಅಂತರಿಕ್ಷನೌಕೆಯ ಸ್ಥಿತಿಗತಿಯ ಕುರಿತು ಏನಾದರೂ ಮಾಹಿತಿ ಲಭಿಸಲಿದೆಯೇ ಎಂದು ತಿಳಿಯಲು ನಾಸಾದ ಲೂನಾರ್ ರೆಕನಸೆನ್ಸ್ ಆರ್ಬಿಟರ್ ಪ್ರಯತ್ನಿಸಲಿದೆ.
- ಆದರೆ, ಚಂದ್ರನ ಈ ಭೂಭಾಗದಲ್ಲಿ ಚಿತ್ರಗಳು ಸ್ಪಷ್ಟವಾಗಿ ಮೂಡುವ ನಿರೀಕ್ಷೆಯಿಲ್ಲ. ನಾಸಾದ ಆರ್ಬಿಟರ್‌ನ ಈ ಪ್ರಯತ್ನದ ಕುರಿತು ಅಮೆರಿಕದ ನ್ಯಾಷನಲ್ ಏರೋನಾಟಿಕ್ ಮತ್ತು ಸೇಸ್ – ಅಡ್ಮಿನಿಸ್ಟ್ರೇಷನ್‌ನ ವಕ್ತಾರರು ಖಚಿತಗೊಳಿಸಿದ್ದಾರೆ.
- ನಿನ್ನೆ ನಾಸಾದ ನೌಕೆಯು ಯಾವ ಸಮಯದಲ್ಲಿ ಇಂತಹ ಪ್ರಯತ್ನ ಮಾಡಿದೆ ಎಂಬ ಮಾಹಿತಿ ಇನ್ನೂ ಲಬಿಸಿಲ್ಲ.

35. ಜೇನುನೊಣಗಳ ಭಕ್ಷಕ ಏಷ್ಯನ್ ಹಾರ್ನೆಟ್:

- ಜೇನುನೊಣಗಳ ಭಕ್ಷಕ ಏಷ್ಯನ್ ಜೈಂಟ್ ಹಾರ್ನೆಟ್ ಕೆನಡಾದ ಬ್ರಿಟಿಷ್ ಕೊಲಂಬಿಯಾದಲ್ಲಿ ಮೊದಲ ಬಾರಿ ಕಾಣಿಸಿಕೊಂಡಿದೆ.
- ಇದು ಜೇನುಹುಳು ಸಾಕಣೆದಾರರಲ್ಲಿ ಆತಂಕ ಮೂಡಿಸಿದೆ. ಜೇನುಹುಳುಗಳು ಇವುಗಳ ಪ್ರಮುಖ ಬೇಟೆಯಾಗಿರುವುದರಿಂದ ಜೇನು ಸಂತತಿಗೆ ಮಾರಕವಾಗಿದೆ.
- ಏಷಿಯನ್ ಬೀ ವೈಜ್ಞಾನಿಕ ಹೆಸರು ವೆಸ್ಪಾ ಮ್ಯಾಂಡಾರಿನಿಯಾ. ಇದು 8 ಇಂಚು ಉದ್ದ, 3 ಇಂಚಿನ ರೆಕ್ಕೆಗಳನ್ನು ಹೊಂದಿರುವ ದೈತ್ಯ ಕೀಟ, 50 ಜೇನುನೊಣಗಳನ್ನು ಕೊಲ್ಲುವ ಸಾಮರ್ಥ್ಯ ಒಂದು ಹಾರ್ನೆಟ್ ಹೊಂದಿದೆ.
- ಇಲ್ಲಿಯವರೆಗೆ ಮೂರು ಮಾದರಿಯ ಏಷ್ಯನ್ ದೈತ್ಯ ಹಾರ್ನೆಟ್‌ಗಳು (ವೆಸ್ಪಾ ಮ್ಯಾಂಡರಿನಿಯಾ) ಕಂಡುಬಂದಿವೆ ಎಂದು ಬ್ರಿಟಿಷ್ ಕೊಲಂಬಿಯಾದ ಕೃಷಿ ಸಚಿವಾಲಯ ತಿಳಿಸಿದೆ.
- ಕಳೆದ ತಿಂಗಳು ಯುಕೆಯಲ್ಲಿ ಇದೇ ಕೀಟ ಕಂಡುಬಂದಿತ್ತು. ಈ ಕೀಟಗಳು ಜೇನುನೊಣಗಳ ಗೂಡಿನ ಮೇಲೆ ದಾಳಿ ಮಾಡಿ ಅಲ್ಪಾವಧಿಯಲ್ಲೇ ನಾಶ ಮಾಡುತ್ತವೆ.

- ಏಷ್ಯಾದ ಜೇನುಹುಳುಗಳು ಹಾರ್ನೆಟ್‌ಗಳ ದಾಳಿಯನ್ನು ಹೇಗೆ ಎದುರಿಸಬೇಕೆಂದು ಕಲಿತಿವೆ. ಆಕ್ರಮಣಕಾರಿ ಕೀಟವನ್ನು ಸುತ್ತುವರಿದು ಕಂಪಿಸಲು ಪ್ರಾರಂಭಿಸುತ್ತವೆ, ಇದರಿಂದ ಶಾಖ ಉತ್ಪತ್ತಿಯಾಗಿ ಹಾರ್ನೆಟ್‌ಗಳು ಸಾಯುತ್ತವೆ.
- ಆದರೆ ಕೆನಡಾದ ಜೇನುಹುಳುಗಳಿಗೆ ಹಾರ್ನೆಟ್ ದಾಳಿ ಎದುರಿಸಲು ತಿಳಿದಿಲ್ಲ. ಈ ಕೀಟ ಮಾನವರಿಗೂ ಅಪಾಯಕಾರಿ, ಇದರ 10 ಅಥವಾ ಹೆಚ್ಚಿನ ಕುಟುಕುಗಳು ವಿಷಕಾರಿ ಅಥವಾ ಅಲರ್ಜಿಗೆ ಕಾರಣವಾಗುತ್ತದೆ ತಕ್ಷಣ ಔಷಧ ತೆಗೆದುಕೊಳ್ಳದಿದ್ದಲ್ಲಿ ಮಾರಣಾಂತಿಕವಾಗಿಯೂ ಕಾಡುತ್ತದೆ.
- ಈ ಕೀಟದಿಂದ ಕಚ್ಚಿಸಿಕೊಂಡ ಜಾಗಕ್ಕೆ ತಕ್ಷಣವೇ ಐಸ್ ಕ್ಯೂಬ್ ಇಡಬೇಕು. ನಂಜು ಹರಡದಂತೆ ಎಚ್ಚರಿಕೆ ಕ್ರಮ ಕೈಗೊಳ್ಳಬೇಕು ಎಂದು ಆರೋಗ್ಯ ತಜ್ಞರು ತಿಳಿಸಿದ್ದಾರೆ.
- ದೈತ್ಯ ಕೀಟಗಳನ್ನು ಬಲೆಗೆ ಬೀಳುವಂತೆ ಮಾಡುವ ಸಲಕರಣೆಗಳ ಬಗ್ಗೆ ಕೃಷಿ ಇಲಾಖೆ ಅಧ್ಯಯನ ನಡೆಸುತ್ತಿದೆ.

36. ವಾರ್ ಗೇಮಿಂಗ್ ಸಾಫ್ಟ್ ವೇರ್ ಹಸ್ತಾಂತರ:

- ದೆಹಲಿಯ ಇನ್‌ಸ್ಟಿಟ್ಯೂಟ್ ಆಫ್ ಸಿಸ್ಟಮ್ಸ್ ಸ್ಟಡೀಸ್ ಆ್ಯಂಡ್ ಅನಲಿಸಿಸ್ (ಐಎಸ್‌ಎಸ್‌ಎ). ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದ ಹೊಸ ತಲೆಮಾರಿನ ವಾರ್ ಗೇಮಿಂಗ್ ಸಾಫ್ಟ್‌ವೇರನ್ನು ಡಿಫೆನ್ಸ್ ರಿಸರ್ಚ್ ಡೆವಲಪ್‌ಮೆಂಟ್ ಆರ್ಗನೈಸೇಷನ್ (ಡಿಆರ್‌ಡಿಒ) ಭಾರತದ ಸೇನೆಗೆ ಹಸ್ತಾಂತರಿಸಿತು.
- ಈ ಹೊಸ ಸಾಫ್ಟ್‌ವೇರ್ ಕಡಲ ಯುದ್ಧ ಕೇಂದ್ರಗಳಲ್ಲಿ ಇತ್ತೀಚಿನ ತಾಂತ್ರಿಕ ಮತ್ತು ಕಂಪ್ಯೂಟಿಂಗ್ ಸಾಧನಗಳನ್ನು ಬಳಸಿಕೊಂಡು ತರಬೇತಿ ನೀಡಲು ಅನುಕೂಲವಾಗುವಂತಹ ವಾತಾವರಣ ಸೃಷ್ಟಿಸುವ ಗುರಿ ಹೊಂದಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.
- ಭಾರತೀಯ ನೌಕಾಪಡೆಯ ಕಾರ್ಯಾಚರಣೆ ಮತ್ತು ಯುದ್ಧತಂತ್ರ ಅಗತ್ಯ ಪೂರೈಸಲು ದೆಹಲಿಯ ಐಎಸ್ ಹಸ್ತಾಂತರ ಎಸ್‌ಎ, ಪ್ರಧಾನ ಡಿಆರ್‌ಡಿಒ ಪ್ರಯೋಗಾಲಯ, ವಿಶಾಖ ಪಟ್ಟಣದ ಮರಿಟೈಮ್ ವಾರ್ ಫೇರ್ ಸೆಂಟರ್ (MWC) ಸಹಯೋಗದಲ್ಲಿ ಈ ಸಾಫ್ಟ್ ವೇರ್ ಅಭಿವೃದ್ಧಿಪಡಿಸಲಾಗಿದೆ.
- ಬಳಕೆದಾರ ಸ್ನೇಹಿಯಾಗಿ ಸಾಫ್ಟ್ ವೇರ್ ತಯಾರಿಸಲಾಗಿದ್ದು, ಜಾಗತಿಕವಾಗಿ ಎದುರಿಸಬಹುದಾದ ಯುದ್ಧದ ಸನ್ನಿವೇಶಗಳ ಬಗ್ಗೆ ತಿಳಿಸುತ್ತದೆ.
- ಭೌಗೋಳಿಕವಾಗಿ ಚದುರಿದ ವಿಶಾಲ ಪ್ರದೇಶದಲ್ಲಿ ಅಭ್ಯಾಸ ನಡೆಸಲು ಇದು ಅನುವು ಮಾಡಿಕೊಡುತ್ತದೆ. ಸೇನೆಯ ವೈಸ್ ಅಡ್ಮಿರಲ್ ಜಿ.ಅಶೋಕ್ ಕುಮಾರ್ ಸಾಫ್ಟ್ ವೇರ್ ಸ್ವೀಕರಿಸಿದರು.

37. ಅಣ್ವಸ್ತ್ರ ಕ್ಷಿಪಣಿ ಪರೀಕ್ಷೆಯಶಸ್ವಿ; ವಾಯುಪಡೆಗೆ ಭೀಮಬಲ:

- ಆಕಾಶ ಮಾರ್ಗದಲ್ಲಿಯೇ ನಿಗದಿತ ಗುರಿಯನ್ನು ಹೊಡೆದುರುಳಿಸಬಲ್ಲ ಹಾಗೂ ಅಗತ್ಯಕ್ಕೆ ಅನುಗುಣವಾದ ರೀತಿಯಲ್ಲಿ ಯುದ್ಧ ವಿಮಾನಗಳಲ್ಲಿ ಅಳವಡಿಕೆ ಮಾಡಬಹುದಾದ ಮಧ್ಯಮಗಾಮಿ ಸ್ವದೇಶಿ ನಿರ್ಮಿತ ಅಸ್ತ್ರಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಪಶ್ಚಿಮ ಬಂಗಾಳದ ಸಮುದ್ರ ತೀರದಲ್ಲಿ ಯಶಸ್ವಿಯಾಗಿ ನಡೆಸಲಾಗಿದೆ.
- ಭಾರತೀಯ ವಾಯುಪಡೆಯ ಸುಖೋಯ್–30 ಎಂಕೆಐ ಯುದ್ಧ ವಿಮಾನದ ಮೂಲಕ ಕ್ಷಿಪಣಿಯನ್ನು ಪ್ರಯೋಗಿಸಲಾಗಿದ್ದು, ಅದು ಯಶಸ್ವಿಯಾಗಿದೆ ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಹೇಳಿದೆ.
- ಇದು ಎಲೆಕ್ಟರೋ ಆಪ್ಟಿಕಲ್ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ಹೊಂದಿದ್ದು, ಗರಿಷ್ಠ 70 ಕಿ.ಮೀ ದೂರ ಕ್ರಮಿಸಬಲ್ಲದಾಗಿದೆ.

38. ಬಟ್ಟೆಯಿಂದ ವಿದ್ಯುತ್ ಉತ್ಪಾದನಾ ಅವಿಷ್ಕಾರ:

- ಖರಗ್‌ಪುರ ಐಐಟಿ ಸಂಶೋಧಕರು ನೈಸರ್ಗಿಕವಾಗಿ ಒಣಗಿಸಿದ ಬಟ್ಟೆಗಳಿಂದ ವಿದ್ಯುತ್ ಉತ್ಪಾದಿಸುವ ವಿಧಾನವನ್ನು ಕಂಡುಹಿಡಿದಿದ್ದಾರೆ.
- ಸೆಲ್ಯುಲೋಸ್ ಆಧಾರಿತ ಬಟ್ಟೆಗಳಲ್ಲಿ ನ್ಯಾನೊಚಾನಲ್‌ಗಳನ್ನು ಬಳಸುವ ಮೂಲಕ ಉಪ್ಪು ನೀರಿನ ನಿರಂತರ

ಆವಿಯಾಗುವಿಕೆಗೆ ಪೂರಕವಾಗಿ ರಚಿಸಲಾದ ಸಾಧನದಿಂದ ವಿದ್ಯುತ್ ಉತ್ಪಾದಿಸುವ ವಿಧಾನವನ್ನು ಕಂಡುಹಿಡಿದಿದ್ದಾರೆ.

- ಕಮರ್ಷಿಯಲ್ ಸೂಪರ್–ಕೆಪಾಸಿಟರ್‌ಗೆ ಬಟ್ಟೆಗಳನ್ನು ಅಳವಡಿಸಲಾಗುತ್ತದೆ. ನೈಸರ್ಗಿಕ ಆವಿಯಾಗುವಿಕೆ ಮೂಲಕ ಉಪ್ಪು ಅಯಾನುಗಳ ಸುಸ್ಥಿರ ಚಲನೆ ಸಾಧಿಸಲು ಈ ಸಾಧನ ಅನುವು ಮಾಡಿಕೊಡುತ್ತದೆ.
- ತಂಡ 24 ಗಂಟೆಗಳಲ್ಲಿ ಸುಮಾರು 10 ವೊಲ್ಟ್ ವಿದ್ಯುತ್ ಚಾರ್ಜ್ ಮಾಡಿದೆ. ಈ ಪ್ರಯೋಗದ ಮೂಲಕ ಸಂಗ್ರಹಿಸಿದ ವಿದ್ಯುತ್ ಶಕ್ತಿಯಿಂದ ಒಂದು ಗಂಟೆಗಿಂತ ಹೆಚ್ಚು ಕಾಲ ಬಿಳಿ ಎಲ್‌ಇಡಿ ಬಲ್ಬ್ ಉರಿದಿದೆ ಎಂದು ಮೆಕಾನಿಕಲ್ ಇಂಜಿನಿಯರಿಂಗ್ ವಿಭಾಗದ ಪ್ರೊ.ಸುಮನ್ ಚಕ್ರವರ್ತಿ ತಿಳಿಸಿದ್ದಾರೆ.

39. ಇಸ್ರೋ– ಡಿಆರ್‌ಡಿಒ ಒಪ್ಪಂದ:

- ಮಾನವ ಬಾಹ್ಯಾಕಾಶ ಹಾರಾಟದ ಸಾಮರ್ಥ್ಯ ಹೆಚ್ಚಿಸಲು ಮಾನವ ಕೇಂದ್ರಿತ ವ್ಯವಸ್ಥೆಗಳ ಅಭಿವೃದ್ಧಿಗೆ 'ಇಂಡಿಯನ್ ಸ್ಪೇಸ್ ರಿಸರ್ಚ್ ಆರ್ಗನೈಸೇಷನ್' (ಇಸ್ರೋ) 'ಡಿಫೆನ್ಸ್ ರಿಸರ್ಚ್ ಅ್ಯಂಡ್ ಡೆವಲಪ್ ಮೆಂಟ್ ಆರ್ಗನೈಸೇಷನ್' (ಡಿಆರ್‌ಡಿಒ) ಜತೆ ಕೈ ಜೋಡಿಸಿದೆ.
- ಹ್ಯೂಮನ್ ಸ್ಪೇಸ್ ಫ್ಲೈಟ್ ಸೆಂಟರ್ (ಎಚ್‌ಎಸ್‌ಎಫ್‌ಸಿ) ನಿರ್ದೇಶಕ ಡಾ.ಎಸ್.ಉನ್ನಿಕೃಷ್ಣನ್ ನಾಯರ್ ನೇತೃತ್ವದ ಇಸ್ರೋ ವಿಜ್ಞಾನಿಗಳ ನಿಯೋಗ ಡಿಆರ್‌ಡಿಒದ ವಿವಿಧ ಪ್ರಯೋಗಾಲಯಗಳ ಜತೆ ಸಹಿ ಹಾಕಿದೆ.
- ಡಿಆರ್‌ಡಿಒ ಚೇರನ್ ಡಾ.ಸತೀಶ್ ರೆಡ್ಡಿ ಮಾತನಾಡಿ, ಡಿಆರ್‌ಡಿಒ ಪ್ರಯೋಗಾಲಯಗಳಲ್ಲಿ ಅಸ್ತಿತ್ವದಲ್ಲಿರುವ ತಾಂತ್ರಿಕ ಸಾಮರ್ಥ್ಯಗಳನ್ನು ಇಸ್ರೋದ ಮಾನವ ಬಾಹ್ಯಾಕಾಶ ಯಾನದ ಅಗತ್ಯಗಳನ್ನು ಪೂರೈಸಲು ನೀಡಲಾಗುತ್ತದೆ ಎಂದು ಹೇಳಿದರು.
- ಬಾಹ್ಯಾಕಾಶ ಆಹಾರ, ಬಾಹ್ಯಾಕಾಶ ಸಿಬ್ಬಂದಿ ಆರೋಗ್ಯ ಮೇಲ್ವಿಚಾರಣೆ ಮತ್ತು ಆರೋಗ್ಯ ಕಿಟ್, ವಿಕಿರಣ ಮಾಪನ ಮತ್ತು ರಕ್ಷಣೆ, ಸಿಬ್ಬಂದಿ ರಕ್ಷಕ ಪ್ಯಾರಟ್ ಇನ್ನಿತರ ತಂತ್ರಜ್ಞಾನ ಇಸ್ರೋಗೆ ಡಿಆರ್‌ಡಿಒ ಒದಗಿಸಲಿದೆ.
- ಇಸ್ರೋ 2022ರ 75ನೇ ಸ್ವಾತಂತ್ರ್ಯೋತ್ಸವ ವೇಳೆಗೆ ಸುಧಾರಿತ ಮಾನವ ಬಾಹ್ಯಾಕಾಶ ಸಾಮರ್ಥ್ಯ ಪ್ರದರ್ಶಿಸುವ ಗುರಿ ಹೊಂದಿದೆ.

40. ಆಸ್ಪತ್ರೆಗಳಿಗೂ ಬಂತು ರೇಟಿಂಗ್:

- ಮೊದಲ ಬಾರಿಗೆ ಈ ರೇಟಿಂಗ್ ವ್ಯವಸ್ಥೆ ಜಾರಿಗೊಳ್ಳುತ್ತಿದ್ದು, ಸಣ್ಣ ನಗರಗಳು ಮತ್ತು ಗ್ರಾಮೀಣ ಭಾಗಗಳಲ್ಲಿನ ಆಸ್ಪತ್ರೆಗಳ ಮೂಲ ಸೌಕರ್ಯ ಸುಧಾರಣೆಗೆ ಈ ಕ್ರಮ ಪೂರಕವಾಗಲಿದೆ.
- 'ರಾಷ್ಟ್ರೀಯ ಆಸ್ಪತ್ರೆಗಳ ಮಾನ್ಯತಾ ಮಂಡಳಿಯು' (ಎನ್‌ಎಬಿಎಚ್) ಆಸ್ಪತ್ರೆಗಳ ಮಾನ್ಯತೆ ನಿರ್ಧರಿಸುವ ವ್ಯವಸ್ಥೆಯನ್ನು ಪ್ರಸ್ತುತ ಹೊಂದಿದೆ.

ಪ್ರಮುಖಾಂಶ:

- ಉತ್ತಮ ವ್ಯವಸ್ಥೆ ಹೊಂದಿರುವ ಆಸ್ಪತ್ರೆಗೆ ಚಿನ್ನದ ರೇಟಿಂಗ್
- ಕನಿಷ್ಠ ಚಿಕಿತ್ಸಾ ವ್ಯವಸ್ಥೆ ಹೊಂದಿರುವ ಆಸ್ಪತ್ರೆಗೆ ಕನಿಷ್ಠ ರೇಟಿಂಗ್ ಆದ ಕಂಚನ್ನು ನೀಡಲಾಗುತ್ತದೆ.
- ಸಾಕ್ಷಾಧಾರ ಮತ್ತು ಸ್ವಯಂ ಮೌಲ್ಯಮಾಪನದ ಮೂಲಕ ರೇಟಿಂಗ್ ಅನ್ನು ನೀಡಲಾಗುತ್ತದೆ.
- ರೇಟಿಂಗ್ ಪ್ರಕ್ರಿಯೆಗೆ 25–30 ದಿನಗಳು ಬೇಕಾಗುತ್ತವೆ.

41. ಭೂವಿಜ್ಞಾನ ಕ್ಷೇತ್ರದ 22 ಸಾಧಕರಿಗೆ ರಾಷ್ಟ್ರೀಯ ಪ್ರಶಸ್ತಿ ಪ್ರದಾನ:

- ಭೂ ವಿಜ್ಞಾನ, ಗಣಿ ಮತ್ತು ಅನ್ವಯಿಕ ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ ಮಾಡಿದ ದೇಶದ 22 ವಿಜ್ಞಾನಿಗಳಿಗೆ ಕಲ್ಲಿದ್ದಲು ಮತ್ತು ಗಣಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಷಿ ದಿಲ್ಲಿಯಲ್ಲಿ 2018ನೇ ಸಾಲಿನ 'ದಿ ನ್ಯಾಷನಲ್ ಜಿಯೋಸೈನ್ಸ್ ಅವಾರ್ಡ್' ಪ್ರಶಸ್ತಿ ಪ್ರದಾನ ಮಾಡಿದರು.
- ಅಕ್ವಾಟಿಕ್ ಬಯೋಜಿಯೋ ಕೆಮಿಕಲ್ ಕ್ಷೇತ್ರದಲ್ಲಿ ಅಪಾರ ಸಂಶೋಧನೆ ಮಾಡಿದ ಸಾಧನೆಗಾಗಿ 'ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರೀಯಲ್ ರಿಸರ್ಚ್' (ಸಿಐಎಸ್‌ಆರ್) ಸಂಸ್ಥೆಯ ಪ್ರೊ.ಸಯ್ಯದ್ ವಾಜಿ ಅಹ್ಮದ್ ನಕ್ವಿ ಅವರಿಗೆ ಲಭಿಸಿತು.

- 'ಅವಾರ್ಡ್ ಆಫ್ ಎಕ್ಸಿಲೆನ್ಸ್' ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಪೆಟ್ರೋಲಿಯಂ ಹಾಗೂ ಭೂ ರಾಸಾಯನ ಕ್ಷೇತ್ರದಲ್ಲಿ ಅತ್ಯುತ್ತಮ ಸಂಶೋಧನೆಗಾಗಿ ಗೋವಾ ವಿಶ್ವವಿದ್ಯಾಲಯದ ಡಾ. ಸೋಹಿನಿ ಗಂಗೂಲಿ ಅವರಿಗೆ 2018ನೇ ಸಾಲಿನ 'ಯಂಗ್ ಸೈಂಟಿಸ್ಟ್ ಅವಾರ್ಡ್' ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು.

42. ಐಐಟಿಯಿಂದ ಪ್ಯೂರ್ ಮೊಟ್ಟೆ ಅಭಿವೃದ್ಧಿ:

- ದೆಹಲಿಯ ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ–ದೆಹಲಿ) ಸಂಶೋಧಕರು ಹೆಸರು ಕಾಳಿನ ತಿರುಳನ್ನು ಬಳಸಿ ಸೋಯಾರಹಿತ ಹಾಗೂ ಗ್ಲುಟೆನ್ ಮುಕ್ತ ಪರ್ಯಾಯ ಮೊಟ್ಟೆಯನ್ನು ಅಭಿವೃದ್ಧಿಪಡಿಸಿದ್ದಾರೆ.

43. ಬೃಹತ್ ಗಾತ್ರದ ನ್ಯೂಟ್ರಾನ್ ನಕ್ಷತ್ರ ಪತ್ತೆ:



- ಉತ್ತರ ಅಮೆರಿಕದ ನ್ಯಾನೊಗ್ರಾವ್ ಫಿಸಿಕ್ಸ್ ಫ್ರಾಂಟಿಯರ್ಸ್ ಸೆಂಟರ್‌ನ ಸಂಶೋಧಕರು ನ್ಯಾಷನಲ್ ಸೈನ್ಸ್ ಫೌಂಡೇಶನ್‌ನನ ಗ್ರೀನ್ ಬ್ಯಾಂಕ್ ಟೆಲಿಸ್ಕೋಪ್ ಬಳಸಿ ಈ ನಕ್ಷತ್ರವನ್ನು ಪತ್ತೆ ಮಾಡಿದ್ದಾರೆ.
- ಮಿಲಿಸೆಂಕೆಂಡ್ ವೇಗದಲ್ಲಿ ತಿರುಗುವ ನಕ್ಷತ್ರವನ್ನು ಎ0740+6620 ಎಂದು ಕರೆಯಲಾಗಿದ್ದು, ಇದುವರೆಗೆ ಅಳೆಯಲಾದ ಅತ್ಯಂತ ದೊಡ್ಡ ನ್ಯೂಟ್ರಾನ್ ನಕ್ಷತ್ರವಾಗಿದೆ.
- ಇದು ಸೆಕೆಂಡಿಗೆ 289 ಬಾರಿ ತಿರುಗುತ್ತದೆ ಸೂರ್ಯನ ದ್ರವ್ಯರಾಶಿಯ ಸುಮಾರು 2.01 ಪಟ್ಟು ತೂಕವಿರುವ ಸ್ಪಿನ್ನಿಂಗ್ ನ್ಯೂಟ್ರಾನ್ ನಕ್ಷತ್ರವಾಗಿದೆ.
- ಖಗೋಳ ಭೌತಶಾಸ್ತ್ರದಲ್ಲಿ ಪ್ರವೇಶಿಸಲಾಗದ ಕ್ಷೇತ್ರದ ಬಗ್ಗೆ ಸಾಕಷ್ಟು ಕಲಿಕೆಗೆ ಈ ನಕ್ಷತ್ರ ಅನುವು ಮಾಡಿಕೊಡಲಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.
- ಅದ್ಭುತ ವೇಗ ಮತ್ತು ಕ್ರಮ ಬದ್ಧತೆಯೊಂದಿಗೆ ತಿರುಗುವುದರಿಂದ, ಖಗೋಳಶಾಸ್ತ್ರಜ್ಞರು ಅವುಗಳನ್ನು ಅಟೋಮಿಕ್ ಕಾಲ ಸೂಚಕವಾಗಿ ಬಳಸಬಹುದು.
- ಬಾಹ್ಯಾಕಾಶ ಸಮಯದ ಸ್ವರೂಪದ ಅಧ್ಯಯನ, ನಾಕ್ಷತ್ರಿಕ ವಸ್ತುಗಳ ದ್ರವ್ಯರಾಶಿ ಅಳೆಯಲು ಸಹಾಯವಾಗಲಿದೆ.
- ನ್ಯೂಟ್ರಾನ್ ನಕ್ಷತ್ರದ ಮೇಲಿನ ಮಿತಿ ಮತ್ತು ಕಪ್ಪು ಕುಳಿಯ ಕೆಳಗಿನ ಮಿತಿಯ ನಡುವೆ ಏನಿದೆ? ಏನು ನಡೆಯುತ್ತಿದೆ ಎಂಬುದು ಇನ್ನೂ ನಿಗೂಢವಾಗಿದೆ.
- ಆದರೆ ಈ ನ್ಯೂಟ್ರಾನ್ ನಕ್ಷತ್ರಗಳು ಈ ವಿಷಯಗಳ ಅಧ್ಯಯನಕ್ಕೆ ದಾರಿ ಮಾಡಿಕೊಡಲಿದೆ. ಸೂಪರ್ನೋವಾ ಮತ್ತು ನ್ಯೂಟ್ರಾನ್ ಸ್ಟಾರ್‌ಗಳ ರಚನೆ ಬಗ್ಗೆ ಇತ್ತೀಚಿನ ಆವಿಷ್ಕಾರ ತಿಳಿಸಿದೆ.
- ದೊಡ್ಡ ನಕ್ಷತ್ರಗಳು ಸತ್ತಾಗ ಅವು ಸೂಪರ್‌ನೋವಾಗಳಾಗಿ ಸ್ಫೋಟಗೊಳ್ಳುತ್ತವೆ.
- ಇಂತಹ ಸ್ಫೋಟದಿಂದ ನಕ್ಷತ್ರಗಳು ಕುಸಿದು ನ್ಯೂಟ್ರಾನ್ ನಕ್ಷತ್ರಗಳಾಗಿ ಅಥವಾ ದೊಡ್ಡದಾಗಿದ್ದರೆ ಕಪ್ಪು ಕುಳಿಗಳ ಸೃಷ್ಟಿಗೆ ಕಾರಣವಾಗುತ್ತದೆ ಎಂದು ತಿಳಿಸಿದೆ.

44. ಹಕ್ಕಿಗಳ ಅಳಿವಿನಿಂದಾಗಿ ಪರಿಸರ ಅಸಮತೋಲನ:

- ಉತ್ತರ ಅಮೆರಿಕದಲ್ಲಿ ನಡೆದ ಅಧ್ಯಯನ ಹಕ್ಕಿಗಳ ಸಂಖ್ಯೆ ತೀವ್ರವಾಗಿ ಇಳಿಕೆಯಾಗಿರುವುದರ ಬಗ್ಗೆ ತಿಳಿಸುತ್ತದೆ.
- ಉತ್ತರ ಅಮೆರಿಕದಲ್ಲಿ 1970ಕ್ಕೆ ಹೋಲಿಸಿದರೆ 300 ಕೋಟಿ ಹಕ್ಕಿಗಳು ಕಡಿಮೆಯಾಗಿವೆ.
- ಅರ್ಧ ಶತಮಾನದಲ್ಲಿ ಸುಮಾರು 3 ಪಕ್ಷಿಗಳಲ್ಲಿ 1 ಅಥವಾ ಶೇ.29 ಪಕ್ಷಿಗಳು ಕಣ್ಮರೆಯಾಗಿರುವ ಭಯಾನಕ ಸತ್ಯವನ್ನು ಹೊರಹಾಕಿದೆ.

- ಇದು ವ್ಯಾಪಕ ನಷ್ಟ, ಅಪರೂಪದ ಮತ್ತು ಸಾಮಾನ್ಯ ಪಕ್ಷಿಗಳ ನಷ್ಟ ಪರಿಸರ ವ್ಯವಸ್ಥೆ ಮೇಲೆ ನೇರ ಪರಿಣಾಮ ಬೀರುತ್ತದೆ.
- ನಮ್ಮ ಅಧ್ಯಯನ ಎಚ್ಚೆತ್ತುಕೊಳ್ಳಲು ಕರೆ ನೀಡುತ್ತದೆ ಎಂದು ವಾಷಿಂಗ್ಟನ್ ಜಾರ್ಜ್ಟನ್ ಯೂನಿವರ್ಸಿಟಿಯ ಸಂರಕ್ಷಣಾ ಜೀವಶಾಸ್ತ್ರಜ್ಞ ಪೀಟರ್ ಮಾರ್ಟಾ ಹೇಳಿದ್ದಾರೆ.
- ಪಕ್ಷಿಯೂ ಪರಿಸರ ವ್ಯವಸ್ಥೆಗೆ ಕೊಡುಗೆ ನೀಡುತ್ತದೆ. ಸಸ್ಯಗಳಲ್ಲಿ ಪರಾಗಸ್ಪರ್ಶ ಮಾಡುವುದು, ಬೀಜ ಹರಡುವುದು, ಕೀಟಗಳನ್ನು ನಿಯಂತ್ರಿಸುವಲ್ಲಿ ಪಕ್ಷಿಗಳು ಪ್ರಮುಖ ಪಾತ್ರ ವಹಿಸುತ್ತವೆ.
- ಆದರೆ ಈ ವ್ಯಾಪಕ ನಷ್ಟ ಪರಿಸರದ ಅಸಮತೋಲನಕ್ಕೆ ಕಾರಣವಾಗುತ್ತದೆ. ಈ ಅಧ್ಯಯನ ಪ್ರತ್ಯೇಕ ಪ್ರಬೇಧದ ಪಕ್ಷಿಗಳ ನಷ್ಟದ ಮೇಲೆ ಕೇಂದ್ರೀಕರಿಸಿದೆ ಎಂದು ಕ್ಯಾಲಿಫೋರ್ನಿಯಾ ಸಾಂಟಾ ಬಾರ್ಬರ ವಿಶ್ವವಿದ್ಯಾಲಯದ ಪರಿಸರ ವಿಜ್ಞಾನಿ ಹಿಲರಿ ಯಂಗ್ ತಿಳಿಸಿದ್ದಾರೆ.
- ಪಕ್ಷಿಗಳಲ್ಲದೆ ಪಕ್ಷಿಗಳ ಪ್ರಭೇದಗಳೇ ನಶಿಸಿಹೋಗಿರುವುದು ಪರಿಸರ ವ್ಯವಸ್ಥೆಗೆ ಮಾರಕವಾಗಲಿದೆ.
- ಕೃಷಿಯ ಮೇಲೆ ಪ್ರಭಾವ ಬೀರುವ ಅನೇಕ ಕೀಟಗಳನ್ನು ಸಹ ಪಕ್ಷಿಗಳು ನಿಯಂತ್ರಿಸುತ್ತವೆ. ಆದರೆ ಪಕ್ಷಿಗಳ ಸಂಖ್ಯೆ ತೀವ್ರವಾಗಿ ಕಡಿಮೆಯಾಗಿರುವುದರಿಂದ ಪರಿಸರ ವ್ಯವಸ್ಥೆಯ ನಷ್ಟ ಸರಿಪಡಿಸಲು ತುರ್ತು ಕ್ರಮದ ಅಗತ್ಯದ ಬಗ್ಗೆ ಸಂಶೋಧಕರು ತಿಳಿಸಿದ್ದಾರೆ.

45. ಅಸ್ತ್ರ ಪರೀಕ್ಷೆ ಯಶಸ್ವಿ:

- ಇಂಡಿಯನ್ ಏರ್ ಫೋರ್ಸ್ (ಐಎಎಫ್)ಒಡಿಶಾದ ಚಂಡಿಪುರದಲ್ಲಿ ನಡೆಸಿದ ದೇಶೀಯವಾಗಿ ತಯಾರಿಸಲಾದ ಬಿಯಾಂಡ್ ವಿಶುವಲ್ ರೇಂಜ್ ಏರ್ಟ ಏರ್ ವಿಷುವಲ್ (BVRAAM) ಪರೀಕ್ಷೆ ಯಶಸ್ವಿಯಾಗಿದೆ.
- ಡಿಫೆನ್ಸ್ ರಿಸರ್ಚ್ ಅ್ಯಂಡ್ ಡೆವಲಪ್ಮೆಂಟ್ (ಡಿಆರ್ಡಿಒ) ಅಭಿವೃದ್ಧಿಪಡಿಸಿದ ಅಸ್ತ್ರ ಕ್ಷಿಪಣಿಯನ್ನು ಐದು ರೀತಿಯಲ್ಲಿ ಪರೀಕ್ಷೆ ನಡೆಸಿದ್ದು, ವಿವಿಧ ಸಂಭವನಾರ್ಥ ಅಪಾಯಗಳನ್ನು ಎದುರಿಸುವ ರೀತಿಯಲ್ಲಿ ಪರೀಕ್ಷೆ ನಡೆಸಲಾಯಿತು.
- ಅಸ್ತ್ರ ಕ್ಷಿಪಣಿಯನ್ನು ಸುಖೋಯ್–30 ಎಂಕೆಐ ಫೈಟರ್ ಜೆಟ್ಗಳಿಂದ ಹಾರಿಸಲಾಯಿತು. ಕಿ.ಮೀ. ಗಿಂತ ಹೆಚ್ಚಿನ ಕಾರ್ಯವ್ಯಾಪ್ತಿಯನ್ನು ಹೊಂದಿರುವ ಅಸ್ತ್ರ ಕ್ಷಿಪಣಿಯನ್ನು ಡಿಫೆನ್ಸ್ ರಿಸರ್ಚ್ ಅ್ಯಂಡ್ ಡೆವಲಪ್ಮೆಂಟ್ ಲ್ಯಾಬೋರೇಟರಿ (ಡಿಆರ್ಡಿಎಲ್) ಯಲ್ಲಿ – ಅಭಿವೃದ್ಧಿಪಡಿಸಲಾಗಿದೆ.

46. ನವೀಕೃತ ಇಂಧನ ವಲಯದಲ್ಲಿ ಸಾಧನೆ:

- ಜಾಗತಿಕ ಹವಮಾನ ಬದಲಾವಣೆ ನಿಯಂತ್ರಣದ ವಿಷಯದಲ್ಲಿ ಭಾರತ ಅತಿ ಮುಖ್ಯ ಪಾತ್ರ ನಿರ್ವಹಿಸುತ್ತಿದ್ದು, ಈಗಾಗಲೇ ಅದು ನವೀಕೃತ ಇಂಧನ ವಲಯದಲ್ಲಿ 'ಅದ್ಭುತ ಸಾಧನೆ' ಮಾಡಿದೆ ಎಂದು ವಿಶ್ವಸಂಸ್ಥೆ ಮುಖ್ಯಸ್ಥ ಆಂಟೊನಿಯೊ ಗುಟೆರಸ್ ಪ್ರಶಂಸಿಸಿದ್ದಾರೆ.

ಯಾಕೆ ಮೆಚ್ಚುಗೆ?

- ಅಂತಾರಾಷ್ಟ್ರೀಯ ಸೌರ ಒಕ್ಕೂಟದ ಮೋದಿ ಸಾರಥ್ಯ ಹಾಗೂ ವಿಶ್ವಸಂಸ್ಥೆಗೆ ಭಾರತ ನೀಡಿದ 193 ಸೋಲಾರ್ ಪ್ಯಾನಲ್ಗಳ ಕೊಡುಗೆಯನ್ನು ಅವರು ಕೊಂಡಾಡಿದ್ದಾರೆ.
- "ಭಾರತದ ಸೌರ ವಲಯದಲ್ಲಿ ಬಹುದೊಡ್ಡ ಹೂಡಿಕೆಯಾಗಿದೆ. ಕಲ್ಲಿದ್ದಲಿನ ಅಪಾರ ನಿಕ್ಷೇಪಗಳಿದ್ದಾಗ್ಯೂ ಭಾರತ ನವೀಕೃತ ಇಂಧನ ಮೂಲಗಳತ್ತ ಗಮನ ಹರಿಸಿದೆ. 'ಸ್ವಚ್ಛ ಭಾರತ' ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಮೋದಿ ಸರಕಾರ ಕೈಗೊಂಡಿದೆ.
- ಜಾಗತಿಕ ಹವಾಮಾನ ಬದಲಾವಣೆ ನಿಯಂತ್ರಣದ ವಿಷಯದಲ್ಲಿ ಇವು ಮಹತ್ವದ ಪರಿಣಾಮ ಉಂಟು ಮಾಡುತ್ತವೆ, ಎಂದು ಮೆಚ್ಚುಗೆ ಸೂಚಿಸಿದ್ದಾರೆ.

ಭಾರತದ ಸಾಧನೆಯೇನು?

- ಭಾರತವು ಪ್ರಸ್ತುತ ಕೇವಲ 33 ಗಿಗಾವ್ಯಾಟ್ ಸಾಮರ್ಥ್ಯದ ಶುದ್ಧ ಇಂಧನವನ್ನು ಹೊಂದಿದೆ. ಗಾಳಿಯಿಂದ 22 ಗಿಗಾವ್ಯಾಟ್, ಸೋಲಾರ್ ವಿದ್ಯುತ್ನಿಂದ 3 ಸಾವಿರ ಮೆಗಾವ್ಯಾಟ್, ಉಳಿದಂತೆ ಜಲ ಮತ್ತು ಜೀವರಾಶಿ ಯೋಜನೆಗಳಿಂದ ವಿದ್ಯುತ್ ಅನ್ನು ಪಡೆಯಲಾಗುತ್ತಿದೆ.

- ಬಹುತೇಕ ವಿದ್ಯುತ್ ಚಕ್ತಿಯನ್ನು ಕಲ್ಲಿದ್ದಲು ಸ್ಥಾವರ ಘಟಕಗಳಿಂದ ಉತ್ಪಾದಿಸಲಾಗುತ್ತಿದೆ.

ಏರುತ್ತಿದೆ ತಾಪಮಾನ

- ಭೂಮಿಯ ತಾಪಮಾನ ಇದೇ ಮಟ್ಟದಲ್ಲಿ ಏರಿಕೆಯಾದಲ್ಲಿ ಈ ಶತಮಾನದ ಅಂತ್ಯದ ವೇಳೆಗೆ ಭೂಮಿಯ ಉಷ್ಣಾಂಶ 4 ಡಿಗ್ರಿಯಷ್ಟು ಹೆಚ್ಚಾಗುತ್ತದೆಂದು ವಿಜ್ಞಾನಿಗಳು ಹೇಳುತ್ತಾರೆ.
- ಆದರೆ, ಉಷ್ಣಾಂಶ ಇನ್ನೆರಡು ಡಿಗ್ರಿಯಷ್ಟು ಹೆಚ್ಚಾದರೂ ಮನುಷ್ಯರು ಬದುಕುವುದೂ ಕೂಡ ದುಸ್ತರ.
- ಭೂಮಿಯ ತಾಪಮಾನದ ಏರಿಕೆಗೆ ಕಾರಣವಾಗಿರುವ ಕೈಗಾರಿಕೆಗಳು ಬಿಡುಗಡೆ ಮಾಡುತ್ತಿರುವ ವಿಷಾನಿಲಗಳನ್ನು ಕಡಿತ ಮಾಡಬೇಕೆಂದು ವಿಶ್ವಾದ್ಯಂತ ಸಂಘ ಸಂಸ್ಥೆಗಳು ಮತ್ತು ವಿಜ್ಞಾನಿಗಳಿಂದ ಒಕ್ಕೊರಲ ದನಿ ಮೂಡಿಬರುತ್ತಿದೆ.

47. ಸಿಂಗಲ್ ಯೂಸ್ ಪ್ಲಾಸ್ಟಿಕ್ ನಿಷೇಧ:

- ಸಿಂಗಲ್ ಯೂಸ್ ಪ್ಲಾಸ್ಟಿಕ್ ಉತ್ಪನ್ನಗಳ ಬಳಕೆಯನ್ನು 2022ರೊಳಗೆ ಸಂಪೂರ್ಣ ಸ್ಥಗಿತಗೊಳಿಸಲು ಕೇಂದ್ರ ಸರಕಾರ ತೀರ್ಮಾನಿಸಿದೆ.

ಬ್ಯಾನ್ ಹೇಗೆ?

- ಒಮ್ಮೆಗೇ ನಿಷೇಧಿಸುವ ಸಾಧ್ಯತೆ ಇಲ್ಲ. ನಾನಾ ಹಂತಗಳಿರಬಹುದು. ರಾಯ್ಟರ್ಸ್ ಪ್ರಕಾರ ಅಕ್ಟೋಬರ್ 2ರಿಂದ ಪ್ಲಾಸ್ಟಿಕ್ ಬ್ಯಾಗ್, ಕಪ್, ಸ್ಟ್ರಾ ಮತ್ತು ಕೆಲವು ನಿರ್ದಿಷ್ಟ ಸ್ಯಾಶೆಗಳ ಬಳಕೆ ರದ್ದಾಗುವ ನಿರೀಕ್ಷೆ ಇದೆ.

ಪರಿಣಾಮವೇನು?

- ಎಐಪಿಎಂಎ ಪ್ರಕಾರ 10,000 ಉತ್ಪಾದನಾ ಘಟಕಗಳ ಮೇಲೆ ಪರಿಣಾಮ ಬೀರಲಿದೆ. ಲಕ್ಷಾಂತರ ಉದ್ಯೋಗ ನಷ್ಟ.

ಪರ್ಯಾಯವೇನು?

- ಸಿಂಗಲ್–ಪಾಲಿಮರ್ ಪ್ಯಾಕೇಜಿಂಗ್ ಗೆ ಕಂಪನಿಗಳು ಮುಂದಾಗುತ್ತಿವೆ. ಇವುಗಳನ್ನು ಪುನರ್ಬಳಕೆ ಮಾಡಬಹುದು. ಯುನಿಲಿವರ್, ನೆಸ್ಲೆ ಇತ್ಯಾದಿ ಕಂಪನಿಗಳು 2025ರ ವೇಳೆಗೆ ಶೇ.100ರಷ್ಟು 15 ಪುನರ್ಬಳಕೆ ಯೋಗ್ಯ ಪ್ಯಾಕೇಜಿಂಗ್ ಮಾಡುವ ಗುರಿ ಹೊಂದಿವೆ.

48. ವಾಯು ಮಾಲಿನ್ಯದಿಂದ ಕಡಿಮೆ ತೂಕದ ಶಿಶು ಜನನ:

- ಗರ್ಭದಲ್ಲಿದ್ದ ಮಗುವಿಗೂ ವಾಯು ಮಾಲಿನ್ಯದ ಬಿಸಿ ತಟ್ಟಿದೆ ಎಂದರೆ ನಂಬಲೇಬೇಕು. ಶ್ವಾಸಕೋಶವನ್ನು ಮೀರಿ ಗರ್ಭಕೋಶದ ಪೊರೆಯನ್ನು ಇಂಗಾಲದ ಡೈ ಆಕ್ಸೈಡ್ ಆವರಿಸಿರುವುದು ಪತ್ತೆಯಾಗಿದೆ. ಬೆಲ್ಜಿಯಂನಲ್ಲಿ ಈ ಪ್ರಕರಣ ನಡೆದಿದೆ.
- ಮಹಿಳೆ ಮಗುವಿಗೆ ಜನ್ಮ ನೀಡಿದ ನಂತರ ಸಂಗ್ರಹಿಸಿದ ಜರಾಯುವಿನ ಮಾದರಿಯಲ್ಲಿ ಮಸಿ (ಕಪ್ಪು ಇಂಗಾಲ) ಪತ್ತೆಯಾಗಿರುವುದನ್ನು ನೇಚರ್ ಕಮ್ಯುನಿಕೇಶನ್‌ಗೆ ನೀಡಿದ ವರದಿಯಲ್ಲಿ ಸಂಶೋಧಕರು ತಿಳಿಸಿದ್ದಾರೆ.
- ವಾಯುಮಾಲಿನ್ಯ ಮಗುವಿನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದರಲ್ಲಿ ಯಾವುದೇ ಅನುಮಾನವಿಲ್ಲ. ವಾಯುಮಾಲಿನ್ಯ ಎದುರಿಸುವ ತಾಯಂದಿರಲ್ಲಿ ಅವಧಿ ಮುನ್ನ ಶಿಶು ಜನನ, ಕಡಿಮೆ ತೂಕದ ಶಿಶುಗಳ ಜನನ, ಇನ್ನಿತರ ಆರೋಗ್ಯ ಸಮಸ್ಯೆಗಳುಳ್ಳ ಶಿಶುಗಳು ಜನಿಸುವ ಸಾಧ್ಯತೆಗಳಿರುತ್ತವೆ ಎಂದು ಅಮೆರಿಕದ ಮಿಸ್ಕಾನ್ಸಿನ್–ಮಿಲ್ವಾಕಿ ಯೂನಿವರ್ಸಿಟಿಯ ಪರಿಸರ ಸಾಂಕ್ರಾಮಿಕ ರೋಗಶಾಸ್ತ್ರಜ್ಞ ಆಮಿ ಕಾಲ್ಕಬ್ರೆನರ್ ಹೇಳಿದ್ದಾರೆ.

49. ವಿಕ್ರಾಂತ ಮಹತ್ವದ ಐಪಿಎಂಎಸ್ ಕಳುವು:

- ನೌಕೆಯ ಶಸ್ತ್ರಾಸ್ತ್ರ ವ್ಯವಸ್ಥೆಯಲ್ಲಿನ ಪ್ರಮುಖ ಉಪಕರಣ ಇದಾಗಿದ್ದು, ಇದನ್ನೇ ಕಳ್ಳತನ ಮಾಡಿರುವುದು ಆತಂಕಕ್ಕೆ ಕಾರಣವಾಗಿದೆ. ಐಎನ್‌ಎಸ್ ವಿಕ್ರಾಂತ್ ನೌಕೆ ತಯಾರಾಗುತ್ತಿರುವ ಕೊಚ್ಚಿನ್ ಶಿಪ್ ಯಾರ್ಡ್‌ಗೆ ಅಭೂತಪೂರ್ವ ಭದ್ರತೆ ಕಲ್ಪಿಸಲಾಗಿದೆ.
- ಆದಾಗ್ಯೂ ಇಲ್ಲಿ ಕಳ್ಳತನವಾಗಿರುವುದು ಶಿಪ್‌ಯಾರ್ಡ್ ಭದ್ರತಾ ವ್ಯವಸ್ಥೆಯನ್ನೇ ಪ್ರಶ್ನೆ ಮಾಡುವಂತಾಗಿದೆ.

ಐಪಿಎಂಎಸ್ ಮಹತ್ವದ್ದು ಯಾಕೆ?

- 'ಇಂಟಿಗ್ರೇಟೆಡ್ ಪ್ಲಾಟ್‌ಫಾರ್ಮ್ ಮ್ಯಾನೇಜ್‌ಮೆಂಟ್ ಸಿಸ್ಟಂ' (ಐಪಿಎಂಎಸ್) ಎಂಬುದು ನೌಕೆಯ ನಿರ್ವಹಣಾ ವ್ಯವಸ್ಥೆ ಸಂಯೋಜಿತ ವೇದಿಕೆ (integrated platform management system), ನೌಕೆಯ ಪ್ರಮುಖ

ಮೇಲ್ವಿಚಾರಣಾ ಘಟಕವಾಗಿದ್ದು, ನೌಕೆಯಲ್ಲಿನ ಯಾಂತ್ರಿಕ, ವಿದ್ಯುತ್ ಮತ್ತು ಹಾನಿ ನಿಯಂತ್ರಣ ಯಂತ್ರೋಪಕರಣಗಳು ಮತ್ತು ವ್ಯವಸ್ಥೆಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ ಕೆಲಸವನ್ನು ಮಾಡುತ್ತದೆ.

ಐಎಸ್ಎಸ್ ವಿಕ್ರಾಂತ್ ಬಗ್ಗೆ:

- ಸ್ವದೇಶಿ ನಿರ್ಮಿತ ಭಾರತದ ಮೊದಲ ಯುದ್ಧನೌಕೆ. ಈ ನೌಕೆ ಮೂಲಕ ಮಿಗ್ 29ಕೆ, ಹಗುರ ಯುದ್ಧ ವಿಮಾನ ಮತ್ತು ಕಮೊವ್ –31 ವಿಮಾನಗಳು ಹಾರಾಟ ನಡೆಸಲಿವೆ.
- ಹಡಗಿನಲ್ಲಿ ಸುಮಾರು 30ಕ್ಕೂ ಅಧಿಕ ದೇಶಿ ನಿರ್ಮಿತ ಸಣ್ಣ ಯುದ್ಧ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ನಿಲ್ಲಿಸಬಹುದು.

50. ವಾಸಯೋಗ್ಯವಾಗಿದ್ದ ಶುಕ್ರ ಗ್ರಹ: ನಾಸಾ

- ಶುಕ್ರಗ್ರಹದಲ್ಲಿ 2–3 ಶತಕೋಟಿ ವರ್ಷಗಳ ಕಾಲ ನೀರಿನ ಅಂಶ ಇತ್ತು. 70 ಕೋಟಿ ವರ್ಷಗಳ ಹಿಂದೆ ನಡೆದ ರೂಪಾಂತರದ ಪರಿಣಾಮ ಗ್ರಹದ ಶೇ 80ರಷ್ಟು ಮೇಲ್ಮೈ ಬದಲಾವಣೆಗೊಂಡಿದೆ ಎಂದು ಅಮೇರಿಕಾದ ಬಾಹ್ಯಾಕಾಶ ಸಂಸ್ಥೆ ನಾಸಾದ ಅಧ್ಯಯನವೊಂದು ತಿಳಿಸಿದೆ.

51. ಕಾರ್ಬನ್ ಡೈ ಆಕ್ಸೈಡ್ ಈಗ ಇಂಧನ:

- ಹವಾಮಾನದಲ್ಲಿ ಇಂಗಾಲದ ಡೈ ಆಕ್ಸೈಡ್ ಪ್ರಮಾಣ ಹೆಚ್ಚುತ್ತಿರುವಂತೆ ಇದನ್ನು ನಿಯಂತ್ರಿಸಲು ಹಲವು ಸಂಶೋಧನೆಗಳು ನಡೆಯುತ್ತಿವೆ.
- ಕ್ಯಾಲಿಫೋರ್ನಿಯಾದ ಸ್ಟಾಂಡ್‌ಫೋರ್ಡ್ ಯೂನಿವರ್ಸಿಟಿ ಸಂಶೋಧಕರು ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದಿಟ್ಟು ಕಾರ್ಬನ್ ಡೈ ಆಕ್ಸೈಡ್ ನ್ನು ಇಂಧನ, ಪ್ಲಾಸ್ಟಿಕ್ ಆಗಿ ಪರಿವರ್ತಿಸಲು ಮುಂದಾಗಿದ್ದಾರೆ.
- ವಾತಾವರಣದ CO_2 ನಿಂದ ಹಸಿರುಮನೆ ಅನಿಲವನ್ನು ಅಮೂಲ್ಯ ಉತ್ಪನ್ನಗಳಾಗಿ ಪರಿವರ್ತಿಸಲು ಸಂಶೋಧನೆ ನಡೆಸಿದ್ದಾರೆ.
- ಈ ಪ್ರಕ್ರಿಯೆಯನ್ನು ಇಲೆಕ್ಟ್ರೋಕೆಮಿಕಲ್ ಪರಿವರ್ತನೆ ಎಂದು ಕರೆಯಲಾಗುತ್ತದೆ. ಇದು ಗಾಳಿಯಲ್ಲಿ ಇಂಗಾಲದ ಡೈ–ಆಕ್ಸೈಡ್ ಮಟ್ಟವನ್ನು ಕಡಿಮೆ ಮಾಡುತ್ತದೆ.
- ಹೊಸ ಸಂಶೋಧನೆ ಸಂಗ್ರಹಿಸಲ್ಪಟ್ಟ ಇಂಗಾಲದ ಡೈ ಆಕ್ಸೈಡ್ ನ್ನು ಅಗತ್ಯ ವಸ್ತುಗಳಾಗಿ ಪರಿವರ್ತಿಸಿ ವಾತಾರಣದಲ್ಲಿ ಇಂಗಾಲದ ಪ್ರಮಾಣ ಕಡಿಮೆ ಮಾಡಲು ಮತ್ತು ಆರ್ಥಿಕ ಸುಧಾರಣೆ ಸಾಧಿಸಲು ಸಹಕಾರಿಯಾಗಿದೆ ಎಂದು ಸ್ಟಾಂಡ್‌ಫೋರ್ಡ್ ಯೂನಿವರ್ಸಿಟಿಯ ಸಂಶೋಧಕಿ ಸ್ಟೆಫಿನ್ ನಿತೋಫಿ ತಿಳಿಸಿದ್ದಾರೆ.

52. ಮಂಗಳಯಾನ (ಮಾಮ್)



- ಭಾರತದ ಮಂಗಳಯಾನ–1 ಮಿಷನ್ ಅಂಗಾರಕ ಗ್ರಹದ ಕಕ್ಷೆಗೆ ತಲುಪಿ ಸೆ.24ಕ್ಕೆ 5 ವರ್ಷವಾಗಿದೆ.

ಐದು ವರ್ಷ ಭರ್ತಿ:

- ಕೆಂಪು ಗ್ರಹದಲ್ಲಿ ಕೇವಲ 6 ತಿಂಗಳು ಕಾರ್ಯಾಚರಣೆ ಮಾಡಲು ಸಾಧ್ಯವಾಗುವಂತೆ ಮಾಮ್ ಮಿಷನ್ ಅನ್ನು ವಿನ್ಯಾಸ ಮಾಡಲಾಗಿತ್ತು.
- ಆದರೆ, ಈ ಕಕ್ಷೆಗಾಮಿ ಈಗ ಸುಸ್ಥಿತಿಯಲ್ಲಿದ್ದು, ತನ್ನ ಐದನೇ ವರ್ಷವನ್ನು ಪೂರ್ಣಗೊಳಿಸಿದೆ. ಭೂಮಿಯ ಈ ಐದು ವರ್ಷವು ಮಂಗಳನ ಎರಡೂವರೆ ವರ್ಷಕ್ಕೆ ಸಮವಾಗಿದೆ.

5 ಟಿಬಿ ಡೇಟಾ ರವಾನೆ:

- ಇಲ್ಲಿಯವರೆಗೆ ಮಂಗಳಗ್ರಹದಿಂದ ಭೂಮಿಗೆ 5 ಟಿಬಿ ಡೇಟಾವನ್ನು ರವಾನೆ ಮಾಡಿದೆ. ಮಂಗಳನಲ್ಲಿರುವ ಮಿಥೇನ್ ಬಗ್ಗೆ ಇನ್ನೊ ಅಧಿಕೃತವಾಗಿ ಇನ್ನೂ ಮಾಹಿತಿ ನೀಡಿಲ್ಲ.

ಏನಿದು ಮಾರ್ಸ್ ಮಿಷನ್?

- ಮಂಗಳನ ಅಂಗಳದಲ್ಲಿ ಏನಿದೆ ಎಂಬುದನ್ನು ಪತ್ತೆ ಹಚ್ಚುವ ಸಲುವಾಗಿ 2013ರ ನ.5ರಂದು ಆಂಧ್ರದ ಶ್ರೀಹರಿಕೋಟಾದಿಂದ ಉಡಾವಣೆ ಮಾಡಿದ ನೌಕೆಯೇ ಮಂಗಳ ಕಕ್ಷೆಗಾಮಿ ಅಥವಾ ಮಾಮ್.
- ಸುಮಾರು 300 ದಿನಗಳ ಸುದೀರ್ಘ ಪಯಣದ ಬಳಿಕ 2014 ಸೆ.24ರಂದು ಮಂಗಳನ ಕಕ್ಷೆಗೆ ಸೇರಿತು.

ಇನ್ನೂ ಮುಗಿದಿಲ್ಲ ಇಂಧನ:

- ಈಗ ಮಾಮ್ ಕಕ್ಷೆಗಾಮಿಯಲ್ಲಿ ಎಷ್ಟು ಇಂಧನ ಲಭ್ಯವಿದೆ ಎಂಬ ಮಾಹಿತಿಯನ್ನು ಇನ್ನೂ ನೀಡಿಲ್ಲ.
- ಉಡಾವಣೆಯಿಂದ ಹಿಡಿದು ಕಕ್ಷೆಯ ಎತ್ತರವನ್ನು ಏರಿಸುವ ಪ್ರಕ್ರಿಯೆ, ಭೂಗ್ರಹದ ಪ್ರಭಾವ ಮೀರಿದಾಗ ಕಕ್ಷೆಗಾಮಿಯನ್ನು ಮಂಗಳನ ಪಥಕ್ಕೆ ನಿರ್ದೇಶಿಸುವಾಗ, ಹಂತ ಹಂತವಾಗಿ ಮಂಗಳನ ಪಥದಲ್ಲಿದ್ದ ನೌಕೆಯ ಪರಿಭ್ರಮಣಾ ಪಥದ ಎತ್ತರವನ್ನು ಏರಿಸುವಾಗ, ಮಂಗಳನ ಪ್ರಭಾವಲಯಕ್ಕೆ ನೌಕೆ ಸಿಕ್ಕಾಗ, ಮಂಗಳನ ಕಕ್ಷೆಗೆ ನೌಕೆಯನ್ನು ಕೂರಿಸುವಾಗೆಲ್ಲ ದೊಡ್ಡ ಪ್ರಮಾಣದ ಇಂಧನ ಸಾಮಾನ್ಯವಾಗಿ ಬಳಕೆಯಾಗುತ್ತದೆ.
- ಈ ಹಂತಗಳಲ್ಲಿ ಒಂದು ಚೂರು ಹೆಚ್ಚುಕಡಿಮೆಯಾದರೂ ದೊಡ್ಡ ಪ್ರಮಾಣದ ಇಂಧನ ಉರಿದು ಪೋಲಾಗುತ್ತದೆ. ಆದರೆ, ಇಸ್ರೊದ ಮಾಮ್ ಈ ಎಲ್ಲ ಹಂತಗಳನ್ನೂ ಒಂದು ಚೂರೂ ಯಡವಟ್ಟಿಲ್ಲದೆ ಅಂದುಕೊಂಡದ್ದಕ್ಕಿಂತ ಹೆಚ್ಚು ಸೂಕ್ಷ್ಮ ಹಾಗೂ ನಾಜೂಕಾಗಿ ದಾಟಿದೆ.
- ಹೀಗಾಗಿ ಮಾಮ್‌ನಲ್ಲಿ ಹೆಚ್ಚು ಇಂಧನ ಖರ್ಚಾಗದೆ ಇಲ್ಲಿಯವರೆಗೆ ಅದನ್ನು ಜೀವಂತವರಿಸಿದೆ.

ಕಕ್ಷೆಗಾಮಿಯಲ್ಲಿರುವ ಉಪಕರಣಗಳು:

- ಮಂಗಳನ ಮೇಲ್ಮೈನಲ್ಲಿರುವ ಡ್ಯುಟೀರಿಯಂ ಮತ್ತು ಜಲಜನಕದ ಪ್ರಮಾಣವನ್ನು ಅಳೆಯುವ ಲೈಮನ್ ಆಲ್ಫಾ ಫೋಟೋಮೀಟರ್ (ಎಲ್‌ಎಪಿ), ಅಂಗಾರಕನಲ್ಲಿರಬಹುದಾದ ಮಿಥೇನ್ ಪ್ರಮಾಣ ಅಳೆಯುವ ಮಿಥೇನ್ ಸೆನ್ಸಾರ್ ಆಫ್ ಮಾರ್ಸ್, ಕೆಂಪುಗ್ರಹದ ದ್ರವ್ಯರಾಶಿ ವಿಶ್ಲೇಷಿಸುವ ಮಾರ್ಸ್ ಎಕ್ಸೋಸ್ಫರಿಕ್ ನ್ಯೂಟ್ರಲ್ ಕಂಪೋಸಿಷನ್ ಅನಲೈಸರ್ (ಎಂಇಎನ್‌ಸಿಎ) ಇದೆ.
- ಜೊತೆಗೆ ಮಾರ್ಸ್ ಮತ್ತು ಅದರ ಉಪಗ್ರಹಗಳ ಚಿತ್ರ ಕ್ಲಿಕ್ಕಿಸಲು ಎಂಸಿಸಿ ಕ್ಯಾಮೆರಾ ಮತ್ತು ಸೂರ್ಯನ ಹತ್ತಿರದ ನಾಲ್ಕನೇ ಗ್ರಹದ ಉಷ್ಣಕ್ಷೇಪಣ ಪ್ರಮಾಣ ಅಳೆಯುವ ಥರ್ಮಲ್ ಇನ್‌ಫ್ರಾರೆಡ್ ಇಮೇಜಿಂಗ್ ಸೈಕೊ ಮೀಟರ್ (ಟಿಐಎಸ್) ಸೇರಿದಂತೆ ಒಟ್ಟು ಐದು ಉಪಕರಣಗಳನ್ನು ಮಾಮ್ ಹೊಂದಿದೆ.

53. ಚಂದ್ರನ ಕುಳಿಯಲ್ಲಿ ಜೆಲ್:



- ಈ ವರ್ಷದ ಆರಂಭದಲ್ಲಿಯೇ ಚಂದ್ರನ ಕಾಣದ ಇನ್ನೊಂದು ದಿಕ್ಕಿನತ್ತ ತೆರಳಿ ಅಲ್ಲಿ ಸಾಫ್ಟ್‌ಲ್ಯಾಂಡ್ ಆಗಿದ್ದ ಚಾಂಗ್–2 ಗಗನನೌಕೆಯ ಯುಟು–2(ಜಡೇ ರ್ಯಾಬಿಟ್) ರೋವರ್ ಮುಂದೆ ಜೆಲ್ ನಂತಹ ಕೌತುಕದ ಅಂಶವೊಂದು ಪತ್ತೆಯಾಗಿದೆ ಎಂದು ಸ್ಪೇಸ್.ಕಾಂ ವರದಿ ಮಾಡಿದೆ.
- ಈ ವರ್ಷ ಜನವರಿಯಲ್ಲಿ ಚೀನಾವು ಚಂದ್ರನ ಇನ್ನೊಂದು ಬದಿಯಲ್ಲಿ ಯಶಸ್ವಿಯಾಗಿ ಗಗನ ನೌಕೆಯನ್ನು ಇಳಿಸಿದೆ.
- ಈ ಮೂಲಕ ಚಂದ್ರನ ಮೇಲೆ ಸಾಫ್ಟ್ ಲ್ಯಾಂಡ್ ಆಗಿರುವ ಮೊದಲ ಗಗನನೌಕೆ ಎಂಬ ಕೀರ್ತಿಗೆ ಪಾತ್ರವಾಗಿದೆ.

54. ಐಸಿಜಿಎಸ್ ವರಾಹಕ್ಕೆ ಚಾಲನೆ:

- ಭಾರತೀಯ ಕರಾವಳಿ ಪಡೆಯ ಗಸ್ತು ನೌಕೆ, ಅತ್ಯಾಧುನಿಕ ತಂತ್ರಜ್ಞಾನದ 'ಐಸಿಜಿಎಸ್ ವರಾಹ' ಕ್ಕೆ ಚೆನ್ನೈನಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡಿದರು.
- ಎಚ್‌ಎಎಲ್ ನಿರ್ಮಿತ ಅವಳಿ ಎಂಜಿನ್‌ಗಳ ಎಎಲ್‌ಎಚ್ ಹೆಲಿಕಾಪ್ಟರ್‌ಗಳನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿದೆ.
- ಮಾದಕ ವಸ್ತುಗಳ ಸರಬರಾಜು, ತೈಲ ಸೋರಿಕೆ, ಸಮುದ್ರ ಮಾರ್ಗದ ಭಯೋತ್ಪಾದನಾ ದಾಳಿ ಇತ್ಯಾದಿಗಳ ಮೇಲೆ ಹದ್ದಿನ ಕಣ್ಣಿಡುವಲ್ಲಿ ಇದು ನೆರವಾಗಲಿದೆ.

55. ಕ್ಷುದ್ರಗ್ರಹಗಳ ಮೇಲೆ ಕಣ್ಣಿಡಲು ನಾಸಾದಿಂದ ದೂರದರ್ಶಕ:

- ಭೂಮಿಯ ಸನಿಹ ಮುಂದೊಂದು ದಿನ ಧರಿತ್ರಿಗೆ ಅಪ್ಪಳಿಸುವ ಆತಂಕವಿರುವ ಕ್ಷುದ್ರಗ್ರಹಗಳ ಮೇಲೆ ಕಣ್ಣಿಡಲು ಅಂತರಿಕ್ಷದಲ್ಲಿ ದೂರದರ್ಶಕವೊಂದನ್ನು ಸ್ಥಾಪಿಸಲು ಕೊನೆಗೂ ನಾಸಾ ಮುಂದಾಗಿದೆ.
- ಭೂಮಿಯ ರಕ್ಷಣಾ ಕಾರ್ಯತಂತ್ರಗಳ ಭಾಗವಾಗಿ ಈ ದೂರದರ್ಶಕ ಸ್ಥಾಪಿಸಲಿರುವುದಾಗಿ ನಾಸಾವು ಪ್ರಕಟಣೆಯಲ್ಲಿ ತಿಳಿಸಿದೆ.
- ಅಂತರಿಕ್ಷದಲ್ಲಿರುವ ಬಿಸಿಯಾದ ಕಲ್ಲುಗಳಂತಹ ರಚನೆಗಳನ್ನು ಪತ್ತೆಹಚ್ಚಲು ಈ ದೂರದರ್ಶಕವು ಇನ್ ಫ್ರಾರೆಡ್ ರೇಡಿಯೇಷನ್ ಅನ್ನು ಬಳಸಲಿದೆ.
- ಈ ಯೋಜನೆಗೆ ಸದ್ಯಕ್ಕೆ ನಾಸಾವು ಭೂಮಿಯ ಸನಿಹದಲ್ಲಿರುವ ಕಾಯಗಳ ನಿಗಾ ಯೋಜನೆ, (ಎನ್ಇಒಎಸ್ಎಂ) ಎಂದು ಹೆಸರಿಟ್ಟಿದೆ.

ನಿಮಗಿದು ಗೊತ್ತೆ?

- ಕ್ಷುದ್ರಗ್ರಹಗಳೆಂದರ ಸಣ್ಣ (ಕೆಲವೊಂದು ಮಧ್ಯಮ) ಗಾತ್ರದ ಶಿಲಾ ಚೂರುಗಳು. ಇವು ಸೂರ್ಯನ ಕಕ್ಷೆಯಲ್ಲಿ ಗಿರಕಿ ಹೊಡೆಯುತ್ತಿರುತ್ತವೆ.
- ಮೊದಲ ಬಾರಿಗೆ ಪತ್ತೆಹಚ್ಚಿದ ಕ್ಷುದ್ರಗ್ರಹದ ಹೆಸರು ಸರಸ್. 1901ರಲ್ಲಿ ಗಿಯುಸ್ಪೆ ಪಿಯಾಝಿ ಅನ್ವೇಷಣೆ ಮಾಡಿದರು.
- ನಮ್ಮ ಸೌರಮಂಡಲದಲ್ಲಿ ಲಕ್ಷಕ್ಕೂ ಹೆಚ್ಚು ಕುದಗ್ರಹಗಳು ಇವೆ. ಅತ್ಯಂತ ದೊಡ್ಡ ಗಾತ್ರದ ಕ್ಷುದ್ರಗ್ರಹ ಸೆರಸ್.
- ಇದು ಸುಮಾರು 933 ಕಿ.ಮೀ.ಯಷ್ಟು ದೊಡ್ಡದಿದೆ. ಸಣ್ಣ ಕುದಗ್ರಹದ ಹೆಸರು 1991 ಬಿಎ, ಇದರ ಗಾತ್ರ ಸುಮಾರು 20 ಅಡಿ ಇದೆ.

56. ಅಳಿವಿನಂಚಿನಲ್ಲಿರುವ ಬಣ್ಣದ ಜೇನುನೊಣ:

- ಹವಾಮಾನ ಬದಲಾವಣೆ, ಅರಣ್ಯನಾಶ ಇನ್ನಿತರ ಕಾರಣದಿಂದ ಇಂದು ಹಲವು ಜೀವ ಪ್ರಭೇದಗಳು ಅಳಿವಿನಂಚು ತಲುಪಿದೆ.
- ಜೇನುನೊಣಗಳ ಜೀವವೈವಿಧ್ಯಕ್ಕೆ ಸಾಕ್ಷಿಯಾಗಿದ್ದ ದಕ್ಷಿಣ ಪೆಸಿಫಿಕ್‌ನ ಫಿಜಿ ದ್ವೀಪದಲ್ಲಿ ಹೊಸ ಪ್ರಭೇದದ ಬಣ್ಣದ ಜೇನುನೊಣಗಳು ಪತ್ತೆಯಾಗಿದ್ದು, ಆದರೆ ಇದು ಅಳಿವಿನಂಚಿನಲ್ಲಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.
- ಆಸ್ಟ್ರೇಲಿಯಾದ ಫ್ಲಿಂಡರ್ಸ್ ಯೂನಿವರ್ಸಿಟಿಯಲ್ಲಿ ಪಿಎಚ್‌ಡಿ ಅಧ್ಯಯನ ನಡೆಸುತ್ತಿರುವ ಜೇಮ್ಸ್ ಡೋರೆ ಅವರ ಮ್ಯಾಕ್ರೋ ಫೋಟೋಗ್ರಫಿ ಫಿಜಿಯ ಕೆಲವು ಹೊಸ ಜೇನುನೊಣ ಪ್ರಭೇದಗಳನ್ನು ಸೆರೆಹಿಡಿದಿದೆ.

57. ಅಣ್ವಸ್ತ್ರ ಯುದಕ್ಕೆ 5 ಗಂಟೆಯಲ್ಲಿ 9 ಕೋಟಿ ಬಲಿ!

- ಭಾರತದ ಜತೆಗಿನ ಸಾಂಪ್ರದಾಯಿಕ ಯುದ್ಧ ನಡೆದಲ್ಲಿ ನಾವು ಸೋಲುವುದು ಖಚಿತ, ಸೋತರೂ ಅಣ್ವಸ್ತ್ರಬಳಕೆಗೆ ಹಿಂದೆಮುಂದೆ ನೋಡುವುದಿಲ್ಲ ಎಂದು ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಹೇಳಿದ್ದಾರೆ.
- ಅಣ್ವಸ್ತ್ರಸಮರ ಎಷ್ಟು ಭೀಕರ ಎಂದರೆ ನಿಮಿಷದ ಅವಧಿಯಲ್ಲಿ ಲಕ್ಷಾಂತರ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಾರೆ.
- 'ಸಿಪ್ರಿ' ಎಂಬ ಸಂಸ್ಥೆ ಸಿದ್ಧಪಡಿಸಿರುವ ಅಮೆರಿಕ–ರಷ್ಯಾ ನಡುವಿನ ಯುದ್ಧದ ವರದಿ ಈ ಅಣ್ವಸ್ತ್ರ ಸಮರದ ಭಯಾನಕ ಚಿತ್ರಣವನ್ನು ಕಟ್ಟಿಕೊಡುತ್ತದೆ.
- ಸ್ಟಾಕ್ ಹೋಮ್ ಅಂತಾರಾಷ್ಟ್ರೀಯ ಶಾಂತಿ ಸಂಶೋಧನಾ ಕೇಂದ್ರ (ಸಿಪಿ) 2019ರ ವಾರ್ಷಿಕ ವರದಿಯಲ್ಲಿ ಒಂದು ವೇಳೆ ಅಣ್ವಸ್ತ್ರ ಸಜ್ಜಿತ ವಿಶ್ವದ ಮುಂಚೂಣಿ ರಾಷ್ಟ್ರಗಳೆನಿಸಿರುವ ಅಮೆರಿಕ ಹಾಗೂ ರಷ್ಯಾ ಯುದ್ಧಕ್ಕೆ ಮುಂದಾದಲ್ಲಿ ಸಂಭವಿಸುವ ಸಾವು–ನೋವುಗಳ ಕುರಿತು ಪ್ರಸ್ತಾಪಿಸಿದೆ.
- ಉಭಯ ದೇಶಗಳ ನಡುವಿನ ಯುದ್ಧದಲ್ಲಿ ಕೇವಲ 5 ಗಂಟೆಗಳಲ್ಲಿ 4 ಕೋಟಿ ಮಂದಿ ಹೆಣವಾಗಲಿದ್ದಾರೆ.
- ಜತೆಗೆ 74 ಕೋಟಿ ಮಂದಿ ಎರಡೂ ದೇಶಗಳಲ್ಲಿ ಗಂಭೀರವಾಗಿ ಗಾಯಗೊಳ್ಳಲಿದ್ದಾರೆ ಎಂದು ಉಲ್ಲೇಖಿಸಿದೆ.

- ಭಾರತ–ಪಾಕಿಸ್ತಾನಗಳಿಗೂ ಈ ವರದಿ ಎಚ್ಚರಿಕೆಯಾಗಿದೆ.

'ಪ್ಲಾನ್ ಎ'

- ರಷ್ಯಾ ಮತ್ತು ಅಮೆರಿಕ ನೇತೃತ್ವದ ನ್ಯಾಟೋ ಪಡೆಗಳು ಯುದ್ಧಕ್ಕೆ ಸಾವು ನೋವುಗಳ ರಕ್ತಪಾತದ ಚಿತ್ರಣ ಹೇಗಿರಬಹುದು ಎಂದು ಒಂದನೇ ಮಹಾಯುದ್ಧ ಮತ್ತು ಎರಡನೇ ಮಹಾಯುದ್ಧದ ಸಂದರ್ಭಗಳನ್ನು ಹೋಲಿಸಿ ಫ್ರಿನ್ಸ್‌ಟನ್ ವಿಶ್ವವಿದ್ಯಾಲಯದ ವಿಜ್ಞಾನ ಮತ್ತು ಜಾಗತಿಕ ಭದ್ರತೆ ಯೋಜನೆ ಅಡಿಯಲ್ಲಿ ಅಧ್ಯಯನ ನಡೆಸಲಾಗಿದೆ.
- **ಇದಕ್ಕೆ ಪ್ಲಾನ್ 'ಎ' ಎಂಬ ಹೆಸರು ನೀಡಲಾಗಿದೆ.**
- 1ನೇ ಮಹಾಯುದ್ಧದಲ್ಲಿ ಮಡಿದವರ ಸಂಖ್ಯೆ ಒಟ್ಟು 6 ಕೋಟಿಯಾದರೆ, ಆರು ತಿಂಗಳ ಕಾಲ ನಡೆದ 2ನೇ ಮಹಾಯುದ್ಧದಲ್ಲಿ ಮೃತಪಟ್ಟವರ ಸಂಖ್ಯೆ 8.5 ಕೋಟಿಯಾಗಿದೆ.

ಅಣ್ವಸ್ತ್ರ ಹೊಂದಿರುವ ರಾಷ್ಟ್ರಗಳು

- ಅಮೆರಿಕ
- ರಷ್ಯಾ
- ಬ್ರಿಟನ್
- ಫ್ರಾನ್ಸ್
- ಭಾರತ
- ಪಾಕಿಸ್ತಾನ
- ಇಸ್ರೇಲ್
- ಉತ್ತರ ಕೊರಿಯಾ

ಅಣ್ವಸ್ತ್ರ ಸಮರ ಹೀಗಾಗಬಹುದು

58. ನ್ಯೂಕ್ಲಿಯರ್ ವಾರ್ನಿಂಗ್ ಶಾಟ್ಸ್

- ಕಲಿನಿಗ್ರಾಡ್‌ನಲ್ಲಿನ ಸೇನಾ ನೆಲೆಯಿಂದ ಏಕಾಏಕಿ ಅಣ್ವಸ್ತ್ರವನ್ನು ಪ್ರಯೋಗಿಸಲಿರುವ ರಷ್ಯಾ ಸೇನೆ ಅಮೆರಿಕ ನೇತೃತ್ವದ ನ್ಯಾಟೋ ಪಡೆಗಳು ಮುನ್ನುಗ್ಗುತ್ತಿರುವುದನ್ನು ತಡೆಯಲು ಯತ್ನ. ಪ್ರತಿಯಾಗಿ ಅಮೆರಿಕ ಕೂಡ ಒಂದು ಅಣ್ವಸ್ತ್ರವನ್ನು ರಷ್ಯಾ ಸೇನಾ ನೆಲೆ ಮೇಲೆ ಪ್ರಯೋಗಿಸಲಿದೆ.

59. ಟ್ಯಾಕ್ಟಿಕಲ್ ಪ್ಲಾನ್

- ಯುದ್ಧ ವಿಮಾನಗಳಿಂದ ರಷ್ಯಾ ವಾಯುಪಡೆ 300 ಅಣ್ವಸ್ತ್ರ ಸಿಡಿತಲೆಗಳನ್ನು ಏಕಾಏಕಿ ಅಮೆರಿಕ ಮೇಲೆ ಉರುಳಿಸಲಿದೆ.
- ಇದಕ್ಕೆ ಯುರೋಪ್ ನಲ್ಲಿನ ನ್ಯಾಟೋ ಸಮೂಹದ ನೆಲೆಗಳು ಧ್ವಂಸಗೊಳ್ಳಲಿವೆ.
- ಪ್ರತಿಯಾಗಿ ನ್ಯಾಟೋ180 – ಯುದ್ಧ ವಿಮಾನಗಳಲ್ಲಿ ಅಣ್ವಸ್ತ್ರ ಸಿಡಿತಲೆಗಳನ್ನು ರಷ್ಯಾ ಮೇಲೆ ಕೆಡವಲಿದೆ.
- ಯುರೋಪ್‌ನಲ್ಲಿನ ಎಲ್ಲ ಸೇನಾ ನಲೆಗಳು ನಿರ್ನಾಮವಾಗಲಿವೆ,

ಕೌಂಡರ್ ಫೋರ್ಸ್ ಪ್ಲಾನ್

- ಸಿಲೋನಲ್ಲಿನ ಅಮೆರಿಕದ ಮಿಲಿಟರಿ ಕೇಂದ್ರ ನೆತ್ತಿಯಿಂದ ಹಾಗೂ ಅಟ್ಲಾಂಟಿನ್, ಫೆಸಿಫಿಕ್ ಸಾಗರದಲ್ಲಿನ ಜಲಾಂತರ್ಗಾಮಿಗಳು 600 ಸಿಡಿತಲೆಗಳನ್ನು ರಷ್ಯಾ ಮೇಲೆ ಕೆಡವಲಿದೆ. ರಷ್ಯಾ ಕೂಡ ಅಣ್ವಸ್ತ್ರ ಬಾಂಬ್‌ಗಳನ್ನು ಪ್ರಯೋಗಿಸಲಿದೆ.

ಕೌಂಡರ್ ವ್ಯಾಲ್ಯೂ

- ಫ್ರಾನ್ಸ್ ಎರಡೂ ರಾಷ್ಟ್ರಗಳು ಶತ್ರುಪಡೆಯ 30 ಪ್ರಸಿದ್ಧ ಆರ್ಥಿಕ ಕೇಂದ್ರಗಳನ್ನು ಗುರಿಯಾಗಿಸಿ ದಾಳಿ ನಡೆಸಲಿವೆ.
- (ಅಣ್ವಸ್ತ್ರದಾಳಿಯ ವಿಕಿರಣಗಳ ಪರಿಣಾಮದಿಂದ ಆಗುವ ಸಾವುನೋವುಗಳನ್ನು ಇಲ್ಲಿ ಪರಿಗಣಿಸಲಾಗಿಲ್ಲ.)

60. ವಿಕ್ರಮ್ ಕುಸಿದು ಬಿದ್ದ ಸ್ಥಳದ ಚಿತ್ರ ಬಿಡುಗಡೆ:



- ಇಸ್ರೋ ಕಳುಹಿಸಿದ್ದ ಚಂದ್ರಯಾನ–2ರ ವಿಕ್ರಮ್ ಲ್ಯಾಂಡರ್ ಚಂದ್ರನ ಮೇಲೆ ಹಾರ್ಡ್ ಲ್ಯಾಂಡಿಂಗ್ ಆದ ಸ್ಥಳದ ಚಿತ್ರವನ್ನು ಅಮೆರಿಕದ ಬಾಹ್ಯಾಕಾಶ ಏಜೆನ್ಸಿ ನಾಸಾ ಬಿಡುಗಡೆ ಮಾಡಿದೆ.
- ಇನ್ನಷ್ಟು ಸ್ಪಷ್ಟ ಚಿತ್ರ ತೆಗೆಯಲು ಸಾಧ್ಯ ಎಂದು ಗೊಡ್ಡಾರ್ಡ್ ಸ್ಪೇಸ್ ಫ್ಲೈಟ್ ಸೆಂಟರ್‌ನ ಲೂನಾರ್ ರೆಕಗ್ನೈಸೆನ್ಸ್ ಆರ್ಬಿಟರ್ ಮಿಷನ್‌ನ Lunar Reconnaissance Orbiter (LRO) ವಿಜ್ಞಾನಿ ಜಾನ್ ಕೆಲ್ಲರ್ ತಿಳಿಸಿದ್ದಾರೆ.
- ಲ್ಯಾಂಡಿಂಗ್ ಪ್ರದೇಶವನ್ನು ಚಿತ್ರಿಸಿದಾಗ ಮುಸ್ಸಂಜೆಯಾಗಿತ್ತು ಆದ್ದರಿಂದ ದೊಡ್ಡ ನೆರಳುಗಳು ಬಹುಭಾಗ ಆವರಿಸಿದ್ದವು, ವಿಕ್ರಮ್ ಲ್ಯಾಂಡರ್ ನೆರಳಿನಲ್ಲಿ ಅಡಗಿರುವ ಸಾಧ್ಯತೆಯಿದೆ ಎಂದು ನಾಸಾ ತಿಳಿಸಿದೆ.

61. ಸ್ಪರ್ಶ ಗ್ರಹಿಸುವ ಕೃತಕ ಚರ್ಮ ರಚನೆ:

- ಇದೀಗ ನೈಜ ಚರ್ಮದ ಮಾದರಿಯಲ್ಲೇ ಸ್ವಿಜರ್ಲೆಂಡ್ ಇಕೋಲೆ ಪೊಲಿಟೆಕ್ನಿಕ್ ಫೆಡರಲ್ ಡಿ ಲಾಸನ್ (ಇಪಿಎಫ್ಎಲ್) ರಿಸರ್ಚ್ ಇನ್ ಸೈಟಲ್ನ ಸಂಶೋಧಕರು ಮೃದುವಾದ ಕೃತ ಚರ್ಮ ಅಭಿವೃದ್ಧಿಪಡಿಸಿದ್ದಾರೆ.
- ನಮ್ಮ ಶ್ರವಣ ಮತ್ತು ದೃಷ್ಟಿಯ ಇಂದ್ರಿಯಗಳಂತೆಯೇ ಸುತ್ತಲಿನ ಪ್ರಪಂಚವನ್ನು ನಾವು ಹೇಗೆ ಗ್ರಹಿಸುತ್ತೇವೆ ಮತ್ತು ಸಂವಹನ ನಡೆಸುತ್ತೇವೆ ಎಂಬುದರಲ್ಲಿ ಸ್ಪರ್ಶ ಪ್ರಜ್ಞೆಯು ಪ್ರಮುಖ ಪಾತ್ರ ವಹಿಸುತ್ತದೆ.

62. ಭೂಮಿಯ ಬಗೆಗಿನ ಕೌತುಕದ ಸಂಗತಿಗಳು:

- ಭೂಮಿಯ ಮೇಲೆ ನಾಲ್ಕನೇ ಮೂರರಷ್ಟು ಭಾಗ ನೀರಿನಿಂದ ಆವೃತವಾಗಿದೆ.
- 5 ಭೂಮಿ ಸೌರಮಂಡಲದ 5ನೇ ದೊಡ್ಡಗ್ರಹ
- 1,07,182 ಕಿ.ಮೀ: ನಾವು ಸೂರ್ಯನ ಸುತ್ತ ಗಂಟೆಗೆ ಇಷ್ಟು ಕಿ.ಮೀ. ವೇಗದಲ್ಲಿ ಸಂಚರಿಸುತ್ತೇವೆ.
- 3 ಸೂರ್ಯನ ಹತ್ತಿರದ ಮೂರನೇ ಗ್ರಹ ಬುದ ಮತ್ತು ಶುಕ್ರ ಕ್ರಮವಾಗಿ ಹತ್ತಿರದ ಮೊದಲನೆ ಮತ್ತು ಎರಡನೇ ಗ್ರಹಗಳಾಗಿವೆ.
- ನೀರು : ಗೊತ್ತಿರುವ ಗ್ರಹಗಳಲ್ಲಿ ಭೂಮಿಯಲ್ಲಿ ಮಾತ್ರ ನೀರು ದ್ರವ, ಘನ ಮತ್ತು ಅನಿಲ ರೂಪದಲ್ಲಿ ಇದೆ.
- 3,400 ದಶಲಕ್ಷ ಕ್ಯೂಬಿಕ್ ಕಿ. ಮೀ.
- 8 1/2 ನಿಮಿಷ ಬೆಳಕು ಸೂರ್ಯನಿಂದ ಭೂಮಿಗೆ ತಲುಪಲು ಎಂಟೂವರೆ ನಿಮಿಷ ಬೇಕಾಗುತ್ತದೆ.
- 50 ಕಿ.ಮೀ. ಭೂಮಿಯ ವಾತಾವರಣದ ಮೊದಲ ಹಂತವು ತನ್ನ ಮೇಲ್ಮೈನಿಂದ ಸುಮಾರು 50 ಕಿ.ಮೀ.ವರೆಗೆ ಇದೆ. ಒಟ್ಟಾರೆ ಭೂಮಿಯ ವಾತಾವರಣವು ಅಂತರಿಕ್ಷದಲ್ಲಿ 10,000 ಕಿ.ಮೀ.ವರೆಗಿದೆ.
- 24 ಗಂಟೆ ಭೂಮಿಯು ತನ್ನ ಅಕ್ಷದಲ್ಲಿ ತಿರುಗಲು ಭರ್ತಿ 24 ಗಂಟೆ ತೆಗೆದುಕೊಳ್ಳುವುದಿಲ್ಲ. 23 ಗಂಟೆಗಳು, 56 ನಿಮಿಷಗಳು ಮತ್ತು 4 ಸೆಕೆಂಡಿನಲ್ಲಿ ತನ್ನ ಅಕ್ಷದಲ್ಲಿ ಒಂದು ಸುತ್ತು ಬರುತ್ತದೆ.
- 2564 ದಿನಗಳು ಭೂಮಿಯ ಒಂದು ವರ್ಷವೆಂದರೆ ನಾವು ಸಾಮಾನ್ಯವಾಗಿ 365 ದಿನಗಳು ಎನುತ್ತೇವೆ. ಆದರೆ, ಒಂದು ವರ್ಷವೆಂದರೆ 365.2564 ದಿನವಾಗಿದೆ. ಉಳಿದ 2564 ದಿನಗಳು ಸೇರಿ ನಾಲ್ಕು ವರ್ಷಗಳಿಗೊಮ್ಮೆ ಫೆಬ್ರವರಿಯಲ್ಲಿ ಲೀಪ್ ಇಯರ್ ಆಗುತ್ತದೆ.
- 140 ದಶಲಕ್ಷ ವರ್ಷ ಭೂಮಿಯ ತಿರುಗುವಿಕೆ ತುಂಬಾ ನಿಧಾನ. ಇದು 100 ವರ್ಷಕ್ಕೆ ಸುಮಾರು 17 ಮಿಲಿಸೆಕೆಂಡ್‌ನಷ್ಟು ರೊಟೇಷನ್ ಆಗುತ್ತದೆ. ಹೀಗಾಗಿ, ಈಗಿನ ದಿನದ 24 ಗಂಟೆಯು, 25 ಗಂಟೆಯ ಸ್ಥಿತಿಗೆ ತಲುಪಲು
- ಸುಮಾರು 140 ದಶಲಕ್ಷ ವರ್ಷ ಕಳೆಯಬೇಕು. (ಶೇಕಡ 78 ಭೂಮಿಯ ಶೇಕಡ 78ರಷ್ಟು ಭಾಗವು ನೈಟ್ರೋಜನ್‌ನಿಂದ ವೃತ್ತವಾಗಿದೆ ಶೇಕಡ 21 ಆಮ್ಲಜನಕವಿದೆ.

ಭೂಮಿ ತಿರುಗುವುದನ್ನು ನಿಲ್ಲಿಸಿದರೆ:

- ಮನುಷ್ಯರು, ಪ್ರಾಣಿಗಳು, ಮನೆ, ಮರಗಿಡಗಳು ಸೇರಿದಂತೆ ವಸ್ತುಗಳು ಪೂರ್ವಕ್ಕೆ ಗಂಟೆಗೆ ಸಾವಿರ ಕಿ.ಮೀ. ವೇಗದಲ್ಲಿ ಹಾರಬಹುದು.
- ಭಾರೀ ಅಲೆಗಳು ಉಂಟಾಗಬಹುದು, ಸುನಾಮಿಯಿಂದ ನಗರಗಳು ಕೊಚ್ಚಿ ಹೋಗಬಹುದು. ನೆಲ ಮತ್ತು ಸಮುದ್ರ ಒಂದಾಗಬಹುದು.
- ಭಾರೀ ಗಾಳಿ ಬೀಸಬಹುದು. ಭೂಮಿಯಲ್ಲಿರುವುದೆಲ್ಲವೂ ದಿಕ್ಕುದಿಸೆಯಿಲ್ಲದೆ ಚೆಲ್ಲಾಪಿಲ್ಲಿಯಾಗಿ ಹಾರುತ್ತಿರಬಹುದು,
- ಸಮುದ್ರದ ನೀರೆಲ್ಲ ಭೂಮಿಯ ಎರಡು ಧ್ರುವದಲ್ಲಿ ಸಂಗ್ರಹವಾಗಿ ಹೊಸ ಖಂಡವೇ ರಚನೆಯಾಗಬಹುದು.
- ಅಂಡಾಕಾರದ ಭೂಮಿಯ ರೂಪ ಬದಲಾಗಬಹುದು.
- ಭೂಮಿಯ ಒಂದು ಕಡೆ ಹಗಲು ಮತ್ತು ಮತ್ತೊಂದು ಕಡೆ ರಾತ್ರಿ ಕಾಯಂ ಆಗಿ ಇರಬಹುದು.
- ಆಕಾಶದಿಂದ ಚಂದ್ರ ಉರುಳಿ ಭೂಮಿಗೆ ಅಪ್ಪಳಿಸಬಹುದು.

63. 'ಎಲಾನ್ ಮಸ್ಕ್'ನಿಂದ ಸ್ಟಾರ್‌ಶಿಪ್ ಅನಾವರಣ :

- ಅಮೆರಿಕದ ಖಾಸಗಿ ಅಂತರಿಕ್ಷ ಸಂಸ್ಥೆಯಾದ 'ಸ್ಪೇಸ್–ಎಕ್ಸ್'ನ ಸ್ಥಾಪಕ ಎಲೊನ್ ಮಸ್ಕ್ ಅವರು ಮುಂದಿನ ತಲೆಮಾರಿನ ರಾಕೆಟ್ ಸ್ಟಾರ್‌ಶಿಪ್ ಅನ್ನು ಅನಾವರಣ ಮಾಡಿದ್ದಾರೆ.
- ಆರಂಭದಲ್ಲಿ ಇದು ಜನರನ್ನು ಚಂದ್ರನಲ್ಲಿಗೆ ಕರೆದುಕೊಂಡು ಹೋಗಿ, ಅಲ್ಲಿಂದ ವಾಪಸ್ ಬರುವ ಯೋಜನೆಯನ್ನು ಹೊಂದಿದೆ.
- ಈ ಸ್ಟಾರ್‌ಶಿಪ್‌ನ ಪ್ರೊಟೊಟೈಪ್ ಮಾದರಿಗೆ ಮಾರ್ಕ್–1 ಎಂದು ಹೆಸರಿಡಲಾಗಿದೆ.
- ಸ್ಟೈನ್‌ಲೆಸ್ ಸ್ಟೀಲ್ ಉಕ್ಕಿನಿಂದ ತಯಾರಿಸಿದ ಈ – ಸ್ಟಾರ್ ಶಿಪ್ 160 ಅಡಿ ಎತ್ತರ ಇರಲಿದೆ. ಇದು 1,400 ಟನ್ ತೂಕ ಕೊಂಡೊಯ್ಯುವ ಸಾಮರ್ಥ್ಯ ಹೊಂದಿರಲಿದೆ. ತನ್ನ ಸ್ಪೇಸ್ ಎಕ್ಸ್ ಫಾಲ್ಕೊನ್ 9 ರಾಕೆಟಗಳ ಶ್ರೇಣಿಯಲ್ಲಿಯೇ ಈ ಸ್ಟಾರ್ ಶಿಪ್ ಅನ್ನು ತಯಾರಿಸಲಿದೆ.

ಕ್ರೀಡೆ

1. ರೇಸ್ ರಾಣಿ ಐಶ್ವರ್ಯ ಪಿಸ್ಸೆ:

- ವಿಶ್ವಮೋಟರ್ ಸ್ಪೋರ್ಟ್ಸ್ ನಲ್ಲಿ ಸಂಚಲನ ಮೂಡಿಸಿದ ಬೆಂಗಳೂರಿನ ಚೆಲುವೆ ಐಶ್ವರ್ಯ ಪಿಸ್ಸೆ 23 ವರ್ಷದ ಪಿಸ್ಸೆ ಆಗಸ್ಟ್ 13ರಂದು ಹಂಗೇರಿಯಲ್ಲಿ ನಡೆದ ವಿಶ್ವಕಪ್ ಮೋಟಾರ್ ರೇಸ್ ಮಹಿಳಾ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದರು.
- ಈ ಮೂಲಕ ಅಂತಾರಾಷ್ಟ್ರೀಯ ಮೋಟಾರ್ ಸೈಕಲ್ ವಿಶ್ವಕಪ್‌ನಲ್ಲಿ ಪ್ರಶಸ್ತಿ ಜಯಿಸಿದ ಮೊದಲ ಭಾರತೀಯ ರೇಸರ್ ಎಂಬ ಹೆಗ್ಗಳಿಕೆ ಭಾಜನರಾದರು.

2. ಬಂಗಾರ ಗೆದ್ದ ಯಶಸ್ವಿನಿ:

- ಯುವ ಶೂಟರ್ ಯಶಸ್ವಿನಿ ಸಿಂಗ್ ದೇಸ್ವಾಲ್ ರಿಯೊ ಡಿ ಜನೈರೋನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ರೈಫಲ್ /ಪಿಸ್ತೂಲ್ ವಿಶ್ವಕಪ್‌ನ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಜಯಿಸಿದ್ದಾರೆ.
- 2020 ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವ ಅರ್ಹತೆಯನ್ನೂ ಪಡೆದಿದ್ದಾರೆ. ಈ ಮೂಲಕ ಭಾರತ ಶೂಟಿಂಗ್ ವಿಭಾಗದಲ್ಲಿ ಒಲಿಂಪಿಕ್ಸ್‌ನಲ್ಲಿ ಒಂಬತ್ತನೇ ಕೋಟಾ ಸ್ಥಾನ ಇದಾಗಿದೆ.

ಅಗ್ರ ಸ್ಥಾನದಲ್ಲಿ ಭಾರತ:

- ರಿಯೊ ವಿಶ್ವಕಪ್‌ನಲ್ಲಿ ಇದು ಭಾರತದ ಪಾಲಿನ ಮೂರನೇ ಸ್ವರ್ಣ ಪದಕವಾಗಿದೆ. ಇದಕ್ಕೂ ಮುನ್ನ ಅಭಿಷೇಕ್ ವರ್ಮಾ ಹಾಗೂ ಎಲವನಿಲ್ ವಲಾರಿವನ್ ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ 10 ಮೀ ರೈಫಲ್ ವಿಭಾಗದಲ್ಲಿ ಚಿನ್ನದ ಸಾಧನೆ ಮಾಡಿದ್ದರು. ಟೂರ್ನಿಯಲ್ಲಿ ಮೂರು ಚಿನ್ನ, ಒಂದು ಬೆಳ್ಳಿ ಸೇರಿ ಐದು ಪದಕಗಳನ್ನು ಜಯಿಸಿದ ಭಾರತ ಪದಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

3. ಬಾಡಿಬಿಲ್ಡಿಂಗ್ ಸ್ಪರ್ಧೆ ಮಹಿಳಾ ಚಾಂಪಿಯನ್ ಶೆಲ್ಲಿ ಅರೋರಾ:

- ಇಂಟರ್ನ್ಯಾಷನಲ್ ನ್ಯಾಚುರಲ್ ಬಾಡಿಬಿಲ್ಡಿಂಗ್ ಅಸೋಸಿಯೇಷನ್ ಏರ್ಪಡಿಸಿದ್ದ ಏಷ್ಯಾ ಪೆಸಿಫಿಕ್ ಚಾಂಪಿಯನ್ಶಿಪ್‌ನ ಮಹಿಳಾ ದೇಹರಾಡ್ಯ ವಿಭಾಗದಲ್ಲಿ ಅನೇಕ ದೇಹರಾಡ್ಯ ಸ್ಪರ್ಧೆಗಳಲ್ಲಿ ಭಾರತದ ಅರೋರಾ ಚಾಂಪಿಯನ್.

4. ಭಾರತ ಮಹಿಳಾ ಕ್ರಿಕೆಟ್ ತಂಡದ ಅನುಭವಿ ಬ್ಯಾಟುಗಾರ್ತಿ ಮಿಥಾಲಿ ರಾಜ್ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ವಿದಾಯ ಪ್ರಕಟಿಸುವ ಮೂಲಕ ಈಗ ಸುದ್ದಿಯಲ್ಲಿದ್ದಾರೆ:

5. ರಾಷ್ಟ್ರೀಯ ಈಜು, ಕರ್ನಾಟಕ ಸಮಗ್ರ ಚಾಂಪಿಯನ್:

- ಭರ್ಜರಿ ನಿರ್ವಹಣೆ ತೋರಿದ ಕರ್ನಾಟಕ ತಂಡ 73ನೇ ಆವೃತ್ತಿಯ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಚಾಂಪಿಯನ್ ಎನಿಸಿಕೊಂಡಿದೆ.

6. ಕೆನಡಾದ ಬಿಯಾಂಕಾ ನ್ಯೂಯಾರ್ಕ್‌ನ ಆರ್ಥರ್ ಆಶ್ ಕ್ರೀಡಾಂಗಣದಲ್ಲಿ ಫೈನಲ್‌ನಲ್ಲಿ ಸೆರೆನಾ ವಿರುದ್ಧ 6–3, 7–5ರ ನೇರ ಸೆಟ್‌ಗಳಲ್ಲಿ ಮಣಿಸಿ ಪ್ರಶಸ್ತಿ ಜಯಿಸಿದರು:

7. ಅಮೆರಿಕನ್ ಓಪನ್ ಗ್ರಾಂಡ್ ಸ್ಲಾಮ್ ಟೆನಿಸ್ ಟೂರ್ನಿಯ ಪುರುಷ ಸಿಂಗಲ್ಸ್ ನಲ್ಲಿ ರಾಫೆಲ್ ನಡಾಲ್ ಚಾಂಪಿಯನ್:

ಪ್ರಮುಖ ಅಂಕಿಅಂಶ:

- ರಾಫೆಲ್ ನಡಾಲ್ 19ನೇ ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿ ಗೆದ್ದ ಸಾಧನೆ ಮಾಡಿದ್ದಾರೆ. ಈ ಮೂಲಕ ಪುರುಷ ಸಿಂಗಲ್ಸ್ ವಿಭಾಗದಲ್ಲಿ ಅತಿ ಹೆಚ್ಚು ಗ್ರ್ಯಾಂಡ್ ಸ್ಲ್ಯಾಮ್‌ಗಳನ್ನು ಗೆದ್ದಿರುವ ಸ್ವಿಜರ್ಲೆಂಡ್‌ನ ರೋಜರ್ ಫೆಡರರ್‌ಗಿಂತಲೂ ಕೇವಲ ಒಂದು ಹೆಜ್ಜೆ ಮಾತ್ರ ಹಿಂದಿದ್ದಾರೆ. ಫೆಡರರ್ ಇದುವರೆಗೆ 20 ಗ್ರ್ಯಾಂಡ್ ಸ್ಲ್ಯಾಮ್‌ಗಳನ್ನು ಗೆದ್ದಿದ್ದಾರೆ.
- ನಡಾಲ್ ಅತಿ ಹೆಚ್ಚು ಯುಎಸ್ ಓಪನ್ ಪ್ರಶಸ್ತಿ ಗೆದ್ದ ಸಾಲಿನಲ್ಲಿ ಜಾನ್ ಮೆಕೆನೋ ಜೊತೆಗೆ ಜಂಟಿ ಎರಡನೆ ಸ್ಥಾನವನ್ನು ಹಂಚಿಕೊಂಡಿದ್ದಾರೆ.

8. ದೇಶೀಯ ಕ್ರಿಕೆಟ್‌ನ ದಿಗ್ಗಜ ಬ್ಯಾಟ್ಸ್‌ಮನ್ ಅಮೋಲ್ ಮುಜುಮ್ದಾರ್, ಪ್ರವಾಸಿ ದಕ್ಷಿಣ ಆಫ್ರಿಕಾ ತಂಡಕ್ಕೆ ಟೆಸ್ಟ್ ಸರಣಿಯ ವೇಳೆ ಬ್ಯಾಟಿಂಗ್ ಕೋಚ್ ಆಗಿ ನೇಮಕ:

9. ಶ್ರೀಲಂಕಾ ಕ್ರಿಕೆಟ್ ತಂಡದ ಬೌಲರ್ ಲಸಿತ್ ಮಾಲಿಂಗ ಏಕದಿನ ಮತ್ತು ಟಿ20 ಕ್ರಿಕೆಟ್‌ನಲ್ಲಿ ಸತತ ನಾಲ್ಕು ವಿಕೆಟ್ ಪಡೆಡಿದ್ದಾರೆ:

- ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಸತತ 4 ವಿಕೆಟ್ ಪಡೆದ ಮೊದಲ ಬೌಲರ್ ಎಂಬ ಖ್ಯಾತಿ ಅಫಘಾನಿಸ್ತಾನ ತಂಡದ ಲೆಗ್ ಸ್ಪಿನ್ನರ್ ರಶೀದ್ ಖಾನ್ ಪಡೆಡಿದ್ದಾರೆ.

10. ಹ್ಯಾಟ್ರಿಕ್ ವನಿತಿ ಮಗಾಟ್:

- ಮಹಿಳಾ ಕ್ರಿಕೆಟ್‌ನಲ್ಲಿ ಆಸ್ಟ್ರೇಲಿಯಾದ ವೇಗದ ಬೌಲರ್ ಮೆಗಾನ್ ಶುಟ್, ಏಕದಿನ ಮತ್ತು ಟ್ವೆಂಟಿ20 ಕ್ರಿಕೆಟ್‌ನಲ್ಲಿ ಹ್ಯಾಟ್ರಿಕ್ ವಿಕೆಟ್ ಪಡೆದ ಮೊದಲ ಆಟಗಾರ್ತಿಯಾಗಿದ್ದಾರೆ.

11. ಭಾರತದ ಕಿರಿಯರಿಗೆ ಏಷ್ಯಾ ಕಪ್:

- ಎಡಗೈ ಸ್ಪಿನ್ನರ್ ಅಥರ್ವ ಅಂಕೋಲೆಕರ್ (28ಕ್ಕೆ5) ಅವರ ಮಾರಕ ಬೌಲಿಂಗ್ ನೆರವಿನಿಂದ ಭಾರತ ತಂಡ 19 ವರ್ಷದೊಳಗಿನವರ 'ಏಷ್ಯಾ ಕಪ್' ಕ್ರಿಕೆಟ್ ಫೈನಲ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡದ ವಿರುದ್ಧ5 ರನ್‌ಗಳ ರೋಚಕ ಗೆಲುವು ಸಾಧಿಸಿತು.
- ಇದರೊಂದಿಗೆ ಏಷ್ಯಾ ಕಪ್‌ನಲ್ಲಿ ಏಳನೇ ಪ್ರಶಸ್ತಿ ಮುಡಿಗೇರಿಸಿಕೊಂಡ ಭಾರತ ತನ್ನ ಪಾರುಪತ್ಯ ಸಾಧಿಸಿದೆ.

12. ಕ್ರಿಕೆಟ್ ದಿಗ್ಗಜ ಹಾಗೂ 1983ರ ವಿಶ್ವಕಪ್ ವಿಜೇತ ತಂಡದ ನಾಯಕ ಕಪಿಲ್ ದೇವ್, ಹರಿಯಾಣದ ಕ್ರೀಡಾ ವಿವಿಯ ಮೊದಲ ಕುಲಪತಿಯಾಗಿ ನೇಮಕ:

- ಇದು ಸೋನೇ ಪತ್ ಜಿಲ್ಲೆಯ ರಾಯ್‌ನಲ್ಲಿ ರಾಜ್ಯ ಸರ್ಕಾರದ ವತಿಯಿಂದ ನಿರ್ಮಾಣವಾದ ದೇಶದ ಮೂರನೇ ಕ್ರೀಡಾ ವಿವಿ ಎನಿಸಿದೆ.

13. ಪಂಕಜ್ ಆಡ್ವಾಣಿ:

- ಭಾರತದ ಪಂಕಜ್ ಆಡ್ವಾಣಿ ಐಬಿಎಸ್‌ಎಫ್ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ನ 150 ಅಪ್ ಮಾದರಿಯಲ್ಲಿ ಪ್ರಶಸ್ತಿ ಗೆದ್ದಿದ್ದಾರೆ.
- ಫೈನಲ್ ಪಂದ್ಯದಲ್ಲಿ ಮ್ಯಾನ್ಮಾರ್‌ನ ನಾಯ್ ಥ್ವೇ ಓ ವಿರುದ್ಧ ಗೆಲುವು ಸಾಧಿಸಿಸುವುದರೊಂದಿಗೆ ತಮ್ಮ ವಿಶ್ವ ಕಿರೀಟದ ಸಂಖ್ಯೆಯನ್ನು 22ಕ್ಕೆ ವಿಸ್ತರಿಸಿದ್ದಾರೆ.
- ಪಂಕಜ್‌ಗೆ ಕಳೆದ ಆರು ವರ್ಷಗಳಲ್ಲಿ ದೊರೆತ ಐದನೇ ಕಿರೀಟ ಇದಾಗಿದೆ. ಅವರು 2003ರಲ್ಲಿ ಮೊದಲ ಬಾರಿ ಜಾಗತಿಕ ಪ್ರಶಸ್ತಿಗೆ ಮುತ್ತಿಟ್ಟಿದರು.
- ಪಂಕಜ್, ಎಂಟು ಬಾರಿ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್ (ಟೈಮ್ ಫಾರ್ಮೆಟ್), ಏಳು ಬಾರಿ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್ (ಪಾಯಿಂಟ್ ಫಾರ್ಮೆಟ್) ಒಂದು ಬಾರಿ ಐಬಿಎಸ್‌ಎಫ್ ವಿಶ್ವಸ್ನೂಕರ್ ಟೀಮ್ ಚಾಂಪಿಯನ್‌ಷಿಪ್ (2018), ಮೂರು ಬಾರಿ ಐಬಿಎಸ್‌ಎಫ್ ವಿಶ್ವ ಸ್ನೂಕರ್ ಚಾಂಪಿಯನ್, ಎರಡುಬಾರಿ ಐಬಿಎಸ್‌ಎಫ್ ವಿಶ್ವಸಿಕ್ಸ್–ರೆಡ್ ಸ್ನೂಕರ್ ಚಾಂಪಿಯನ್ ಹಾಗೂ ಒಂದು ಬಾರಿ ದಿ ವಿಶ್ವ ಟೀಮ್ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್‌ಗೆ ಭಾಜನರಾಗಿದ್ದಾರೆ.
- ಅಲ್ಲದೆ 2010 ಮತ್ತು 2006ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕಕ್ಕೆ ಕೊರಳೊಡಿದ್ದಾರೆ. 2008ರ ಆಸ್ಟ್ರೇಲಿಯನ್ ಓಪನ್ ಕೂಡ ಗೆದ್ದುಕೊಂಡಿದ್ದಾರೆ.
- 10 ಏಷ್ಯನ್ ಕಿರೀಟ, 8 ಏಷ್ಯನ್ ಬಿಲಿಯರ್ಡ್ಸ್ ಚಾಂಪಿಯನ್, 2017ರ ಸೂಕರ್ (ಟೀಮ್ ಚಾಂಪಿಯನ್) – ಚಿನ್ನ ಪದಕ, 32 ರಾಷ್ಟ್ರೀಯ ಕಿರೀಟ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.
- ಇವರ ಕ್ರೀಡಾ ಸಾಧನೆಯನ್ನು ಗುರುತಿಸಿ ಭಾರತ ಸರಕಾರ ರಾಜೀವ್ ಗಾಂಧಿ ಖೇಲ್ ರತ್ನ, ಅರ್ಜುನ, ಪದ್ಮಶ್ರೀ, – ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕದಲ್ಲಿ ನೆಲೆಸಿರುವ ಪಂಕಜ್ ಅಡ್ವಾಣಿ ಮೂಲತಃ ಮಹಾರಾಷ್ಟ್ರದ ಪುಣೆಯವರು.

14. ವಿಜಯ್ ಹಜಾರೆ ಟ್ರೋಫಿ:

- ಭಾರತ ತಂಡದ ಮಾಜಿ ನಾಯಕ ವಿಜಯ್ ಸ್ಯಾಮುಯೆಲ್ ಹಜಾರೆ ಅವರ ಸ್ಮರಣಾರ್ಥವಾಗಿ ಬಿಸಿಸಿಐ 2000–03ರ

ಇಸವಿಯಲ್ಲಿ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯನ್ನು ಆರಂಭಿಸಿತು.

- ಟೂರ್ನಿಗೆ ಇದೀಗ 18ರ ಹುಟ್ಟುಹಬ್ಬ, ಪ್ರಥಮ ದರ್ಜೆಯಲ್ಲಿ ಪ್ರತಿಷ್ಠಿತ ಏಕದಿನ ಟೂರ್ನಿ ಎನಿಸಿಕೊಂಡಿರುವ ವಿಜಯ್ ಹಜಾರೆ ಟೂರ್ನಿ ಸೆ.24ರಿಂದ ಅ.25ರವರೆಗೆ ದೇಶದ ವಿವಿಧ ಭಾಗಗಳಲ್ಲಿ ರೌಂಡ್ ರಾಬಿನ್ ಮತ್ತು ಪ್ಲೇಆಫ್ ಮಾದರಿಯಲ್ಲಿ ನಡೆಯಲಿದೆ.
- ಪ್ರಸಕ್ತ ಆವೃತ್ತಿಯ 38 ತಂಡಗಳು ಎ, ಬಿ, ಸಿ ಮತ್ತು ಪ್ಲೇಟ್ ಗುಂಪುಗಳಲ್ಲಿ ಹಂಚಿಹೋಗಿವೆ. ಎ ಮತ್ತು ಬಿ ಗುಂಪುಗಳಲ್ಲಿ ತಲಾ 9 ಹಾಗೂ ಸಿ ಮತ್ತು ಪ್ಲೇಟ್ ಗುಂಪುಗಳಲ್ಲಿ ತಲಾ 10 ತಂಡಗಳಿವೆ.
- ಗುಂಪಿನಲ್ಲಿ ಪ್ರತಿ ತಂಡ ಇತರ ತಂಡಗಳ ವಿರುದ್ಧ ತಲಾ ಒಮ್ಮೆ ಆಡಲಿದೆ. ಟೂರ್ನಿಯಲ್ಲಿ ಗರಿಷ್ಠ (5) ಪ್ರಶಸ್ತಿ ಗೆದ್ದ ತಂಡವೆಂಬ ಹೆಗ್ಗಳಿಕೆ ತಮಿಳುನಾಡಿಗೆ. ಕರ್ನಾಟಕ 2 ಬಾರಿ ಈ ಸಾಧನೆ ಮಾಡಿದೆ.
- ಸುನಿಲ್ ಗಾವಸ್ಕರ್, ಸಚಿನ್ ತೆಂಡೂಲ್ಕರ್ ಮತ್ತು ರಾಹುಲ್ ದ್ರಾವಿಡ್ ನಂತರ, ಪ್ರಥಮ ದರ್ಜೆಯಲ್ಲಿ ಅತಿ ಹೆಚ್ಚು ರನ್ ಮಾಡಿದ ಭಾರತೀಯ ಆಟಗಾರ ವಿಜಯ್ ಹಜಾರೆ. ಅವರು 30 ಟೆಸ್ಟ್ ಪಂದ್ಯದಿಂದ 2192 ರನ್ ಗಳಿಸಿದ್ದಾರೆ.
- 1953ರಲ್ಲಿ ವೃತ್ತಿ ಜೀವನಕ್ಕೆ ವಿದಾಯ ಹೇಳಿದ ಹಜಾರೆ, ಆನಂತರ ಕೆಲ ಕಾಲ ಭಾರತೀಯ ಟೆಸ್ಟ್ ಕ್ರಿಕೆಟ್ ಆಯ್ಕೆ ಮಂಡಳಿಯ ಸದಸ್ಯರಾಗಿದ್ದರು. ಕ್ಯಾನ್ಸರ್ ಕಾಯಿಲೆಗೆ ತುತ್ತಾದ ಹಜಾರೆ, ಡಿಸೆಂಬರ್ 18, 2004 ರಂದು ನಿಧನರಾದರು.

ಹಲವು ಪ್ರಥಮಗಳ ಹಜಾರೆ

- ಎರಡು ತ್ರಿಶತಕಗಳಿಸಿದ ಮೊದಲ ಭಾರತೀಯ ಬ್ಯಾಟ್ಸ್‌ಮೆನ್ (ದೇಶಿ ಕ್ರಿಕೆಟ್‌ನಲ್ಲಿ)
- ಟೆಸ್ಟ್ ಪಂದ್ಯವೊಂದರ ಎರಡೂ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ ಮೊದಲ ಭಾರತೀಯ ಆಟಗಾರ.
- 3 ಸತತ ಟೆಸ್ಟ್ ಪಂದ್ಯಗಳಲ್ಲಿ ಶತಕ ಗಳಿಸಿದ ಮೊದಲ ಭಾರತೀಯ ಕ್ರಿಕೆಟಿಗ.
- ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಐವತ್ತು ಶತಕಗಳನ್ನು ಗಳಿಸಿದ ಮೊತ್ತಮೊದಲ ಭಾರತೀಯ.

15. 86 ಕೆಜಿ ವಿಭಾಗದ ಫ್ರೀಸ್ಟೈಲ್ ಕುಸ್ತಿಯ ಫೈನಲ್‌ಗೂ ಮುನ್ನ, ಮೊಣಕಾಲಿನ ಗಾಯದ ಕಾರಣ ನೀಡಿ ದೀಪಕ್ ಪಂದ್ಯದಿಂದ ಹಿಂದೆ ಸರಿದು ಬೆಳ್ಳಿಗೆ ತೃಪ್ತಿಪಟ್ಟರು:



16. ದಕ್ಷಿಣ ಕೊರಿಯಾದ ಮಾಜಿಬ್ಯಾಡ್ಮಿಂಟನ್ ಆಟಗಾರ್ತಿ ಹಾಗೂ ಪಿವಿ ಸಿಂಧುರ ವಿಶ್ವಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್‌ನ ಸ್ವರ್ಣಪದಕದ ಹಿಂದಿನ ಶಕ್ತಿಯಾಗಿದ್ದ ಬ್ಯಾಡ್ಮಿಂಟನ್ ಕೋಚ್ ಕಿಮ್ ಜಿ ಹ್ಯುನ್, ಭಾರತ ಬ್ಯಾಡ್ಮಿಂಟನ್ ತಂಡದ ಕೋಚ್ ಸ್ಥಾನಕ್ಕೆ ರಾಜೀನಾಮೆ :

17. ವಿಶ್ವಶ್ರೇಷ್ಠ ಫುಟ್‌ಬಾಲ್ ತಾರೆ ಅರ್ಜೆಂಟೀನಾದ ಲಿಯೋನೆಲ್ ಮೆಸ್ಸಿ ಹಾಗೂ ಅಮೆರಿಕ ತಂಡ ಮಹಿಳಾ ವಿಶ್ವಕಪ್ ಜಯಿಸಲು ಪ್ರಧಾನವಾಗಿ ಕಾರಣರಾಗಿದ್ದ ಮೇಗನ್ ಆನಾ ರಪಿನೋ ಕ್ರಮವಾಗಿ ಫಿಫಾ ವರ್ಷದ ಆಟಗಾರ ಹಾಗೂ ವರ್ಷದ ಆಟಗಾರ್ತಿ ಗೌರವಕ್ಕೆ ಭಾಜನರಾಗಿದ್ದಾರೆ.

18. ದೀಪಕ್ ಪೂನಿಯಾಗೆ ನಂ.1 ಪಟ್ಟ:

- ವಿಶ್ವ ಚಾಂಪಿಯನ್‌ಷಿಪ್ ರಜತ ವಿಜೇತ ಕುಸ್ತಿಪಟು ದೀಪಕ್ ಪೂನಿಯಾ, ಅಂತಾರಾಷ್ಟ್ರೀಯ ಕುಸ್ತಿ ಒಕ್ಕೂಟದ ಪರಿಷ್ಕೃತ ಬಾಕ್ಸಿಂಗ್‌ನ 86 ಕೆಜಿ ವಿಭಾಗದಲ್ಲಿ ನಂ. 1 ಪಟ್ಟಕ್ಕೇರಿದ್ದಾರೆ.

19. ಎಚ್.ಸಿ.ಎಗೆ ಮೊಹಮ್ಮದ್ ಅಜರುದ್ದೀನ್ ಅಧ್ಯಕ್ಷ:

- ಭಾರತ ತಂಡದ ಮಾಜಿ ನಾಯಕ ಮೊಹಮದ್ ಅಜರುದ್ದೀನ್ ಹೈದರಾಬಾದ್ ಕ್ರಿಕೆಟ್ ಸಂಸ್ಥೆಯ (ಎಚ್‌ಸಿಎ) ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.
- ಹಿಂದೆ ಮ್ಯಾಚ್ ಫಿಕ್ಸಿಂಗ್ ಆರೋಪದ ಮೇರೆಗೆ ಆಜೀವ ನಿಷೇಧಕ್ಕೊಳಗಾಗಿದ್ದ ಅಜರ್ ಇದೀಗ ಹೊಸ ಜವಾಬ್ದಾರಿಯೊಂದಿಗೆ ಕ್ರಿಕೆಟ್ ಚಟುವಟಿಕೆಗೆ ಮರಳಿದ್ದಾರೆ.

ಆರ್ಥಿಕ

1. ಬ್ಯಾಂಕಿಂಗ್, ಆಧಾರ್, ಪ್ಯಾನ್‌ಗೆ ಹೊಸ ನಿಯಮ:

ನಗದು ಹಿಂತೆಗೆತ

- ಬ್ಯಾಂಕ್‌ಗಳಿಂದ ವಾರ್ಷಿಕ 1 ಕೋಟಿ ರೂ. ಹೆಚ್ಚಿನ ನಗದು ಮೊತ್ತವನ್ನು ಹಿಂಪಡೆದರೆ ಶೇ.2ರಷ್ಟು ಟಿಡಿಎಸ್ ಮೇಲ್ತರಿಗೆ ಅನ್ವಯವಾಗಲಿದೆ.
- ಸಹಕಾರಿ ಬ್ಯಾಂಕ್ ಅಥವಾ ಅಂಚೆ ಇಲಾಖೆಯಲ್ಲಿ ತೆರೆದ ಖಾತೆಗಳಿಗೂ ಇದು ಅನ್ವಯ, ದೊಡ್ಡ ಮೊತ್ತದ ನಗದು ಹಿಂತೆಗೆತವನ್ನು ನಿರುತ್ತೇಜನ ಗೊಳಿಸಲು ಹಾಗೂ ನಗದು ಬಳಕೆಯನ್ನು ಕಡಿಮೆ ಮಾಡಲು ಸರಕಾರ ಈ ನಿರ್ಧಾರ ಕೈಗೊಂಡಿದೆ.
- ಕಪ್ಪು ಹಣ ನಿಯಂತ್ರಣದ ನಿಟ್ಟಿನಲ್ಲಿ ಇದು ಗಮನಾರ್ಹ.

ಎಸ್ಬಿಐ ಸಾಲ, ರೆಪೊ ದರ ಅಧಾರಿತ:

- ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗೃಹ ಮತ್ತು ವಾಹನ ಸಾಲ ಆರ್‌ಬಿಐನ ರೆಪೊ ದರವನ್ನು ಅಧರಿಸಿದ ಬಡ್ಡಿದರದಲ್ಲಿ ವಿತರಣೆಯಾಗಲಿವೆ.
- ಪರಿಣಾಮ ಗೃಹ ಮತ್ತು ಆಟೋ ಸಾಲ ಖರೀದಿದಾರರಿಗೆ ಬಡ್ಡಿ ದರ ಇಳಿಕೆಯ ಅನುಕೂಲ ಸಿಗಲಿದೆ.

ಸಣ್ಣ ಮೊತ್ತದ ವರ್ಗಾವಣೆ ವಿವರ:

- ಇದುವರೆಗೆ ಬ್ಯಾಂಕ್‌ಗಳು 50,000 ರೂ.ಗಿಂತ ಹೆಚ್ಚಿನ ಮೊತ್ತದ ಬ್ಯಾಂಕ್ ಹಣಕಾಸು ವರ್ಗಾವಣೆಗಳ ವಿವರಗಳನ್ನು ಅಗತ್ಯ ಇದ್ದರೆ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸುತ್ತಿದ್ದವು. ಆದರೆ ಸೆ.1ರಿಂದ ಈ ಮಿತಿಯನ್ನು ತೆರವುಗೊಳಿಸಲಾಗಿದ್ದು, ಯಾವುದೇ ಸಣ್ಣ ಮೊತ್ತದ ವರ್ಗಾವಣೆಯ ವಿವರಗಳನ್ನೂ ಬ್ಯಾಂಕ್‌ಗಳು ಇಲಾಖೆಗೆ ಒದಗಿಸಬಹುದು.

ವಿಮೆಯಲ್ಲಿ ಟಿಡಿಎಸ್



- ನಿಮ್ಮ ಜೀವ ವಿಮೆಯ ಮೆಚ್ಯೂರಿಟಿ ಪ್ರಕ್ರಿಯೆಯು ತೆರಿಗೆಗೆ ಅರ್ಹ ಎಂದಿದ್ದರೆ, ಶೇ.5ರ ದರದಲ್ಲಿ ಟಿಡಿಎಸ್ ಅನ್ವಯವಾಗಲಿದೆ.

ಕಿಸಾನ್ ಕಾರ್ಡ್ ಶೀಘ್ರ:

- ಸೆಪ್ಟೆಂಬರ್ 1–2019ರಿಂದ ಬ್ಯಾಂಕ್‌ಗಳು ಗರಿಷ್ಠ 15 ದಿನಗಳೊಳಗೆ ಕಿಸಾನ್ ಕಾರ್ಡ್ ವಿತರಣೆ ಮಾಡಲಿದೆ. ಕೇಂದ್ರ ಸರಕಾರ ಈ ಬಗ್ಗೆ ಸೂಚಿಸಿದೆ.

ಪ್ಯಾನ್–ಆಧಾರ್ ಲಿಂಕ್ ಮಾಡಿ



- ಹೀಗಿದ್ದರೂ ಮಾನ್ಯತೆಯನ್ನು ಕಳೆದುಕೊಳ್ಳುವುದಿಲ್ಲ. ಆದರೆ ಆಧಾರ್‌ಗೆ ಲಿಂಕ್ ಮಾಡಿದರೆ ಮಾತ್ರ ಸಕ್ರಿಯ ಎನಿಸಲಿದ್ದು, ಬಳಸಬಹುದು.

ಮನೆ ಖರೀದಿ:

- ಮನೆ/ ಫ್ಲ್ಯಾಟ್ ಖರೀದಿಸುವ ವೇಳೆ ಕ್ಲಬ್ ಸದಸ್ಯತ್ವ, ಕಾರು ಪಾರ್ಕಿಂಗ್ ಇತ್ಯಾದಿ ಸೌಲಭ್ಯಗಳನ್ನು ಪಡೆದರೆ, ಟಿಡಿಎಸ್ ಮೊತ್ತದಲ್ಲಿ ಹೆಚ್ಚಳವಾಗಲಿದೆ.

ಮನೆಯ ನವೀಕರಣ

- ಮನೆಯ ನವೀಕರಣ ಅಥವಾ ವಿವಾಹ ಕಾರ್ಯಕ್ರಮ ಇತ್ಯಾದಿಗಳಲ್ಲಿ ವೆಚ್ಚ 50 ಲಕ್ಷ ರೂ. ದಾಟಿದರೆ ಶೇ.5ರಷ್ಟು ಟಿಡಿಎಸ್ ಅನ್ವಯವಾಗಲಿದೆ.

2. ವಿಶ್ವದ ಟಾಪ್ 10 ಬ್ಯಾಂಕ್‌ಗಳು:

1. ಇಂಡಸ್ಟ್ರೀಯಲ್ ಆ್ಯಂಡ್ ಕಮರ್ಷಿಯಲ್ ಬ್ಯಾಂಕ್ ಆಫ್ ಚೀನಾ
2. ಚೀನಾ ಕನ್ಸ್‌ಟ್ರಕ್ಷನ್ ಬ್ಯಾಂಕ್ ಕಾರ್ಪೊರೇಷನ್
3. ಅಗ್ರಿಕಲ್ಚರಲ್ ಬ್ಯಾಂಕ್ ಆಫ್ ಚೀನಾ
4. ಮಿತ್ಸುಬಿಷಿ ಯುಎಫ್ ಜೆ ಫೈನಾನ್ಸಿಯಲ್ ಗ್ರೂಪ್
5. ಬ್ಯಾಂಕ್ ಆಫ್ ಚೀನಾ
6. ಜಿಪಿ ಮಾರ್ಗೊನ್ ಚೇಸ್
7. ಎಚ್‌ಎಸ್‌ಬಿಸಿ ಹೋಲ್ಡಿಂಗ್ಸ್
8. ಬಿಎಸ್ಪಿ ಪರಿಬಾಸ್
9. ಬ್ಯಾಂಕ್ ಆಫ್ ಅಮೆರಿಕ
10. ವೆಲ್ಸ್ ಫಾರ್ಗೋ

3. ಜಾರಿ ನಿರ್ದೇಶನಾಲಯ :

- ಆಕ್ರಮ ಹಣ ವರ್ಗಾವಣೆ ಸಂಬಂಧ ಜಾರಿ ನಿರ್ದೇಶನಾಲಯದ (ಇ.ಡಿ) 'ಬಂಧನಕ್ಕೆ ಒಳಗಾಗಿರುವ ಮಾಜಿ ಸಚಿವ ಡಿ.ಕೆ.ಶಿವಕುಮಾರ್ ಅವರ ಜಾಮೀನು ಅರ್ಜಿಯನ್ನು ವಿಶೇಷ ನ್ಯಾಯಾಲಯ ತಿರಸ್ಕರಿಸಿದ್ದು, ಸೆಪ್ಟೆಂಬರ್ 13ರವರೆಗೆ ಇಡಿ ವಶಕ್ಕೆ ನೀಡಲಾಗಿದೆ.

ಏನಿದು ಇಡಿ?

- ಭಾರತದಲ್ಲಿ ಆರ್ಥಿಕ ಅಪರಾಧಗಳಿಗೆ ಸಂಬಂಧಿಸಿ ಕಾನೂನು ಕ್ರಮಗಳನ್ನು ಕೈಗೊಳ್ಳುವ, ಹೋರಾಡುವ ಪ್ರಬಲ ತನಿಖಾ ಸಂಸ್ಥೆಯೇ ಜಾರಿ ನಿರ್ದೇಶನಾಲಯ, (Directorate of Enforcement) ಕಂದಾಯ, ಹಣಕಾಸು ಇಲಾಖೆಯ ವ್ಯಾಪ್ತಿಯಲ್ಲಿದೆ.
- 1956ರಲ್ಲಿ ಸ್ಥಾಪನೆಯಾಗಿರುವ ಇ.ಡಿಗೆ ಕಪ್ಪು ಹಣದ ವಿರುದ್ಧದ ಸರಕಾರದ ಹೋರಾಟದಲ್ಲಿ ಮಹತ್ವದ ಜವಾಬ್ದಾರಿ ಇದೆ.
- ಕೇವಲ ರಾಜಕಾರಣಿಗಳು ಮಾತ್ರವಲ್ಲದೆ, ಅನೇಕ ಉದ್ಯಮಿಗಳೂ, ಇತರರೂ ಇ.ಡಿ ತನಿಖೆ ಎದುರಿಸುತ್ತಿದ್ದಾರೆ. ದಿಲ್ಲಿಯಲ್ಲಿ ಪ್ರಧಾನ ಕಚೇರಿ ಹೊಂದಿದೆ.
- ಸಂಜಯ್ ಕುಮಾರ್ ಮಿಶ್ರಾ ಈಗಿನ ಮುಖ್ಯಸ್ಥ, ಮುಂಬಯಿ, ಚೆನ್ನೈ, ಚಂಡೀಗಢ, ಕೋಲ್ಕತ್ತಾ, ದಿಲ್ಲಿಯಲ್ಲಿ ಪ್ರಾದೇಶಿಕ ಕಚೇರಿಗಳು ಇವೆ.
- ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳಲ್ಲಿ ವಲಯವಾರು ಕಚೇರಿಗಳಿವೆ.

ಉದ್ದೇಶವೇನು?

- ಮುಖ್ಯವಾಗಿ ಎರಡು ಕಾಯಿದೆಗಳ ಅನುಷ್ಠಾನ ಇ.ಡಿಯ ಉದ್ದೇಶ. ಅವೆಂದರೆ ವಿದೇಶಿ ವಿನಿಮಯ ನಿರ್ವಹಣೆ ಕಾಯಿದೆ 1999 (ಎಫ್‌ಇಎಂಎ) ಮತ್ತು ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆ (ಪಿಎಂಎಲ್‌ಎ)

ಇ.ಡಿಯ ಬಲವೇನು?

- ಕಪ್ಪು ಹಣದ ಚಲಾವಣೆ ತಡೆಯುವ ನಿಟ್ಟಿನಲ್ಲಿ ವಿಶೇಷ ಅಧಿಕಾರದ ಬಲ.
- ಆದಾಯ ತೆರಿಗೆ ಇಲಾಖೆಗೆ ತೆರಿಗೆ ವಂಚನೆ, ಇತ್ಯಾದಿ ಕೇಸ್‌ಗಳಲ್ಲಿ ಆರೋಪಿಯನ್ನು ಬಂಧಿಸುವ ಅಧಿಕಾರ ಇಲ್ಲ. ಆದರೆ ಇ.ಡಿಗೆ ಎರಡು ಪ್ರಮುಖ ಕಾಯಿದೆಗಳ ಅಡಿಯಲ್ಲಿ ಆರೋಪಿಯ ವಿರುದ್ಧ ಎಫ್‌ಐಆರ್ ದಾಖಲಿಸಿ ಬಂಧಿಸುವ ಅಧಿಕಾರ ಇದೆ.
- ತೆರಿಗೆ ಇಲಾಖೆಯಲ್ಲಿ ತೆರಿಗೆ ಅಧಿಕಾರಿಗಳು ಮಾತ್ರ ಕಾರ್ಯಾಚರಣೆಯಲ್ಲಿ ಭಾಗವಹಿಸಿದರೆ, ಇ.ಡಿಯಲ್ಲಿ ಕಂದಾಯ, ಹಣಕಾಸು ಇಲಾಖೆಯ ಅಧಿಕಾರಿಗಳೂ ಇರುತ್ತಾರೆ.
- ಇ.ಡಿಯ ಸಹಾಯಕ ನಿರ್ದೇಶಕರಿಗಿಂತ ಮೇಲಿನ ಅಧಿಕಾರಿಗಳಿಗೆ ಉನ್ನತ ಮಟ್ಟದ ಅಧಿಕಾರ ವ್ಯಾಪ್ತಿಯೂ ಇದೆ.
- ಆರೋಪಿಯ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಇದೆ.
- ಇ.ಡಿ ತನ್ನದೇ ವಿಶೇಷ ನ್ಯಾಯಾಲಯವನ್ನು ಹೊಂದಿದೆ.

ದೌರ್ಬಲ್ಯವೇನು?

- ಸಿಬ್ಬಂದಿ, ಮೂಲ ಸೌಕರ್ಯ ಕೊರತೆಯ ಪರಿಣಾಮ ಹೈ ಪ್ರೊಫೈಲ್ ಕೇಸ್‌ಗಳಿದ್ದರೂ, ತನಿಖೆ, ವಿಚಾರಣೆಗಳಲ್ಲಿ ಭಾರಿ ವಿಳಂಬ.
- ಕಳೆದ 2016–17ರಿಂದ 2017–18ರ ಅವಧಿಯಲ್ಲಿ 570 ಕೇಸ್‌ಗಳನ್ನು ಜಾರಿ ನಿರ್ದೇಶನಾಲಯ ಪಿಎಂಎಲ್‌ಎ ಅಡಿಯಲ್ಲಿ ದಾಖಲಿಸಿಕೊಂಡಿದೆ. ಹೀಗಿದ್ದರೂ, ಬೆರಳೆಣಿಕೆಯ ಪ್ರಕರಣಗಳಲ್ಲಿ ಮಾತ್ರ ತೀರ್ಪು ಪ್ರಕಟವಾಗಿದೆ.
- ಸಾವಿರಾರು ಪ್ರಕರಣಗಳು ಇತ್ಯರ್ಥವಾಗದೆ ಬಾಕಿ ಉಳಿದಿವೆ.

ಕರ್ನಾಟಕದಲ್ಲಿ ಇ.ಡಿ ಕೇಸ್

- ಐಎಂಎ ಹಗರಣದಲ್ಲಿ 209 ಕೋಟಿ ರೂ. ಆಸ್ತಿ
- ಡಿಕೆಶಿ ಪ್ರಕರಣ
- ಮಾಜಿ ಸಚಿವ ಜನಾರ್ಧನ ರೆಡ್ಡಿ ವಿರುದ್ಧದ ತನಿಖೆ
- ಪಿಡಬ್ಲ್ಯುಡಿ ಎಂಜಿನಿಯರ್ ಎಲ್ ರಘು ವಿರುದ್ಧ ಕೇಸ್

4. 2008ಕ್ಕಿಂತಲೂ ತೀವ್ರ ಆರ್ಥಿಕ ಹಿಂಜರಿತ?

- ದಶಕದ ಬಳಿಕ ಈಗ ಮತ್ತೊಮ್ಮೆ ಮಂದಗತಿ ತಲೆದೋರಿದೆ. ಆದರೆ ಈ ಸಲದ ಬಿಕ್ಕಟ್ಟು ಕಳೆದ ಬಾರಿಗಿಂತಲೂ ಗಂಭೀರ ಮಟ್ಟದಲ್ಲಿದೆ ಎನ್ನುತಾರೆ ಆರ್ಥಿಕ ತಜ್ಞರು.

ಹಳೆಯ ಲೆಕ್ಕಾಚಾರದಲ್ಲಿ ಶೇ.3.5ಕ್ಕೆ ಕುಸಿತ!

- ಸರಕಾರ 2018ರಲ್ಲಿ ಜಿಡಿಪಿ ಲೆಕ್ಕಾಚಾರದ ಪದ್ಧತಿಯನ್ನು ಬದಲಿಸಿತ್ತು. ಅದರಂತೆ 2019ರ ಏಪ್ರಿಲ್–ಜೂನ್ ಅವಧಿಯಲ್ಲಿ ಜಿಡಿಪಿ ಶೇ.5ಕ್ಕೆ ಇಳಿದಿದೆ.
- ಆದರೆ ಹಳೆಯ ಲೆಕ್ಕಾಚಾರದ ಪ್ರಕಾರ ಶೇ 3.5ಕ್ಕೆ ಕುಸಿದಿದೆ!
- ದಶಕದ ಹಿಂದಿನ ಜನಸಂಖ್ಯೆಗೂ ಈಗಿನದ್ದಕ್ಕೂ ವ್ಯತ್ಯಾಸವಿದೆ. ಇದನ್ನೂ ಗಮನಿಸಿದರೆ, ಜಿಡಿಪಿ ಮತ್ತಷ್ಟು ಹಿಂಜರಿತಕ್ಕೀಡಾಗಿದ್ದು, ಕಳವಳ ಮೂಡಿಸಿದೆ.

ದೇಶಿ ಆರ್ಥಿಕತೆಗೆ ಹೊಡೆತ:

- ಈ ಸಲದ ಆರ್ಥಿಕ ಹಿಂಜರಿತ ದೇಶಿ ಆರ್ಥಿಕತೆಯ ಸಮಸ್ಯೆಗಳ ಸುತ್ತಮುತ್ತವೇ ಕೇಂದ್ರೀಕೃತವಾಗಿರುವುದು ಭೀತಿಗೆ ಕಾರಣವಾಗಿದೆ.
- ಬ್ಯಾಂಕಿಂಗ್ ವಲಯದಿಂದ ಆರಂಭಿಸಿ ಆಟೊಮೊಬೈಲ್, ರಿಯಾಲ್ಟಿ, ಎಫ್‌ಎಂಸಿಜಿ, ಸಣ್ಣ ಉದ್ದಿಮೆಗಳು ಇತ್ಯಾದಿ ಹಲವಾರು ಇತರ ಕ್ಷೇತ್ರಗಳಿಗೂ ಕ್ಯಾನ್ಸರ್‌ನಂತೆ ಹಿಂಜರಿತ ಹರಡಿದೆ.
- ಭ್ಯಾಂಕೇತರ ಹಣಕಾಸು ಸಂಸ್ಥೆಗಳು(ಎನ್‌ಬಿಎಫ್‌ಸಿ) ಭಾರಿ ಕುಸಿತಕ್ಕೀಡಾಗಿದೆ.ಇದೇ ವಲಯ ಭಾರತದಲ್ಲಿ ಸಣ್ಣಪುಟ್ಟ ವ್ಯಾಪಾರ,ಬಿಸಿನೆಸ್, ಸಾಂಪ್ರದಾಯಿಕ ಬ್ಯಾಂಕ್ ಸಾಲ. ಸಿಗದವರಿಗೆ ಹಣಕಾಸು ಸೇವೆ ಒದಗಿಸುತ್ತಿತ್ತು.

ಕ್ಷಿಪ್ರ ಸ್ಪಂದನೆಯ ಅಭಾವ?

- 2008ರಲ್ಲಿ ಆರ್ಥಿಕ ಹಿಂಜರಿತ ಸಂಭವಿಸಿದ ಬೆನ್ನಲ್ಲೇ ಸರಕಾರ ಆರ್ಥಿಕ ನೆರವಿನ ಪ್ಯಾಕೇಜ್ ಮತ್ತು ಇತರ ಕ್ರಮಗಳನ್ನು ಜಾರಿಗೊಳಿಸಿತ್ತು.
- ಆದರೆ ಕಳೆದ 5 ತ್ರೈಮಾಸಿಕದಿಂದ ಜಿಡಿಪಿ ಮಂದಗತಿಗೆ ತಿರುಗಿದ್ದರೂ, ಆಪ್ತ ಪರಿಹಾರೋಪಾಯ ಕ್ರಮಗಳ ಕೊರತೆ ಉಂಟಾಗಿದೆ.
- ಸರಕಾರ ಇದುವರೆಗೆ ಕೆಲವು ವಲಯಾವಾರು ಪರಿಹಾರೋಪಾಯ ಕ್ರಮಗಳನ್ನು ಕೈಗೊಂಡಿದ್ದರೂ, ಗಣನೀಯ ಪರಿಣಾಮ ಬೀರಿಲ್ಲ ಎನ್ನುತ್ತಾರೆ ಆರ್ಥಿಕ ತಜ್ಞರು.

ಕಂಪನಿಗಳ ಲಾಭ ಇಳಿಕೆ

- ದೇಶದಲ್ಲಿ ಕಾರ್ಪೊರೇಟ್ ವಲಯದ ನಿವ್ವಳ ಆದಾಯ ಅಥವಾ ಲಾಭಾಂಶ ಮತ್ತು ಜಿಡಿಪಿಯ ಅನುಪಾತ ಕಳೆದ 15 ವರ್ಷಗಳಲ್ಲಿಯೇ ಕನಿಷ್ಠ ಮಟ್ಟಕ್ಕೆ ಕುಸಿದಿದೆ.
- 2008–18ರ ಅವಧಿಯಲ್ಲಿ ಅದು ಜಿಡಿಪಿಯ ಶೇ.8ರಿಂದ ಶೇ.3ಕ್ಕೆ ಜಾರಿದೆ.
- ಅನೇಕ ಕಂಪನಿಗಳು ತಮ್ಮ ಹೂಡಿಕೆಯನ್ನು ಇದೇ ಕಾರಣಕ್ಕೆ ಮುಂದೂಡುತ್ತಿವೆ. ಲಾಭ ಇಲ್ಲದಿದ್ದರೆ ಯಾರು ಹೂಡಿಕೆ ಮಾಡುತ್ತಾರೆ.

ಬಿಕ್ಕಟ್ಟಿನ ಶಮನ ಹೇಗೆ?

- ಯಾವುದೇ ಸುಧಾರಣೆಯ ಕ್ರಮಗಳ ಜಾರಿಯಲ್ಲಿ ಆರಂಭಿಕ ಹಂತದಲ್ಲಿ ನೋವು–ನಷ್ಟಗಳು ಉಂಟಾಗುವುದು ಸಹಜ.
- ನೋವಿನ ಬೆಲೆಯನ್ನು ಕೊಡದೆಯೇ ಆರ್ಥಿಕ ಸುಧಾರಣೆ ಕ್ರಮಗಳು ಯಶಸ್ವಿಯಾಗಿ ಅನುಷ್ಠಾನವಾಗುವುದಿಲ್ಲ. ಡಿಮಾನಿಟೈಸೇಶನ್, ಜಿಎಸ್‌ಟಿ ಇತ್ತೀಚಿನ ಬ್ಯಾಂಕ್‌ಗಳ ವಿಲೀನ ಇತ್ಯಾದಿಗಳು ಇದಕ್ಕೆ ಉದಾಹರಣೆ.
- ಭಾರತದಲ್ಲೀಗ ರಚನಾತ್ಮಕ ಸುಧಾರಣೆಗಳನ್ನು, ಆರ್ಥಿಕ ಬೆಳವಣಿಗೆಗೆ ಧಕ್ಕೆಯಾಗದಂತೆ, ಜನತೆಗೆ, ಹೂಡಿಕೆದಾರರಿಗೆ, ನಾನಾ ವಲಯಗಳಿಗೆ ಅದರ ನೋವು ಗೊತ್ತಾಗದಂತೆ, ಹಾನಿ ಸಾಧ್ಯವಿರುವಷ್ಟೂ ಕಡಿಮೆಯಾಗುವಂತೆ ಸಮತೋಲನ ಕಾಯ್ದುಕೊಂಡು ಜಾರಿಗೊಳಿಸಬೇಕು.
- ಉದ್ಯೋಗ ಸೃಷ್ಟಿ ಮತ್ತು ಆದಾಯ ಹೆಚ್ಚಿಸುವ ಬಗ್ಗೆ ಸರಕಾರ ನಿರ್ಲಕ್ಷ್ಯ ವಹಿಸಿರುವುದೂ ಸಮಸ್ಯೆಯನ್ನು ಬಿಗಡಾಯಿಸಿದೆ.

5. ಗೋಲ್ಡ್ ಬಾಂಡ್:

- ಇದು ಒಂದು ರೀತಿಯಲ್ಲಿ ಚಿನ್ನ ಖರೀದಿಸುವ ಯೋಜನೆಯೇ ಆಗಿದೆ. ಆದರೆ ಭೌತಿಕ ಚಿನ್ನದ ಬದಲು ಬಾಂಡ್ ರೂಪದಲ್ಲಿ ಸರಕಾರದಿಂದ ಖರೀದಿಸಬೇಕು.
- ಇದಕ್ಕೆ ವಾರ್ಷಿಕ ಬಡ್ಡಿಯೂ ಉಂಟು ಭೌತಿಕ ಚಿನ್ನವಾದರೆ ಸವೆಯುವ ಅಥವಾ ಕಳ್ಳತನದ ಭಯ ಇರುತ್ತದೆ. ಸುರಕ್ಷಿತತೆ ಇಲ್ಲಿದೆ. ಅಲ್ಲದೇ, ಚಿನ್ನದ ಶುದ್ಧತೆ ಕುರಿತು ಅನುಮಾನಗಳೂ ಇರುವುದಿಲ್ಲ, ಎಸ್‌ಜಿಬಿಯನ್ನು (ಚಿನ್ನದ ಬಾಂಡ್ ಯೋಜನೆ) ಡೀಮ್ಯಾಟ್ ರೂಪಕ್ಕೂ ಪರಿವರ್ತಿಸಬಹುದು. ಅಲ್ಲದೇ ಸಾಲ ಸೌಲಭ್ಯವೂ ಇದೆ.
- 8 ವರ್ಷಗಳ ನಂತರ ಬಾಂಡ್ ಹಣವನ್ನು ವಾಪಸ್ ಮಾಡಲಾಗುತ್ತದೆ. 5,6, 7ನೇ ವರ್ಷದಲ್ಲೂ ಅವಧಿಗೆ ಮುನ್ನವೇ ಹಣ ವಾಪಸ್‌ಗೂ ಅವಕಾಶವಿದೆ.

ಎಲ್ಲಿ ಖರೀದಿಸಬೇಕು?

- ಅಂಚೆ ಕಚೇರಿಗಳು, ಬ್ಯಾಂಕ್‌ಗಳು, ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ (ಎಸ್‌ಎಚ್ ಸಿಐಎಲ್), ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ(ಎನ್‌ಎಸ್‌ಇ) ಮತ್ತು ಬಾಂಬೆ ಷೇರು ವಿನಿಮಯ ಕೇಂದ್ರದಂಥ ಮಾನ್ಯತೆ ಪಡೆದ ಷೇರು ವಿನಿಮಯ ಕೇಂದ್ರಗಳಲ್ಲಿ ಚಿನ್ನದ ಬಾಂಡ್ ಗಳನ್ನು ಖರೀದಿಸಬಹುದು.

ದರ ಎಷ್ಟು?

- ಭಾರತೀಯ ಚಿನ್ನ ಮತ್ತು ಆಭರಣ ಸಂಘಟನೆಯು ಪ್ರಕಟಿಸುವ ದರವನ್ನು ಆಧರಿಸಿ ಚಿನ್ನದ ಬಾಂಡ್ ಗಳ ದರವನ್ನು ನಿರ್ಧರಿಸಲಾಗುತ್ತದೆ. ಬಾಂಡ್ ಖರೀದಿಸುವ ಅವಧಿಯಲ್ಲಿ ಮಾರುಕಟ್ಟೆಯಲ್ಲಿ ಗ್ರಾಂ ಚಿನ್ನದ ದರ ಎಷ್ಟಿರುತ್ತದೆಯೋ ಅದಕ್ಕಿಂತ 50 ರೂ. ಕಡಿಮೆಯನ್ನು ನಿಗದಿ ಮಾಡಲಾಗುತ್ತದೆ.
- ಚಿನ್ನದ ಬಾಂಡ್ ಗಳಿಗೆ ವಾರ್ಷಿಕ ಶೇ.5ರಷ್ಟು ಬಡ್ಡಿ ನೀಡಲಾಗುತ್ತದೆ. ಬಡ್ಡಿಯನ್ನು ಪ್ರತಿ 6 ತಿಂಗಳಿಗೊಮ್ಮೆ ನೀಡಲಾಗುತ್ತದೆ.

ಬಾಂಡ್ ಅವಧಿ ಎಷ್ಟು?

- ಸಾಮಾನ್ಯವಾಗಿ ಬಾಂಡ್ ಅವಧಿ 8 ವರ್ಷಗಳು. ಜತೆಗೆ 5ನೇ ವರ್ಷದಲ್ಲಿ ಯೋಜನೆಯಿಂದ ಹೊರಬರುವ ಅವಕಾಶವೂ ಇರುತ್ತದೆ.

ಕನಿಷ್ಠ ಹೂಡಿಕೆ ಎಷ್ಟು?

- ನೀವು ಕನಿಷ್ಠ ಒಂದು ಗ್ರಾಮ್ ಚಿನ್ನವನ್ನು ಬಾಂಡ್ ರೂಪದಲ್ಲಿ ಖರೀದಿಸಬಹುದು. ಅದರ ಮೇಲೆ ಎಷ್ಟು ಬೇಕಾದರೂ, ಆದರೆ ಹಣಕಾಸು ವರ್ಷದಲ್ಲಿ ವ್ಯಕ್ತಿಯೊಬ್ಬ 500 ಗ್ರಾಂ ತನಕ ಖರೀದಿ ಮಾಡಬಹುದಾಗಿದೆ.

ಹಣ ಪಾವತಿ ಹೇಗೆ?

- ಬಾಂಡ್ ಖರೀದಿ ಸಂದರ್ಭದಲ್ಲಿ ಗರಿಷ್ಠ 20 ಸಾವಿರ ರೂ. ವರೆಗಿನ ಪಾವತಿಯನ್ನು ನಗದು ರೂಪದಲ್ಲಿ ಮಾಡಲು ಅವಕಾಶವಿದೆ. ಇಲ್ಲವೇ ಡಿಮಾಂಡ್ ಡ್ರಾಫ್ಟ್ ಅಥವಾ ಚೆಕ್ ಇಲ್ಲವೇ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಸೌಲಭ್ಯದ ಮೂಲಕ ಹಣ ಪಾವತಿಸಬಹುದಾಗಿದೆ.

ಯಾರು ಖರೀದಿಸಬಹುದು?

- ತಾಯಿ–ಮಗ, ಗಂಡ–ಹೆಂಡತಿ ಹೀಗೆ ಜಂಟಿಯಾಗಿಯೂ ಬಾಂಡ್‌ಗಳನ್ನು ಖರೀದಿಸಬಹುದು. ಹೂಡಿಕೆಯ ಮಿತಿ ಗರಿಷ್ಠ 500 ಗ್ರಾಮ್ ಇರಬೇಕು ಎನ್ನುವ ನಿಯಮವು ಮೊದಲ ಅರ್ಜಿದಾರನಿಗೆ ಅನ್ವಯವಾಗುತ್ತದೆ.
- ಅಂದಹಾಗೇ, ಭಾರತೀಯರಿಗಷ್ಟೆ ಈ ಯೋಜನೆಯನ್ನು ಸೀಮಿತಗೊಳಿಸಲಾಗಿದೆ. ವ್ಯಕ್ತಿಗಳು ಮಾತ್ರವಲ್ಲದೇ ಹಿಂದೂ ಅವಿಭಜಿತ ಕುಟುಂಬಗಳು (ಎಚ್‌ಯುಎಫ್),–ಟ್ರಸ್ಟಗಳು, ವಿಶ್ವವಿದ್ಯಾಲಯಗಳು, ಚಾರಿಟಬಲ್ ಸಂಸ್ಥೆಗಳು ಗೋಲ್ಡ್ ಬಾಂಡ್ ಹಳನ್ನು ಖರೀದಿಸಲು ಅವಕಾಶವಿದೆ.

6. ಯುವಜನರ ಕಣ್ಮಣಿ ಜಾಕ್ ಮಾ ರಾಜೀನಾಮೆ:

- ವಿಶ್ವದ ಪ್ರಖ್ಯಾತ ಇ– ಕಾಮರ್ಸ್ ಸಂಸ್ಥೆ ಅಲಿಬಾಬಾ ಗ್ರೂಪ್ ಹೋಲ್ಡಿಂಗ್ ಕಂಪನಿಯ ಸಹ ಸಂಸ್ಥಾಪಕ ಹಾಗೂ ಕಾರ್ಯನಿರ್ವಾಹಕ ಅಧ್ಯಕ್ಷ ಜಾಕ್ ಮಾ ರಾಜೀನಾಮೆ ನೀಡಿದ್ದಾರೆ. 55ನೇ ವಯಸ್ಸಿಗೆ ಪದತ್ಯಾಗ ಮಾಡುವುದಾಗಿ ಅವರು ಈ ಹಿಂದೆಯೇ ಘೋಷಿಸಿದ್ದರು.
- ಡ್ಯಾನಿಯಲ್ ಜಾಂಗ್ ಅಲಿಬಾಬಾ ಕಂಪನಿಯ ಸಿಇಒ ಆಗಿದ್ದು, ಜಾಕ್ ಮಾ ಸಲಹೆಗಳ ಮೂಲಕ ಕಂಪನಿ ಮುಂದುವರೆಸುವುದಾಗಿ ಭರವಸೆ ಹೊಂದಿದ್ದಾರೆ. ರಾಜೀನಾಮೆ ನೀಡಿದರೂ ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕನಾಗಿ ಮುಂದುವರೆಯುವುದಾಗಿ ಅವರು ಜಾಕ್ ಮಾ ತಿಳಿಸಿದ್ದಾರೆ.
- 17 ಗೆಳೆಯರ ಜತೆಗೂಡಿ 1999 ಫೆ.21ರಂದು ಪುಟ್ಟ ಕಟ್ಟಡವೊಂದರಲ್ಲಿ ಅಲಿಬಾಬಾ ಕಂಪನಿ ಹುಟ್ಟುಹಾಕಿದ್ದರು. ಪ್ರಾರಂಭದಲ್ಲಿ ಕಂಪನಿ ಅಷ್ಟೇನೂ ಬೆಳಕಿಗೆ ಬರಲಿಲ್ಲವಾದರೂ, ಬಳಿಕ ಜಾಕ್ ಮಾ ಪರಿಶ್ರಮದಿಂದ ಇಂದು ಕಂಪನಿ 460 ಬಿಲಿಯನ್ ಡಾಲರ್ (33 ಲಕ್ಷ ಕೋಟಿ) ವಹಿವಾಟು ನಡೆಸುತ್ತಿದ್ದು, ಸುಮಾರು 1 ಲಕ್ಷ ಉದ್ಯೋಗಿಗಳನ್ನು ಹೊಂದಿದೆ.

- ಏಷ್ಯಾದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ನಂತರ 2ನೇ ಶ್ರೀಮಂತ ವ್ಯಕ್ತಿಯ ಸ್ಥಾನವನ್ನು ಜಾಕ್ ಮಾ ಪಡೆದಿದ್ದಾರೆ.

7. 'ಕಿಸಾನ್ ಮಾನ್ ಧನ್' ಯೋಜನೆಗೆ ಪ್ರಾಧಾನ ಮಂತ್ರಿ ನರೇಂದ್ರ ಮೋದಿ ಜಾರ್ಖಂಡ್‌ನಲ್ಲಿ ಚಾಲನೆ ನೀಡಿದರು:

- ಈ ಯೋಜನೆಯಲ್ಲಿ ನೋಂದಾಯಿಸಿಕೊಂಡ 60 ವರ್ಷ ಪೂರೈಸಿದ ಸಣ್ಣ ಮತ್ತು ಮಧ್ಯಮ ರೈತರಿಗೆ ಪ್ರತಿ ತಿಂಗಳು 3000 ರೂಪಾಯಿ ಪಿಂಚಣಿ ಸಿಗಲಿದೆ.
- ಈ ಯೋಜನೆಗೆ ನೋಂದಾಯಿಸಿಕೊಳ್ಳುವ ರೈತ 18ರಿಂದ 40 ವರ್ಷ ವಯೋಮಿತಿಯೊಳಗಿರಬೇಕು.
- ಈ ಯೋಜನೆ ದೇಶದ ಪ್ರತಿ ರಾಜ್ಯದಲ್ಲಿ ಜಾರಿಯಾಗಲಿದ್ದು, 2 ಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ರೈತರು ಫಲಾನುಭವಿಗಳಾಗಬಹುದು.
- ಜಮ್ಮು–ಕಾಶ್ಮೀರದಲ್ಲೂ ಕಿಸಾನ್ ಮಾನ್ ಧನ್ ಯೋಜನೆ ಜಾರಿ ಗೊಳ್ಳಲಿದೆ.

8. ಅತಿಹೆಚ್ಚು ಅಪಘಾತ ನಡೆಯುವ ಟಾಪ್ 10 ರಾಜ್ಯಗಳು: (ಅಂಕಿಅಂಶ =2017)

- ತಮಿಳುನಾಡು
- ಮಧ್ಯಪ್ರದೇಶ
- ಕರ್ನಾಟಕ
- ಉತ್ತರಪ್ರದೇಶ
- ಕೇರಳ
- ಮಹಾರಾಷ್ಟ್ರ
- ಆಂಧ್ರಪ್ರದೇಶ
- ತೆಲಂಗಾಣ
- ರಾಜಸ್ಥಾನ
- ಛತ್ತೀಸ್‌ಗಡ

9. ಭಾರತೀಯ ವೃದ್ಧಿ ದರ ನೀರಿಕ್ಷೆಗಿಂತ ದುರ್ಬಲ: ಐಎಂಎಫ್:

- ಭಾರತದ ಆರ್ಥಿಕ ಬೆಳವಣಿಗೆಯು ನಿರೀಕ್ಷೆಗಿಂತ ಹೆಚ್ಚು ದುರ್ಬಲವಾಗಿದೆ ಎಂದು 'ಅಂತರರಾಷ್ಟ್ರೀಯ ಹಣಕಾಸು ನಿಧಿ' (ಐಎಂಎಫ್) ವಿಶ್ಲೇಷಿಸಿದೆ.
- ಬ್ಯಾಂಕೇತರ ಹಣಕಾಸು ಸಂಸ್ಥೆಗಳಲ್ಲಿನ (ಎನ್‌ಬಿಎಫ್‌ಸಿ) ನಗದು ಬಿಕ್ಕಟ್ಟು ಮತ್ತು ಅರ್ಥ ವ್ಯವಸ್ಥೆಯ ವಿವಿಧ ವಲಯಗಳಲ್ಲಿನ ಅನಿಶ್ಚಿತತೆಯಿಂದಾಗಿ ಇತ್ತೀಚಿನ ಆರ್ಥಿಕ ಬೆಳವಣಿಗೆ ದರ ನಿರೀಕ್ಷೆಗಿಂತ ಕಡಿಮೆ ಇದೆ.
- ವೃದ್ಧಿ ದರ ಕುರಿತ ಮುನ್ನೋಟವು ಆರ್ಥಿಕ ಕುಸಿತದತ್ತ ಹೆಚ್ಚು ವಾಲುತ್ತಿದೆ. ಭಾರತದಲ್ಲಿನ ಆರ್ಥಿಕ ಪರಿಸ್ಥಿತಿ ಮೇಲೆ ನಿರಂತರವಾಗಿ ನಿಗಾ ಇರಿಸಲಾಗಿದೆ.
- ಮುಂಬರುವ ದಿನಗಳಲ್ಲಿ ಪ್ರಕಟಿಸಲಿರುವ ಜಾಗತಿಕ ಆರ್ಥಿಕ ಮುನ್ನೋಟದಲ್ಲಿ ಭಾರತದ ಆರ್ಥಿಕತೆಯ ಪ್ರಗತಿ ಕುರಿತ ಅಂದಾಜು ಮಾಡಲಾಗುವುದು ಎಂದು ಐಎಂಎಫ್ ವಕ್ತಾರ ಜೆರಿ ರೈಸ್ ಹೇಳಿದ್ದಾರೆ,
- 2019 ಮತ್ತು 2020ರಲ್ಲಿ ಭಾರತದ ಆರ್ಥಿಕ ಬೆಳವಣಿಗೆ ದರವು ಕ್ರಮವಾಗಿ ಶೇ 7 ಮತ್ತು ಶೇ 7.2ರಷ್ಟು ಬೆಳವಣಿಗೆ ಕಾಣಲಿದೆ ಎಂದು ಐಎಂಎಫ್ ಜುಲೈನಲ್ಲಿ ತಿಳಿಸಿತ್ತು.
- ಆರ್ಥಿಕ ವೃದ್ಧಿ ದರವು ಸದ್ಯಕ್ಕೆ ಕಡಿಮೆ ಮಟ್ಟದಲ್ಲಿ ಇದ್ದರೂ, ಭಾರತದ ಬೆಳವಣಿಗೆ ದರವು ಈಗಲೂ ವಿಶ್ವದಲ್ಲೇ ಅತಿ ಹೆಚ್ಚಿನ ವೇಗದಲ್ಲಿದೆ.
- ಚೀನಾಕ್ಕಿಂತ ಸಾಕಷ್ಟು ಮುಂಚೂಣಿಯಲ್ಲಿಯೂ ಇದೆ ಎಂದು ವಾಷಿಂಗ್ಟನ್‌ನಲ್ಲಿ ಪ್ರಧಾನ ಕಚೇರಿ ಹೊಂದಿರುವ ಜಾಗತಿಕ ಹಣಕಾಸು ಸಂಸ್ಥೆ ಅಭಿಪ್ರಾಯಪಟ್ಟಿದೆ.

10. ಆರ್ಥಿಕ ನೆರವಿನ ಪ್ಯಾಕೇಜ್ :

- ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಲು ನೆರವಿನ ಪ್ಯಾಕೇಜ್ ಘೋಷಿಸಿದ್ದಾರೆ.
- ವಸತಿ ಯೋಜನೆಗೆ 10,000 ಕೋಟಿ ರೂ. ನೆರವು, 50,000 ಕೋಟಿ ರೂ. ಮೌಲ್ಯದ ರಫ್ತು ನೆರವು ಯೋಜನೆಯನ್ನು ಪ್ರಕಟಿಸಿದ್ದಾರೆ.
- ರಿಯಲ್ ಎಸ್ಟೇಟ್‌ಗೆ ವಿದೇಶಿ ಮೂಲದ ಸಾಲ ಕುರಿತ ನಿಯಮಾವಳಿಗಳನ್ನು ಸಡಿಲಗೊಳಿಸಿದ್ದಾರೆ.
- ಮುಂದಿನ ತ್ರೈಮಾಸಿಕದಲ್ಲಿ ಜಿಡಿಪಿ ಸುಧಾರಿಸುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

11. ಶಿಶುಮರಣ ತಗ್ಗಿಸಲು 'ಲಕ್ಷ್ಯ' ಯೋಜನೆ:

- ಕೇಂದ್ರ ಆರೋಗ್ಯ ಸಚಿವಾಲಯವು ಹೆರಿಗೆ ಕೊಠಡಿ ಮತ್ತು ಹೆರಿಗೆ ಶಸ್ತ್ರಚಿಕಿತ್ಸಾ ಘಟಕದ ಗುಣಮಟ್ಟ ಹೆಚ್ಚಿಸುವ ಸಲುವಾಗಿ 'ಲಕ್ಷ್ಯ' ಯೋಜನೆ ಜಾರಿಗೊಳಿಸಿದೆ.
- ಗರ್ಭಿಣಿಯರಿಗೆ ಗುಣಮಟ್ಟದ ಚಿಕಿತ್ಸೆ, ಹೆರಿಗೆ ಸಾವು ಮತ್ತು ನವಜಾತ ಶಿಶುಗಳ ಸಾವಿನ ಪ್ರಮಾಣ ತಗ್ಗಿಸುವುದು, ಹೆರಿಗೆ ಕೊಠಡಿ ಮತ್ತು ಹೆರಿಗೆ ಶಸ್ತ್ರಚಿಕಿತ್ಸಾ ಘಟಕದ ಮೂಲ ಸೌಕರ್ಯ ಹೆಚ್ಚಳ, ಸಿಬ್ಬಂದಿಯ ಕಾರ್ಯಕ್ಷಮತೆ ಪ್ರೋತ್ಸಾಹಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ.

ಸಿಬ್ಬಂದಿಗೆ ಪ್ರೋತ್ಸಾಹ ಧನ:

- ಯೋಜನೆಗೆ ಆಯ್ಕೆಯಾದ ಆಸ್ಪತ್ರೆಗಳಿಗೆ ಪ್ರತಿ ವರ್ಷ ಮೂರು ಲಕ್ಷ ರೂ. ಪ್ರೋತ್ಸಾಹ ಧನವನ್ನು ಕೇಂದ್ರ ಸರಕಾರ ನೀಡಲಿದೆ.
- ಈ ಮೊತ್ತವು ಹೆರಿಗೆ ವಿಭಾಗದಲ್ಲಿ ಕೆಲಸ ಮಾಡುವ ವೈದ್ಯ ಮತ್ತು ಸಿಬ್ಬಂದಿಗೆ ಬಳಕೆಯಾಗಲಿದೆ.

ಶಿಶುಮರಣ ಅಧಿಕ:

- ಅಧ್ಯಯನವೊಂದರ ಪ್ರಕಾರ ಭಾರತದಲ್ಲಿ 5 ವರ್ಷದೊಳಗಿನ ಶಿಶುಮರಣ ಪ್ರಮಾಣವು ಇತರೆ ದೇಶಗಳಿಗಿಂತಲೂ ಅಧಿಕವಾಗಿದೆ.
- ಶಿಶು ಮರಣ ಪ್ರಮಾಣ ತಗ್ಗಿಸಲು ವಿಶ್ವಸಂಸ್ಥೆ ಗುರಿ ನಿಗದಿಪಡಿಸಿದ್ದು, 5 ವರ್ಷದೊಳಗಿನ ಮಕ್ಕಳ ಸಾವಿನ ಸಂಖ್ಯೆಯನ್ನು 1000ಕ್ಕೆ 39ಕ್ಕಿಂತ ಕಡಿಮೆ ಸಂಖ್ಯೆಗೆ ನಿಯಂತ್ರಿಸ ಬೇಕಿದೆ. 2015ರಲ್ಲಿ ಭಾರತದಲ್ಲಿ 1000 ಶಿಶು ಜನಿಸಿದರೆ ಅವುಗಳಲ್ಲಿ 47 ಮೃತಪಟ್ಟಿವೆ.

12. ಸೌದಿ ಅರೇಬಿಯಾದ ತೈಲ ಬೆಂಕಿ ಭಾರತಕ್ಕೆ ಉರಿ:

- ಸೌದಿ ಅರೇಬಿಯಾದ ತೈಲಾಗಾರಗಳ ಮೇಲೆ ಇರಾನ್ ಮೂಲದ ಚೌತಿ ಉಗ್ರರು ನಡೆಸಿದ ದಾಳಿಯಿಂದ ಜಾಗತಿಕ ತೈಲ ಮಾರುಕಟ್ಟೆ ಮೇಲೆ ಗಂಭೀರ ಪರಿಣಾಮ ಬೀರುವುದು ಖಚಿತವಾಗಿದೆ.
- ಅದರಲ್ಲೂ ಸೌದಿಯ ಬೆಂಕಿಯ ಉರಿ ಭಾರತಕ್ಕೆ ಹೆಚ್ಚೇ ತಟ್ಟುವ ಆತಂಕವಿದೆ.

ಭಾರತದ ತೈಲ ಮೂಲ

- ಇರಾಕ್ 4.66 ಕೋಟಿ ಟನ್
- ಸೌದಿ ಅರೇಬಿಯಾ 4.03 ಕೋಟಿ ಟನ್
- ಇರಾನ್ 2.39 ಕೋಟಿ ಟನ್
- ಯುಎಇ 1.74 ಕೋಟಿ ಟನ್
- ವೆನಿಜುವೆಲಾ1.73 ಕೋಟಿ ಟನ್
- ನೈಜೀರಿಯಾ 1.68 ಕೋಟಿ ಟನ್
- ಕುವೈಟ್1.07 ಕೋಟಿ ಟನ್
- ಮೆಕ್ಸಿಕೊ 1.02 ಕೋಟಿ ಟನ್
- ಅಮೆರಿಕ 64 ಲಕ್ಷ ಟನ್
- 20.7 ಕೋಟಿ ಟನ್
- 53 ಲಕ್ಷ ಟನ್ ಭಾರತದ ಹಾಲಿ ತೈಲ ಸಂಗ್ರಹ (22 ದಿನಕ್ಕೆ ಸಾಕಾಗಬಹುದು)

60 ಡಾಲರ್ /ಬ್ಯಾರಲ್ (ಕಚ್ಚಾ ತೈಲದ ಈಗಿನ ದರ)

- ಆರ್ಥಿಕತೆಗೆ ಹೊಡೆತ : 2018–19ನೇ ಸಾಲಿನಲ್ಲಿ ಭಾರತ ತೈಲ ಆಮದಿಗೆ ಮಾಡಿರುವ ವೆಚ್ಚ 112 ಶತಕೋಟಿ ಡಾಲರ್. ಅಂದರೆ, ಬ್ಯಾರಲ್ ಬೆಲೆ ಡಾಲರ್ ಹೆಚ್ಚಿದರೂ 10,700 ಕೋಟಿ ಡಾಲರ್ ಹೆಚ್ಚುವರಿ ಭರಿಸಬೇಕು.
- ಪ್ರಸಕ್ತ ಕಚ್ಚಾತೈಲ ಬೆಲೆ ಬ್ಯಾಲರ್‌ಗೆ 60 ರೂ. ಇರುವುದು ಆರ್ಥಿಕ ಕುಸಿತದಿಂದ ಸ್ವಲ್ಪಮಟ್ಟಿಗೆ ಭಾರತಕ್ಕೆ ನಿರಾಳತೆ ನೀಡಿದೆ.
- ಒಂದೊಮ್ಮೆ 100 ಡಾಲರ್‌ಗೆ ಏರಿದರೆ ಆರ್ಥಿಕತೆಗೆ ದೊಡ್ಡ ಹೊಡೆತ.

13. ತೈಲ ಉತ್ಪಾದನೆ ಮತ್ತು ಆಮದು:

- ವಿಶ್ವದಲ್ಲಿ ಅತಿಹೆಚ್ಚು ಕಚ್ಚಾತೈಲ ಉತ್ಪಾದಿಸುವ ದೇಶಗಳು ಯಾವುವು ಹಾಗೂ ಭಾರತ ಯಾವ ದೇಶಗಳಿಂದ ಅತಿ ಹೆಚ್ಚು ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತದೆ ಎನ್ನುವುದರ ಬಗ್ಗೆ ಮಾಹಿತಿ.

ಭಾರತ ಕಚ್ಚಾ ತೈಲ ಆಮದು ಮಾಡಿಕೊಳ್ಳುವ ದೇಶಗಳು

- ಸೌದಿ ಅರೇಬಿಯಾ
- ಇರಾನ್
- ಇರಾಕ್
- ನೈಜೀರಿಯಾ
- ಯುಎಇ

(ಅಂಶ ಶೇಕಡಾವಾರು) ಅವಧಿ: ಡಿಸೆಂಬರ್ 2018ರಿಂದ ಜನವರಿ 2019)

ವಿಶ್ವದ ಅತಿ ಹೆಚ್ಚುಕಚ್ಚಾತೈಲ ಉತ್ಪಾದಕ ದೇಶಗಳು

- ಅಮೆರಿಕಾ
- ಸೌದಿ ಅರೇಬಿಯಾ
- ರಷ್ಯಾ
- ಕೆನಡಾ
- ಚೀನಾ
- ಇರಾಕ್
- ಇರಾನ್
- ಬ್ರೆಜಿಲ್
- ಕುವೈತ್

(ಪ್ರತಿದಿನ ಉತ್ಪಾದನೆ ಮಿಲಿಯನ್ ಬ್ಯಾರಲ್‌ಗಳಲ್ಲಿ)

14. ಹೀರೊ ಸೈಕಲ್ಸ್‌ನಿಂದ ಇ–ಸೈಕಲ್ ಬಿಡುಗಡೆ:

- ಭಾರತದ ಮುಂಚೂಣಿ ಸೈಕಲ್ ತಯಾರಿಕೆ ಕಂಪನಿ ಹೀರೊ ಸೈಕಲ್ಸ್ ದೇಶದ ಮೊದಲ 'ಇ–ಸೈಕಲ್'ನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.
- ಇ–ಸೈಕಲ್ ವಿದ್ಯುತ್ ಬ್ಯಾಟರಿಯಿಂದ ಚಲಿಸುವ ಕಾರಣಕ್ಕೆ 'ಲೆಕ್ಟ್ರೋ ಇಎಚ್ಎಕ್ಸ್20' ಹೆಸರನ್ನಿಡಲಾಗಿದೆ.
- ಗಂಟೆಗೆ 25 ರಿಂದ 70 ಕಿ.ಮೀ. ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿದೆ.
- ಇದನ್ನು ಜಪಾನ್‌ನ ಯಮಹಾ ಕಂಪನಿಯ ಜೊತೆಗೂಡಿ ನಿರ್ಮಿಸುತ್ತಿದೆ.

15. ಬರಲಿದೆ 11 ಅಂಕಿಗಳ ಮೊಬೈಲ್ ನಂಬರ್:

- 'ಭಾರತೀಯ ಟಲಿಕಾಂ ನಿಯಂತ್ರಣ ಪ್ರಾಧಿಕಾರ' (ಟ್ರಾಯ್) ಹೊಸ ನಂಬರ್ ವ್ಯವಸ್ಥೆ ಜಾರಿಗೆ ಚಿಂತನೆ ನಡೆಸಿದೆ.
- ಹೊಸ ಸಂಪರ್ಕ ಮತ್ತು ಮೊಬೈಲ್ ಸಂಖ್ಯೆಗೆ ಬೇಡಿಕೆ ಬರುತ್ತಿರುವ ಹಿನ್ನೆಲೆಯಲ್ಲಿ ಅದನ್ನು ಪೂರೈಸಲು ಈ ಕ್ರಮಕ್ಕೆ ಮುಂದಾಗಿದೆ.

16. ರೈಲ್ವೆಯಿಂದ 49 ಪೈಸೆಗೆ 10 ಲಕ್ಷ ವಿಮೆ:

- ಭಾರತೀಯ ರೈಲ್ವೆ ಇಲಾಖೆ 49 ಪೈಸೆ ವಿಮೆ ಮಾಡಿಸಿದರೆ 10 ಲಕ್ಷ ರೂ ಮೌಲ್ಯದ ವಿಮೆಯನ್ನು ನೀಡಲಿದೆ. ಇಂಡಿಯನ್ ರೈಲ್ವೆಯಲ್ಲಿ Indian Railways Catering and Tourism Corporation ಮುಖಾಂತರ ಟಿಕೇಟ್ ನೋಂದಣಿ ಮಾಡುವವರಿಗೆ ಮಾತ್ರ ಇದರ ಪ್ರಯೋಜನ ದೊರೆಯುತ್ತದೆ.
- ಆನ್‌ಲೈನ್ ನಲ್ಲಿ ಟಿಕೆಟ್ ಬುಕ್ ಮಾಡುವ ಸಂದರ್ಭದಲ್ಲಿ Travel Insurance ಎಂಬ ಹೊಸ ಆಯ್ಕೆಯನ್ನು ನೀಡಲಾಗಿದೆ.
- ಅದರ ಮೇಲೆ ಕ್ಲಿಕ್ ಮಾಡಿದರೆ ನಾವು ಟಿಕೇಟ್ ಬುಕ್ ಮಾಡಿದವರ ಹೆಸರಿನಲ್ಲಿ (ಪಿಎನ್ಆರ್) ವಿಮೆ ನೋಂದಣಿಯಾತ್ತದೆ.

ಯಾರು ಅರ್ಹರು?

- ಈ ಸೇವೆ ಕೇವಲ ಭಾರತೀಯರಿಗೆ ಮಾತ್ರ ಅನ್ವಯವಾಗಲಿದ್ದು, ಆನ್‌ಲೈನ್‌ನಲ್ಲಿ ಟಿಕೆಟ್ ಪಡೆಯುವವರಿಗೆ ಮಾತ್ರ ಪ್ರಯೋಜನವಾಗಲಿದೆ.
- ಇದು ಸಾವು ಸಂಭವಿಸಿದರೆ, ಶಾಶ್ವತ ವೈಕಲ್ಯಕ್ಕೆ ಒಳಗಾದರೆ, ಶಾಶ್ವತ ಭಾಗಶ: ಹಾನಿ ಸಂಭವಿಸಿದರೆ, ಗಾಯಗೊಂಡು ಆಸ್ಪತ್ರೆಗೆ ದಾಖಲಾದರೆ ಈ ನೂತನ ವಿಮೆ ಬಳಕೆಗೆ ಬರಲಿದೆ.
- ಪ್ರಯಾಣದ ಸಂದರ್ಭ ಗಾಯಗಳು ಸಂಭವಿಸಿದರೆ ಆಸ್ಪತ್ರೆಯ ಸಂಪೂರ್ಣ ವೆಚ್ಚವನ್ನು ರೈಲ್ವೆ ಇಲಾಖೆ ಭರಿಸಲಿದೆ.

ಯಾವುದಕ್ಕೆ ಎಷ್ಟಯ ವಿಮೆ ?

- ಈ ಸೇವೆಯಲ್ಲಿ ಸಾವು ಸಂಭವಿಸಿದರೆ ಮತ್ತು ಶಾಶ್ವತ ವೈಕಲ್ಯ ಘಟಿಸಿದರೆ 10 ಲಕ್ಷ ದೊರೆಯಲಿದೆ. ಶಾಶ್ವತ ಭಾಗಶಃ ಹಾನಿಯುಂಟಾದರೆ 5 ಲಕ್ಷ ರೂ. ಗಾಯಗೊಂಡು ಆಸ್ಪತ್ರೆ ಸೇರಿದರೆ 2 ಲಕ್ಷ ರೂ. ಮಂಜೂರಾಗಲಿದೆ.
- ಇದು ರೈಲು ಸೇವೆಯ ಎಲ್ಲಾ ಕ್ಲಾಸ್‌ಗಳಿಗೂ ಅನ್ವಯವಾಗಲಿದ್ದು ಏಕ ರೂಪದ ಯೋಜನೆ ಇದಾಗಿದೆ. ಆದರೆ 5 ವರ್ಷಕ್ಕಿಂತ ಕೆಳಗಿನ ಮಗುವಿಗೆ ಇದು ಅನ್ವಯವಾಗುವುದಿಲ್ಲ,

ನೀವು ಮಾಡಬೇಕಾಗಿದಿಷ್ಟು?

- ಟಿಕೇಟ್ ಬುಕಿಂಗ್ ಸಂದರ್ಭ Travel insurance ಮೆನುವಿನ ಮೇಲೆ ಕ್ಲಿಕ್ ಮಾಡಿ. ಬಳಿಕ ತತ್‌ಕ್ಷಣ ನಿಮ್ಮಮೊಬೈಲ್ ಸಂಖ್ಯೆಗೆ ಮತ್ತು ರಿಜಿಸ್ಟರ್ ಇ–ಮೇಲ್‌ಗೆ ವಿಮಾ ಸಂಸ್ಥೆಯವರು ಪಾಲಿಸಿಯನ್ನು ಕಳುಹಿಸುತ್ತಾರೆ.
- ಇ– ಮೇಲ್‌ನಲ್ಲಿ ಪ್ರಯಾಣಿಕರು ತಮ್ಮ ಹೆಚ್ಚಿನ ಮಾಹಿತಿಯನ್ನು ತುಂಬಬೇಕಾಗುತ್ತದೆ. ಒಮ್ಮೆ ನಾವು ಇದಕ್ಕೆ ನೋಂದಣಿ ಮಾಡಿದ ಬಳಿಕ ಮತ್ತೆ ರದ್ದುಗೊಳಿಸಲು ಬರುವುದಿಲ್ಲ,

17. ಕಾರ್ಪೊರೇಟ್ ತೆರಿಗೆ:

- ಆರ್ಥಿಕ ಕುಸಿತ ಮತ್ತು ಉದ್ಯೋಗ ನಷ್ಟದಿಂದ ದೇಶವನ್ನು ಪಾರು ಮಾಡುವ ನಿಟ್ಟಿನಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಹತ್ವಾಕಾಂಕ್ಷೆಯ 'ಮಿನಿ ಬಜೆಟ್'ನ್ನು ಮಂಡಿಸಿದ್ದು, ಕಾರ್ಪೊರೇಟ್ ಕಂಪನಿಗಳ ತೆರಿಗೆಯನ್ನು ಶೇಕಡಾ 25ರಷ್ಟು ಇಳಿಸಿದ್ದಾರೆ.

ಸುದ್ದಿಯೇನು?

- ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆರ್ಥಿಕ ಬೆಳವಣಿಗೆ, ಹೂಡಿಕೆ, ಉದ್ಯೋಗ ಸೃಷ್ಟಿ ಮತ್ತು ಮೇಕ್ ಇನ್ ಇಂಡಿಯಾಗೆ ಪುಷ್ಟಿ ನೀಡಲು ಎಲ್ಲ ವಿಧದ ಸೆಸ್ ಒಳಗೊಂಡಂತೆ ಒಟ್ಟಾರೆ ಕಾರ್ಪೊರೇಟ್ ತೆರಿಗೆಯನ್ನು ಶೇ.30ರಿಂದ ಶೇ.7ಕ್ಕೆ ಕಡಿತಗೊಳಿಸಿದ್ದಾರೆ.
- ಈ ಪ್ಯಾಕೇಜ್‌ನಿಂದ ಸರಕಾರದ ಬೊಕ್ಕಸಕ್ಕೆ ವಾರ್ಷಿಕ 5 ಲಕ್ಷ ಕೋಟಿ ರೂ.ಗಳ ತೆರಿಗೆ ವರಮಾನ ಖೋತಾ ಆದಂತಾಗಿದೆ.
- ಪರಿಷ್ಕೃತ ತೆರಿಗೆ ಪ್ರಸಕ್ತ ಸಾಲಿನಿಂದಲೇ (ಏಪ್ರಿಲ್ 1ರಿಂದ) ಅನ್ವಯವಾಗಲಿದೆ. ಕಂಪನಿಗಳು ತೆರಿಗೆ ರಜೆ ಸೇರಿ ಇತರ ಇನ್ಸೆಂಟಿವ್ ಬಯಸದಿದ್ದರೆ, ತೆರಿಗೆ ಶೇ.22ಕ್ಕೆ ಇಳಿಕೆಯಾಗಲಿದೆ.
- 2013–14ರಲ್ಲಿ ಕಾರ್ಪೊರೇಟ್ ತೆರಿಗೆ ಶೇಕಡಾ 23 ಇತ್ತು.

ಯಾರಿಗೆ ಎಷ್ಟು ಇಳಿಕೆ?

- ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಕಂಪನಿಗಳ ತೆರಿಗೆಯನ್ನು 30%ನಿಂದ 22ಕ್ಕೆ ಇಳಿಸಲಾಗಿದೆ.
- ಕಂಪನಿಗಳು ತೆರಿಗೆ ರಜೆ, ಇನ್ಸೆಂಟಿವ್ ಬಯಸಿದರೆ, ಸ್ವಚ್ಛ ಭಾರತ್ ತೆರಿಗೆಯೂ ಸೇರಿ ಶೇಕಡಾ 17 ಆಗುತ್ತದೆ.
- ಈ ಪ್ರಮಾಣ ಮೊದಲು 34% ಇತ್ತು 2019ರ ಅಕ್ಟೋಬರ್ ಬಳಿಕ ಸ್ಥಾಪನೆಯಾಗಲಿರುವ ಹೊಸ ಉತ್ಪಾದಕ ಕಂಪನಿಗಳಿಗೆ ಈಗಿರುವ 25% ತೆರಿಗೆಯನ್ನು 15ಕ್ಕಿಳಿಸಲಾಗಿದೆ.
- ಇನ್ಸೆಂಟಿವ್ ಮತ್ತು ಸ್ವಚ್ಛಭಾರತ್ ಸರ್ಚಾರ್ಜ್ ಹೆಚ್ಚುವರಿಯಾಗಿ ಇರಲಿದೆ.

ಧನಾತ್ಮಕ ಪರಿಣಾಮಗಳೇನು?

- ಉದ್ಯಮ, ಹೂಡಿಕೆದಾರರು, ಗ್ರಾಹಕರ ವಿಶ್ವಾಸ ವೃದ್ಧಿಗೆ ಅನುಕೂಲ
- ಆರ್ಥಿಕ ಬೆಳವಣಿಗೆಗೆ ಹೂಡಿಕೆ ಹರಿದುಬರುವ ನಿರೀಕ್ಷೆ ಹೆಚ್ಚಿದೆ
- ಹೊಸ ಕಂಪನಿಗಳ ಸ್ಥಾಪನೆ, ಇರುವ ಕಂಪನಿಗಳ ವ್ಯವಹಾರ ವೃದ್ಧಿ
- ಮೇಕ್ ಇನ್ ಇಂಡಿಯಾಗೆ ಬಲ, ಉದ್ಯೋಗ ಸೃಷ್ಟಿಗೆ ಅನುಕೂಲ

ಯಾಕೆ ತುರ್ತು ಕ್ರಮ?

- ಸತತವಾಗಿ ಕಳೆದ 5 ತ್ರೈಮಾಸಿಕಗಳಿಂದ ಜಿಡಿಪಿ ಬೆಳವಣಿಗೆ ಮಂದಗತಿಯಲ್ಲಿ ಇರುವುದರಿಂದ, ವಿಶ್ವದಲ್ಲೇ ಅತಿ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆ ಎಂಬ ಹೆಗ್ಗಳಿಕೆಯನ್ನು ಚೀನಾಕ್ಕೆ ಮತ್ತೆ ಬಿಟ್ಟುಕೊಟ್ಟಿರುವುದರಿಂದ ಮೋದಿ ಸರಕಾರದ ಮೇಲೆ ಒತ್ತಡ ಸೃಷ್ಟಿಯಾಗಿತ್ತು. ಹೀಗಾಗಿ ಸಮತೋಲನಕ್ಕೆ ಈ ಕ್ರಮ.

ದಕ್ಷಿಣ ಏಷ್ಯಾದ ತೆರಿಗೆ ಸ್ಥಿತಿ

- ಚೀನಾ, ದ.ಕೊರಿಯಾ, ಇಂಡೋನೇಷ್ಯಾ 25%, ಮಲೇಶಿಯಾ 24% ಹಾಂಕಾಂಗ್ 5%, ಸಿಂಗಪುರ 17% ಥಾಯ್ಲೆಂಡ್, ವಿಯೆಟ್ನಾಂ 20%, ಜಪಾನ್ 39.6%

ಕಳೆದ 10 ವರ್ಷದಲ್ಲೇ ಸೆ.20 ಬೆಸ್ಟ್ ಡೇ

- 1,921 ಅಂಕ ಜಿಗಿತದೊಂದಿಗೆ 38,000 ಮಟಕ್ಕೆ ಮರಳಿದ ಸೆನ್ಸೆಕ್ಸ್

ಒಂದೇ ದಿನದ ಈ ಜಿಗಿತ ಒಂದು ದಶಕದಲ್ಲಿ ಇದೇ ಮೊದಲು ಹೂಡಿಕೆದಾರರ ಸಂಪತ್ತು ಸುಮಾರು 7 ಲಕ್ಷ ಕೋಟಿ ರೂ. ವೃದ್ಧಿ

18. ತೆರಿಗೆ ಕಡಿತ ಏನು–ಎತ್ತ :

- ದೇಶಿಯ ಕಾರ್ಪೊರೇಟ್ ಕಂಪನಿಗಳ ತೆರಿಗೆಯಲ್ಲಿ ಶೇ.10ರಷ್ಟು ಇಳಿಕೆ ಮಾಡಿದ್ದು, ಯಾವುದೇ ವಿನಾಯಿತಿಗಳನ್ನು ಪಡೆದುಕೊಳ್ಳದ ಕಂಪನಿಗಳಿಗೆ ಈ ತೆರಿಗೆ ಶೇ.22 ಆಗಿರಲಿದೆ. ಸರ್ಚಾರ್ಜ್ ಮತ್ತು ಸೆಸ್ (ಹೆಚ್ಚುವರಿ ಕರ) ಸೇರಿಸಿ ಒಟ್ಟಾರೆ ತೆರಿಗೆ ಶೇ.25.17 ಆಗಲಿದೆ. ಪರಿಷ್ಕೃತ ತೆರಿಗೆ ಏಪ್ರಿಲ್ 1ರಿಂದಲೇ ಪೂರ್ವಾನ್ವಯ ಆಗಲಿದೆ. ಹೊಸದಾಗಿ ಬಂಡವಾಳ ಆಕರ್ಷಿಸುವ ದ 2019ರ ಅ.1ರಂದು

ಇತರ ಪ್ರಮುಖ ರಾಷ್ಟ್ರಗಳಲ್ಲಿರುವ ಕಾರ್ಪೊರೇಟ್ ತೆರಿಗೆ

ದೇಶ	ತೆರಿಗೆ %
ಜಪಾನ್	30.86
ಚೀನಾ	25
ಅಮೆರಿಕಾ	21
ರಷ್ಯಾ	20
ಬ್ರಿಟನ್	19
ಸಿಂಗಾಪುರ	17
ಕೆನಡಾ	15
ಸ್ವಿಜರ್ಲೆಂಡ್	8.5

ಭಾರತದಲ್ಲಿ ಕಾರ್ಪೊರೇಟ್ ತೆರಿಗೆ ಪಟ್ಟಿ

ಕಾರ್ಪೊರೇಟ್ ತೆರಿಗೆ	ಹಿಂದಿದದ್ದು	ಪ್ರಸ್ತುತ
ಮೂಲ	ಶೇ.30	ಶೇ.22
ಸರ್ಚಾರ್ಜ್	ಶೇ.12	ಶೇ.10
ಸೆಸ್	ಶೇ.4	ಶೇ.4
ಒಟ್ಟು ತೆರಿಗೆ	ಶೇ.34.94	ಶೇ.25.17

ಮಹತ್ವದ ಘೋಷಣೆಗಳು:

- ಪರಿಷ್ಕೃತ ತೆರಿಗೆ ಲಾಭ ಪಡೆಯುವ ಕಂಪನಿಗಳು ಮ್ಯಾಟ್ ಕಟ್ಟುವ ಅಗತ್ಯವಿರುವುದಿಲ್ಲ.
- ಈ ಪ್ರೋತ್ಸಾಹ ಧನ ಮತ್ತು ತೆರಿಗೆ ವಿನಾಯಿತಿ ಪಡೆದು ಕೊಳ್ಳುತ್ತಿರುವ ಕಂಪನಿಗಳಿಗೆ ಮ್ಯಾಟ್ ದರದಲ್ಲಿ ಇಳಿಕೆ, ಶೇ.5ರಿಂದ ಶೇ.15ಕ್ಕೆ ಕಡಿತ.
- ಬಂಡವಾಳದ ಹರಿವು ಬಲಪಡಿಸುವ ಉದ್ದೇಶದಿಂದ ಕಂಪನಿ, ಈಕ್ವಿಟಿ ಆಧಾರಿತ ಫಂಡ್‌ನ ಯೂನಿಟ್‌ನಲ್ಲಿ ಈಕ್ವಿಟಿ ಷೇರುಗಳ ಮಾರಾಟದಿಂದ ಸಿಗುವ ಲಾಭಕ್ಕೆ 2019ರ ಬಜೆಟ್‌ನಲ್ಲಿ ಘೋಷಿಸಲಾಗಿದ್ದ ಹೆಚ್ಚುವರಿ ತೆರಿಗೆ ಅನ್ವಯ ಇಲ್ಲ.
- 2019ರ ಜುಲೈ 5ರೊಳಗೆ ಬೈಬ್ಯಾಕ್ ಘೋಷಿಸಿರುವ ಲಿಸ್ಟೆಡ್ ಕಂಪನಿಗಳಿಗೆ ಸರ್ಕಾರದಿಂದ –ವಿಧಿಸಲಾಗುವ ಬೈಬ್ಯಾಕ್ ತೆರಿಗೆ ಅನ್ವಯ ಇಲ್ಲ.
- ಕಂಪನಿಗಳು ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿಯಲ್ಲಿ ನೀಡುವ ಶೇ. 2ರಷ್ಟು ದೇಣಿಗೆಯನ್ನು ಐಐಟಿಗಳ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ, ಸ್ವಾಯತ್ತ ಸಂಸ್ಥೆಗಳಿಗೂ ನೀಡಬಹುದು.

ಜಿಎಸ್‌ಟಿಯಲ್ಲೂ ಕಡಿತದ ಸಿಹಿ ಇಳಿಕೆ:

- 10–13 ಸೀಟುಗಳುಳ್ಳ ಪ್ಯಾಸೆಂಜರ್ ವಾಹನಗಳ ಮೇಲಿನ ಜಿಎಸ್‌ಟಿಯನ್ನು ಶೇ.3ರಿಂದ ಶೇ.1ಕ್ಕೆ ತಗ್ಗಿಸಲಾಗಿದೆ.
- ಸೈಡ್ ಫಾಸ್ಟನರ್ ಶೇ.18ರಿಂದ ಶೇ.12ಕ್ಕೆ ಮರೀನ್ ತೈಲ ಶೇ.18ರಿಂದ ಶೇ.5ಕ್ಕೆ ಗೈಂಡರ್ ಮೇಲಿನ ತೆರಿಗೆ ಶೇ.12ರಿಂದ ಶೇ.5ಕ್ಕೆ, ಒಣ ಹುಣಸೆ ಶೇ.5ರಿಂದ ಶೂನ್ಯಕ್ಕೆ ಇಳಿಸಲಾಗಿದೆ.

ಹೋಟೆಲ್ ರೂಂ ಬಾಡಿಗೆ ಅಗ್ಗ:

- ಹೋಟೆಲ್‌ಗಳ ಮೇಲಿನ ಸುಂಕದಲ್ಲೂ ಇಳಿಕೆ ಮಾಡಲಾಗಿದ್ದು, 77,500ಗಿಂತ ಹೆಚ್ಚು ಬಾಡಿಗೆ ಹೊಂದಿರುವ ಹೋಟೆಲ್‌ಗಳ ಜಿಎಸ್‌ಟಿ ಶೇ.28ರಿಂದ ಶೇ.18ಕ್ಕೆ ತಗ್ಗಿಸಲಾಗಿದೆ.
- 7,500ಕ್ಕಿಂತ ಕಡಿಮೆ ಬಾಡಿಗೆಯ ಹೋಟೆಲ್ ಮೇಲಿನ ತೆರಿಗೆಯನ್ನು ಶೇ.18ರಿಂದ ಶೇ.12ಕ್ಕೆ ಕಡಿತ ಮಾಡಲಾಗಿದ್ದು, ಕೆ.1,000ರವರೆಗೆ ಬಾಡಿಗೆ ಹೊಂದಿರುವ ಹೋಟೆಲ್‌ಗಳಿಗೆ ಶೂನ್ಯ ಜಿಎಸ್‌ಟಿ ವಿಧಿಸಲಾಗಿದೆ.

ಹೆಚ್ಚಳ:

- ರೈಲ್ವೆ ವ್ಯಾಗನ್ ಮತ್ತು ಬೋಗಿಗಳ ಮೇಲಿನ ಜಿಎಸ್‌ಟಿ ಶೇ.5ರಿಂದ ಶೇ.12ಕ್ಕೆ, ಕೆಫೈನ್ ಅಂಶವಿರುವ ತಂಪು ಪಾನೀಯದ ಮೇಲಿನ ಜಿಎಸ್‌ಟಿ ಶೇ.18ರಿಂದ ಶೇ.28 ಏರಿಕೆ ಮಾಡಲಾಗಿದೆ ಮತ್ತು ಹೆಚ್ಚುವರಿ ಶುಲ್ಕ ಶೇ.12ನ್ನು ವಿಧಿಸಲಾಗಿದೆ. ಒಟ್ಟಾರೆ ತೆರಿಗೆ ಶೇ.40 ಆಗಲಿದೆ.

19. ಬ್ರಿಟನ್‌ನ ಪ್ರವಾಸ ಸಂಯೋಜಕ ಕಂಪನಿ 'ಥಾಮಸ್ ಕುಕ್' ಆರ್ಥಿಕ ಸಂಕಷ್ಟದಿಂದ ದಿವಾಳಿ ಎದ್ದಿದ್ದು, ಪ್ರವಾಸಕ್ಕಾಗಿ ವಿವಿಧ ದೇಶಗಳಿಗೆ ತೆರಳಿದ್ದ ಲಕ್ಷಾಂತರ ಮಂದಿ ಗ್ರಾಹಕರು ಸಂಕಷ್ಟಕ್ಕೆ ಸಿಲುಕಿದ್ದಾರೆ:

- 178 ವರ್ಷಗಳ ಇತಿಹಾಸವಿರುವ ಈ ಕಂಪನಿಯು ದಿವಾಳಿಯಾದ ಬಳಿಕ ವಿವಿಧ ಪ್ರವಾಸಿ ತಾಣಗಳಲ್ಲಿ ಸಿಲುಕಿ ಕೊಂಡಿರುವ ಬ್ರಿಟನ್‌ನ 5ಲಕ್ಷ ಗ್ರಾಹಕರನ್ನು ಕರೆತರಲು ಸರ್ಕಾರ ಕಾರ್ಯಾಚರಣೆ ಆರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

20. 2021ರಲ್ಲಿ ಡಿಜಿಟಲ್ ಜನಗಣತಿ:

- ದೇಶದಲ್ಲಿ 140 ವರ್ಷಗಳ ಜನಗಣತಿಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಮೊಬೈಲ್ ಆ್ಯಪ್ ಬಳಸಿ ಮಾಹಿತಿ ಕಲೆಹಾಕಲು ಕೇಂದ್ರ ಸರ್ಕಾರ ನಿರ್ಧರಿಸಿದೆ.
- 2021ರಲ್ಲಿ ನಡೆಯಲಿರುವ ಜನಗಣತಿ ಪೇಪರ್‌ಲೆಸ್ ಆಗಿರಲಿದೆ. ಜನರ ಮಾಹಿತಿ ಸಂಗ್ರಹಿಸಲು ಮೊಬೈಲ್ ಆ್ಯಪ್ ಬಳಸಲಾಗುತ್ತಿದೆ. ಇದರ ಜೊತೆಗೆ ಆಧಾರ್, ಪಾಸ್‌ಪೋರ್ಟ್, ಪಾನ್ ಕಾರ್ಡ್, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಖಾತೆ, ವಾಹನ ಚಾಲನ ಪರವಾನಗಿ ಇವುಗಳಿಗೆಲ್ಲ ಬಳಕೆಯಾಗುವಂತಹ ಒಂದೇ ಕಾರ್ಡ್ ಹಂಚಿಕೆ ಮಾಡಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ ಎಂದು ಗೃಹ ಸಚಿವ ಅಮಿದ್ ಷಾ ಮಾಹಿತಿ ನೀಡಿದ್ದಾರೆ.

21. ಶೇ.80ರಷ್ಟು ಸಾಕ್ಷರತೆ, ಉದ್ಯೋಗಸ್ಥೆಗಿಲ್ಲ ಸೌಲಭ್ಯ :

- ಭಾರತೀಯರಲ್ಲಿ 'ಹೆಣ್ಣು ಕುಟುಂಬದ ಕಣ್ಣು' ಎಂಬ ಮಾತು ನಿಜವೆಂಬಂತೆ ಶೇ.80ರಷ್ಟು ಮಹಿಳೆಯರ ಸಂತೋಷದ ಮಟ್ಟ ಉತ್ತಮವಾಗಿದ್ದು, ವಿವಾಹಿತರಲ್ಲಿ ಈ ಪ್ರಮಾಣ ಇನ್ನೂ ಅಧಿಕವಾಗಿದೆ.
- ಅದರಲ್ಲೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚು ಸಂತುಷ್ಟಿಗಳಾಗಿದ್ದಾರೆ. ಇದರ ಹೊರತಾಗಿಯೂ ಎಸ್ಸಿ/ಎಸ್ಟಿ ಹಾಗೂ ಬುಡಕಟ್ಟು ಮಹಿಳೆಯರಲ್ಲಿ ವಿದ್ಯಾರ್ಹತೆ, ಉದ್ಯೋಗ ಹಾಗೂ ಆರೋಗ್ಯ ಸಂಬಂಧಿ ವಿಷಯಗಳಲ್ಲಿ ಇನ್ನಷ್ಟು ಸುಧಾರಣೆ ಕಾಣಬೇಕಿದೆ ಎಂದು ವರದಿ ಬೊಟ್ಟುಮಾಡಿದೆ.

ಮಹಿಳಾ ಸಾಕ್ಷರತೆಯ ಹೆಚ್ಚಳ:

- 2011ರಜನಗಣತಿ ಪ್ರಕಾರ ಮಹಿಳಾ ಸಾಕ್ಷರತೆ ಶೇ.64.63 ರಷ್ಟಿದ್ದು, ಸರ್ವೆ ವೇಳೆ ಶೇ.79.63ಏರಿರುವುದು ಕಂಡು ಬಂದಿದೆ.

ವರದಿಯ ಪ್ರಮುಖ ಶಿಫಾರಸುಗಳು:

- ಮಹಿಳೆಯರಲ್ಲಿ ಮತದಾನ ಕಾರ್ಡ್ ಕುರಿತು ಜಾಗೃತಿಗೆ ಕ್ರಮ
- ಈಶಾನ್ಯ ರಾಜ್ಯದವರಲ್ಲಿ ಆಧಾರ್ ಕಾರ್ಡ್ ಹೊಂದಲು ಪ್ರೇರಣೆ
- ಬುಡಕಟ್ಟು ಮಹಿಳೆಯರಲ್ಲಿ ಸಾಕ್ಷರತೆ, ಆರೋಗ್ಯ ವೃದ್ಧಿಗೆ ಕಾರ್ಯತಂತ್ರ
- ಶಿಕ್ಷಣದಲ್ಲಿ ಜೀವನ ಕೌಶಲ, ಮೌಲ್ಯವರ್ಧನೆ ಪಠ್ಯಕ್ರಮ ಜೋಡಣೆ
- ಶಾಲಾ ಬಿಡುವ ಹೆಣ್ಣುಮಕ್ಕಳ ಕುರಿತು ವಿಶೇಷ ಗಮನ ಅಗತ್ಯ
- ಪ್ರತಿ ಕುಟುಂಬಗಳಲ್ಲಿ ಲಿಂಗ ಸಮಾನತೆಗಾಗಿ ಜಾಗೃತಿ ಕಾರ್ಯಕ್ರಮ
- ಅಸಂಘಟಿತ ವಲಯದ ಮಹಿಳೆಯರ ಸ್ಥಿತಿಗತಿ ಹೆಚ್ಚಳಕ್ಕೆ ಮೇಲ್ವಿಚಾರಣೆ ಸಂಸ್ಥೆ

22. ಅಂಬಾನಿಯೇ ಶ್ರೀಮಂತ:

- ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ ಅವರು 3,80,700 ಕೋಟಿ ರೂ. ಸಂಪತ್ತಿನೊಂದಿಗೆ ಸತತ 8 ವರ್ಷ ಗಳಿಂದ ಭಾರತದ ನಂ.1 ಸಿರಿವಂತರಾಗಿದ್ದಾರೆ.

23. ಏರಿಕೆಯಾದ ಭಾರತ ಸರಕಾರದ ಸಾಲ:

- ಭಾರತ ಸರಕಾರದ ಒಟ್ಟು ಸಾಲ ಕಳೆದ ಜೂನ್ ಅಂತ್ಯಕ್ಕೆ 88 ಲಕ್ಷ ಕೋಟಿ ರೂ. ಗೆ ಏರಿಕೆಯಾಗಿದೆ ಎಂದು ಹಣಕಾಸು ಇಲಾಖೆಯ ತ್ರೈಮಾಸಿಕ ವರದಿ.
- 2019ರ ಜೂನ್ ಅಂತ್ಯದ ವೇಳೆಗೆ ಭಾರತ ಸರಕಾರದ ಒಟ್ಟು ಸಾಲ18 ಲಕ್ಷ ಕೋಟಿ ರೂ.ಗೆ ವೃದ್ಧಿಸಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 84.6 ಲಕ್ಷಕೋಟಿ ರೂ. ಇತ್ತು ಭಾರತದ ಒಟ್ಟು ಉತ್ತರದಾಯಿತ್ವದಲ್ಲಿ ಸಾರ್ವಜನಿಕ ಸಾಲ ಶೇ.89.4ರಷ್ಟು ಇದೆ.

ಭಾರತಕ್ಕೆ ಅನುಕೂಲ ಏನು?

- ವಿದೇಶಿ ನೇರ ಬಂಡವಾಳ ಹೂಡಿಕೆ ಏಪ್ರಿಲ್–ಜೂನ್ ಅವಧಿಯಲ್ಲಿ ಶೇ.51ರಷ್ಟು ಹೆಚ್ಚಳವಾಗಿದ್ದು, 14.4 ಶತಕೋಟಿ ಡಾಲರ್ ಗಳಿಸಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 9.5 ಶತಕೋಟಿ ಡಾಲರ್ ಗಳಿಸಿತ್ತು.
- ವಿದೇಶಿ ವಿನಿಮಯ ಸಂಗ್ರಹ 2019ರ ಜೂನ್ 28ರ ವೇಳೆಗೆ 427 ಶತಕೋಟಿ ಡಾಲರ್‌ಗೆ ಏರಿದೆ.

ಸರಕಾರಕ್ಕೆ ಸಾಲದ ಮೂಲ ಯಾವುದು?

- ಮಾರುಕಟ್ಟೆಯಲ್ಲಿ ಬಾಂಡ್ (ಸಾಲಪತ್ರ) ಬಿಡುಗಡೆಯ ಮೂಲಕ, ಟ್ರೆಶರಿ ಬಿಲ್, ವಿಶೇಷ ಸಾಲದ ಮೂಲಕ ಸರಕಾರ ಸಾಲ ಪಡೆಯುತ್ತದೆ.ಸರಕಾರಗಳು ವಿದೇಶಗಳಿಂದಲೂ ಸಾಲ ಪಡೆಯುತ್ತವೆ.

24. ಇಂಡಸ್ಟ್ರೀ 4.0 ಪೈಲಟ್ ಪ್ರಾಜೆಕ್ಟ್:

- ರಾಯ್‌ಬರೇಲಿಯ ಮಾಡರ್ನ್ ಕೋಚ್ ಫ್ಯಾಕ್ಟರಿ (ಎಂಸಿಎಫ್)ಯಲ್ಲಿ 'ಇಂಡಸ್ಟ್ರಿ' ಎಂಬ ಪೈಲಟ್ ಪ್ರಾಜೆಕ್ಟ್ ಅನುಷ್ಠಾನ ಕಾರ್ಯಶುರುವಾಗಿದೆ.
- ನಾಲ್ಕನೇ ಕೈಗಾರಿಕಾ ಕ್ರಾಂತಿಯನ್ನು 'ಇಂಡಸ್ಟ್ರಿ' ಎಂದು ಹೇಳಲಾಗುತ್ತಿದ್ದು, ಪ್ರಚಲಿತದಲ್ಲಿರುವ ಆಟೋಮೇಷನ್ ಟ್ರೆಂಡ್, ಉತ್ಪಾದನಾ ತಂತ್ರಜ್ಞಾನದಲ್ಲಿನ ಅಂತರ್‌ಸಂಪರ್ಕ, ಡೇಟಾ ವಿನಿಮಯವನ್ನು ಬಿಂಬಿಸುತ್ತದೆ.
- ಇಂಡಸ್ಟ್ರಿ 4.0 ಎಂಬುದು ಸಂಕೀರ್ಣವಾದ ಸೈಬರ್/ಫಿಸಿಕಲ್ ಡಿಜಿಟಲ್ ಸಿಸ್ಟಂ ಆಗಿದ್ದು, ಇದರಲ್ಲಿ ಡಿಜಿಟಲ್ ತಂತ್ರಜ್ಞಾನ, ಇಂಟರ್‌ನೆಟ್ ಆಫ್ ಥಿಂಗ್ಸ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಬಿಗ್ ಡೇಟಾ ಆ್ಯಂಡ್ ಅನಲಿಟಿಕ್ಸ್, ಮಷಿನ್ ಲರ್ನಿಂಗ್ ಆ್ಯಂಡ್ ಕ್ಲೌಡ್ ಕಂಪ್ಯೂಟಿಂಗ್‌ಗಳನ್ನು ಒಳಗೊಂಡಿದೆ.

ವಿಶೇಷ ದಿನಗಳು

1. "ವಿಶ್ವ ಸಾಕ್ಷರತಾ ದಿನ" ಸೆಪ್ಟೆಂಬರ್ 8:

- ಜಗತ್ತಿನಾದ್ಯಂತ ಸೆಪ್ಟೆಂಬರ್ 8ರಂದು "ವಿಶ್ವ ಸಾಕ್ಷರತಾ ದಿನ"ವಾಗಿ ಆಚರಿಸಲಾಗುತ್ತದೆ. ಪ್ರತಿಯೊಬ್ಬರಿಗೂ ಶಿಕ್ಷಣ ದೊರೆಯಬೇಕು, ಅಕ್ಷರದ ಜತೆಗೆ ಬದುಕನ್ನು ಕಲಿಯುವಂತಾಗಬೇಕು ಎಂಬುದು ಇದರ ಉದ್ದೇಶ.

ಆಚರಣೆ ಶುರುವಾಗಿದ್ದು ಯಾವಾಗ?

- ಎರಡನೇ ಮಹಾಯುದ್ಧದ ನಂತರ ಸಾಕ್ಷರತೆಯ ಮಹತ್ವವನ್ನು ತಿಳಿದು 1965 ಸೆಪ್ಟೆಂಬರ್ 8ರಿಂದ 17ರವರೆಗೆ ಟೆಹರಾನ್‌ನಲ್ಲಿ ಅನಕ್ಷರತೆ ನಿರ್ಮೂಲನೆ ಬಗ್ಗೆ ಶಿಕ್ಷಣ ಮಂತ್ರಿಗಳ ವಿಶ್ವ ಸಮ್ಮೇಳನ ಏರ್ಪಡಿಸಲಾಗಿತ್ತು.
- ಅದೇ ದಿನ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘಟನೆಯು (ಯುನೆಸ್ಕೊ) ಪ್ರತಿವರ್ಷ ಸೆಪ್ಟೆಂಬರ್ 8ರಂದು ಅಂತಾರಾಷ್ಟ್ರೀಯ ಸಾಕ್ಷರತಾ ದಿನವೆಂದು ಘೋಷಿಸಿತು.
- ಅದರಂತೆ ಮೊದಲ ಬಾರಿಗೆ ಸಾಕ್ಷರತಾ ದಿನವನ್ನು 1966ರಂದು ಆಚರಿಸಲಾಯಿತು.

ಆಚರಣೆ ಏತಕ್ಕೆ?

- ಬದುಕಲು ಆಹಾರ ಎಷ್ಟು ಮುಖ್ಯವೋ ಸಮಾಜದ ಓರೆಕೋರೆಗಳನ್ನು ತಿದ್ದಲು, ದೇಶ, ಸಮಾಜ ಮತ್ತು ಕುಟುಂಬದ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸಲು ತಿಳಿವಳಿಕೆ ಅಗತ್ಯ.
- ಈ ತಿಳಿವಳಿಕೆ ಬರುವುದು ವಿದ್ಯಾವಂತರಾದಾಗ ಮಾತ್ರ. ಇದನ್ನು ಗಮನದಲ್ಲಿಟ್ಟುಕೊಂಡು ವಿದ್ಯೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಪ್ರತಿ ವರ್ಷ ಸಾಕ್ಷರತಾ ದಿನವನ್ನು ಆಚರಿಸಲಾಗುತ್ತದೆ.

ಭಾರತದಲ್ಲಿ ಸಾಕ್ಷರತೆ:

- 2011ರ ಜನಗಣತಿಯ ತಾತ್ಕಾಲಿಕ ವರದಿ ಪ್ರಕಾರ ಭಾರತದ 121 ಕೋಟಿ ಜನರಲ್ಲಿ ಸಾಕ್ಷರರ ಪ್ರಮಾಣ ಶೇ. 04. ಅಂದರೆ ಶೇ. 26ರಷ್ಟು ಮಂದಿ ಇಂದಿಗೂ ಅನಕ್ಷರಸ್ಥರು.
- ಆಸಕ್ತಿಕರ ವಿಷಯವೆಂದರೆ ಪುರುಷರಿಗೆ ಹೋಲಿಸಿದರೆ ಮಹಿಳಾ ಸಾಕ್ಷರತೆಯ ಪ್ರಮಾಣ ಹೆಚ್ಚಾಗಿದೆ.
- 2001ರಲ್ಲಿ ಶೇ. 67ರಷ್ಟಿದ್ದ ಮಹಿಳಾ ಸಾಕ್ಷರತೆ ಪ್ರಮಾಣ ಹತ್ತು ವರ್ಷಗಳಲ್ಲಿ ಶೇ. 65.46ಕ್ಕೇರಿದೆ. ಕೇರಳವು ಶೇ. 93.91 ಸಾಕ್ಷರತೆಯೊಂದಿಗೆ ದೇಶದಲ್ಲಿ ನಂ.1 ಸಾಕ್ಷರತಾ ರಾಜ್ಯ ಎಂಬ ಸ್ಥಾನವನ್ನು ಕಾಯ್ದುಕೊಂಡಿದೆ.

- ಕೇರಳ ಬಳಿಕ ಎರಡನೇ ಸ್ಥಾನದಲ್ಲಿರುವುದು ಲಕ್ಷದ್ವೀಪ, ಬಿಹಾರ ರಾಜ್ಯವಂತೂ ಶಿಕ್ಷಣ ವಿಷಯದಲ್ಲಿ ಅತ್ಯಂತ ಕೆಳಗಿದೆ.

ಕರ್ನಾಟಕದಲ್ಲಿ:

- ಪ್ರತಿಯೊಬ್ಬರಿಗೂ ಅಕ್ಷರ ಕಲಿತು ಸಮಾಜದ ಆಗುಹೋಗುಗಳನ್ನು ಕಲಿಯಬೇಕು ಎಂಬ ಉದ್ದೇಶದಿಂದ ಕೇಂದ್ರ ಸರಕಾರ ಸಹ ಸಾಕ್ಷರತಾ ಕಾರ್ಯಕ್ರಮವನ್ನು ಆರಂಭಿಸಿತು.
- 1978ರಲ್ಲಿ ವಯಸ್ಕರರಿಗೆ ಅಕ್ಷರ ಕಲಿಸಲು ವಯಸ್ಕರ ಶಿಕ್ಷಣ ನಿರ್ದೇಶನಾಲಯವನ್ನು ಕರ್ನಾಟಕದಲ್ಲಿ ಆರಂಭಿಸಲಾಯಿತು.
- ಜಿಲ್ಲಾ ಸಾಕ್ಷರತಾ ಸಮಿತಿಗಳ ಮೂಲಕ 15ರಿಂದ 35 ವರ್ಷದ ನಿರಕ್ಷಕರಿಗೆ ಶಿಕ್ಷಣ ನೀಡುವ ಪಠ್ಯಕ್ರಮ ಅನುಷ್ಠಾನಗೊಳಿಸಲಾಯಿತು.

ಉ.ಕೊರಿಯಾ ಪ್ರಥಮ:

- ಶೇ.100ರಷ್ಟು ಸಾಕ್ಷರತೆ ಸಾಧಿಸಿರುವ ಉತ್ತರ ಕೊರಿಯಾ ಸಾಕ್ಷರತೆಯಲ್ಲಿ ಮೊದಲ ಸ್ಥಾನದಲ್ಲಿದೆ.
- ಅದೇ ರೀತಿ ಫಿನ್ಲೆಂಡ್, ಗ್ರೀನ್‌ಲ್ಯಾಂಡ್, ಲಕ್ಸಂಬರ್ಗ್, ನಾರ್ವೆ ದೇಶಗಳು ಕೂಡ ಶೇ. 100ರಷ್ಟು ಸಾಕ್ಷರತೆ ಹೊಂದಿವೆ.
- ಕ್ಯೂಬಾ, ಎಸ್ಟೋನಿಯಾ, ಜಾರ್ಜಿಯಾ, ಉಕ್ರೇನ್, ತಜಕಿಸ್ತಾನ್, ರಷ್ಯಾ ಮತ್ತು ಪೋಲೆಂಡ್ ದೇಶಗಳು ಶೇ.7ರಷ್ಟು ಸಾಕ್ಷರತೆ ಹೊಂದಿವೆ.

2. "ವಿಶ್ವಪ್ರಥಮ ಚಿಕಿತ್ಸಾ ದಿನ" ಸೆಪ್ಟೆಂಬರ್ 14:

- ಅಪಘಾತದಂತಹ ತುರ್ತು ಬಿಕ್ಕಟ್ಟಿನ ಸಂದರ್ಭದಲ್ಲಿ ಜೀವವನ್ನು ಹೇಗೆ ಉಳಿಸಬಹುದು ಎಂಬ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸೆಪ್ಟೆಂಬರ್ 14ರಂದು "ವಿಶ್ವ ಪ್ರಥಮ ಚಿಕಿತ್ಸಾ ದಿನ"ವನ್ನು ಆಚರಿಸಲಾಗುತ್ತದೆ.

ಪ್ರಥಮ ಚಿಕಿತ್ಸೆ ಎಂದರೇನು?

- ವ್ಯಕ್ತಿಯ ಜೀವಕ್ಕೆ ಅಪಾಯವೆಂದಿಸುವ ತುರ್ತು ಪರಿಸ್ಥಿತಿಯಲ್ಲಿ, ಮುಂದೆ ಆಗಬಹುದಾದ ಅಪಾಯವನ್ನು ತಪ್ಪಿಸುವ ಹಾಗೂ ಆತನ ಜೀವವನ್ನು ಉಳಿಸಲು ಅನುಸರಿಸುವ ಸರಳ ಪ್ರಕ್ರಿಯೆಯೇ ಪ್ರಥಮ ಚಿಕಿತ್ಸೆ.

ಶುರುವಾಗಿದ್ದು ಯಾವಾಗ?

- ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ರೆಡ್‌ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಸೊಸೈಟೀಸ್ 2000ರಲ್ಲಿ ವಿಶ್ವ ಪ್ರಥಮ ಚಿಕಿತ್ಸಾ ದಿನವನ್ನು ಆರಂಭಿಸಿತು.
- ವಿಶ್ವಾದ್ಯಂತ 100ಕ್ಕೂ ಹೆಚ್ಚು ರೆಡ್‌ಕ್ರಾಸ್ ಮತ್ತು ರೆಡ್‌ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಸೊಸೈಟೀಸ್ ಪಠ್ಯಕ್ರಮಗಳನ್ನು ಆಯೋಜಿಸುವ ಮೂಲಕ ಈ ದಿನವನ್ನು ಆಚರಿಸುತ್ತವೆ.

ಗಮನಿಸಬೇಕಾದ ಅಂಶಗಳು:

ಗೋಲ್ಡನ್ ಅವರ್

- ಯಾವುದೇ ಅಪಘಾತವಾದ ಮೊದಲ ಅರವತ್ತು ನಿಮಿಷಗಳನ್ನು ಗೋಲ್ಡನ್ ಅವರ್ ಎಂದು ಕರೆಯಲಾಗುತ್ತದೆ.
- ಆ ಒಂದು ತಾಸಿನಲ್ಲಿ ವ್ಯಕ್ತಿಗೆ ದೊರಕಬಹುದಾದ ಸೂಕ್ತ ಹಾಗೂ ಸಮರ್ಪಕ ಚಿಕಿತ್ಸೆಯಿಂದ ಆತನ ಜೀವವನ್ನೇ ಉಳಿಸಬಹುದು.

ಪೆಟ್ಟಿಗೆಯಲ್ಲಿ ಇರಬೇಕಾದ್ದು

- ಆ್ಯಂಟಿಸೆಪ್ಟಿಕ್ ದ್ರಾವಣ, ಆ್ಯಂಟಿಬಯೋಟಿಕ್, ಹತ್ತಿ, ಬ್ಯಾಂಡೇಜು ಬಟ್ಟೆ, ಮುಲಾಮು, ನೋವು ಹಾಗೂ ಜ್ವರಕ್ಕೆ ಔಷಧ, ಗ್ಲೌಸ್ ಮುಂತಾದವು.
- ರಸ್ತೆಯಲ್ಲಿ ವಾಹನಗಳಲ್ಲಿ, ಕಚೇರಿಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ ಇರುವಂತೆ ನೋಡಿಕೊಳ್ಳಬೇಕು.

3. ಸೆಪ್ಟೆಂಬರ್–15 "ಎಂಜಿನಿಯರ್‌ಗಳ ದಿನ"



- ಇಂದಿನ ಎಂಜಿನಿಯರ್‌ಗಳಿಗೆ ಆದರ್ಶಪ್ರಾಯರಾಗಿರುವ ಸರ್. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಎಂಜಿನಿಯರ್ ಕ್ಷೇತ್ರದಲ್ಲಿ ಸಲ್ಲಿಸಿರುವ ಅಪಾರ ಸೇವೆ ಮತ್ತು ದೇಶಕ್ಕೆ ನೀಡಿರುವ ಕೊಡುಗೆಯನ್ನು ಗುರುತಿಸಿ ಅವರ ಜನ್ಮದಿನವಾದ ಸೆಪ್ಟೆಂಬರ್–15ರಂದು "ಎಂಜಿನಿಯರ್‌ಗಳ ದಿನ"ವೆಂದು ಆಚರಿಸಲಾಗುತ್ತದೆ.

ಸರ್ ಎಂ.ವಿ.ಹಿನ್ನೆಲೆ :

- ವಿಶ್ವೇಶ್ವರಯ್ಯನವರು ಈಗಿನ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇಹಳ್ಳಿಯಲ್ಲಿ 1861 ಸೆಪ್ಟೆಂಬರ್ 15ರಂದು ಜನಿಸಿದರು.
- ತಂದೆ ಶ್ರೀನಿವಾಸ ಶಾಸ್ತ್ರಿ, ತಾಯಿ ವೆಂಕಟಲಕ್ಷ್ಮಮ್ಮ. ಕಡುಬಡತನದಲ್ಲಿ ಹುಟ್ಟಿದ ವಿಶ್ವೇಶ್ವರಯ್ಯನವರು ಚಿಕ್ಕಬಳ್ಳಾಪುರದಲ್ಲಿ ಪ್ರಾಥಮಿಕ ಮತ್ತು ಬೆಂಗಳೂರಿನಲ್ಲಿ ಪ್ರೌಢಶಿಕ್ಷಣ ಮುಗಿಸಿದರು.
- 1881ರಲ್ಲಿ ಮದ್ರಾಸು ವಿಶ್ವವಿದ್ಯಾಲಯದಿಂದ ಬಿ.ಎ ಪದವಿ ಪಡೆದು ನಂತರ ಪುಣೆಯ ವಿಜ್ಞಾನ ಕಾಲೇಜಿನಿಂದ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದರು.

ಎಂಜಿನಿಯರ್ ಆಗಿ ವೃತ್ತಿ :

- ವಿಶ್ವೇಶ್ವರಯ್ಯನವರು ಮುಂಬಯಿಯಲ್ಲಿ ಲೋಕೋಪಯೋಗಿ ಇಲಾಖೆಯನ್ನು ಸೇರಿದರು. ಇದಾದ ಮೇಲೆ ಭಾರತೀಯ ನೀರಾವರಿ ಕಮಿಷನ್‌ರ್‌ನಿಂದ ಅವರಿಗೆ ಆಮಂತ್ರಣ ಬಂದಿತು.
- ಈ ಕಮಿಷನ್ ಸೇರಿದ ನಂತರ ದಖಿನ್ ಪ್ರಸ್ಥಭೂಮಿಯಲ್ಲೇ ಉತ್ತಮವಾದ ನೀರಾವರಿ ವ್ಯವಸ್ಥೆಯನ್ನು ಎಂ.ವಿ ಪರಿಚಯಿಸಿದರು.
- ಈ ಕಮಿಷನ್ ಸೇರಿದ ನಂತರ ದಖಿನ್ ಪ್ರಸ್ಥಭೂಮಿಯಲ್ಲೇ ಉತ್ತಮ ನೀರಾವರಿ ವ್ಯವಸ್ಥೆಯನ್ನು ವಿಶ್ವೇಶ್ವರಯ್ಯನವರು ಪರಿಚಯಿಸಿದರು.
- ಈ ಅಣೆಕಟ್ಟೆಗಳಲ್ಲಿ ಉಪಯೋಗಿಸಲಾಗುವ ಸ್ವಯಂ ಚಾಲಿತ ಫ್ಲಡ್ ಗೇಟ್ ವಿನ್ಯಾಸ ಕಂಡುಹಿಡಿದು, ಅದಕ್ಕೆ ಪೇಟೆಂಟ್ ಪಡೆದರು.
- ಮೊದಲ ಬಾರಿಗೆ ಈ ಫ್ಲಡ್‌ಗೇಟ್‌ಗಳು ಪುಣೆಯ ಖಡಕಾನ್ನಾ ಅಣೆಕಟ್ಟೆಯಲ್ಲಿ ಸ್ಥಾಪಿತವಾದವು.
- ಇಲ್ಲಿ ಅವು ಯಶಸ್ವಿಯಾದ ನಂತರ ಗ್ವಾಲಿಯರ್‌ನ ಟಿಗ್ರಾ ಮತ್ತು ಕರ್ನಾಟಕದ ಕೃಷ್ಣರಾಜಸಾಗರ ಅಣೆಕಟ್ಟೆಗಳಲ್ಲಿ ಉಪಯೋಗಿತವಾದವು.
- ಈ ಗೇಟ್‌ಗಳ ಉದ್ದೇಶ ಅಣೆಕಟ್ಟಿಗೆ ಹಾನಿ ಮಾಡದೆ ಗರಿಷ್ಠ ಮಟ್ಟದ ನೀರನ್ನು ಶೇಖರಿಸಿಡವುದೇ ಆಗಿತ್ತು.
- ಕೃಷ್ಣರಾಜ ಸಾಗರವನ್ನು ಕಟ್ಟಿದಾಗ ಅದು ಆ ಕಾಲದಲ್ಲಿ ಭಾರತದ ಅತ್ಯಂತ ದೊಡ್ಡ ಅಣೆಕಟ್ಟೆ ಆಗಿತ್ತು.

ದಿವಾನರಾಗಿ :

- 1908ರಲ್ಲಿ ಸ್ವಯಂ ನಿವೃತ್ತಿ ಪಡೆದ ವಿಶ್ವೇಶ್ವರಯ್ಯನವರು ನಂತರ ಮೈಸೂರು ಸಂಸ್ಥಾನದ ದಿವಾನರಾಗಿ ಸೇವೆ ಸಲ್ಲಿಸಿದರು.
- ಮಹಾರಾಜ ಕೃಷ್ಣರಾಜ ಒಡೆಯರ್ ಅವರ ಜೊತೆ ಮೈಸೂರು ರಾಜ್ಯದ ಸರ್ವತೋಮುಖ ಬೆಳವಣಿಗೆಗೆ ಕೆಲಸ ಮಾಡಿದರು.
- 1917ರಲ್ಲಿ ಬೆಂಗಳೂರಿನಲ್ಲಿ ಸರಕಾರಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಿದರು. ಇದೇ ಕಾಲೇಜಿಗೆ ನಂತರ ಅವರ ಹೆಸರನ್ನೇ ಇಡಲಾಯಿತು. (ವಿಶ್ವೇಶ್ವರಯ್ಯ ಕಾಲೇಜ್ ಆಫ್ ದ ಎಂಜಿನಿಯರಿಂಗ್).

ಪ್ರಶಸ್ತಿಗಳು :

- ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಬ್ರಿಟಿಷ್ ಸರಕಾರ ಅವರಿಗೆ ಸರ್ ಪದವಿ, ಭಾರತ ಸರಕಾರ 1955ರಲ್ಲಿ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ.

4. "ವಿಶ್ವ ಓಜೋನ್ ದಿನ" ಸೆಪ್ಟೆಂಬರ್ –16:

- ಓಜೋನ್ ಎಂಬುದು ಒಂದು ಅನಿಲ. ಅಣುವಿನಲ್ಲಿ ಮೂರು ಆಮ್ಲಜನಕದ ಪರಮಾಣುಗಳುಳ್ಳ, ವಿಶಿಷ್ಟ ವಾಸನೆಯೂ ದಟ್ಟಣೆಯಲ್ಲಿ ನಸುನೀಲಿ ಬಣ್ಣವೂ ಉಳ್ಳ, ಅನಿಲರೂಪದಲ್ಲಿರುವ ಆಮ್ಲಜನಕದ ಭಿನ್ನರೂಪವೇ ಓಜೋನ್.
- ಇದು ಸೂರ್ಯನ ಬಹುತೇಕ ನೇರಳಾತೀತ ವಿಕಿರಣಗಳನ್ನು ಸಂಸ್ಕರಿಸುತ್ತದೆ. ಅದರ ರಾಸಾಯನಿಕ ಸಂಕೇತ 'ಓ', ವಾಯುಮಂಡಲದ ಸ್ಟ್ರಾಟೋಸಿಯರ್‌ನಲ್ಲಿ 15ರಿಂದ – 50 ಕಿ.ಮೀ ಮೇಲ್ಮೈ ಪ್ರದೇಶದಲ್ಲಿ ಅದು ಯಥೇಚ್ಛವಾಗಿ ಸಿಗುತ್ತದೆ.
- ಭೂಮಂಡಲದ ಜೀವಿಗಳಿಗೆ ಓಜೋನ್ ತುಂಬಾ ಮುಖ್ಯ.

ಶುರುವಾಗಿದ್ದು ಯಾವಾಗಿನಿಂದ :

- 1987ರ ಸೆ.16ರಲ್ಲಿ ವಿಯೆನ್ನಾದಲ್ಲಿ ಓಜೋನ್ ಪದರ ರಕ್ಷಣೆಗಾಗಿ ಅಂತಾರಾಷ್ಟ್ರೀಯ ಸಮಾವೇಶ ನಡೆಯಿತು.
- ಓಜೋನ್ ಬಗ್ಗೆ ಜಾಗೃತಿ ಮೂಡಿಸುವ ನಿರ್ಣಯವನ್ನು ಅಲ್ಲಿ ಕೈಗೊಳ್ಳಲಾಯಿತು. ಈ ಸಂಬಂಧದ ಮಾಂಟ್ರೆಲ್‌ಪ್ರೊಟೊಕಾಲ್‌ಗೆ 24 ದೇಶಗಳು ಸಹಿ ಹಾಕಿದವು.
- ಈ ಮಹತ್ವದ ದಿನವನ್ನು ನೆನೆಯುವ ಮತ್ತು ಓಜೋನ್ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶ.

ಓಜೋನ್ ರಂಧ್ರ :

- 1982ರಲ್ಲಿ ಓಜೋನ್ ಪದರದ ದೊಡ್ಡರಂಧ್ರವನ್ನು ಮೊದಲ ಬಾರಿಗೆ ಪತ್ತೆ ಹಚ್ಚಲಾಯಿತು. ಅಂಟಾರ್ಟಿಕ ಪ್ರದೇಶದಲ್ಲಿ ಪತ್ತೆಯಾದ ಈ ರಂಧ್ರವು ವರ್ಷದಿಂದ ವರ್ಷಕ್ಕೆ ದೊಡ್ಡದಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ.
- ಓಜೋನ್ ಪದರದ ನಾಶದಿಂದ ಚರ್ಮ ರೋಗ, ಉಸಿರಾಟದ ಸಮಸ್ಯೆಗಳು ಹೆಚ್ಚುತ್ತಿವೆ. ಜಲಚರ ಮತ್ತು ಸೂಕ್ಷ್ಮಜೀವಿಗಳೂ ಸಂಕಷ್ಟಕ್ಕೆ ಸಿಲುಕಿವೆ.
- 1,30,000 ಮೆಲನೋಮ (ಮೆಲನಿನ ಉತ್ಪಾದಕ ಕೋಶಗಳಲ್ಲಿ ಉಂಟಾಗುವ ಕ್ಯಾನ್ಸರ್) ಪ್ರಕರಣಗಳು ವಿಶ್ವದಲ್ಲಿ ವರದಿಯಾಗುತ್ತಿವೆ. ಅಲ್ಲದೇ 66 ಸಾವಿರ ಜನರು ಪ್ರತಿ ವರ್ಷ ಚರ್ಮದ ಕ್ಯಾನ್ಸರ್‌ಗೆ ಬಲಿಯಾಗುತ್ತಿದ್ದಾರೆ.
- ಈ ಹೊತ್ತಿನಲ್ಲಿ ಓಜೋನ್ ಉಳಿದರೆ ಮಾತ್ರ, ಮನುಕುಲ ಉಳಿದೀತು.

ಪದರ ನಾಶಕ್ಕೆ ಕಾರಣ:

- ಓಜೋನ್ ಪದರ ನಾಶಕ್ಕೆ ಕ್ಲೋರೋಫ್ಲೋರೋ ಕಾರ್ಬನ್‌ನ(ಸಿಎಫ್‌ಸಿ) ಕಾರಣ. ಈ ಸಂಯುಕ್ತ ವಸ್ತುವು ಇಂಗಾಲ, ಕ್ಲೋರಿನ್, ಹೈಡ್ರೋಜನ್ ಮತ್ತು ಫ್ಲೋರೈನ್‌ಗಳನ್ನು ಒಳಗೊಂಡಿದೆ.
- ಇದನ್ನು ರೆಫ್ರಿಜಿರೇಟರ್, ಪ್ರೊಪೆಲೆಂಟ್, ಸಾಲ್ವೆಂಟ್‌ಗಳಲ್ಲಿ ಬಳಸಲಾಗುತ್ತದೆ. ಬಾಹ್ಯಾಕಾಶ ಸಂಶೋಧನೆ, ಉಪಗ್ರಹಗಳ ಉಡಾವಣೆಗೆ ಹಾರಿಬಿಡುವ ರಾಕೆಟ್‌ಗಳಿಂದ ಹಾನಿ. ಬೃಹತ್

ಕೈಗಾರಿಕೆ ಮತ್ತು ವಾಹನಗಳ ಹೊಗೆಯಿಂದ ಓಜೋನ್ ಪದರ ತೆಳುವಾಗುತ್ತಿದೆ.

ರಕ್ಷಣೆಗೆ ಮಾಡಬೇಕಾದ್ದೇನು?

- ಪರಿಸರ ನಾಶ ತಪ್ಪಿಸಬೇಕು ಗಿಡ ಮರಗಳನ್ನು ಬೆಳೆಸುವುದು, ಪ್ಲಾಸ್ಟಿಕ್ ವಸ್ತುಗಳನ್ನು ತ್ಯಜಿಸುವುದು, ಕೃಷಿಯಲ್ಲಿ ಕೀಟನಾಶಕವಾಗಿ ಬಳಸುತ್ತಿರುವ ಮಿಥೈಲ್ ಪ್ರೋಮೈಡ್‌ಗೆ ನಿಷೇದ, ಅವಶ್ಯವಿದ್ದಾಗ ಮಾತ್ರ ವಾಹನ ಬಳಕೆ, ಸಾರ್ವಜನಿಕ ಸಾರಿಗೆಗೆ ಆದ್ಯತೆ, ಸಿಎಫ್ಸಿ ಇಲ್ಲದ ಶೀತಲ ಯಂತ್ರಗಳು, ಹವಾನಿಯಂತ್ರಣದ ಉಪಕರಣಗಳ ಬಳಕೆ ಕಡಿಮೆಯಾಗಬೇಕು.

5. "ವಿಶ್ವಶಾಂತಿ ದಿನ" ಸೆಪ್ಟೆಂಬರ್ 21:

- ಜಗತ್ತಿಗೆ ಶಾಂತಿಯ ಮೌಲ್ಯಗಳನ್ನು ಪರಿಚಯ ಮಾಡಿಕೊಡುವ ಸಲುವಾಗಿ ವಿಶ್ವಸಂಸ್ಥೆ ಸೆಪ್ಟೆಂಬರ್ 21ನ್ನು "ವಿಶ್ವ ಶಾಂತಿಯ ದಿನ"ವನ್ನಾಗಿ ಘೋಷಿಸಿದೆ.
- ಯುದ್ಧ ಮತ್ತು ಹಿಂಸೆಯನ್ನು ತೊಡೆದು ಶಾಂತಿ–ಸಹಬಾಳ್ವೆಯಿಂದ ಬದುಕಬೇಕು ಎಂಬ ಸಂದೇಶವನ್ನು ಹೊತ್ತು ಪ್ರತಿವರ್ಷ ನವ ಪೀಳಿಗೆಗೆ ಶಾಂತಿಯ ಪ್ರಾಮುಖ್ಯತೆಯನ್ನು ಸಾರುತ್ತ ಮುನ್ನಡೆಯಲು ಈ ದಿನ ಸಹಕಾರಿಯಾಗಿದೆ.

ಶುರುವಾಗಿದ್ದು ಯಾವಾಗ?

- ಇಂಗ್ಲೆಂಡ್ ಮತ್ತು ಕೋಸ್ಟಾರಿಕಾ ದೇಶದ ಸಲಹೆಯಂತೆ 1981ರಲ್ಲಿ ವಿಶ್ವಸಂಸ್ಥೆ ವಿಶ್ವ ಶಾಂತಿಯ ದಿನವನ್ನು ಘೋಷಿಸಿತ್ತು.
- ಸೆಪ್ಟೆಂಬರ್ ತಿಂಗಳ ಮೂರನೇವಾರ ಆಚರಿಸಲ್ಪಡುತ್ತಿದ್ದ ವಿಶ್ವ ಶಾಂತಿಯ ದಿನವನ್ನು ಸೆಪ್ಟೆಂಬರ್ 21ರ ದಿನದಂದೇ ಆಚರಿಸಲು ವಿಶ್ವ ಸಂಸ್ಥೆಯ ಅಂತರ ಸಂಸದೀಯ ಒಕ್ಕೂಟ ಸೂಚಿಸಿತು.
- ಆ ವರ್ಷದಿಂದ ಪ್ರತೀ ವರ್ಷದ ಸೆಪ್ಟೆಂಬರ್ 21ರ ದಿನವನ್ನು ಅಂತರಾಷ್ಟ್ರೀಯ ಶಾಂತಿಯ ದಿನವನ್ನಾಗಿ ಆಚರಿಸಲಾಗುತ್ತಿದೆ.

ಆಚರಣೆ ಹೇಗೆ?

- ನ್ಯೂಯಾರ್ಕ್‌ನ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿರುವ ಶಾಂತಿ ಗಂಟೆಯನ್ನು ಬಾರಿಸುವ ಮೂಲಕ ವಿಶ್ವಶಾಂತಿ ದಿನ ಆಚರಿಸಲಾಗುತ್ತದೆ.
- ಶಾಂತಿ ಕುರಿತು ಜಗತ್ತಿಗೆ ಜಾಗೃತಿ ಮೂಡಿಸುತ್ತಿರುವ ವಿಶ್ವಸಂಸ್ಥೆ ಪ್ರತೀ ವರ್ಷವೂ ಬೇರೆ ಬೇರೆ ಶಾಂತಿ ಸಂದೇಶಗಳನ್ನು ನೀಡುತ್ತಿದೆ.
- 'ಕ್ಲೈಮೇಟ್ ಆ್ಯಕ್ಷನ್ ಫಾರ್ ಪೀಸ್ ' ಎಂಬುದು ಈ ವರ್ಷದ ವಿಶ್ವ ಶಾಂತಿಯ ದಿನದ ಸಂದೇಶವಾಗಿದೆ.

ಭಾರತಕ್ಕೆ 141ನೇ ಸ್ಥಾನ

- 2019ನೇ ಸಾಲಿನ ಜಾಗತಿಕ ಶಾಂತಿ ಸೂಚ್ಯಂಕದಲ್ಲಿ ಭಾರತ 141 ಸ್ಥಾನಕ್ಕೆ ಇಳಿದಿದೆ.
- ಐಸ್‌ಲ್ಯಾಂಡ್ ಜಗತ್ತಿನ ಅತ್ಯಂತ ಶಾಂತಿಯುತ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದರೆ, ಅಫಘಾನಿಸ್ತಾನ ಕನಿಷ್ಠ ಶಾಂತಿಯುತ ದೇಶ ಎಂದು ಸೂಚ್ಯಂಕದಲ್ಲಿ ಹೇಳಲಾಗಿದೆ.
- 2008ರಿಂದಲೂ ಐಸ್‌ಲ್ಯಾಂಡ್ ಸೂಚ್ಯಂಕದಲ್ಲಿ ಮೊದಲನೇ ಸ್ಥಾನವನ್ನು ಕಾಯ್ದುಕೊಂಡು ಬಂದಿದೆ.
- ನ್ಯೂಜಿಲ್ಯಾಂಡ್, ಆಸ್ಟ್ರೀಯಾ, ಪೋರ್ಚುಗಲ್ ಮತ ಡೆನ್ಮಾರ್ಕ್ ಸೂಚ್ಯಂಕದಲ್ಲಿ ಕ್ರಮವಾಗಿ 2,3, 4 ಮತ್ತು 5ನೇ ಸ್ಥಾನ ಪಡೆದಿವೆ.
- ಅಫಘಾನಿಸ್ತಾನ, ಸಿರಿಯಾ, ದಕ್ಷಿಣ ಸೂಡಾನ್, ಯಮನ್ ಮತ್ತು ಇರಾಕ್ ಕ್ರಮವಾಗಿ ಐದು ಕನಿಷ್ಠ ಶಾಂತಿಯುತ ದೇಶಗಳಾಗಿವೆ.

6. ವಿಶ್ವ ರೇಬಿಸ್ ದಿನ: ಸೆಪ್ಟೆಂಬರ್– 28

- ಜಗತ್ತಿನಾದ್ಯಂತ ಪ್ರತಿವರ್ಷ ಸೆ. 28ರಂದು "ವಿಶ್ವ ರೇಬಿಸ್ ದಿನ"ವನ್ನು ಆಚರಿಸಲಾಗುತ್ತದೆ. ರೇಬಿಸ್ ತಡೆಗಟ್ಟುವಿಕೆ ಜಾಗೃತಿ ಮೂಡಿಸಲು ಹಾಗೂ ರೇ ಬಿಸ್ ಲಸಿಕೆಯನ್ನು ಅಭಿವೃದ್ಧಿಪಡಿಸಿದ ಫ್ರಾನ್ಸ್ ರಸಾಯನಶಾಸ್ತ್ರಜ್ಞ ಲೂಯಿಸ್ ಪಾಶ್ಚರ್ ಅವರ ವಾರ್ಷಿಕ ಪುಣ್ಯತಿಥಿಯ ದಿನವಾಗಿಯೂ ಆಚರಿಸಲಾಗುತ್ತದೆ.

ಏನಿದು ರೇಬೀಸ್?

- ರೇಬಿಸ್ ಒಂದು ವೈರಲ್ ಕಾಯಿಲೆಯಾಗಿದ್ದು, ಮಾನವರು, ನಾಯಿ, ಬೆಕ್ಕು, ದನ, ಎಮ್ಮೆ, ಕುರಿ, ಮೇಕೆ, ಹಂದಿ ಮತ್ತು ಸಸ್ತನಿಗಳಲ್ಲಿ ಮೆದುಳಿನ ಉರಿಯೂತವನ್ನುಂಟು ಮಾಡುತ್ತದೆ.
- ಆಸ್ಟ್ರೇಲಿಯಾ ಮತ್ತು ಅಂಟಾರ್ಟಿಕಾ ಹೊರತುಪಡಿಸಿ ಪ್ರಪಂಚದಾದ್ಯಂತ ಈ ರೋಗವು ವರದಿಯಾಗಿದೆ.

- ರೇಬಿಸ್‌ನಿಂದ ಪ್ರಪಂಚದಾದ್ಯಂತ 50 ಸಾವಿರಕ್ಕೂ ಅಧಿಕ ಮಾನವರು, ಲಕ್ಷಾಂತರ ಪ್ರಾಣಿಗಳು ಸಾವಿ ಗೀಡಾಗುತ್ತಿವೆ.

ರೇಬಿಸ್ ವೈರಾಣು :

- ರೇಬಿಸ್, ಲಿಸ್ಸಾವೈರಸ್ ಕುಟುಂಬಕ್ಕೆ ಸೇರಿದ ರೇಬಿಸ್ ವೈರಸ್‌ನಿಂದ ಉಂಟಾಗುತ್ತದೆ. ರೇಬಿಸ್ ಹೊಂದಿರುವ ಪ್ರಾಣಿಗಳು ತಮ್ಮ ಲಾಲಾರಸ (ಜೋಲ್ಲು) ದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಈ ವೈರಸ್ ಸ್ರವಿಸುತ್ತವೆ.
- ಆರೋಗ್ಯವಂತ ನಾಯಿಗಳಿಗೆ ಇತರೆ ರೇಬಿಸ್ ರೋಗಪೀಡಿತ ನಾಯಿಗಳ ಕಚ್ಚುವಿಕೆಯಿಂದ ಈ ರೋಗವು ವರ್ಗಾಯಿಸಲ್ಪಡುತ್ತದೆ.
- ಮನುಷ್ಯರಲ್ಲಿ ಶೇ. 99ರಷ್ಟು ರೇಬಿಸ್ ಪ್ರಕರಣಗಳು ನಾಯಿಗಳ ಕಚ್ಚುವಿಕೆಯಿಂದ ಉಂಟಾಗುತ್ತವೆ.

ಪ್ರಾಥಮಿಕ ಲಕ್ಷಣಗಳು:

- ಮನುಷ್ಯರಿಗೆ ಪ್ರಾಣಿಗಳು ಕಚ್ಚಿದ ನಂತರದ ದಿನದಿಂದ ಒಂದು ವರ್ಷದವರೆಗೆ ರೇಬಿಸ್‌ನ ಮೊದಲ ಲಕ್ಷಣಗಳು ಕಾಣಿಸಿಕೊಳ್ಳಬಹುದು.
- ಮೊದಲಿಗೆ, ಕಚ್ಚಿದ ಪ್ರದೇಶದ ಸುತ್ತಲೂ ಜುಮ್ಮೆನಿಸುವಿಕೆ, ತುರಿಕೆ ಭಾವನೆ ಇರುತ್ತದೆ. ಒಬ್ಬ ವ್ಯಕ್ತಿಯು ಜ್ವರ, ತಲೆನೋವು, ಸ್ನಾಯು ನೋವು, ಹಸಿವಿನ ಕೊರತೆ, ವಾಕರಿಕೆ ಮತ್ತು ದಣಿವಿನಂತಹ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ಲಸಿಕೆ ಕಂಡುಹಿಡಿದಿದ್ದು ಯಾರು?

- ಹುಚ್ಚುನಾಯಿ ಕಡಿತದಿಂದ ಉಂಟಾಗುವ ರೇಬಿಸ್ ಕಾಯಿಲೆಗೆ ಲಸಿಕೆ ಕಂಡುಹಿಡಿದವರು ಫ್ರಾನ್ಸ್ ವಿಜ್ಞಾನಿ ಲೂಯಿಸ್ ಪಾಶ್ಚರ್. ಇವರನ್ನು ಸೂಕ್ಷ್ಮ ಜೀವ ವಿಜ್ಞಾನ (ಮೈಕ್ರೋಬಯಾಲಜಿ)ದ ಪಿತಾಮಹ ಎಂದು ಕರೆಯುತ್ತಾರೆ.
- ಪಾಶ್ಚರೀಕರಣ ಪ್ರಕ್ರಿಯೆ ಮೂಲಕ ಹಾಲನ್ನು ಸಂರಕ್ಷಿಸುವ ವಿಧಾನವನ್ನೂ ಅವರು ಕಂಡು ಹಿಡಿದರು.
- ಪಾಶ್ಚರೀಕರಣದಲ್ಲಿ ಹಾಲನ್ನು 60 ರಿಂದ 100 ಡಿಗ್ರಿ ಸೆ. ನಡುವಿನ ತಾಪಮಾನದಲ್ಲಿ ಬಿಸಿ ಮಾಡಿ, ಸೂಕ್ಷ್ಮ ಜೀವಿಗಳನ್ನು ಕೊಲ್ಲಲಾಗುತ್ತದೆ.
- ಈ ವಿಧಾನವನ್ನು ಮೊದಲ ಬಾರಿಗೆ, ಫ್ರೆಂಚ್ ವೈನ್ ಕಾರ್ಖಾನೆಯಲ್ಲಿ ಬಳಸಲಾಯ್ತು. ಈಗಲೂ ಪಾಶ್ಚರೀಕರಣವನ್ನು ಡೇರಿ ಮತ್ತು ಇತರೆ ಆಹಾರ ಸಂರಕ್ಷಣೆಯಲ್ಲಿ ಬಳಸಲಾಗುತ್ತದೆ. ಆಂಡ್ರಾಕ್ಸ್ ರೇಬಿಸ್ ಮುಂತಾದ ಕಾಯಿಲೆಗಳಿಗೆ ಲಸಿಕೆ ಕಂಡುಹಿಡಿದ ಶ್ರೇಯ ಕೂಡಾ ಲೂಯಿಸ್‌ಗೆ ಸಲ್ಲುತ್ತದೆ. ಆಂಥ್ರಾಕ್ಸ್ ಲಸಿಕೆ ಕಂಡು ಹಿಡಿದಿದ್ದು ಫ್ರೆಂಚ್ ಪಶುವೈದ್ಯ ಜೀನ್ ಜೋಸೆಫ್. ಆದರೆ ಅದರ ಶ್ರೇಯ ಲೂಯಿಸ್‌ಗೆ ಸಿಕ್ಕಿತೆಂದು ಕೆಲವರು ಹೇಳುತ್ತಾರೆ.

7. ಸೆಪ್ಟೆಂಬರ್ 29 "ವಿಶ್ವ ಹೃದಯ ದಿನ"

ಆಚರಣೆ ಶುರುವಾಗಿದ್ದು ಯಾವಾಗ :

- ವಿಶ್ವ ಹೃದಯ ದಿನವನ್ನು 2000ರಲ್ಲಿ ಶುರು ಮಾಡಲಾಯಿತು.
- ಆಗ ಪ್ರತಿ ವರ್ಷ ಸೆಪ್ಟೆಂಬರ್ ಕೊನೆಯ ಭಾನುವಾರದಂದು ವಿಶ್ವ ಹೃದಯ ದಿನವನ್ನು ಆಚರಿಸಲಾಗುತ್ತಿತ್ತು. 2004ರಿಂದ ಸೆಪ್ಟೆಂಬರ್ 29ರಂದು ಆಚರಿಸಲಾಗುತ್ತಿದೆ.
- 17ನೇ ಶತಮಾನದಲ್ಲಿ ವಿಲಿಯಂ ಹಾರ್ವೆ ಎಂಬ ಆಂಗ್ಲ ವೈದ್ಯ ರಕ್ತನಾಳಗಳಲ್ಲಿ ರಕ್ತ ಏಕಾಭಿಮುಖವಾಗಿ ಹರಿಯುತ್ತೆಂದು, ಹೃದಯವೇ ರಕ್ತಪರಿಚಲನೆಯ ಸಂಚಾಲಕ ಎಂದು ತಿಳಿಸಿದ. ಆಗಲೇ ಹೃದಯದ ಮಹತ್ವ ಗೊತ್ತಾಗಿದ್ದು.

ಹೃದಯದ ಕೆಲಸ :

- ಟೊಳ್ಳಾದ ಸೇಬು ಹಣ್ಣಿನಾಕಾರದ ರಚನೆಯಿಂದ ಕೂಡಿರು ಹೃದಯದ ಗಾತ್ರವು ಆಯಾ ವ್ಯಕ್ತಿಯ ಬಿಗಿದ – ಮುಷ್ಟಿಯಷ್ಟಿರುತ್ತದೆ.
- ಎದೆಗೂಡಿನಲ್ಲಿ ಶ್ವಾಸಕೋಶಗಳೆರಡರ ಮಧ್ಯೆ ಅದರ ನೆಲೆ, ಆರೋಗ್ಯ ವಂತ ವ್ಯಕ್ತಿಯ ಹೃದಯ ಪ್ರತಿ ನಿಮಿಷಕ್ಕೆ 72 ಬಾರಿ ಬಡಿದು ಕೊಳ್ಳುತ್ತದೆ .ಇದು ಕೆಲಸ ನಿರ್ವಹಿಸುವಾಗ 100 ರಿಂದ 120 ರವರೆಗೂ ಹೆಚ್ಚಾಗುತ್ತದೆ ಹಾಗೆಯೇ ರಾತ್ರಿ ವೇಳೆ ನಿದ್ರಿಸುವಾಗ – 60 ರಿಂದ 50 ಕ್ಕೆ ಕಡಿಮೆ ಯಾಗುತ್ತದೆ.
- ಇದರಿಂದ ವ್ಯಕ್ತಿಗೆ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ.ಆದರೆ ಹೃದಯ ಬಡಿತ 150 –160 ದಾಟಿದಾಗ ಇಲ್ಲವೇ ಇದ್ದಕ್ಕಿದಂತೆ 40 ಕ್ಕಿಂತ ಕಡಿಮೆ ಯಾದರೆ ಅದು ಅಪಾಯಕಾರಿ.

ವರ್ಲ್ಡ್ ಹಾರ್ಟ್ ಫೆಡರೇಷನ್ :

- ಮೂಲ ಸಂಸ್ಥೆಗಳಾದ ಅಂತಾರಾಷ್ಟ್ರೀಯ ಹಾರ್ಟ್ ಸೊಸೈಟಿ (1946), ಅಂತಾರಾಷ್ಟ್ರೀಯ ಕಾರ್ಡಿಯಾಲಜಿ ಫೆಡರೇಷನ್ (1970) ಈ ಎರಡು ಸಂಸ್ಥೆಗಳನ್ನು ವಿಲೀನಗೊಳಿಸಿ ಕಾರ್ಡಿಯಾಲಜಿ ಆಫ್. ಇಂಟರ್‌ನ್ಯಾಷನಲ್ ಫೆಡರೇಷನ್ ಎಂದು ಕರೆಯಲಾಯಿತು. ಪ್ರಸ್ತುತವಾಗಿರುವ ವರ್ಲ್ಡ್ ಹಾರ್ಟ್

ಫೆಡರೇಷನ್ (ವಿಶ್ವ ಹೃದಯ ಸಂಸ್ಥೆ) 1998ರಿಂದ ಜಾರಿಗೆ ಬಂತು.

- ಇದು ಹೃದಯ ಕಾಯಿಲೆಗಳ ತಡೆಗಟ್ಟುವಿಕೆಗಾಗಿ ಮೀಸಲಾಗಿರುವ ಜಾಗತಿಕ ಸಂಸ್ಥೆಯಾಗಿದ್ದು ಮತ್ತು ಏಷ್ಯಾ ಫೆಸಿಫಿಕ್, ಯುರೋಪ್, ಪೂರ್ವ ಮೆಡಿಟರೇನಿಯನ್, ಅಮೆರಿಕಾ ಮತ್ತು ಆಫ್ರಿಕಾದ ಪ್ರದೇಶಗಳಲ್ಲಿರುವ ಸುಮಾರು 100 ದೇಶಗಳ ಹೃದಯ ಸಂಸ್ಥೆಗಳನ್ನು ನಿಯಂತ್ರಿಸುತ್ತಿದೆ. ಸ್ವಿಡ್ಜರ್‌ಲೆಂಡ್‌ನ ಜಿನೀವಾ ಮೂಲದ ಸರಕಾರೇತರ ಸಂಘಟನೆಯಾಗಿದೆ.

ನೇಮಕಾತಿ

1. "ಕರ್ನಾಟಕ ಹಾಲು ಮಹಾಮಂಡಳಿಯ" (ಕೆಎಂಎಫ್) ಅಧ್ಯಕ್ಷರಾಗಿ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಅವಿರೋಧವಾಗಿ ಆಯ್ಕೆ:

- ಇವರು 2004ರಿಂದ 2008ರವರೆಗೆ ಕರ್ನಾಟಕ ಸರಕಾರದ ಸಮಾಜ ಕಲ್ಯಾಣ ಸಚಿವರಾಗಿ ಹಾಗೂ 2008 ರಿಂದ 2013ರವರೆಗೆ ಪೌರಾಡಳಿತ ಸಚಿವರಾಗಿಯೂ ಕೆಲಸ ಮಾಡಿದ್ದಾರೆ.
- "ಕರ್ನಾಟಕ ಹಾಲು ಮಹಾಮಂಡಳಿ" (ಕೆಎಂಎಫ್): ಸಹಕಾರಿ ತತ್ವಗಳ ಮೇಲೆ ಕಾರ್ಯನಿರ್ವಹಿಸುವ ಹಾಲು ಉತ್ಪಾದಕರ ಸಂಘದ ಒಕ್ಕೂಟವಾಗಿದೆ.
- ನಂದಿನಿ ಬ್ರಾಂಡ್ ಮೂಲಕ ಮೊಸರು ಮತ್ತು ಹಾಲು ಮುಂತಾದ ಉತ್ಪನ್ನಗಳನ್ನು ಮಾರಾಟ ಮಾಡುತ್ತದೆ.
- ಭಾರತದಲ್ಲಿ ಡೈರಿ ಸಹಕಾರ ಸಂಘಗಳಲ್ಲಿ ಇದು ಎರಡನೇ ದೊಡ್ಡ ಡೈರಿ, ದಕ್ಷಿಣ ಭಾರತದಲ್ಲಿ ಇದು ಸಂಗ್ರಹಣೆ ಮತ್ತು ಮಾರಾಟದ ವಿಷಯದಲ್ಲಿ ಮೊದಲ ಸ್ಥಾನದಲ್ಲಿದೆ.
- 1974ರಲ್ಲಿ ಇದನ್ನು ಸ್ಥಾಪನೆ ಮಾಡಲಾಯಿತು. ಇದರ ಪ್ರಧಾನ ಕಚೇರಿ ಬೆಂಗಳೂರಿನಲ್ಲಿದೆ.

2. ನಿವೃತ್ತ ಐಎಎಸ್ ಅಧಿಕಾರಿ ಪ್ರಮೋದ್ ಕುಮಾರ್ ಮಿಶ್ರಾ (ಪಿ.ಕೆ.ಮಿಶ್ರಾ) ಪಿಎಂಒ ಪ್ರಿನ್ಸಿಪಲ್ ಸೆಕ್ರೆಟರಿಯಾಗಿ ನೇಮಕ:

3. ಭಾರತೀಯ ಬ್ಯಾಂಕ್‌ಗಳ ಸಂಘದ ಬ್ಯಾಂಕ್‌ಗಳ ಸಂಘದ (ಐಬಿಎ) ಆಡಳಿತ ಮಂಡಳಿ ಸದಸ್ಯರಾಗಿ ಕರ್ನಾಟಕ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಹಾಬಲೇಶ್ವರ ಎಂ. ಎಸ್. ಅವಿರೋಧವಾಗಿ ಆಯ್ಕೆ:

4. ವಿದೇಶ ಸೇವೆಗೆ ಮೊದಲ ಸಲ ಮಹಿಳಾ ಕಮಾಂಡರ್ ಆಗಿ ಅಂಜಲಿ ಸಿಂಗ್ ನೇಮಕ :

- ಭಾರತೀಯ ವಾಯುಪಡೆಯ ಮಹಿಳಾ ವಿಂಗ್ ಕಮಾಂಡರ್ ಅಂಜಲಿ ಸಿಂಗ್ ಅವರನ್ನು ರಷ್ಯಾದ ಮಾಸ್ಕೋದಲ್ಲಿರುವ ಭಾರತೀಯ ದೂತಾವಾಸ ಕಚೇರಿಯಲ್ಲಿ ಡೆಪ್ಯೂಟಿ ಏರ್ ಅಟ್ಯಾಚೆ ಸೇವೆಗೆ ನಿಯೋಜಿಸಲಾಗಿದೆ.
- ಈ ಮೂಲಕ ವಿದೇಶಗಳಲ್ಲಿರುವ ಭಾರತೀಯ ದೂತಾವಾಸ ಕಚೇರಿಗಳಲ್ಲಿ ರಕ್ಷಣಾ ವ್ಯವಹಾರಗಳನ್ನು ನೋಡಿಕೊಳ್ಳುವ ಈ ಹುದ್ದೆಗೆ ನಿಯೋಜನೆಗೊಂಡ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಅಂಜಲಿ ಪಾತ್ರರಾಗಿದ್ದಾರೆ.
- ಇದುವರೆಗೂ ಈ ಹುದ್ದೆಗೆ ಮೂರೂ ಶಸ್ತ್ರಾಸ್ತ್ರ ಪಡೆಗಳಲ್ಲಿ ಪುರುಷ ಅಧಿಕಾರಿಗಳನ್ನೇ ನೇಮಿಸಲಾಗುತ್ತಿತ್ತು.
- ಈ ಸಂಪ್ರದಾಯವನ್ನು ವಾಯುಪಡೆ ಮುರಿದಿದೆ. ಏರೋನಾಟಿಕಲ್ ಎಂಜಿನಿಯರ್ ಅಧಿಕಾರಿಯಾಗಿರುವ ಅಂಜಲಿ ಅವರು 17 ವರ್ಷಗಳ ಸೇವಾ ಅನುಭವ ಹೊಂದಿದ್ದಾರೆ. ಮಿಗ್ 29ರದ ವಿಮಾನ ಹಾರಾಟದ ತರಬೇತಿ ಪಡೆದಿದ್ದಾರೆ.

5. ಆಂಧ್ರಪ್ರದೇಶ ಹೈಕೋರ್ಟ್‌ನ ನಿವೃತ್ತ ನ್ಯಾ.ಪಿ.ಲಕ್ಷ್ಮಣ ರೆಡ್ಡಿ ಅವರನ್ನು ಆಂಧ್ರದ ಮೊದಲ ಲೋಕಾಯುಕ್ತರನ್ನಾಗಿ ಆಯ್ಕೆಮಾಡಲಾಗಿದೆ.

- ನೂತನ ಲೋಕಾಯುಕ್ತರಿಗೆ ರಾಜ್ಯಪಾಲ ಬಿಸ್ವಭೂಷಣ್ ಹರಿಚಂದ್ರನ್ ಅವರು ಪ್ರಮಾಣವಚನ ಬೋಧಿಸಿದ್ದಾರೆ.

ಲೋಕಾಯುಕ್ತರ ಬಗ್ಗೆ:

- ಲೋಕಾಯುಕ್ತ ಆಯ್ಕೆ ಸಮಿತಿ ಮುಖ್ಯಮಂತ್ರಿ, ವಿಧಾನ ಮಂಡಲದ ಉಭಯ ಸದನಗಳ ಅಧ್ಯಕ್ಷರು, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಹಾಗೂ ಪ್ರತಿಪಕ್ಷಗಳ ನಾಯಕರನ್ನು ಒಳಗೊಂಡಿದೆ.
- ಈ ಸಮಿತಿ ಚರ್ಚಿಸಿ ಅಂತಿಮಗೊಳಿಸಿದ ಹೆಸರು ಶಿಫಾರಸು ಮಾಡಿ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಲಾಗುತ್ತದೆ.
- ಇವರ ಅಧಿಕಾರಾವಧಿ ಐದು ವರ್ಷಗಳಾಗಿರುತ್ತವೆ. ಆಡಳಿತದಲ್ಲಿನ ಭ್ರಷ್ಟಾಚಾರ ದೂರುಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಇವರ ಕೆಲಸ.

6. 'ಭಾರತೀಯ ವಾಯುಪಡೆ'ಯ ನೂತನ ಮುಖ್ಯಸ್ಥರಾಗಿ ವಾಯುಪಡೆಯ ಉಪಮುಖ್ಯಸ್ಥರಾಗಿರುವ ಏರ್ ಮಾರ್ಷಲ್ ಆರ್‌ಕೆಎಸ್ ಭದೌರಿಯಾ ನೇಮಕ :

- ಹಾಲಿ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಬಿ.ಎಸ್. ಧನೋವಾ ಅವರು ಸೆ.30 ರಂದು ನಿವೃತ್ತಿ ಹೊಂದಲಿದ್ದು, ಅವರ ಸ್ಥಾನವನ್ನು ಭದೌರಿಯಾ ತುಂಬಲಿದ್ದಾರೆ.
- ಫ್ರಾನ್ಸ್‌ನಿಂದ 36 ರಫೇಲ್ ಯುದ್ಧವಿಮಾನಗಳ ಖರೀದಿ ಒಪ್ಪಂದದಲ್ಲಿ ಭದೌರಿಯಾ ಪ್ರಮುಖ ಪಾತ್ರ ನಿರ್ವಹಿಸಿದ್ದರು.
- ವಾಯುಪಡೆಯ ಉಪ ಮುಖ್ಯಸ್ಥರಾಗುವ ಮೊದಲು ಬೆಂಗಳೂರಿನ ತರಬೇತಿ ಕಮಾಂಡ್‌ನ ಏರ್ ಆಫೀಸರ್ ಕಮಾಂಡಿಂಗ್ ಮುಖ್ಯಸ್ಥರಾಗಿದ್ದರು.
- ಭದೌರಿಯಾ ಅವರು ಮಾರ್ಚ್ 1, 2017 ರಿಂದ ದಕ್ಷಿಣ ಏರ್ ಕಮಾಂಡ್‌ನ ಏರ್ ಆಫೀಸರ್ ಕಮಾಂಡಿಂಗ್–ಇನ್ – ಚೀಫ್ (ಎಸಿ–ಇನ್–ಸಿ) ಯಾಗಿಯೂ ಸೇವೆ ಸಲ್ಲಿಸಿದ್ದರು.
- ಭದೌರಿಯಾ ಅವರು ಪುಣೆಯ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ ಹಳೆಯ ವಿದ್ಯಾರ್ಥಿ ಇವರ ಮಿಲಿಟರಿ ಸೇವೆಯನ್ನು ಪರಿಗಣಿಸಿ ಭಾರತ ಸರಕಾರ ಪರಮ ವಿಶಿಷ್ಟಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕ, ಆಪರೇಷನ್ ವಿಜಯ್ ಪದಕ, ಸೈನ್ಯ ಸೇವಾ ಪದಕ ನೀಡಿ ಗೌರವಿಸಿದೆ.
- ಭದೌರಿಯಾ ಉತ್ತರ ಪ್ರದೇಶದ ಆಗ್ರಾ ಸಮೀಪದ ಕೋರತ್‌ನಲ್ಲಿ ಜನಿಸಿದರು.

7. ಜಿ.ಎಸ್.ಜಯದೇವ: ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ:

- ಪ್ರಸಕ್ತ ಸಾಲಿನ ಪ್ರತಿಷ್ಠಿತ 'ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಕರ್ನಾಟಕ'ಕ್ಕೆ ದೀನಬಂಧು ಸೇವಾ ಟ್ರಸ್ಟ್‌ನ ಸಂಸ್ಥಾಪಕರಾದ ಜಿ.ಎಸ್.ಜಯದೇವ ಅವರನ್ನು ಆಯ್ಕೆ ಮಾಡಲಾಗಿದೆ.
- ಮಹಾತ್ಮಗಾಂಧಿ ಜಯಂತಿ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರತಿ ವರ್ಷ ಪ್ರಶಸ್ತಿ ಪ್ರದಾನ ಮಾಡುತ್ತದೆ.
- ಗಾಂಧೀಜಿ ಅವರ ಸಂದೇಶವನ್ನು ಬದುಕಿನ ಮಾರ್ಗವಾಗಿಸಿಕೊಂಡಿರುವ ಜಿ.ಎಸ್.ಜಯದೇವ ಅವರು ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಸಮಾಜ ಸೇವೆ ಮೂಲಕ ಮನೆಯ ಮಾತಾಗಿದ್ದಾರೆ.
- ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ ಪುತ್ರರಾದ ಜಯದೇವ ಅವರು 1981 ರಿಂದ 1990 ರವರೆಗೆ ಬಿಳಿಗಿರಿರಂಗನ ಬೆಟ್ಟದಲ್ಲಿರುವ ವಿವೇಕಾನಂದ ಗಿರಿಜನ ಕಲ್ಯಾಣ ಸಂಸ್ಥೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು.
- 1992 ರಲ್ಲಿ 'ದೀನಬಂಧು ಟ್ರಸ್ಟ್'ನ ಗೌರವ ಕಾರ್ಯದರ್ಶಿಯಾಗಿ ಚಾಮರಾಜನಗರ ಜಿಲ್ಲೆಯಲ್ಲಿ ಸಮಾಜ ಸೇವೆಗೆ ತೊಡಗಿಕೊಂಡು ಅನಾಥ ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಮಕ್ಕಳಿಗಾಗಿ ವಸತಿ ಸಹಿತ ಶಿಕ್ಷಣ ಆರಂಭಿಸಿದರು.
- ಕನ್ನಡ ಮಾಧ್ಯಮ ಶಾಲೆ, ಸೃಜನಶೀಲಾ ಕಲಿಕಾ ಕೇಂದ್ರ, ಪ್ರಾಥಮಿಕ ಮತ್ತು ಪ್ರೌಢಶಾಲೆ, ಅನಾಥ ಹೆಣ್ಣು ಮಕ್ಕಳಿಗಾಗಿ ಆಶ್ರಮಗಳನ್ನು ಸ್ಥಾಪಿಸಿ ನೂರಾರು ಕುಟುಂಬಗಳ ಏಳಿಗೆಗಾಗಿ ಶ್ರಮಿಸಿದ್ದಾರೆ.

- ಉಭಯ ಜಿಲ್ಲೆಗಳಲ್ಲಿ 30ಕ್ಕೂ ಹೆಚ್ಚು ಸ್ವಸಹಾಯ ಮಹಿಳಾ ಸಂಘಟನೆಗಳನ್ನು ರಚಿಸಿ ಅವುಗಳ ಮೂಲಕ ಆರ್ಥಿಕ ಭದ್ರತೆ, ಪರಿಸರ ಅಭಿವೃದ್ಧಿ, ಮಕ್ಕಳ ಶಿಕ್ಷಣಕ್ಕೆ ಒತ್ತು ಕೊಟ್ಟಿದ್ದಾರೆ. ಮುಂಬಯಿನ ಟಾಟಾ ಸಾಮಾಜಿಕ ಅಧ್ಯಯನ ಸಂಸ್ಥೆಯು ಪ್ರೊ.ಜಿ.ಎಸ್.ಜಯದೇವ ಅವರ 'ಧೀನಬಂಧು ಸಂಪನ್ಮೂಲ ಕೇಂದ್ರ'ವನ್ನು ಭಾರತದ ಮಾದರಿ ಸಂಸ್ಥೆ ಎಂದು ಪ್ರಶಂಸಿಸಿದೆ.

ಪ್ರಶಸ್ತಿಗಳು

1. ಬುಕರ್ ಪ್ರಶಸ್ತಿ ಪಟ್ಟಿಯಲ್ಲಿ ಸಲ್ಮಾನ್ ರಶ್ದಿ ಕಾದಂಬರಿ:

- 2019ನೇ ಸಾಲಿನ 'ಬುಕರ್ ಪ್ರಶಸ್ತಿ' ಆಯ್ಕೆಯ ಅಂತಿಮ ಪಟ್ಟಿಯಲ್ಲಿ ಬ್ರಿಟನ್ ಮೂಲದ ಭಾರತೀಯ ಕಾದಂಬರಿಕಾರ ಸಲ್ಮಾನ್ ರಶ್ದಿ ಅವರ ಕೃತಿ 'ಕಿಶೋಟೆ' (Quichotte) ಸ್ಥಾನ ಪಡೆದಿದೆ.
- ರಶ್ದಿ ಕೃತಿಯೊಂದಿಗೆ ಮಾರ್ಗರೇಟ್ ಅಟ್ವುಡ್, ಲೂಸಿ ಎಲ್ಮನ್, ಬರ್ನಾರ್ಡಿನ್ ಎವಾರಿಸ್ಟೊ, ಚಿಗೊಜಿ ಒಬಿ ಯೋಮಾ ಮತ್ತು ಎಲಿಫ್ ಶಫಾಕ್ ಅವರ ಕೃತಿಗಳೂ ಸ್ಥಾನ ಪಡೆದಿವೆ.
- 72 ವರ್ಷದ ರ ರಶ್ದಿ ಅವರ 'ಮಿಡ್ನೈಟ್ಸ್ ಚಿಲ್ಡ್ರನ್' ಕೃತಿಗೆ 1981ರಲ್ಲಿ ಬುಕರ್ ಪ್ರಶಸ್ತಿ ಲಭಿಸಿತ್ತು.

2. ಬೇಟಿ ಪಡಾವೋ ಗದಗಕ್ಕೆ ಪ್ರಶಸ್ತಿ:

- 'ಬೇಟಿ ಬಚಾವೋ–ಬೇಟಿ ಪಡಾವೊ' ಅಭಿಯಾನದಲ್ಲಿ ಅತ್ಯುತ್ತಮ ಸಾಧನೆ ತೋರಿದ ಗದಗ ಜಿಲ್ಲೆಗೆ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಪ್ರಶಸ್ತಿ ಪ್ರದಾನ ಮಾಡಿದ್ದಾರೆ.
- ಕಳೆದ ಐದು ವರ್ಷಗಳಲ್ಲಿ ಲಿಂಗಾನುಪಾತ ಸುಧಾರಿಸಿದ ಐದು ರಾಜ್ಯಗಳು ಮತ್ತು ಗದಗ ಸೇರಿ 10 ಜಿಲ್ಲೆಗಳಿಗೆ ಪ್ರಶಸ್ತಿ ಮುಡಿಗೇರಿದೆ.

3. ಮಹಾರಾಷ್ಟ್ರದ ಜ್ಞಾನೇಶ್ವರ ಮಹಾರಾಜರಿಗೆ 'ಶ್ರೀ ಚೆನ್ನ ರೇಣುಕ ಬಸವ ಪ್ರಶಸ್ತಿ'.

4. ರವೀಶ್‌ಗೆ ಮ್ಯಾಗ್ಸೆಸ್ಸೆ ಪ್ರಶಸ್ತಿ ಪ್ರದಾನ:

- ಭಾರತದ ಹಿರಿಯ ಪತ್ರಕರ್ತ ರವೀಶ್ ಕುಮಾರ್ ಅವರಿಗೆ ಏಷ್ಯಾದ ಅತ್ಯುನ್ನತ ಗೌರವವಾದ ರಾಮನ್ ಮ್ಯಾಗ್ಸೆಸ್ಸೆ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

5. ಬಾಂಗ್ಲಾದೇಶದ ಪ್ರಥಮ ನೊಬೆಲ್ ಪ್ರಶಸ್ತಿ ಪುರಸ್ಕೃತ ಮಹಮ್ಮದ್ ಯೂನುಸ್ ಅವರು ಪ್ರತಿಷ್ಠಿತ 'ಲ್ಯಾಂಪ್ ಆಫ್ ಪೀಸ್ ಆಫ್ ಸಂತ್ ಫ್ರಾನ್ಸಿಸ್' ಪ್ರಶಸ್ತಿಗೆ ಭಾಜನರಾಗಿದ್ದಾರೆ.



- ಶಾಂತಿ ಮತ್ತು ಸಾಮರಸ್ಯಕ್ಕೆ ಅವರು ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.
- ಬಡತನ ನಿವಾರಣೆಗಾಗಿನ ಕಾರ್ಯಕ್ಕಾಗಿ 2006ರಲ್ಲಿ ನೊಬೆಲ್ ಶಾಂತಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.
- 1984ರಲ್ಲಿ ರಾಮೊನ್ ಮ್ಯಾಗ್ಸೆಸ್ಸೆ ಪ್ರಶಸ್ತಿ ಸೇರಿದಂತೆ ವಿಶ್ವದಾದ್ಯಂತ ಅನೇಕ ಗೌರವಗಳು ಸಂದಿವೆ.

6. ನಿರ್ಭಯಾ ತನಿಕಾಧಿಕಾರಿಗಳಿಗೆ 'ಏಷ್ಯಾ ಸೊಸೈಟಿ' ಪ್ರಶಸ್ತಿ:

- ನಿರ್ಭಯಾ ಸಾಮೂಹಿಕ ಅತ್ಯಾಚಾರ ಪ್ರಕರಣದ ತನಿಖೆಯ ನೇತೃತ್ವ ವಹಿಸಿದ್ದ ಮಹಿಳಾ ಪೊಲೀಸ್ ಅಧಿಕಾರಿ ಛಾಯಾ ಶರ್ಮಾ ಅವರು, ನ್ಯೂಯಾರ್ಕ್‌ನ 'ಏಷ್ಯಾ ಸೊಸೈಟಿ' ನೀಡುವ 2019ರ ಸಾಲಿನ 'ಏಷ್ಯಾ ಸೊಸೈಟಿ ಗೇಮ್ ಚೇಂಜರ್ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

- ಭಾರತ ಹಾಗೂ ನೇಪಾಳದ ಬೌದ್ಧ ಸನ್ಯಾಸಿನಿಯರ ಗುಂಪು 'ಕುಂಗ್ ಫು ನನ್' ಸಹ ಪ್ರಶಸ್ತಿಗೆ ಆಯ್ಕೆಯಾಗಿರುವವರ ಪಟ್ಟಿಯಲ್ಲಿ ಇದೆ.
- ಈ ಬೌದ್ಧ ಸನ್ಯಾಸಿನಿಯರು ಸಮರ ಕಲೆಗಳಲ್ಲಿ ಪರಿಣತಿ ಸಾಧಿಸಿದ್ದು, ಸಾಮಾಜಿಕ ಚಟುವಟಿಕೆ ಹಾಗೂ ಮಾನವೀಯ ಕಾರ್ಯಗಳಲ್ಲಿ ತೊಡಗಿದ್ದಾರೆ.
- ಏಷ್ಯಾಕ್ಕೆ ಕೊಡುಗೆ ನೀಡುವಲ್ಲಿ ಪಾತ್ರವಹಿಸುತ್ತಿರುವ ನೈಜ ನಾಯಕರನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ.
- 2014ರಲ್ಲಿ ಪ್ರಶಸ್ತಿ ಆರಂಭವಾದ ನಂತರ, ಇದೇ ಮೊದಲ ಬಾರಿಗೆ ಪ್ರಶಸ್ತಿಗೆ ಭಾಜನರಾಗುತ್ತಿರುವ ಎಲ್ಲರೂ ಮಹಿಳೆ ರಾಗಿದ್ದಾರೆ.

7. ಯುಎಇಯಲ್ಲಿ ಭಾರತೀಯ ರಾಯಭಾರಿ ಹುದ್ದೆಯಿಂದ ನಿರ್ಗಮಿಸುತ್ತಿರುವ ನವದೀಪ್ ಸಿಂಗ್ ಸೂರಿ ಅವರಿಗೆ ಯುಎಇ ಸರ್ಕಾರವು ಪ್ರತಿಷ್ಠಿತ "ಆರ್ಡರ್ ಆಫ್ ಝಾಯೇದ್–2" ಪುರಸ್ಕಾರ ನೀಡಿ ಗೌರವಿಸಿದೆ:

8. ದಕ್ಷಿಣ ಸುಡಾನ್‌ನಲ್ಲಿ ಶಾಂತಿಪಾಲನೆಗಾಗಿ ನಿಯೋಜಿಸಲಾಗಿದ್ದ ಭಾರತದ 17 ಪೊಲೀಸ್ ಅಧಿಕಾರಿಗಳಿಗೆ ವಿಶ್ವಸಂಸ್ಥೆ 'ಸೇವಾ ಪದಕ' ಪ್ರದಾನ ಮಾಡಿದೆ:

9. ಜಯಂತ್ ಕಾಯ್ಕಿಣಿ :

- ನಾಡಿನ ಹಿರಿಯ ಸಾಹಿತಿ ಡಾ.ಕೆ.ಶಿವರಾಮ ಕಾರಂತರ ಪ್ರತಿ ವರ್ಷ ಜನ್ಮದಿನೋತ್ಸವದಂದು (ಅಕ್ಟೋಬರ್ 10) 'ಕಾರಂತರ ಬಾಲವನ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.
- ಈ ಪ್ರಶಸ್ತಿಯನ್ನು ಸಾಹಿತಿಗಳು, ಪರಿಸರ ಹೋರಾಟಗಾರರು, ಅಂಕಣಗಾರರು, ಯಕ್ಷಗಾನ ಕಲಾವಿದರು, ಕಾದಂಬರಿಕಾರರು ಮತ್ತಿತರರಿಗೆ ನೀಡಲಾಗುತ್ತದೆ.
- ಕನ್ನಡದಲ್ಲಿ ಜಯಂತ್ ಅವರ 'ಬೊಗಸೆಯಲ್ಲಿ ಮಳೆ', 'ಶಬ್ದತೀರ' ಅಂಕಣಬರಹಗಳು, 'ಚಾರ್‌ಮಿನಾರ್', 'ದಗಡೂ ಪರಬನ ಅಶ್ವಮೇಧ' ಮುಂತಾದ ಕಥಾಸಂಕಲನಗಳು, ಕೋಟಿತೀರ್ಥ, ಒಂದು ಜಿಲೇಬಿ, ತೆರೆದಷ್ಟೆ ಬಾಗಿಲು, ಗಾಳ, ಬಣ್ಣದ ಕಾಲು ಮುಂತಾದ ಕವನ ಸಂಕಲನಗಳು ಜನಪ್ರಿಯವಾಗಿವೆ.
- 'ಮುಂಗಾರು ಮಳೆ' ಚಲನಚಿತ್ರದ ಗೀತರಚನೆ ನಂತರ ಜಯಂತ್ ಕನ್ನಡದ ಜನಪ್ರಿಯ ಚಿತ್ರಗೀತೆ ರಚನಕಾರರೂ ಆಗಿದ್ದಾರೆ.
- ಇವರ ಸಾಹಿತ್ಯ ಸೇವೆಗೆ 2010ರಲ್ಲಿ ಸ್ಥಾಪನೆಯಾದ ದಕ್ಷಿಣ ಏಷ್ಯಾದ ಸಾಹಿತ್ಯ ಕೃತಿಗಳಿಗೆ ನೀಡಲಾಗುವ ಪ್ರತಿಷ್ಠಿತ ಡಿಎಸ್ಸಿ ಸಾಹಿತ್ಯ ಪುರಸ್ಕಾರ ಸಂದಿದೆ.
- ಅವರ ಮುಂಬಯಿ ಕೇಂದ್ರಿತ ಕನ್ನಡ ಕತೆಗಳ ಇಂಗ್ಲಿಷ್ ಅನುವಾದ ಸಂಕಲನ 'ನೋ ಪ್ರೆಸೆಂಟ್ಸ್ ಪೀಸ್'ಗೆ ಈ ಪ್ರಶಸ್ತಿ ದೊರೆತಿದೆ.
- ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (4 ಬಾರಿ) ಕುಸುಮಾಗ್ರಜ್ ರಾಷ್ಟ್ರೀಯ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ.

10. ಪಟ್ಟಣದ ಸಾರಂಗಮಠದ ಶ್ರೀ ಚನ್ನವೀರ ಸ್ವಾಮಿಜಿ ಪ್ರತಿಷ್ಠಾನವು ಖ್ಯಾತ ಗಣಿತಜ್ಞ ಭಾಸ್ಕರಾಚಾರ್ಯ ಹೆಸರಿನಲ್ಲಿ ಕೊಡಮಾಡುವ "ಭಾಸ್ಕರ ಪ್ರಶಸ್ತಿ"ಯನ್ನು ಇಸ್ರೋ ಮಾಜಿ ಅಧ್ಯಕ್ಷ ಡಾ.ಕೆ.ಕಸ್ತೂರಿ ರಂಗನ್ ಅವರಿಗೆ ನೀಡಲಾಯಿತು.



11. ರಾಜಸ್ಥಾನದ ಪಾಯಲ್ ಜಂಗಿದ್ ಬಾಲಕಿಗೆ ಚೇಂಜ್ ಮೇಕರ್ ಪ್ರಶಸ್ತಿ :

- ಬಾಲ್ಯ ವಿವಾಹ ಹಾಗೂ ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಹೋರಾಟ ನಡೆಸುತ್ತಿರುವ ರಾಜಸ್ಥಾನದ 17 ವರ್ಷದ ಬಾಲಕಿ ಪಾಯಲ್ ಜಂಗಿದ್‌ಗೆ ಬಿಲ್‌ಗೇಟ್ಸ್ ಮತ್ತು ಮಿಲಿಂಡಾ ಗೇಟ್ಸ್ ಫೌಂಡೇಷನ್ 'ಚೇಂಜ್ ಮೇಕರ್' ಪ್ರಶಸ್ತಿ ನೀಡಿ ಗೌರವಿಸಿದೆ.
- ರಾಜಸ್ಥಾನದ ಹಿನ್ನಾ ಗ್ರಾಮದ ಪಾಯಲ್ ಜಿಂಗದ್ ಅವರಿಗೆ ಅವರ ಪೋಷಕರು ಬಾಲ್ಯದಲ್ಲಿಯೇ ಮದುವೆ ಮಾಡಿಸಲು ಮುಂದಾಗಿದ್ದರು.
- ಆಗ ಆಕೆ ಸಾಮಾಜಿಕ ಕಾರಕರ್ತರೊಬ್ಬರ ಮೂಲಕ ಈ ಸಂಕಷ್ಟದಿಂದ ಪಾರಾಗಿದ್ದರು. ಪೋಷಕರ ಮನವೊಲಿಸುವಲ್ಲಿ ಯಶಸ್ವಿಯಾದ ಪಾಯಲ್ ಮುಂದೆ ಸಾಮಾಜಿಕ ಕಾರ್ಯಕರ್ತರ ನೆರವಿನೊಂದಿಗೆ ರಾಜಸ್ತಾನದ ಗ್ರಾಮಗಳಲ್ಲಿ

ಬಾಲ್ಯ ವಿವಾಹ ಹಾಗೂ ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಜನಜಾಗೃತಿ ಆರಂಭಿಸಿದರು.

- ಅವರ ಅಭಿಯಾನಕ್ಕಿಗ ಅಂತಾರಾಷ್ಟ್ರೀಯ ಪುರಸ್ಕಾರ ಲಭಿಸಿದೆ.

12. ಗ್ರೇಟಾಗೆ ರೈಟ್ ಲೈವ್ಲಿವುಡ್ ಪ್ರಶಸ್ತಿ:

- ಸ್ವೀಡನ್ ಮೂಲದ ಪರಿಸರ ಹೋರಾಟ ಗಾರ್ತಿ, 16 ವರ್ಷದ ಗ್ರೇಟಾ ಟನ್‌ಬರ್ಗ್ ಅವರು 'ರೈಟ್ ಲೈವ್ಲಿವುಡ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಪ್ರಶಸ್ತಿಯನ್ನು 'ಪರ್ಯಾಯ ನೊಬೆಲ್ ಪ್ರಶಸ್ತಿ' ಎಂದೂ ಕರೆಯಲಾಗುತ್ತದೆ.
- ಹವಾಮಾನ ಬದಲಾವಣೆ ವಿಚಾರದ ಬಗ್ಗೆ ಧ್ವನಿಯೆತ್ತಿ ಲಕ್ಷಾಂತರ ಜನರಿಗೆ ಸ್ಫೂರ್ತಿಯಾಗಿರುವ ಗ್ರೇಟಾ ಅವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ರೈಟ್ ಲೈವ್ಲಿವುಡ್ ಪ್ರತಿಷ್ಠಾನ ತಿಳಿಸಿದೆ.
- ಪಶ್ಚಿಮ ಸಹರಾದ ಮಾನವ ಹಕ್ಕುಗಳ ಕಾರ್ಯಕರ್ತೆ ಅಮಿನಾಟೌ ಹೈದರ್, ಚೀನಾದ ಮಹಿಳೆಯರ ಹಕ್ಕುಗಳ ಕಾರ್ಯಕರ್ತೆ ಹಾಗೂ ವಕೀಲೆ ಗುವೊ ಜಿಯಾನ್ಮಿ ಮತ್ತು ಬ್ರೆಜಿಲ್‌ನ ಸ್ಥಳೀಯ ನಾಯಕಿ ಡೇವಿ ಕೊಪೆನಾವಾ ಅವರು ಕೂಡ ಈ ವರ್ಷ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಪ್ರತಿಷ್ಠಾನ ತಿಳಿಸಿದೆ.

13. ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ:

- ದೆಹಲಿಯ ವಿಜ್ಞಾನ್ ಭವನದಲ್ಲಿ ಆಯೋಜಿಸಿದ್ದ ಕೌನ್ಸಿಲ್ ಆಫ್ ಸೈನ್ಸ್ ಆ್ಯಂಡ್ ಇಂಡಸ್ಟ್ರಿಯಲ್ ರಿಸರ್ಚ್ 78ನೇ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಸಾಧಕರಿಗೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ "ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ" ಪ್ರದಾನ ಮಾಡಿದರು.
- ಬಯಾಲಾಜಿಕಲ್ ಸೈನ್ಸ್: ಡಾ.ಕೈರಟ್ ಸಾಯಿ ಕೃಷ್ಣನ್ (ಪುಣೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ಆ್ಯಂಡ್ ರಿಸರ್ಚ್), ಡಾ.ಸೌಮನ್ ಬಾಸಾಕ್ (ನವದೆಹಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಮ್ಯುನಾಲಜಿ).
- ಕೆಮಿಕಲ್ ಸೈನ್ಸ್: ಡಾ.ರಾಘವನ್ ಬಿ.ಸುನೋಜಿ (ಐಐಟಿ ಮುಂಬೈ) ಡಾ.ತಪಸ್ ಕುಮಾರ್ ಮಾಜಿ (ಬೆಂಗಳೂರು ಜವಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್), ಸ್ವರೂಪ್ ಅರ್ಥ್‌ಗರ್ ಅಟ್ಮಾಸ್ಪಿಯರ್, ಓಷಿಯನ್ ಆ್ಯಂಡ್ ಪ್ಲಾನೆಟ್ರಿ) ಡಾ.ಸುಬಿಮಾಲ್ ಘೋಷ್ (ಐಐಟಿ ಮುಂಬೈ).
- ಇಂಜಿನಿಯರಿಂಗ್ ಸೈನ್ಸ್: ಮಾಣಿಕ್ ವರ್ಮಾ (ಬೆಂಗಳೂರು ಮೈಕ್ರೋಸಾಫ್ಟ್ ರಿಸರ್ಚ್)
- ಮೆಥಮೆಟಿಕಲ್ ಸೈನ್ಸ್: ಡಾ.ದಿಶಾಂತ್ ಮಯೂರ್ (ಚೆನ್ನೈ ಇನ್‌ಸ್ಟಿಟ್ಯೂಟ್ ಆಫ್ ಮೆಥಮೆಟಿಕಲ್ ಸೈನ್ಸ್), ಡಾ.ನೀನಾ ಗುತ್ತಾ (ಕಲ್ಕತ್ತಾ ಇಂಡಿಯನ್ ಸ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್).
- ಮೆಡಿಕಲ್ ಸೈನ್ಸ್: ಡಾ.ಧೀರಜ್ ಕುಮಾರ್ (ದೆಹಲಿ ಇಂಟರ್ ನ್ಯಾಷನಲ್ ಸೆಂಟರ್ ಫಾರ್ ಜೆನೆಟಿಕ್ ಇಂಜಿನಿಯರಿಂಗ್), ಡಾ.ಮಹಮ್ಮದ್ ಜಾವೆದ್ ಅಲಿ (ಹೈದರಾಬಾದ್ ಪ್ರಸಾದ್ ಇನ್‌ಸ್ಟಿಟ್ಯೂಟ್).
- ಫಿಸಿಕಲ್ ಸೈನ್ಸ್: ಡಾ.ಆನಿಂದಾ ಸಿನ್ಹಾ (ಬೆಂಗಳೂರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್), ಡಾ.ಶಂಕರ್ ಘೋಷ್ (ಮುಂಬೈ ಟಿಐಎಫ್ಆರ್)

14. ಇನ್ಫಿಗೆ 'ಗ್ಲೋಬಲ್ ಮೆಟ್ ಕ್ಲೈಮೇಟ್ ಆಕ್ಷನ್' ಪ್ರಶಸ್ತಿ :

- ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಅಗ್ರ ಸಂಸ್ಥೆಯಾದ 'ಇನ್ಫೋಸಿಸ್'ಗೆ ವಿಶ್ವಸಂಸ್ಥೆಯ ಪ್ರತಿಷ್ಠಿತ 'ಗ್ಲೋಬಲ್ : ಕ್ಲೈಮೇಟ್ ಆ್ಯಕ್ಷನ್' ಪ್ರಶಸ್ತಿ ಲಭಿಸಿದೆ.
- 'ಕ್ಲೈಮೇಟ್ ನ್ಯೂಟ್ರಲ್ ನೌ' ವಿಭಾಗದಲ್ಲಿ ಹವಾಮಾನ ಬದಲಾವಣೆ ವಿರುದ್ಧದ ಹೋರಾಟದ ಪ್ರಯತ್ನಗಳನ್ನು ಮಾಡುತ್ತಿರುವ ಭಾರತದ ಏಕೈಕ ಕಾರ್ಪೊರೇಟ್ ಸಂಸ್ಥೆಯಾಗಿ ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ.
- ಚಿಲಿ ದೇಶದ ಸ್ಯಾಂಟಿಯಾಗೋದಲ್ಲಿ ಡಿಸೆಂಬರ್‌ನಲ್ಲಿ ನಡೆಯಲಿರುವ ವಿಶ್ವಸಂಸ್ಥೆಯಹವಾಮಾನ ಬದಲಾವಣೆ ಸಮ್ಮೇಳನದಲ್ಲಿ ಇನ್ಫೋಸಿಸ್ ಸಂಸ್ಥೆಯು 2008ರಲ್ಲಿ ಇಂಗಾಲದ ಪ್ರಮಾಣ ಮೌಲ್ಯಮಾಪನದೊಂದಿಗೆ ಹವಾಮಾನ ಬದಲಾವಣೆ ವಿರುದ್ಧ ಹೋರಾಟ ಆರಂಭಿಸಿತ್ತು.
- 2018ರ ಅಕ್ಟೋಬರ್‌ನಲ್ಲಿ ಆಯೋಜಿಸಿದ್ದ ಈಗ ಹವಾಮಾನ ತಟಸ್ಥ' ಎಂಬ ವೇದಿಕೆಯಲ್ಲಿ ಸಂಸ್ಥೆಯು ಕಡಿಮೆ ಇಂಗಾಲ ಆರ್ಥಿಕತೆಯತ್ತ ಸಾಗುವ ಬದ್ಧತೆಯನ್ನು ಘೋಷಣೆ ಮಾಡಿತ್ತು.

ನಿಧನ

1. ಜಿಂಬಾಬ್ವೆಯ ಪಿತಾಮಹ ರಾಬರ್ಟ್ ಮುಗಾಬೆ ನಿಧನ:

- ಜಿಂಬಾಬ್ವೆಯ ಮೊದಲ ಪ್ರಧಾನಿಯಾಗಿ7 ವರ್ಷ ಮತ್ತು ಎರಡನೇ ಅಧ್ಯಕ್ಷರಾಗಿ 30 ವರ್ಷ ಆಡಳಿತ ನಡೆಸಿದ್ದ ಮುಗಾಬೆ ಜನ ಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ಆರೋಗ್ಯ

ಮತ್ತು ಶಿಕ್ಷಣ ಸಿಗುವಂಥ ನೀತಿಗಳನ್ನು ರಚಿಸಿ ಜನಪ್ರಿಯ ನಾಯಕರೆನಿಸಿದ್ದರು.

2. ಪ್ರಖ್ಯಾತ ವಕೀಲ, ಮಾಜಿ ಕೇಂದ್ರ ಕಾನೂನು ಸಚಿವ ರಾಮ್ ಜೇಠ್ಮಲಾನಿ (93) ನಿಧನ:

- 6ನೇ ಮತ್ತು 7ನೇ ಲೋಕಸಭೆಗೆ ಅವರು ಮುಂಬಯಿ ಕ್ಷೇತ್ರದಿಂದ (ಬಿಜೆಪಿ) ಆಯ್ಕೆಯಾಗಿದ್ದರು. ವಾಜಪೇಯಿ ಸಚಿವ ಸಂಪುಟದಲ್ಲಿ ಕಾನೂನು ಸಚಿವರಾಗಿ, ನಗರಾಭಿವೃದ್ಧಿ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. ರಾಜಸ್ಥಾನದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು.

3. ಹೆಸರಾಂತ ಕಥಕ್ ನೃತ್ಯಪಟು ವೀರೂ ಕೃಷ್ಣನ್ ನಿಧನ:

4. ನಿಘಂಟು ತಜ್ಞ ಡಾ.ಪಾ.ಶಾ.ಶ್ರೀನಿವಾಸ್ (ಪಾಶಾಶ್ರೀ) (80) ನಿಧನ:

- ತಮಿಳು–ಕನ್ನಡ ನಿಘಂಟು, ಜ್ಞಾನರಥ, ಪ್ರಸಾದ, ಸಾರೂಪ್ಯ, ವಿಚಾರಣಾ ಕಮೀಷನ್, ಕಾವೇರಿ ಸಾಹಿತ್ಯ, ಚಿತ್ತಾರ ಕೃತಿ ರಚಿಸಿದ್ದರು.
- ತಿರುವಳ್ಳುವರ್‌ನ "ತಿರುಕ್ಕುರುಳ್' ಕೃತಿ ಕನ್ನಡಕ್ಕೆ ತಂದ ನಂತರ, 'ಕನ್ನಡದ ತಿರುವಳ್ಳುವರ್' ಎಂದೇ ಪ್ರಸಿದ್ಧಿ ಪಡೆದಿದ್ದರು.
- ಪ್ರೌಢಶಾಲೆ ವಿದ್ಯಾರ್ಥಿಯಾಗಿದ್ದಾಗಲೇ 'ಕಿರಣ ಸಾಹಿತ್ಯ ಸಂಘ' ಕಟ್ಟಿ ಕನ್ನಡಪರ ಕಾರ್ಯಕ್ರಮ ಆಯೋಜನೆ ಮಾಡಿದ್ದರು.

5. ಕನ್ನಡದಲ್ಲಿ ಸೆಟ್ಟೇರಿದ್ದ ಮೊದಲ ವಾಕ್ಚಿತ್ರ 'ಭಕ್ತಧ್ರುವ' (1934)ದ ನಟಿ ಎಸ್. ಕೆ.ಪದ್ಮಾದೇವಿ (95) ನಿಧನ:

- 1936ರಲ್ಲಿ ತೆರೆಕಂಡ 'ಸಂಸಾರನೌಕೆ' ಸಿನಿಮಾ ಇವರಿಗೆ ದೊಡ್ಡ ಹೆಸರು ತಂದುಕೊಟ್ಟಿತ್ತು. ಈ ಸಿನಿಮಾದ ನಾಲ್ಕು ಹಾಡುಗಳನ್ನು ಇವರೇ ಹಾಡಿದ್ದರು.
- ವಸಂತಸೇನ, ಭಕ್ತ ಸುಧಾಮ, ಜಾತಕ ಫಲ, ಮುಕ್ತಿ, ಅಮರ ಮಧುರ ಪ್ರೇಮ, ಸಂಕ್ರಾಂತಿ ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿದ್ದರು. ಆಕಾಶವಾಣಿಯಲ್ಲೂ ಕಾರ್ಯ ನಿರ್ವಹಿಸಿದ್ದರು.
- ಕನ್ನಡದಲ್ಲಿ ಶುರುವಾದ ಮೊದಲ ವಾಕ್ಚಿತ್ರ ಭಕ್ತ ಧ್ರುವ ಆದರೆ ಬಿಡುಗಡೆ ಆಗಿದ್ದು 'ಸತಿ ಸುಲೋಚನಾ' ಹೀಗಾಗಿ ಕನ್ನಡದ ಮೊದಲ ವಾಕ್ ಚಿತ್ರ ಎಂಬ ಹೆಗ್ಗಳಿಕೆ ಈ ಎರಡೂ ಚಿತ್ರಗಳನ್ನು ಈ ಸಿನಿಮಾ ತೆರೆಕಂಡು 85 (1934) ವರ್ಷಗಳಾದವು.

A FEW PROUD STUDENTS OF JNANAGANGOTHRI – POLICE SUB-INSPECTORS

CHETANKUMAR SS 12th Rank -2019

SAYEEDA AMREEN 35th Rank -2019

GUNAPALA JALNADE, 64th Rank, PSI (2019)

FAIZUNNISA, 14th Rank-2019

BASAVARAJ ANGADI, 83rd Rank PSI-2019

HONNESH KUMAR D 28th Rank, PSI-2019

LOHITH L S, 25th Rank, PSI-2019

PAVANKUMAR C C, 50th Rank, PSI-2019

DHANYA N NAYAK, 4th Rank, PSI-2019

KISHOR D, 6th Rank, PSI (KSRP), 2019



SHIDDESH NARNOOR, 88th Rank, 2019 PSI

H. MANJUNATHA 48th Rank, PSI (2019)

AMBAREESH, RSI-2019

SHREEDHAR, PSI-2019 KSRP



HARISH KUMAR J, RSI-2019 33RD Rank

ADITYA, 1st Rank, DSI (2018)



RAKSHIT, 2nd Rank, RSI (2017)

Maruti T 3rd Rank, PSI (2017)

YASHWANT, 4th Rank, CID at KSP

CHAITRA VIBHA, 4th Rank, PSI (2017)

ANIL, PSI 14th Rank (2017)

KIRAN, 25th Rank (2017)

PRASANNA, 36th Rank, PSI (2017)

SURESH CS, 47th Rank, PSI (2017)

BYRAPPA, 57th Rank, PSI (2017)

MANJUNATH, 75th Rank, PSI (2017)

MANJUNATH. S, 78th Rank, PSI (2017)

BHAVYA, 14th Rank, PSI (2017)

SERVICES AVAILABLE AT JNANAGANGOTHRI		
Course	**Batches**	**Timings**
KAS Prelims	3 Batches/day	7am, 10am 5 45pm
KAS Core batch prelims+mains	6 Months	7am to 7 pm
FDA/SDA Regular batch	3 Batches/day	7am, 10am 5 45pm
FDA/SDA Core Batch	1 Batch/Day	7am to 7 pm
PSI Regular batch	3 Batches/day	7am, 10am 5 45pm
PSI Core batch	1 Batch/Day	7am to 7 pm
Banking/SSC/Railways	1 Batch	10am to 1 pm
Test Series for KAS, FDA/SDA, PSI, BANKING, RRB ETC	Available both online and offline	
24 hr Reading Rooms	24 hr	NA
Mock intervies for all competitive Exams	On appointment	
Free KPSC current affairs available everyday visit www.iasjnana.com		

ಜ್ಞಾನಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ,
ವಿಜಯನಗರ, ಬೆಂಗಳೂರು.

ಏಪ್ರಿಲ್ 2019

ಜ್ಞಾನಗಂಗೋತ್ರಿ

ಇ–ಮ್ಯಾಗಝಿನ್

Useful for KAS, KPSC, PSI and all State govt exams

Free copy not for sale

JNANAGANGOTHRI
Inspiring to serve...

www.iasjnana.com **9916399276**

Jnanagangothri

An Institute for IAS, KAS, PSI, Banking, SSC, Railways and for all State govt and Central govt. recruitments.

Login to www.iasjnana.com for daily current affairs and free PDF download

To take test series (KPSC/KAS/PSI) visit www.iasjnana.com